# ಆಶ್ವಾಸನ

(ಕಾದಂಬರಿ)

ಉಷಾ ನವರತ್ನರಾವ್

ರಾಜಲಕ್ಷ್ಮೀ ಪ್ರಕಾಶನ
ಚಿಕ್ಕಪೇಟೆ ಚೌಕ-ಬೆಂಗಳೂರು 53

ASHWASANA—A Social Novel by Smt. Usha Navaratna. Ram, II Edn.: Sep. 1977; Published by Rajalakshmi Prakashana, Balepet Square, Bangalore-53;
All rights reserved by the Author; Price: Rs. 6-00.

ಪ್ರಥಮ ಮುದ್ರಣ : ಫೆಬ್ರವರಿ 1976
ಎರಡನೇ ಮುದ್ರಣ : ಸೆಪ್ಟೆಂಬರ್ 1977
ಹಕ್ಕುಗಳು : ಲೇಖಕಿಯದು

ಅಧಿಕೃತ ಮಾರಾಟಗಾರರು :
ಗೀತಾ ಏಜನ್ಸೀಸ್
ಸಗಟು ಪುಸ್ತಕ ವ್ಯಾಪಾರಿಗಳು
ಬಳೇಪೇಟೆ ಚೌಕ, ಬೆಂಗಳೂರು-560053
(ದೂರವಾಣಿ : 24226)

ಬೆಲೆ: ರೂ. 6·00

ಕೆ. ಎಮ್. ಹೆಚ್. ಎಸ್. ಎಸ್. ಪ್ರಿಂಟರ್ಸ್
178, ನಾಲ್ಕನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು—560018
(ದೂರವಾಣಿ : 63123)

# ಮುನ್ನುಡಿ

"ಸುಧಾ" ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ "ಆಂದೋಲನ" ಉತ್ತರಾರ್ಧ. ಈ ಕಾದಂಬರಿ ಇಷ್ಟು ಶೀಘ್ರವಾಗಿ ಎರಡನೆಯ ಮುದ್ರಣ ಕಾಣುತ್ತಿರುವುದು ಓದುಗರ ಬೆಂಬಲ ಮತ್ತು ಮೆಚ್ಚಿಕೆ. ವಂದನಾರ್ಹ.

"ಆಶ್ವಾಸನ" ಕಾದಂಬರಿಯನ್ನು ಪುಸ್ತಕ ರೂಪದಲ್ಲಿ ಹೊರ ತಂದ ಶ್ರೀ ರಾಜಲಕ್ಷ್ಮೀ ಪ್ರಕಾಶನದವರಿಗೂ, ನನ್ನ ಬರವಣಿಗೆಯಲ್ಲಿ ಅಪಾರ ಆಸಕ್ತಿ ವಹಿಸಿರುವ "ಗೀತಾ ಏಜನ್ಸೀಸ್"ನ ಮಾಲಿಕರಾದ ಶ್ರೀ ಕೆ. ರಾಮಚಂದ್ರಯ್ಯನವರಿಗೂ, ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಕೆ. ಎಮ್. ಹೆಚ್. ಎಸ್. ಎಸ್. ಪ್ರಿಂಟರ್ಸ್‌ನವರಿಗೂ, ಮುಖಚಿತ್ರವನ್ನು ಅಂದವಾಗಿ ಬರೆದ ಶ್ರೀ ಹುಬ್ಳೀಕರ್‌ರವರಿಗೂ ನನ್ನ ಹಾರ್ದಿಕ ವಂದನೆಗಳು.

ಈ ಕೃತಿಯನ್ನು ಆದರದಿಂದ ನಿಮ್ಮ ಮುಂದಿಡುವ—

ಬೆಂಗಳೂರು, — ಉಷಾ ನವರತ್ನರಾಮ್

25-8-1977

# ಆಶ್ವಾಸನ

ರಘು ಕಣ್ಣು ಹೊಸಕಿಕೊಂಡು ಆಕಳಿಸಿ ಮೈಮುರಿದು ಎದ್ದು ಕುಳಿತಾಗ ಬೆಳ್ಳಗೆ ಬೆಳಕಾಗಿತ್ತು. ಕಿಟಕಿಯಿಂದ ತೂರಿಬಂದ ಹೊಂಗಿರಣ ಅವನ ನಿದ್ದೆಮಂಪರಿನಲ್ಲೇ ಇದ್ದ ಕಣ್ಣುಗಳಿಗೆ ಕೊಂಚ ಪ್ರಖರವಾಗೇ ಇತ್ತು. 'ಇದೇನು ಇಷ್ಟು ಹೊತ್ತು ಮಲಗಿಬಿಟ್ಟೆ ? ನಿನ್ನೆ ರಾತ್ರಿಯ ಪಾರ್ಟಿಯಲ್ಲಿ ಕುಡಿತ ಜಾಸ್ತಿಯಾಗಿರಲಿಲ್ಲವೇ ?' ತನ್ನಲ್ಲಿ ತಾನೇ ಹೇಳಿಕೊಂಡನು. ಕೈಯ್ಯಲ್ಲಿದ್ದ ವಾಚು ಆಗಲೇ ಏಳುವರೆ ತೋರಿಸುತ್ತಿತ್ತು. ಹಾಸಿಗೆಯಿಂದ ಕಾಲೆತ್ತಿ ಮಂಚದಿಂದ ಇಳಿಯುತ್ತಾ ಕೂಗಿದ.

"ರಾಮ್‌ಸಿಂಗ್, ರಾಮ್‌ಸಿಂಗ್....ಚಹಾ ಎಲ್ಲಿ ?...."

ಅರೆತೆರೆದ ಬಾಗಿಲಿನ ಸಂದಿನಿಂದಲೇ ಇಣುಕಿ ನೋಡಿದ ರಾಮ್‌ಸಿಂಗ್ "ಜೀ... ಸಾಬ್...." ಎನ್ನುತ್ತಾ ಒಳಗೆ ಮೆಲ್ಲನಡಿಯಿಟ್ಟನು. ನೋಡಲು ಆಕರ್ಷಕ ವ್ಯಕ್ತಿಯಲ್ಲದಿದ್ದರೂ ಮಧ್ಯವಯಸ್ಸಿನ ಶಾಂತಮೂರ್ತಿ. ತಲೆಯಲ್ಲಿ ಅಲ್ಲಲ್ಲಿ ಕಾಣುತ್ತಿದ್ದ ಬಿಳಿಯ ಕೂದಲು ಹಸಿರು-ನೀಲಿಗಳ ಸಮ್ಮಿಳನದ ಪುಟ್ಟ ಕಿಡಿಗಣ್ಣು, ಬಹಳ ದೊಡ್ಡದೆನಿಸಬಹುದಾದ ಬಾಯಿ-ನೀಳವಾದ ಮೂಗು-ಕುರುಚಲು ಗಡ್ಡ—ಬಿಳಿಯದಾಗಬೇಕಾಗಿದ್ದ ಪಾಯಿಜಾಮ, ಜುಬ್ಬ. ರಘುವನ್ನು ನೋಡಿ ಕೆನ್ನೆಯ ಮೇಲೆ ಕೈಯಾಡಿಸಿಕೊಳ್ಳುತ್ತಾ ಕಿರುನಕ್ಕ.

"ಸಾಬ್‌ಗೆ ಹೊತ್ತಾಗಿಹೋಯ್ತು .... ಒಂದು ನಿಮಿಷ, ಚಹಾ ತರುತ್ತೇನೆ...."

ರಘು ಅವನತ್ತ ಗಮನಿಸಲಿಲ್ಲ. ಅವನು ತಾನು ಹಾಕಿಕೊಂಡಿದ್ದ ರಾತ್ರಿಯುಡುಗೆಯನ್ನು ಸರಿಪಡಿಸಿಕೊಂಡು ಟೇಬಲ್ಲಿನ ಮೇಲಿದ್ದ ತನ್ನ ಟೂತ್ ಬ್ರಷ್‌ಗೆ ಟೂತ್ ಪೇಸ್ಟ್ ಹಾಕುತ್ತಿದ್ದನು. ಛೀ, ಬೆಳಿಗ್ಗೆ ಎದ್ದು ಮುಖ ತೊಳೆದು, ಹಲ್ಲುಜ್ಜಿ ಟೀ, ಕಾಫಿ ಕುಡ್ಯೋದು ಬಿಟ್ಟು ಇದೇನು ತಂಗಳು ಮುಖ ಇಟ್ಕೊಂಡು ಹಾಗೇ ಕುಡೀತೀರಿ...ಥೂ. ನನ್ನ ಮುಟ್ಟಿಸ್ಕೋಬೇಡಿ.... ಆ ಮಾತು ಅವನ ನೆನಪಿನ ಸುಳಿಯಲ್ಲೆಲ್ಲೋ ಪ್ರತಿಧ್ವನಿಸಿತು. "ಹಾಗೆಲ್ಲಾ ಫಸ್ ಮಾಡ್ಬೇಡಾ ಚಿನ್ನಾ....ನೋಡು ಗಂಡಸೂಂದ್ರೆ ಗಂಗಾಜಲದ ಹಾಗೆ ಪವಿತ್ರ ...." ಹೌದು. ಮತ್ತೆ ಅದೇ ಪಿಸುಮಾತು. "ಬೇಡಾ ರವಿ....ಪ್ಲೀಸ್

ನಾನು ಇಲ್ಲಿಗ್ಬಂದ್ಮೇಲೆ ನನ್ನ ಎಷ್ಟೋ ಪ್ರಿನ್ಸಿಪಲ್ಸ್ ಬಿಟ್ಟಿಟ್ಟಿದ್ದೇನೆ.... ಇಟ್ಕೊಂಡಿರೋ ಒಂದೆರಡಾದ್ರೂ ಉಳಿಸ್ಬಾರ್ದಾ ?...."

"ರಾಣೀ ಸಾಹೇಬ್ರೇ, ಇನ್ಮೇಲೆ ಅದೂ ಇರ್ಬಾರ್ದು...ನೀನು ನನ್ನ ರಿಜೀವ್‌ನಲ್ಲಿರೋದ್ರಿಂದ ನಾನು ಹೇಳಿದ್ಹಾಗೆ ಕೇಳ್ಕೊಂಡಿರ್ಬೇಕೂ....ಇಲ್ದಿದ್ರೇ ನೋಡೂ....ಹೀಗೆ....ಯಾವಾಗ್ಲೂ. ನನ್ನ ಕೈಗಳಲ್ಲಿ ಪ್ರಿಸನರ್...."

"ಸಾಬ್....ಚಾಯ್ ತಂದಿದ್ದೇನೆ....ಥಂಡಾ ಆಗೋಗತ್ತೆ...." ರಾಮ್ ಸಿಂಗ್ ಧ್ವನಿ ಕೇಳಿ ಓಡುತ್ತಿದ್ದ ತನ್ನ ಮನಸಿನ ಲಹರಿಯನ್ನು ಹಿಡಿದು ನಿಲ್ಲಿಸಿದ ರಘು. ನೆನಪುಗಳ ಮಹಾಪೂರದಲ್ಲಿ ಇನ್ನೂ ಮುಳುಗೇಳುತ್ತಿದ್ದ ತಾನೇಕೆ ಇಷ್ಟು ಭಾವಜೀವಿಯಾಗಿಬಿಟ್ಟೆ ? ಆ ಮಾತುಗಳೆಲ್ಲಾ ಶುಭ್ರ ರವಿಯದು-ತನಗೇಕೆ ! ತಾನೆಷ್ಟು ಮರೆಯಬೇಕೆಂದರೂ ಸಾಧ್ಯವಾಗದಷ್ಟು ನೆನಪಿನ ಸುಳಿಯಲ್ಲಿ ಮರಳಿ ಮರಳಿ ಬೀಳಲು ಕಾರಣ ! .. ಆ ಕಾಗದಗಳು, ರವಿಯ ಕಾಗದಗಳು. ಅವನಿಗೆ ಹೇಳಬೇಕು ಇನ್ನು ಮುಂದೆ ಕಾಗದಗಳನ್ನು ಬರೆಯಬೇಡವೆಂದು. "ಸಾಬ್....ಚಾಯ್ ಥಂಡಾ ಆಗೋಗತ್ತೆ...." ಮತ್ತೆ ರಾಮಸಿಂಗ್ ಎಚ್ಚರಿಸಿದಾಗ ರಘು ಕೈಲಿದ್ದ ಬ್ರಷ್ಷನ್ನು ಕೆಳಗಿಟ್ಟು ಹೊಗೆಯಾಡುತ್ತಿದ್ದ ಚಹವನ್ನು ತುಟಿಗಿಟ್ಟುಕೊಂಡನು.

"ಪಾನಿ ಗರಂ ಆಗಿದೆ ಸಾಬ್...." ರಾಮ್‌ಸಿಂಗ್ ಎಂದಿನಂತೆ ರಘುವಿನ ಟವಲು ಸೋಪುಗಳನ್ನೆತ್ತಿಕೊಂಡು ಬಚ್ಚಲ ಮನೆಯತ್ತ ನಡೆದನು. ರಘು ಚಹ ಕುಡಿದು ಕಪ್ಪನ್ನು ಟೇಬಲ್ಲಿನ ಮೇಲಿಟ್ಟು ಹತ್ತಿರದಲ್ಲಿದ್ದ ಕುರ್ಚಿಯಲ್ಲಿ ಕುಳಿತನು. ಕನ್ನಡಿಯ ಮುಂದೆ ತನ್ನ ಬಾಚಣಿಕೆಯಡಿಯಲ್ಲಿ ಕಾಣುತ್ತಿದ್ದ ಕಾಗದ....ರವಿಯ ಕಾಗದ....ಕಾಗದದಲ್ಲಿ ಅದೆಷ್ಟು ತನ್ನ ಪ್ರಿಯವಾದುದರ ವರ್ಣನೆ...."ಶುಭ ಇವೊತ್ತು ನನ್ನ ಮೇಲೆ ಬಹಳ ಮುನಿಸಿಕೊಂಡಿದ್ದಾಳೆ. ನಾನು ಸಂಜೆ ನಂದಿನಿಯ ಮನೆಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದೆ. ಆದರೆ ಆಗಲಿಲ್ಲ. ನನ್ನ ಪೌಲ್ಟ್ರಿಯಲ್ಲಿ ಯಾವುದೋ ವೈರಸ್ ಇನ್‌ಫೆಕ್ಷನ್ ಆದಹಾಗಿತ್ತು. ಅದಲ್ಲದೇ ನಂದಿನಿಯ ಮನೆಗೆ ಕರೆದುಕೊಂಡು ಹೋದರೆ.... ಅವಳು ಶುಭನನ್ನು ಖಂಡಿತ ನಿಲ್ಲಿಸಿಕೊಂಡು ಬಿಡುತ್ತಾಳೆ. ಆಗ ನನ್ನ ಗತಿ.... ಶುಭ ಕೋಪಿಸಿಕೊಂಡು ನನ್ನ ಹತ್ತಿರ ಒಂದು ಮಾತೂ ಆಡಿಲ್ಲ. ಅವಳನ್ನು ಸಮಾಧಾನ ಮಾಡಬೇಕಾದರೆ ನನಗೆ ಬಹಳ ಹೊತ್ತು ಬೇಕಾಗುವುದು....

ನೀನೇಕೆ ಈಚೀಚೆಗೆ ಉತ್ತರ ಬರೆಯಲು ತಡಮಾಡುತ್ತೀಯೆ ? ....ನನಗೆ ಈಚೀಚೆಗೆ ಬಹಳ ಹೊಟ್ಟೆನೋವು ಬರುತ್ತದೆ ಶುಭನಿಗೆ ಹೇಳಿದರೆ ಸುಮ್ಮನೆ ಕೊರಗುತ್ತಾಳೆಂದು ಹೇಳುವುದಿಲ್ಲ....ನೀನು ಒಂದು ಆಗಲೇ ಎರಡು ವರ್ಷಗಳಾಯಿತಲ್ಲಾ. ಈ ಸಲವಾದರೂ ಬರಬಾರದೇ ? ಶುಭನಿಗೂ ಈಚೀಚೆಗೆ ಅಷ್ಟು ಪ್ರೈ ಸರಿಯಾಗಿಲ್ಲ. ಅಮ್ಮ ಹೋದ ಮೇಲೆ ಅವಳು ಒಂದು ತರಹ ಆಗಿಬಿಟ್ಟಿದ್ದಾಳೆ. ಅಪ್ಪನಂತೂ ಈಗ ಮಹಾ ವೈರಾಗಿ. ಯಾವ ವಿಷಯಕ್ಕೂ ತಲೆ ಹಾಕುವುದಿಲ್ಲ. ನೀನು ಬಂದು ಹೋದರೆ ಕೊಂಚ ಎಲ್ಲವೂ ಬದಲಾಯಿಸಬಹುದೆಂದು ನನ್ನ ಹಾರೈಕೆ. ಖಂಡಿತ ನಿರಾಸೆ ಮಾಡದೇ ಬರುತ್ತೀಯೆಂದು ನಂಬಿದ್ದೇನೆ. ಶುಭ ನಿನ್ನನ್ನು ತುಂಬಾ ಜ್ಞಾಪಿಸಿಕೊಳ್ಳುತ್ತಾಳೆ. ಮೊನ್ನೆಯಂತೂ ಅದೇಕೋ ನಿನ್ನ ವಿಷಯ ಬಂದಾಗ ಅತ್ತುಬಿಟ್ಟಳು...."

ರಘುವಿಗೆ ಆ ಕಾಗದ ಬಾಯಿಪಾಠವಾದಂತಾಗಿತ್ತು. ನಿನ್ನೆಯ ದಿನ ತಾನು ಆಫೀಸಿಗೆ ಹೊರಡುವ ಮುನ್ನ ಬಂದ ಕಾಗದವನ್ನು ಅದೆಷ್ಟು ಬಾರಿ ಓದಲಿಲ್ಲ ?....ತನ್ನ ವಿಷಯ ಬಂದಾಗ ಶುಭ ಅಳಲು ಕಾರಣ ! ಹೌದು. ತಾನು ಹೇಡಿಯಲ್ಲವೇ ? ಅಂದು ಶುಭ ರವಿಯರ ಮದುವೆಯಾಗಿ ಹದಿನೈದು ದಿನಗಳಾಗಿತ್ತು. ಅಲ್ಲವೇ ?....ಅಮ್ಮ ಅಪ್ಪ ಎಷ್ಟು ಗೋಗರೆದರೂ ತಾನು ಹಠ ಮಾಡಿ ಇಲ್ಲಿಗೆ ಬಂದಿರಲಿಲ್ಲವೇ ?

"ರಘೂ, ಇನ್ನೊಂದು ಹದಿನೈದು ದಿನ ಸುಧಾರಿಸಿಕೊಂಡು ಹೋಗಪ್ಪಾ. ಅಲ್ಲಿ ನಿನ್ನ ಯಾರು ನೋಡ್ಕೊಳ್ತಾರೋ ?....ಕಾಲು ನೋವಿರುತ್ತೇಂತ ಹೇಳ್ತೀಯಾ ..." ಅಮ್ಮನ ಸಂಕಟ.

"ಇಲ್ಲಿ ಕೇಳಯ್ಯ ರಘೂ....ನಿನಗೊಂದು ಒಳ್ಳೇ ಹುಡುಗಿ ನೋಡಿ ಮದುವೆ ಮಾಡಿಬಿಡ್ತೀವಿ. ಹೆಂಡತೀನ್ನೂ ಕರ್‍ಕೊಂಡು ಹೊರಡು. ನಮಗೂ ನಿಶ್ಚಿಂತೆ....ಏನಂತಿಯಾ....?" ಅಪ್ಪನ ಆತಂಕ.

"ರಘೂ, ನೀನು ತುಂಬಾ ಹಠಮಾರಿ ಕಣೋ....ನಾನೆಷ್ಟು ಸಲ ರಿಕ್ವೆಸ್ಟ್ ಮಾಡಿಕೊಂಡ್ರೂ ಕೇಳೋಲ್ಲ. ನಾನೊಬ್ನೇ ಈ ಎಸ್ಟೇಟು ರನ್ ಮಾಡೋದು ತುಂಬಾ ಕಷ್ಟ. ನೀನು ಹೆಲ್ಪ್ ಮಾಡ್ಬಾರ್ದಾ ?... ನಿಂಗೆ ಇನ್ನ್ಹೇಗೆ ಹೇಳ್ಬೇಕೋ ನಂಗೆ ಅರ್ಥವಾಗೋಲ್ಲ...." ರವಿಯ ಬಿರುನುಡಿ.

ಆದರೆ ಕೈಯ್ಯಲ್ಲಿ ಪುಸ್ತಕ ಹಿಡಿದು ಕುಳಿತಿದ್ದ ಅವಳು–ಒಂದು ಮಾತು

ಹೇಳಬಾರದಿತ್ತೇ ? ಅವಳಿಗೇಕೆ ತನ್ನ ಗೊಡವೆ ? ತಾನಿದ್ದರೆ ಅವಳಿಗೂ ಕಷ್ಟ. ತನಗೂ ಸಂಕಟ. ತಮ್ಮಿಬ್ಬರ ನಡುವಿನ ಆಂದೋಲನ ಮಿಕ್ಕವರಿಗೇನು ಗೊತ್ತು? ಪುಸ್ತಕದತ್ತ ಬಾಗಿದ್ದ ಆ ಮುದ್ದು ಮುಖ ತನಗೆಷ್ಟು ಮೋಸ ಮಾಡಿತ್ತು !

ರವಿಯ ಮದುವೆಯಾದ ಒಂದೆರಡು ದಿನಗಳಲ್ಲಿ ತಾನು ಅನುಭವಿಸಿದ್ದ ಮನೋಯಾತನೆ-ಬೆಳಿಗ್ಗೆ ಆಗತಾನೇ ಎದ್ದು ಬಂದು ಡೈನಿಂಗ್ ಟೇಬಲ್ಲಿನ ಹತ್ತಿರ ಕುಳಿತಿದ್ದ ರವಿಗೆ ಶುಭಳ ಉಪಚಾರ ನಡೆದಿತ್ತು. ಅಲ್ಲಿ ತಾನೊಬ್ಬ ಮೂಕ ಪ್ರೇಕ್ಷಕ.

ರವಿಯ ಕೈಲಿದ್ದ ಕರಿಯ ಕಾಫಿಗೆ ಮತ್ತಷ್ಟು ಹಾಲು ಹಾಕಿದಾಗ ರವಿ ಮುನಿಸಿನಿಂದ ಕಾಫಿಯ ಲೋಟ ಕೆಳಗಿಟ್ಟಾಗ ಶುಭ ಮತ್ತೆ ಅವನ ಕೈಗಿತ್ತು "ನೀವು ತುಂಬಾ ಕಾಫಿ ಕುಡೀತೀರಪ್ಪಾ, ಸ್ವಲ್ಪ ಕಡಿಮೆ ಮಾಡಬಾರ್ದ್ದಾ ? ಮನೇಲಿ ಹಾಲು ಸುರಿದು ಹಾಳಾಗ್ತಾ ಇದೆ. ನೈಗೊಳ್ಳೀದಾಗ ರೋದು ಒಂದು ಅಭ್ಯಾಸಾನೂ ಮಾಡ್ಕೊಂಡಿಲ್ಲ....ಸಂಜೆ ನೋಡಿಪ್ರಿ ಆ ಹಾಳು ಹಾಟ್ ಡ್ರಿಂಕ್ಸೂ...ಕೋಳಿ ಕೆದಕಿದ ಹಾಗೆ ಊಟ ತಿಂಡಿ...." ಗೊಣಗಿದಾಗ ಅದನ್ನು ಕೇಳಿಸಿಕೊಂಡ ತಾನು ಒಂದು ಕ್ಷಣ ಸಂಕಟಪಟ್ಟಿರಲಿಲ್ಲವೇ ? ಹೌದು, ಶುಭ ರವಿಗೆ ಸರಿಯಾದ ಹೆಣ್ಣು. ಅವನು ಅವಳನ್ನು ನಿಜವಾಗಲೂ ಪ್ರೀತಿಸಿದರೆ ಎಂದೆಂದಿಗೂ ಅವಳ ಮನಸ್ಸು ನೋಯಿಸುವುದಿಲ್ಲ. ಅವನು ಅವಳು ಹೇಳಿದಹಾಗೆ ಕೇಳಿದರೆ ಅವನ ಬಾಳು ಸುಗಮ ! ಆದರೆ ಆ ಸಂತಸ ಒಂದು ಕ್ಷಣ ಮಾತ್ರ. ಕಾಫಿಯ ಲೋಟದಲ್ಲಿದ್ದ ಕಾಫಿಯನ್ನು ಹತ್ತಿರದಲ್ಲಿದ್ದ ಸಿಂಕಿನೊಳಗೆ ಸುರಿದು ರವಿ ಶುಭಳ ಕೈಹಿಡಿದು ತನ್ನೆಡೆಗೆಳೆದುಕೊಂಡು ಅವಳ ಕಣ್ಣಿನಲ್ಲಿ ಕಣ್ಣಿಟ್ಟು ಹೇಳಿರಲಿಲ್ಲವೇ ? "ನನಗೆ ಯಾವಾಗಲೂ ಎಲ್ಲಾ 'ಸ್ಟ್ರಾಂಗ್' ಆಗಿ 'ಹಾಟ್' ಆಗೀನೆ ಇರ್ಬೇಕೂ, ನಿಂಗೆ ಗೊತ್ತಿಲ್ಲವಾ ?"

ಅವರ ಸರಸ ಸಲ್ಲಾಪ ತನಗೆ ಬಂಗಾರದ ಸಲಾಕೆ. ಅವರಿಬ್ಬರ ಸುಮಧುರ ಪ್ರೇಮ ಸಂಗೀತದಲ್ಲಿ ತಾನೊಂದು ಅಪಶ್ರುತಿ. ತಾನಿರುವುದೇ ತಪ್ಪು. ಅಣ್ಣ ಅತ್ತಿಗೆ !....ಅತ್ತಿಗೆ ಅಲ್ಲ ; ತನ್ನ ಮನೋರಾಜ್ಯದ ಹೃದಯ ಚಕ್ರಾಧಿಪತ್ಯದ ನಿರಂಕುಶ ರಾಣಿ ! ತನ್ನದಾಗಬೇಕಿದ್ದ ಒಲವಿನ ಸಿರಿ ಮತ್ತೊಬ್ಬರ ಮಡಿಲಲ್ಲಿ, ಬಾಹುಗಳಲ್ಲಿ....ಈ ಮನೆಯಲ್ಲಿ ತಾನೊಂದು ಅಲಂಕಾರದ ಜಡವಸ್ತು! ತಾನು ಸಿಟ್ಟುಸಿರಿಟ್ಟಾಗ ಶುಭ ಎಚ್ಚೆತ್ತು ರವಿಗೆ ಹೇಳಿರಲಿಲ್ಲವೇ?

"ಥೂ....ಸುಮ್ಮನಿರಬಾರ್ದೇ ? ರಘು ಎದ್ದಿದ್ದಾರೆ. ನಿಮಗೆ ಯಾವ್ದೂ ತಿಳ್ಯೋಲ್ಲ ಯಾವ್ದಕ್ಕೂ ಹೊತ್ತು ಗೊತ್ತು, ಸಂಯಮ ಏನೂ ಇಲ್ಲ...."

"ರಘೂ ತಾನೆ, ನೋಡ್ಲಿ ಬಿಡು....ನಮ್ಮನ್ನ ನೋಡಿ ಅವ್ನೂ ಕಲೀತಾನೆ" ರವಿಯ ಭಂಡ ಉತ್ತರ. ತಾನಾಗಿಯೇ ಅಲ್ಲಿಂದ ಸರಿದುಹೋಗಿರಲಿಲ್ಲವೇ ? ತನಗೆ ಕಲಿಯುವುದಕ್ಕೆ ಉಳಿದಿರುವುದಾದರೂ ಏನು ? ಒಂದು ಜನ್ಮಕ್ಕೆ ಸಾಕಾಗುವಷ್ಟು ಕಲಿತಾಗಿದೆ.

ತೋಟದಲ್ಲಿ ಸುತ್ತಿ ಬಂದಾಗ ಎದುರಿಗೇ ಬಂದು ನಿಂತ ಆ ಒಲವಿನ ಮೂರ್ತಿ ! ಕೈಯ್ಯಲ್ಲಿನ ಹೂಗೊಂಚಲುಗಳು–ಒಂದು ಕೈಯಲ್ಲಿ ಒಂದೆರಡು ದಿನಗಳ ಹಿಂದೆ ಕುಂಡದಲ್ಲಿಟ್ಟು ಬಾಡಿದ್ದ ಹೂವುಗಳು. ಮತ್ತೊಂದರಲ್ಲಿ, ಆಗತಾನೇ ಅರಳಿದ್ದ ಹೊಚ್ಚ ಹೊಸ ಹೂವು ...ತನ್ನೆದುರಿನಲ್ಲೇ ಬಾಡಿದ ಹಳೆಯ ಹೂಗಳನ್ನು ಹೊರಗೆಸೆದು ಹೊಸ ಹೂವನ್ನು ಎದೆಗೊತ್ತಿಕೊಂಡು ಬಂದು ಡ್ರಾಯಿಂಗ್ ರೂಮಿನ ಹೂ ಕುಂಡದಲ್ಲಿಡಲಿಲ್ಲವೇ....? ತನಗೂ ಆ ಹೊರಗೆಸೆದ ಬಾಡಿದ ಹೂವಿಗೂ ಏನಾದರೂ ವ್ಯತ್ಯಾಸವಿದೆಯೇ ?

"ಇವೇನು ಇಷ್ಟು ಬೇಗ ಹೊರಗೆ ಸುತ್ತಾಡಿ ಬಂದುಬಿಟ್ಟಿರಾ ? ಒಬ್ಬರೇ ಹೋಗಕೂಡದೆಂದು ಡಾಕ್ಟರ್ ಹೇಳಿಲ್ಲವೇ ?" ಮುದ್ದು ಮುಖದಲ್ಲಿ ನಗೆ ಮಿಂಚು–ಕಣ್ಣಿನಲ್ಲಿ ಆದರ, ಆತ್ಮೀಯತೆ. ಅವಳುಟ್ಟಿದ್ದ ತಿಳಿ ನೀಲಿ ಸೀರೆ, ರವಿಯ ಅತಿ ಮುದ್ದಿನಿಂದ ರಂಗೇರಿದ್ದ ಯೌವನಶ್ರೀ. ಒಂದರೆಗಳಿಗೆ ಮತ್ಸರದಿಂದ ತನ್ನ ಮನಸ್ಸು ಕುದಿಯಲಿಲ್ಲವೇ ? ಈ ಅಪೂರ್ವ ವಸ್ತು ತನ್ನದಾಗಿದ್ದರೆ ?

ರವಿಯು ನೀಡುತ್ತಿದ್ದ ಸುಖ, ಒಲವು ತಾನು ನೀಡುವಹಾಗಿದ್ದರೆ....? ಅವಳನ್ನೇ ನೋಡುತ್ತಾ ತಾನು ನಿಂತಾಗ ಅವಳು ತಲೆತಗ್ಗಿಸಿರಲಿಲ್ಲವೇ ?

"ಇನ್ನು ಮೇಲೆ ಹೀಗೆ ಒಬ್ಬರೇ ಹೊರಗೆ ಹೋಗಬೇಡಿ. ಇವರು ಬರ್ಲುತ್ತಲೂ ನಾನು ಹೇಳುತ್ತೇನೆ ತಾಳಿ...." ಶುಭ ಅಲ್ಲಿಂದ ಸರಿದಿದ್ದಳು.

"ಇನ್ನು ಮುಂದೆ ನಾನು ಹೀಗೇ ಒಬ್ಬನೇ ಹೋಗುವುದನ್ನು ಕಲಿಯ ಬೇಕು"—ಎಂದು ಹೇಳುವ ತವಕ ತನಗೆ.

ತನಗೆ ಬೇಡವಾದ, ಬೇಸರವಾಗುವ ಘಟನೆಗಳ ನಡುವೆ ತಾನೆಷ್ಟು ದಿನ ಬದುಕಬೇಕು ! ದಳ್ಳುರಿಯನ್ನು ಎದೆಯೊಳಗಿಟ್ಟುಕೊಂಡು ಮೇಲೆ ನಗು ವಿನ ಹೊದಿಕೆಯನ್ನು ಹಾಸಿಕೊಂಡು ಬಾಳುವುದು ವಿಷಕ್ಕೆ ಸವಿ ಬೆರೆಸಿಕೊಂಡಂತೆ!

ಶುಭ-ರವಿಯರ ದಾಂಪತ್ಯ-ಪ್ರೀತಿಯ ಮಡದಿಯ ಸಾಮೀಪ್ಯ ಬಯಸಿ ಹಾತೊರೆದು ಬರುತ್ತಿದ್ದ ರವಿ ಅವನಿಗಾಗಿ ಸಿಂಗರಿಸಿಕೊಂಡು ಕಾದು ನಿಂತಿರುತ್ತಿದ್ದ ಒಲವಿನ ಮಡದಿ-ಬರುತ್ತಲೇ ಅವಳ ಸೊಂಟದ ಸುತ್ತ ಕೈಬಳಸಿ ಮೈಗೊರಗಿಸಿ ಕೊಂಡು ಮಹಡಿಯೇರಿದರೆ ಅವರಿಬ್ಬರೂ ಕೆಳಗೆ ಬರುತ್ತಿದ್ದುದು, ಬಾಬು ಊಟಕ್ಕೆ ಕರೆದಾಗಲೇ-ಅಲ್ಲೂ ಮೆಲುನಗು, ಪಿಸುಮಾತು-ಬೇಕಾಗಿಯೇ ದೂರವಿರುತ್ತಿದ್ದ ತಾಯಿ, ಭಗವದ್ಗೀತೆ, ಮಹಾಭಾರತ, ರಾಮಾಯಣದಲ್ಲಿ ನಿರತರಾದ ತಂದೆ-ಒಮ್ಮೊಮ್ಮೆ ಆ ದಾಂಪತ್ಯ ಮಹಾಪೂರದಲ್ಲಿ ತಾನೊಂದು ಮರಳು ರಾಶಿ. ಊಟಕ್ಕೆ ಒಟ್ಟಿಗೆ ಕುಳಿತಾಗ-ಟೇಬಲ್ಲಿನ ಕೆಳಗೆ ಶುಭನ ಕಾಲುಗಳೊಂದಿಗೆ ಆಡುತ್ತಿದ್ದ ರವಿಯ ಕಾಲುಗಳು-ಹೊರಜಗತ್ತಿನ ಅರಿವಿಲ್ಲ ದೆಯೇ ಅವಳ ಬೆನ್ನು ಕೆನ್ನೆ ಸವರುತ್ತಿದ್ದ ರವಿಯ ಕೈಗಳು. ಅವಳ ತಟ್ಟೆ ಯಿಂದಲೇ ಅವಳಿಗಿಷ್ಟವಾದ ಪದಾರ್ಥಗಳನ್ನು ಕದ್ದು ತಿನ್ನುತ್ತಿದ್ದ ರವಿಯ ಹುಚ್ಚಾಟ-ತನಗೆ ನುಂಗಲಾರದ ತುತ್ತಾಗಿರಲಿಲ್ಲವೇ ?

"Excuse me" ಎಂದು ತಾನು ಎದ್ದು ಹೋಗಿರಲಿಲ್ಲವೇ ?

"ಪಾಪ, ಅವ್ರು ಅರ್ಧ ಊಟಕ್ಕೇ ಎದ್ದುಬಿಟ್ರು ...ನೀವು ಇಷ್ಟ ಫ್ರೀಯಾಗಿ ಫ್ಲರ್ಟ್ ಮಾಡ್ತೀರಿ....ಅವರಿಗೆ ಅಸಹ್ಯವಾಗೋಲ್ವೇ ?" ಶುಭ ಗದರಿಕೊಂಡದ್ದೂ ಉಂಟು. ಇಂತಹ ಸಂದರ್ಭಗಳನ್ನು ಆದಷ್ಟು ತಡೆಗಟ್ಟ ಪುವಕ್ಕಾಗಿ ತಾನು ಅವರೊಂದಿಗೆ ಊಟ ಮಾಡುತ್ತಿದ್ದುದೇ ಕಡಿಮೆ. ಆಗಾಗ ತಾಯಿಯ ಆಕ್ಷೇಪಣೆ.

"ಏನೋ ರಘು, ರವಿಗೇನೋ ಆಯ್ತು. ನೀನು ಯಾವ್ದಾದ್ರೂ ಹುಡುಕಿ ಕೊಂಡು ಬಾ.....ನಿಂಗೂ ಯಾರ್ನಾದ್ರೂ ಕಟ್ಟಿಬಿಟ್ಟ ಹಾಯಾಗಿರ್ತೀನಿ....ನಂಗೂ ಬೇಜಾರು-ಗಂಡ ಹೆಂಡ್ತಿ, ಅವರ ಪಾಡು ಅವರಿಗೆ-ನಾನೂ ಇವ್ರು ಒಂದಿಷ್ಟು ಊರಾದ್ರೂ ಸುತ್ತಾಡಿಕೊಂಡು ಬರ್ತೀವಿ...."

ತಂದೆಯ ಅನುಕಂಪ "ಯಾಕಯ್ಯ ದೂರ ಭಾರ ಊರು. ಸುಮ್ಮನೇ ಇಲ್ಲೇ ಯಾವ್ದಾದ್ರೂ ಹತ್ತಿರದಲ್ಲಿ ಕೆಲ್ಸ ನೋಡ್ಕೋಬಾರದಾ ? ಪಾಪ. ನಿಂಗೂ ತೊಂದರೆ-ಈಗ್ನೋಡಿದ್ರೆ ಕಾಲು ಬೇರೆ ಮುರ್ಕೊಂಡಿದ್ದೀಯಾ....ಅಲ್ಲಿ ಹೋದ್ರೆ ನಿನ್ನ ಕೇಳೋರು ಹೇಳೋರು ಇರೋಲ್ಲ... "

ತಾನು ಒಣನಗೆ ನಕ್ಕಿರಲಿಲ್ಲವೇ ? ಇಲ್ಲಿ ಯಾರಿದ್ದಾರೆ ತನಗೆ ಹೇಳೋರೂ

ಕೇಳ್ತೋರು ? ಅವರವರ ಪಾಡು ಅವರವರಿಗೆ....ರವಿಯು ಇಸ್ತ್ರಿ ಮಾಡಿದ ಬಟ್ಟೆಗಳನ್ನು ಮಹಡಿಯ ಮೇಲೆ ತೆಗೆದುಕೊಂಡು ಸೆರಗು ಬೀಸಿಕೊಂಡು ಹೋದ ಶುಭ ತನ್ನತ್ತ ತಿರುಗಿ ಕೂಡ ನೋಡದೇ ಮರೆಯಾಗಿಲಿಲ್ಲವೇ ?

ಮದುವೆಯ ಹೊತ್ತಿನಲ್ಲಿ ನಾಲ್ಕು ಜನಗಳ ಮುಂದೆ ತಾಯಿ ಹೊಂದಿಕೊಂಡು ಶುಭಳನ್ನು ಸರಿಯಾಗಿ ನಡೆಸಿಕೊಂಡರೂ ಅನಂತರ ತಾನಾಗಿಯೇ ಒಂದು ಬಗೆಯ ತಾತ್ಸಾರ ಭಾವನೆ ಬೆಳೆಸಿಕೊಂಡಿದ್ದರು. ಅವಳನ್ನು ಹೆಚ್ಚಾಗಿ ಮಾತನಾಡಿಸುತ್ತಿರಲಿಲ್ಲ. ಪೂಜೆಗಾಗಿ ದೇವರ ಮನೆಯಲ್ಲಿ ಸಿದ್ಧಪಡಿಸಲು ತಂದೆ ಶುಭಳಿಗೆ ಹೇಳಿದಾಗ ತಾಯಿ ಹುಬ್ಬುಗಂಟು ಹಾಕಿರಲಿಲ್ಲವೇ ?

"ಅವಳಿಗೇನು ಗೊತ್ತು ? ಆಪಾಟಿ ಬೆಳ್ಳಿ ಸಾಮಾನುಗಳಿವೆ ಸದ್ಯ."

ಶುಭ ಮ್ಲಾನಳಾಗಿ ತಲೆತಗ್ಗಿಸಿದಾಗ ತನಗೇಕೆ ಅಷ್ಟು ಬೇಸರವಾಯ್ತು ?

"ಯಾಕಮ್ಮ ಹಾಗಂತೀ ? ಅವಳೇನು ತಿಂದುಹಾಕಿಬಿಡ್ತಾಳಾ ?" ಆ ಮಾತು ತಾನು ಆಡಬಾರದಿತ್ತು. ಶುಭ ಅಲ್ಲಿಂದ ಸರಸರನೆ ಹೊರಟು ಹೋಗಿರಲಿಲ್ಲವೇ ? ತನ್ನ ತಾಯಿ ಹೇಳಿದ ಮಾತು ಅವಳಿಗೆ ಕೇಳಿಸಿರಬೇಕು.

"ಸಾಕು ಸುಮ್ನಿರೋ, ನೀನ್ಯಾಕೆ ಅವಳ ಪರವಾಗಿ ಅಷ್ಟು ಮಾತಾಡ್ತೀ? ರವಿನೇ ಸುಮ್ಮನಿರುತ್ತಾನೆ."

ಬಂದವರ ಮುಂದೆ ಶುಭ ಒಂದು ಪ್ರದರ್ಶನದ ವಸ್ತು.

"ಶುಭಾ....ಇವೊತ್ತು ನಮ್ಮ ಸೋದರಮಾವನ ಮನೇವ್ರು ಯಾರೋ ಬರ್ತಾರೆ. ಅಂಚು ಸೆರಗು ಜರತಾರಿ ಇರೋ ಸೀರೆ ಉಟ್ಕೊ, ನಾವು ಹಾಕಿದ ಒಡವೆ ಎಲ್ಲ ಹಾಕಿಕೋ...." ತಾಯಿಯ ಆಜ್ಞೆ.

"ಇವರಿಗೆ ಹಾಗೆ ಒಡವೆ ಹಾಕೊಂಡ್ರೇ ಸರಿಬೀಳೋಲ್ಲ..." ಶುಭ ಉತ್ತರಿಸಿದಾಗ,

"ಅವನಿಗೇನು ಗೊತ್ತು ? ನಾನ್ಹೇಳಿದ ಹಾಗೆ ಕೇಳು. ಮನೇಲಿ ದೊಡ್ಡೋರೂ ಹಿರಿಯರು ಇದ್ರೂ ಒಂದೇ, ಸತ್ರೂ ಒಂದೇ..." ತಾಯಿಯ ಗೊಣಗು....ಆ ಸಂಜೆ ತಾಯಿಯ ಆದೇಶದಂತೆ ಅಲಂಕರಿಸಿಕೊಂಡು ಕುಳಿತಾಗ ರವಿಯ ಆರ್ಭಟ.

"ಇದೇನು ಅವಾಂತರ, ದಸರಾ ಬೊಂಬೆ ಹಾಗೆ ! ಥೂ, ಅಸಹ್ಯ ತೆಗೆದು ಹಾಕು ಅದೆಲ್ಲಾ....!"

"ನಿಮ್ಮ ತಾಯಿಗೆ ಕೋಪ ಬರುತ್ತೆ...ಯಾರೋ ಬರ್ತಾರಂತೆ ..."

"ಯಾರಾದ್ರೂ ಬಂದ್ರೆ ಎಲ್ಲ ಜ್ಯುಯಲ್ ಕೇಸಿನಲ್ಲಿ ಹಾಕಿ ತೆಗೆದು ಅವರ ಮುಂದೆ ಪ್ರದರ್ಶಿಸೂನ್ನು....ನಾನು ನಾಗರಿಕ ಹುಡುಗೀನ್ನ ಮದುವೆ ಮಾಡಿಕೊಂಡಿದ್ದೀನಿ ಅಂದ್ಕೊಂಡಿದ್ದೆ."

ಶುಭ ರವಿಯ ಆರ್ಭಟಕ್ಕೆ ಹೆದರಿ ಒಡವೆಗಳನ್ನು ತೆಗೆದಿರಿಸಿ ಬಂದಾಗ ತಾಯಿಯ ಹಗರಣ. "ನೀನು ನಾಗರಿಕಳು. ನಾನು ಅನಾಗರಿಕಳು.... ಅನ್ನ ಬಾಯಲ್ಲೇ ಬಂತಲ್ಲಾ...ಅಲ್ವೇ, ನೀನು ನನ್ಮೇಲೆ ಚಾಡಿಯಾಕೆ ಹೇಳ್ದೆ, ನಾನೇ ಹಾಕ್ಕೊಂಡೇ ಅಂದಿದ್ರೇ ನಿನಗೇನಾಗ್ತಿತ್ತು ? ಇಂಥ ಒಡವೆ ಹಾಕ್ಕೊಳ್ಳೋಕ್ಕೂ ಕೇಳ್ಕೊಂಪ್ಟಂದಿರ್ಬೇಕೂ...."

ತಾನು ಕಂಡಂತೆ ಶುಭ ಕಣ್ಣೀರು ಹಾಕಿಕೊಂಡು ಹೋದಾಗ ತನಗೆ ಕುದಿಯುವಷ್ಟು ಸಿಟ್ಟು.

"ಯಾಕಮ್ಮ, ಆ ಹುಡುಗೀನ್ನ ಅಷ್ಟು ಗೋಳು ಹೊಯ್ದುಕೊಳ್ತೀ ? ಅವಳ ಗಂಡನಿಗೆ ಬೇಕಾಗುವ ಹಾಗೆ ಅವಳಿರಬೇಕೋ, ನೀನು ಹೇಳಿದಾಗೆ ಇರ್ಬೇಕೊ.......ಜ್ಞಾಪಕ ಇರ್ಲಿ ಅವಳು ನಿನಗಾಗಿ ರವಿನ್ನ ಮದುವೆ ಮಾಡ್ಕೊಳ್ಳಿಲ್ಲ"

"ಓಹೋ ಹೋ .. ನೀನು ವಹಿಸ್ಕೋತೀಯಾ ? ಅದೇನು ಅವ್ನು ಕಂಡ್ರೆ ಅಣ್ಣ ತಮ್ಮಂದಿರು ಒಡ್ಡಾಡ್ತೀರೋ...ನಾನು ನೋಡ್ತಾ ಇರ್ತೀನಿ. ಬದುಕಿದ್ರೇ ....ನಿಮ್ಮಿಬ್ರನ್ನೂ ಹೇಗೆ ನೋಡ್ಕೊತಾಳೇ ಅಂತ...."

ಯಾವ ಮಾತಿಗೂ ಬಾರದ ಶಿವರಾಮಯ್ಯ ತಡೆಯಲಾರದೇ ಮಾತು ನಿಲ್ಲಿಸಬೇಕಾಯ್ತು.

"ಹುಡುಗರು ಹೇಗೆ ಬೇಕೋ ಹಾಗಿರ್ಲಿ. ನೀನ್ಯಾಕೆ ಸುಮ್ನೇ ಅವರ ಸಂತೋಷ ಹಾಳುಮಾಡ್ತೀ ?"

ತನಗೆ ಶುಭಳ ಮನಸ್ಸಿಗೆ ಕೊಂಚ ನೋವಾದರೂ ತಡೆಯುತ್ತಿರಲಿಲ್ಲ. ಮದುವೆಯಾಗಿ ಎಂಟು ದಿನಗಳಾದರೂ ಸತತವಾಗಿ ತನ್ನ ಬಳಿಯೇ ಇರ ಬೇಕೆಂದು ಹಂಬಲಿಸುತ್ತಿದ್ದ ರವಿ ಅವಳನ್ನು ತನ್ನೊಡನೆ ಹೆಚ್ಚು ಬೆರೆಯಲು ಬಿಡದಿದ್ದಾಗ ತಾಯಿ ಬೇಕೆಂತಲೇ ಗಂಟಲೇರಿಸಿ ಹೇಳಿರಲಿಲ್ಲವೇ ?

"ಇಲ್ಲಿ ಮಹಾರಾಣಿ ಹಾಗೆ ಅಂತಃಪುರದಲ್ಲಿ ಕೂತ್ಕೊಂಡು ನಮ್ಮೆಲ್ಲರ

ಕೈಲ್ಲಿ ಚಾಕರಿ ಮಾಡಿಸ್ಕೊಳ್ಳೋಕೆ ಬಂದಿದ್ದಾಳೆ. ನಾನೇನು ಶಾಶ್ವತ! ಕೆಳಗೆ ಇಳಿದು ಬಂದು ಮನೆ ಜವಾಬ್ದಾರಿ ಸ್ವಲ್ಪ ವಹಿಸ್ಕೊಬಾರ್ದಾ? ಅಡ್ಗೆಗೆ ಸಾಮಾನು ತೆಕ್ಕೊಂಡೋದ್ರಿಂದ ಎಷ್ಟೇಟಿನ ಲೆಕ್ಕ ಕೂಡ ನಾನೇ ಮಾಡ್ಬೇಕೂ ....ಅಲ್ಪಂಗೆ ಐಶ್ವರ್ಯ ಬಂದ್ರೆ ಅರ್ಧ ರಾತ್ರೀಲಿ ಕೊಡೆ ಹಿಡಿದ್ನಾಗೆ...." ಆ ಮಾತು ಕೇಳಿ ತನಗೆ ಹೊಟ್ಟೆಯಲ್ಲೇಕೋ ಸಂಕಟ, ಸಧ್ಯ ಶುಭನ ಕಿವಿಗೆ ಬೀಳ ದಿದ್ದರೆ ಸಾಕು. ಬಿದ್ದರೆ ಎಷ್ಟು ನೊಂದುಕೊಂಡಾಳೋ!

ಅಂದು ನಂದಿನಿ ಶುಭನನ್ನು ನೋಡಲು ಬಂದಾಗ ತಾಯಿ ಅದೆಷ್ಟು ಹೀನಾಯವಾಗಿ ಕಂಡಿದ್ದರು.

"ಓಹೋ....ಬಂದ್ಯಾ ನಂದಿನಿ, ನಾದಿನಿ ಹೇಗಿದ್ದಾಳೆಂತಾ ನೋಡಕ್ಕೆ ಬಾ. ತೋರಿಸ್ತೀನಿ ...ಶುಭಾ....ಶುಭಾ ನೋಡು, ನಿಮ್ಮತ್ತಿಗೆ ಬಂದಿದ್ದಾರೆ...." ಶುಭ ತಕ್ಷಣ ಬರವೆ ತಲೆ ಕೆದರಿದ, ಬಟ್ಟೆ ಅಸ್ತವ್ಯಸ್ತವಾದ ರವಿ ಕೆಳಗಿಳಿದು ಬಂದು

"ಏನು....ನಂದಿನಿ ಹೇಗ್ಬಂದಿ?....ನೀನು ಬರ್ತೀ ಅಂತ ಗೊತ್ತಿದ್ರೆ ನಾನೇ ಕಾರು ಕಳಿಸ್ತಿದ್ದಲ್ಲ...ಪ್ರೈವೇಟ್ ಟ್ಯಾಕ್ಸೀಲಿ ಯಾಕ್ಬಂದಿ?...."

ತಲೆಯ ಕೂದಲು ಸರಿಪಡಿಸಿಕೊಳ್ಳುತ್ತಾ ಅವನ ಹಿಂದೆ ಬಂದ ಶುಭ ನನ್ನು ಕಂಡು ತಾಯಿ ಬೇಕೆಂತಲೇ ಹೇಳಲಿಲ್ಲವೇ?

"ನೋಡು, ನಾದಿನೀನಾ ಹೇಗಿದ್ದಾಳೆ! ಕೊಂಚ ದಪ್ಪ ಆಗಿಲ್ವೇ? ನಿಮ್ಮನೇಲಿ ಏನಾದ್ರೂ ಅಗಚಾಟಲು, ಕೆಲಸ ಇರ್ತಿತ್ತು. ಈಗ ಇಲ್ಲಿ ಎಲ್ಲಾ ಕೂತ್ಕಡೆ, ನಿಂತ್ಕಡೆ ಆಗುತ್ತೆ...!" ನಂದಿನಿ ಶುಭನಿಗೆ ತಂದಿದ್ದ ಹೂವು ಹಣ್ಣು ಕೊಟ್ಟಾಗಲೂ ಅಷ್ಟೆ. 'ಅದ್ಯಾಕೆ ಇದಕ್ಕೆಲ್ಲಾ ಖರ್ಚು ಮಾಡ್ತೀ? ನಮ್ಮನೇಲಿ ಫ್ರಿಜ್ ಒಳ್ಗೆ ರಾಶಿ ರಾಶಿ ಹಣ್ಣು ಕೊಳೀತಾ ಬಿದ್ದಿದೆ..." ನಂದಿನಿಯ ಮುಖ ಕುಂದಿದ್ದೂ, ಶುಭನ ಮುಖ ಬಿರುಸಾದದ್ದೂ ಕಾಣಿಸಲಿಲ್ಲವೇ ತನಗೆ? ನಂದಿನಿ ಹೊರಟು ನಿಂತಾಗ ಶುಭ ಬೇಕೆಂತಲೇ ತಾಯಿಗೆ ಕೇಳುವ ಹಾಗೆ ಹೇಳಿರ ಲಿಲ್ಲವೇ?

"ಸುಮ್ನೆ ನೀನ್ಯಾಕೆ ಬರ್ತೀಯಾ ಅತ್ತಿಗೆ? ನಾನೇ ಯಾವಾಗ್ಲಾದ್ರೂ ಆ ಕಡೆ ಬಂದಾಗ ನೋಡಿಕೊಂಡು ಹೋಗ್ತೀನಿ. ಅವರವರ ದೊಡ್ಡಸ್ತಿಕೆ ಅವರಿಗಿದ್ದೋಲ್ವಾ!" ತನಗೆ ಸಂತಸದಿಂದ ಕೈ ಚಪ್ಪಾಳೆ ಹೊಡೆಯುವ ಮನಸ್ಸಾಗಿರಲಿಲ್ಲವೇ?

3

ಮಳೆಯಲ್ಲಿ ನೆಂದಿದ್ದರಿಂದ ತಲೆನೋವೆಂದು ತಾನು ಮಲಗಿದ್ದಾಗ ಅವಳು ಎಷ್ಟು ಒದ್ದಾಡಿದ್ದಳು. ಬಿಸಿ ಬಿಸಿ ಕಾಫಿಯನ್ನು ತಾನೇ ತಂದಿತ್ತು ಕೈಯ್ಯಲ್ಲಿ ಮುಚ್ಚಿಟ್ಟುಕೊಂಡು ಬಂದಿದ್ದ ನೋವಾಲ್ಜಿನ್ ಟ್ಯಾಬ್ಲೆಟ್ ತನ್ನ ಕೈಗಿತ್ತಿರಲಿಲ್ಲವೇ ?

"ಬಿಸಿ ಕಾಫಿ ಜೊತೆಗೆ ಇದನ್ನ ತೊಗೋಳ್ಳಿ, ಖಂಡಿತ ನಿಮ್ಮ ತಲೇ ನೋವು ಹೊರಟುಹೋಗುತ್ತೆ." ಹೂವಿನಂತೆ ಮೃದುವಾದ ಆ ಕರಳಿದ್ದ ಕೈಗಳಲ್ಲಿ ಮಲಗಿದ್ದ ಆ ನೋವಾಲ್ಜಿನ್ ತನಗೆ ಎಷ್ಟು ಪ್ರಿಯವಾಗಿತ್ತು. ಕೈಲಿದ್ದ ಅದನ್ನು ತೆಗೆದುಕೊಳ್ಳುತ್ತಾ ಬೇಕೆಂತಲೇ ಅವಳ ಕೈ ಮೃದುವಾಗಿ ಅದುಮಿ ಕಣ್ಣಲ್ಲಿ ಕಣ್ಣಿಟ್ಟು ಹೇಳಿರಲಿಲ್ಲವೇ ?

"ಥ್ಯಾಂಕ್ಸ್....ನೀವು ಅದನ್ನು ಕೈಯಲ್ಲಿ ಹಿಡಿದು ತೋರಿಸಿದಾಗಲೇ ನನ್ನ ತಲೆನೋವು ಹೊರಟುಹೋಯ್ತು, ಎಲ್ಲಕ್ಕೂ ಔಷಧಿ ಇಟ್ಟಿದ್ದೀರಾ ನೀವು ?"....

ಅವಳು ಕೈ ಹಿಂತೆಗೆದುಕೊಂಡು ಕೊಂಚ ಕೆಂಪಾಗಿ ಹೇಳಲಿಲ್ಲವೇ ?

"ಎಲ್ಲಕ್ಕೂ ಔಷಧಿಯೆಂದರೆ....ನಿಮಗಿನ್ನೇನು ...ತೊಂದರೆ....? ಇನ್ನೆಲ್ಲಿ ನೋವು ?"

"ಇಲ್ಲಿ, ತಡೆಯಲಾಗದಷ್ಟು ನೋವು !" ಎಂದು ತಾನು ತನ್ನ ಎದೆ ಮುಟ್ಟಿ ತೋರಿಸಿದಾಗ ಅವಳು ಮುಖ ಮರೆಸಿ ಎದ್ದು ಹೋಟುಹೋಗಿರ ಲಿಲ್ಲವೆ ?

ತಾನೇಕೆ ಹೀಗಾಗುತ್ತಿದ್ದೇನೆ ? ತನ್ನ ಅತ್ತಿಗೆಯೆಂದು ತಿಳಿದೂ ಹೀಗಾಡ ಬಹುದೇ ? ಆದರೆ ಅವಳಲ್ಲಿ ತನಗೇನೋ ಆಕರ್ಷಣೆ, ಅದೇನೋ ಆದರ, ಒಲವು. ನೋಡಿದಷ್ಟೂ ನೋಡಿ ತಣಿಯದಾದ ಆಸೆ. ಅವಳನ್ನು ಕಂಡರೆ ಹೃದಯದಲ್ಲಿ ಇಮ್ಮಡಿ ಬಡಿತ, ಮನಸ್ಸಿನಲ್ಲಿ ಮಬ್ಬು ತೆರೆಯೊಂದು ಸರಿದು ಬೆಳಕು ಮೂಡುವ ಭಾವನೆ, ಮೈಯಲ್ಲಿ ವೇಗ ರಕ್ತ ಚಲನೆ.

ಅದೊಂದು ನೀರವ ರಾತ್ರಿ. ಅವಳದೇ ಯೋಚನೆಯಲ್ಲಿ ತಾನು ಮುಳುಗಿ ಕಣ್ಣಿಗೆ ನಿದ್ದೆ ಹತ್ತಿರಲಿಲ್ಲ. ರವಿ ಸಂಜೆಯ ಮೇಲೆ ಗೊಬ್ಬರ ವ್ಯಾಪಾರ ಮಾಡಿ ತರಲು ಹೋದವನಿನ್ನೂ ಬಂದಿರಲಿಲ್ಲವಾದ ಕಾರಣ ಅವಳು ಡ್ರಾಯಿಂಗ್ ರೂಮಿನಲ್ಲಿ ಕುಳಿತು ಪುಸ್ತಕ ಹಿಡಿದು ಎತ್ತಲೋ ನೋಡು

ತ್ತಿದ್ದಳು. ತಂದೆ, ತಾಯಿ ಆಗಲೇ ಮಲಗಿಯಾಗಿತ್ತು. ಅವಳು ಹಾಗೆ ಒಬ್ಬಳೇ ರವಿಗಾಗಿ ಕಾತರಿಸಿ ಕುಳಿತಿದ್ದಾಗ ತಾನು ನಿದ್ದೆ ಮಾಡುವುದೇ ? ತಾನು ಮೆಲ್ಲನೆದ್ದು ಡ್ರಾಯಿಂಗ್ ರೂಮಿಗೆ ಕಾಲಿಟ್ಟಾಗ ತನ್ನ ಮಾದಕತೆ ಮುಸುಕಿದ ಕಣ್ಣುಗಳಿಗೆ ಅವಳೊಂದು ಹಬ್ಬ. ಆ ಬಿರಿಗುಡಿ, ಮುಖದ ಸುತ್ತು ಆವರಿಸಿ ಭುಜದ ಮೇಲೆ ಹರಿದು- ತೊಡೆಯ ಮೇಲೆ ಮಲಗಿದ್ದ ಸೊಬಗು. ನಿದ್ರೆ, ಆತಂಕ ತುಂಬಿದ್ದ ಆ ಕಣ್ಣುಗಳಲ್ಲಿನ ಏನೋ ಹೊಳಪು, ಊಟ ಕೂಡ ಮಾಡದೆ ಹಸಿವಿನಿಂದ ಕೊಂಚ ಸೊರಗಿದ್ದ ಆ ಮುಖ. ತನ್ನ ಹೆಜ್ಜೆಯ ಸದ್ದಿಗೆ ಎಚ್ಚೆತ್ತು ಕೇಳಿದಳು.

"ಇದೇನು, ಇನ್ನೂ ಮಲಗಿಲ್ಲವೇ ?"

"ಇಲ್ಲ....ನೀವೊಬ್ಬರೇ ಹೀಗೆ ಎದ್ದು ಕುಳಿತಿದ್ದರೆ ನಾನು ಹೇಗೆ ಮಲಗಲಿ? ರವಿ ಬಂದಾಗ, ಬೇಕಾದರೆ ಬಾಬು ಬಂದು ಎಬ್ಬಿಸುತ್ತಾನೆ, ಮಲಗಬಾರದೇ ?" ತಾನು ಅವಳ ಮುಂದೆ ಕುಳಿತುಕೊಂಡು ಕೈಗೆ ಪೇಪರ್ ಎತ್ತಿಕೊಂಡಿರಲಿಲ್ಲವೇ?

"ಪರವ್ವಾಗಿಲ್ಲ. ನಂಗೇನೂ ನಿದ್ದೆ ಬರ್‍ತಾ ಇಲ್ಲ....ನಂಗೆ ಒಬ್ಳೇ ಮಲ್ಗೋಕೆ ಒಂದು ತರಹ ಹೆದರಿಕೆ...."

ಹೌದು, ಮದುವೆಯಾದ ಮೇಲೆ ಅಂದೇ ಮೊದಲ ಬಾರಿ ರವಿ ಅವಳ ಜೊತೆ ಇಲ್ಲದಿದ್ದದ್ದು.

"ನಾನಿರ್‍ತೀನಿ ಕೆಳಗೆ, ಹೋಗಿ ಮಲಗಿಕೊಳ್ಳಿ, ಯಾರೂ ಬರೋಲ್ಲ. ಯಾವ ಹೆದರಿಕೇನೂ ಬೇಡಾ ."ತಾನು ಭರವಸೆ ಕೊಟ್ಟಾಗ ಅವಳು ನಕ್ಕಿದ್ದಳು.

"ಯಾರಾದ್ರೂ ಬರೋ ಹೆದರಿಕೆ ಅಲ್ಲ ...ಯಾಕಿನ್ನೂ ತಾವ್ರೂ ಬರಲಿಲ್ಲ ಅನ್ನೋ ಹೆದರಿಕೆ, ಅಷ್ಟೆ. ನೀವು ಮಲ್ಕೊಳ್ಳಿ ಹೋಗಿ ..."

"ಹಾಗೆಲ್ಲಾ ಆಗೋಲ್ಲ...ನೀವು ಮಲಗಿಕೊಂಡರೇ ನಾನೂ ಮಲಗೋದು. ಇಲ್ಲಿದ್ರೇ ನಾನು ಹೀಗೇ ಕೂತಿರ್‍ತೀನಿ ... ಅದಲ್ದೇ ಊಟ ಕೂಡ ಮಾಡ್ದೇ ಯಾಕೆ ಕೂತಿದ್ದೀರಾ ? ಅವ್ನು ಊರ್‍ನಲ್ಲಿ ಚೆನ್ನಾಗಿ ಹೊಟ್ಟೆ ತುಂಬಿಸಿಕೊಂಡು ಬರ್‍ತಾನೆ.. ನೀವ್ಯಾಕೆ ಹಸಿವಿನಿಂದ ಸೊರಗ್ತೀರಿ...?"

ಅದಕ್ಕುತ್ತರ ಅವಳ ನಗೆಯೊಂದೇ. ಉತ್ತರವಿಲ್ಲ. ಮೌನವಾಗಿ ಕಣ್ಣು ತಗ್ಗಿಸಿ ಪುಸ್ತಕ ಓದತೊಡಗಿದಳು. ತಾನೆಷ್ಟು ಹೊತ್ತು ಅವಳ ಮುಂದೆ ಹೀಗೆ ಕುಳಿತಿರುವುದು ? ಅವಳಿಗೆ ತನ್ನರಿವೆಲ್ಲಿದೆ ? ಅವಳ ಮನಸ್ಸಿನ

ತುಂಬಾ ರವಿಯೇ ಇರಬೇಕು. ಪುಸ್ತಕದಲ್ಲಿ ತಲ್ಲೀನಳಾಗಿ ತನ್ನತ್ತ ಕೂಡ ಗಮನಿಸದೇ ಕುಳಿತಿದ್ದ ಅವಳನ್ನು ಹಿಡಿದಲುಗಿಸಿ ಅರ್ಭಟಿಸುವಾಸೆ. "ಇಲ್ಲಿ ನೋಡು ಶುಭಾ, ನಾನಿದ್ದೇನೆ. ಆ ಹಾಳು ಪುಸ್ತಕದಲ್ಲೇನಿದೆ ?" ಎಂದು ಕೂಗಬೇಕೆಂದಾಸೆ.

ಅವಳಿಂದ ಯಾವ ಪ್ರತಿಕ್ರಿಯೆಯೂ ಬಾರದ ಕಾರಣ ತಾನು ಎದ್ದು ನಿಂತು "ಗುಡ್‌ನೈಟ್" ಎಂದು ಹೇಳಿ ತನ್ನ ರೂಮಿಗೆ ಹೋಗಿ ಮಲಗಿಯಾಗಿತ್ತು. ತನಗೂ ಮಂಪರು ನಿದ್ದೆ. ಒಮ್ಮೆ ಚೆನ್ನಾಗಿ ಎಚ್ಚರವಾದಾಗ ಡ್ರಾಯಿಂಗ್ ರೂಮಿನಿಂದ ಬರುತ್ತಿದ್ದ ಬೆಳಕು ಕಂಡು ಎದ್ದು ಕುಳಿತಿರಲಿಲ್ಲವೇ ? ಇದೇನು ದೀಪವಿನ್ನೂ ಉರಿಯುತ್ತಿದೆ ?

ರವಿ ಇನ್ನೂ ಬಂದಿರಲಿಲ್ಲವೇ, ಶುಭ ಇನ್ನೂ ಮಲಗಿರಲಿಲ್ಲವೇ? ಎದ್ದು ತಲೆಯ ದಿಂಬಿನ ಕೆಳಗೆ ಇಟ್ಟಿದ್ದ ವಾಚು ತೆಗೆದು ನೋಡಿದಾಗ ರಾತ್ರಿ ದೀಪದ ಬೆಳಕಿನಲ್ಲಿ ಮಸುಕಾಗಿ ಕಂಡಿತು ರಾತ್ರಿ ಒಂದು ಗಂಟೆ. ಸರಕ್ಕನೆ ಎದ್ದು ರೂಮಿನ ದೊಡ್ಡ ದೀಪ ಹತ್ತಿಸಿ ಡ್ರಾಯಿಂಗ್ ರೂಮಿನತ್ತ ನಡೆದು ಬಂದಾಗ ಕಂಡದ್ದಾದರೂ ಏನು ? ಡ್ರಾಯಿಂಗ್ ರೂಮಿನ ಪ್ರಖರವಾದ ಬೆಳಕಿನಲ್ಲಿ ಕೈಯ್ಯಲ್ಲಿ ಹಾಗೆ ಪುಸ್ತಕ ಹಿಡಿದು ಸೋಫಾದ ದಿಂಬಿಗೊರಗಿ ಹಾಗೇ ಕಣ್ಮುಚ್ಚಿ ಮಲಗಿದ ಶುಭ....ನೀರವ ರಾತ್ರಿ-ಗಾಳಿಯುಸಿರೂ ಪ್ರತಿಧ್ವನಿಸುತ್ತಿದ್ದಂತೆ ಕಾಣುತ್ತಿದ್ದ ರಾತ್ರಿ....ಏನೋ ನೀರವತೆ, ನಿರ್ಜನತೆ...ಸೋಫಾದ ಮೇಲೊರಗಿ ಮಲಗಿದ್ದ ಅಪ್ಸರೆ .. ಕೆನ್ನೆಗಳ ಮೇಲೆ ವೈಚಾಚಿ ಮಲಗಿದ್ದ ಆ ಕಣ್ಣೆವೆಗಳು ಸುಳಿಗಲ್ಲ, ಮಧುತುಂಬಿದ ಆ ತುಟಿ-ಅಲ್ಲಲ್ಲಿ ಅಸ್ತವ್ಯಸ್ತವಾದ ತಿಳಿಗೆಂಪು ಸೀರೆಯಲ್ಲಿ ಕಾಣುತ್ತಿದ್ದ ಯೌವನಶ್ರೀ...ತನಗೆ ಮೋಡಿ ಹಾಕಿದಂತೆ ಅವಳ ಸಾಮೀಪ್ಯ ತನ್ನನ್ನು ಅವಳೆಡೆಗೆ ಎಳೆದಿರಲಿಲ್ಲವೇ ? ಹಿಂದೆ ನಡೆದುದೆಲ್ಲ ಕನಸೋ ಎಂಬ ಭಾವನೆ ಮೂಡಿಸಿದ ಆ ಅರೆ ಜಾಗ್ರತ ಮನಸು...ಮೈಯಲ್ಲಿ ಮಾದಕತೆಯ ಬಿಸುಪು. ಅವಳ ಬಳಿ ನಿಂತು ಕೈಲಿದ್ದ ಪುಸ್ತಕ ತೆಗೆದು ಟೇಬಲ್ಲಿನ ಮೇಲಿಟ್ಟಾಗಲೂ ಅವಳಿಗೆ ಎಚ್ಚರವಿಲ್ಲ ಹಣೆಯ ಮೇಲೆ ಕಣ್ಣಿನ ತನಕ ಬಂದು ತುಂಟಾಟವಾಡಿ ನೊಂಡತನದಿಂದ ಅಲ್ಲೇ ಉಳಿದಿದ್ದ ಮುಂಗುರುಳನ್ನು ತನ್ನ ಒರಟು ಕೈಗಳಿಂದ ಹಿಂದೆ ಸರಿಸಿದಾಗಲೂ ಎಚ್ಚರವಿಲ್ಲ. 'ನುಣ್ಗಲ್ಲ, ಸುಳಿಗುರುಳು. ಬೆಳದಿಂಗಳ ಮೈ, ಉಕ್ಕಿ ಹರಿಯುತ್ತಿದ್ದ ಯೌವನ-ಕೈಗೆ ಸಿಕ್ಕಿರುವ ಮಧುಪಾತ್ರೆ-

ತಾನೋ ಬಾಯಾರಿ ನಿಂತಿರುವ ಬದುಕಿನ ಒಂಟಿ ಯಾತ್ರಿಕ-ಮಧುಪಾತ್ರೆಯು ನ್ನೆತ್ತಿ ಎಲ್ಲವನ್ನೂ ಒಣಗಿದ ಬಾಯಿಗೆ ಸುರಿದುಕೊಂಡು ಹೀರಿಬಿಡುವಾಸೆ-ನಹುಬಾಗಿ ತನ್ನ ತುಟಿಯನ್ನು ಅವಳ ಚೆಂದುಟಿಯ ಬಳಿ ತಂದು-'ಶುಭಾ'-ಎಂದು ಮೆಲ್ಲನುಸಿರಿದಾಗಲೂ ಅವಳಿಗೆಚ್ಚರವಿಲ್ಲ. ಒಂದರೆಗಳಿಗೆ ವೈಮರೆತು ಸುತ್ತಲೂ ನೋಡಿದಾಗ ಹೊರಜಗತ್ತೇ ಕಣ್ಣಿಗೆ ಬೀಳದಷ್ಟು ಭ್ರಮೆ-ತಂದೆ ತಾಯಿ ತಮ್ಮ ಕೊಠಡಿಯಲ್ಲಿ ಮಲಗಿ ನಿದ್ರಿಸುತ್ತಿದ್ದರು. ಬಾಬು ಅಡಿಗೆ ಮನೆಯಲ್ಲಿ ಮಲಗಿರಬಹುದು.... ಈಗ ಇಲ್ಲಿ ತಾವಿಬ್ಬರೇ.... ಇವಳು ತನ್ನ ಸೊತ್ತು, ತನ್ನ ಬಾಳಿನ ಉಸಿರು....ಮತ್ತೊಮ್ಮೆ ಬಾಗಿ ಅವಳ ಚೆಂದುಟಿಗೆ ತನ್ನ ತುಟಿ ಸೋಂಕಿದಾಗ ನಿದ್ದೆಗಣ್ಣಿನಲ್ಲೇ ಅವಳೇನೋ ಗೊಣಗಿ ಕೊಂಚ ಹೊರಳಿದಾಗ ... ಬಯಕೆಯ ಬೇಗೆ ನಾಲಿಗೆ ಚಾಚಿ ಧಗಧಗನೆ ಉರಿದಾಗ.... ತನ್ನ ಬಾಹುಗಳಲ್ಲಿ ಅವಳನ್ನು ಬಂಧಿಸಿ ಮತ್ತೆ ಮತ್ತೆ ಚುಂಬಿಸಿದಾಗ-ಅವಳು ಬೆಚ್ಚಿ ಕಣ್ತೆರೆದಳು. ನಿದ್ದೆಯ ಮಂಪರಿನಲ್ಲಿ ತನ್ನನ್ನು ಗುರುತಿಸಲಿಲ್ಲವೇ ? ಇಲ್ಲವೇ ಬೇಕೆಂತಲೇ ಸುಮ್ಮನಿದ್ದಿರಬಹುದೇ ? ತನ್ನ ಎದೆಯಲ್ಲಿ ಮುಖ ಹುದುಗಿಸಿ ನಿಟ್ಟುಸಿರಿಡಲಿಲ್ಲವೇ ? ಆ ಹೊತ್ತು ನಿರಂತರವಾಗಿದ್ದರೆ !

ಹೊರಗಡೆ ಕಾರಿನ ಹಾರನ್ ಶಬ್ದ ಕೇಳಿ ತಾನ ಧಿಗ್ಗನೆದ್ದು ಶುಭ ನನ್ನು ದೂರ ಸರಿಸಿದುದು-ಅವಳಿಗೂ ಎಚ್ಚರ ತಿಳಿದು ತನ್ನನ್ನೊಮ್ಮೆ ತೀಕ್ಷ್ಣ ವಾಗಿ ನೋಡಿ ಮುಖ ಮುಚ್ಚಿಕೊಂಡದ್ದು....ರವಿ ಬಂದುದು ತಿಳಿದೂ ತಾನು ಕಾಲು ಕೀಳಲಾರದೆ ನಿಂತಲ್ಲೇ ನಿಂತಿದ್ದು.... ಕಾಲಿಂಗ್ ಬೆಲ್ ಆದಾಗ ಓಡಿ ಬಂದು ಬಾಗಿಲು ತೆಗೆದವನು ಬಾಬು.... ಒಳಗೆ ಬರುತ್ತಲೇ ರವಿ ಇಬ್ಬರನ್ನೂ ನೋಡಿ ಚಕಿತನಾಗಲಿಲ್ಲವೇ ?

"ಇದೇನು, ಇಬ್ಬರೂ ಹೀಗೆ ನಿಂತಿದ್ದೀರಿ ? ಯಾಕೆ ಶುಭ ಅಳ್ತಾ ಇದ್ದಾಳಾ ? ನೀನೇನೋ ರಘು ಅಷ್ಟು ಹೆದರಿ ಬಿಳಚಿಕೊಂಡಿದ್ದೀಯಾ ?" ತಮ್ಮಿಬ್ಬರ ಸಹಾಯಕ್ಕೆ ಬಾಬು ಬರದಿದ್ದರೆ..."ಅಮ್ಮಾವ್ರು ಊಟ ಕೂಡ ಮಾಡ್ದೇ ನಿಮಗೋಸ್ಕರ ಒಬ್ರೇ ಕಾಯ್ಕೊಂಡಿದ್ರು. ಚಿಕ್ಕರಾಯ್ರು ಎಷ್ಟು ಹೇಳಿದ್ರೂ ಊಟಾನೂ ಮಾಡ್ಲಿಲ್ಲ. ಮಲ್ಕೊಳ್ಳೂ ಇಲ್ಲ ಅಮ್ಮಾವ್ರು."

ರವಿ ಧಾವಿಸಿ ಬಂದು ತಾನಿರುವುದನ್ನು, ಬಾಬುವಿರುವುದನ್ನು ಮರೆತು ಶುಭಳನ್ನು ತನ್ನೆದೆಗೆ ಅಪ್ಪಿಕೊಂಡದ್ದು....

"ಹೌದಾ ಶುಭಾ ? ನೀನು ಬಹಳ ಹೆದರುಪುಕ್ಕಿ . ಹೇರೋಕ್ಕೇನಾ ಗುತ್ತೇ ? ರಘು ಇಲ್ಲಿಲ್ವಾ ಮನೇಲಿ ?"

ತಾನೆಂತಹ ವಿಶ್ವಾಸಘಾತುಕ ! ತನಗೆ ಬರಸಿಡಿಲೆರಗಿದಂತಾಗಿತ್ತು. ಗಂಟಲು ಸರಿಮಾಡಿಕೊಂಡು ಒತ್ತಿ ಹೇಳಲಿಲ್ಲವೇ ?

"ರವಿ....ನೀನು ಅವರನ್ನ ಒಬ್ಬರನ್ನೇ ಬಿಟ್ಟು ಹೋಗುವುದೂ ತಪ್ಪು. ಇನ್ನೊಮ್ಮೆ ಹಾಗೆ ಮಾಡಬೇಡ...."

"ರವಿ ಮೆದು ನಗೆ ನಕ್ಕು "ಬಾಬು, ಊಟ ಮುಕಡಿ ಮೇಲಕ್ಕೇ ತೊಗೊಂಡು ಬಾ" ಎಂದು ಶುಭನನ್ನೂ ತನಗೊರಗಿಸಿಕೊಂಡೇ ತನ್ನ ರೂಮಿಗೆ ಕರೆದು ಕೊಂಡು ಹೋದಾಗ ತನ್ನ ಕಣ್ಣಲ್ಲೇಕೆ ನೀರುಕ್ಕಿ ಬಂತು ?

ರಾತ್ರಿಯೆಲ್ಲ ತನಗೆ ನಿದ್ದೆ ಹತ್ತಿರಲಿಲ್ಲ ಒಂದೆಡೆ ಶುಭನ ವ್ಯೈಸೊಂಪಿನ ನೆನಪಾದರೆ ಮತ್ತೊಮ್ಮೆ ತಾನು ಮಾಡಿದ ತಪ್ಪಿನರಿವು. ತನ್ನನ್ನು ನಂಬಿ ಬಿಟ್ಟು ಹೋದ ರವಿಗೆ ತಾನು ಮೋಸ ಮಾಡಬಹುದೇ ? ಅವಳದೇನೂ ತಪ್ಪಿಲ್ಲ. ನಿದ್ದೆಗಣ್ಣಿನಲ್ಲಿ ತಾನು ರವಿಯೆಂದೇ ತಿಳಿದಿರಬಹುದು. ತಾನು ಅವರಿಬ್ಬರಿಗೂ ಮುಖ ತೋರಿಸಬಹುದೇ ? ತಾನು ಮಾಡಿದುದನ್ನು ಶುಭ ರವಿಗೆ ಹೇಳಿಬಿಟ್ಟರೆ ತನ್ನ ಗತಿ ? ಅವಳು ಹೇಳುವಳೇ ? ಯೋಚಿಸಿ ಯೋಚಿಸಿ ಹಣ್ಣಾಗಿ ಕೊನೆಗೆ ತೀರ್ಮಾನಕ್ಕೆ ಬಂದಿರಲಿಲ್ಲವೇ ?

ತಾನು ಕೂಡಲೇ ಊರಿಗೆ ಹೋಗುವೆನೆಂದು ಮಾರನೆಯ ದಿನ ಹೇಳಿದಾಗ ತಂದೆ ತಾಯಿ ಹೌಹಾರಿದ್ದರು ರವಿ ಅಚ್ಚರಿಗೊಂಡಿದ್ದ. ಆದರೆ ಅವಳು ಹಿಮಗಡ್ಡೆಯಂತೆ ನಿಂತಿರಲಿಲ್ಲವೇ ? ಅವಳ ಕೈಲಿದ್ದ ಹೊಚ್ಚ ಹೊಸ ಹೂವೊಂದು ಕೆಳಗೆ ಬೀಳಲಿಲ್ಲವೇ ? ಅದನ್ನು ದಾಟಿ ತಾನು ಒಳಗೆ ಹೋದಾಗ ತಾನು ಕಾಣದೆ ಆ ಹೂವಿನ ಮೇಲೆ ಹೆಜ್ಜೆಯಿಡುತ್ತಿರಲಿಲ್ಲವೇ ? ಅದನ್ನು ಕಂಡು ಅವಳು ಮುಖ ಎತ್ತಿ ತನ್ನನ್ನು ದಿಟ್ಟಿಸಿದ್ದಳು. ತಾನು ಬಗ್ಗಿ ತುಳಿಯುತ್ತಿದ್ದ ಹೂವನ್ನು ಕೈಗೆತ್ತಿಕೊಂಡು ಅವಳ ಮುಖವನ್ನು ತೀಕ್ಷ್ಣವಾಗಿ ನೋಡಿ ಮತ್ತೆ ತಲೆ ತಗ್ಗಿಸಿ ಮೆಲ್ಲನುಸಿರಿಸಿರಲಿಲ್ಲವೇ ?

"ಸಾರಿ, ನಾನು ಹೂವು ತುಳಿದುಬಿಡುತ್ತಿದ್ದೆ....ನಂಗೆ ತಿಳಿಯಲಿಲ್ಲ. ಇನ್ನೊಮ್ಮೆ ಹೀಗಾಗುವುದಿಲ್ಲ. ಕ್ಷಮಿಸಿ...."

ಅವಳು ಮುಖ ತಿರುಗಿಸಿ ತಂದಿದ್ದ ಹೂವನ್ನು ಕುಂಡದಲ್ಲಿಟ್ಟಾಗ ಹೂವಿ

ನಿಂದಲೋ ಕುಂಡವಿಂದಲೋ ಅಥವಾ ಅವಳ ಕಣ್ಣುಗಳಿಂದಲೋ ಹನಿಗಳೆರಡು ನೆಲದ ಮೇಲೆ ಉರುಳಲಿಲ್ಲವೇ ?

ತಾನು ಹೊರಟು ನಿಂತಾಗ ಎಲ್ಲರೂ ತನ್ನನ್ನು ಬಾಗಿಲತನಕ ಬಂದು ಬೀಳ್ಕೊಟ್ಟಿದ್ದರು ಆದರೆ ಅವಳು....ತನಗೆ ಕಾಣದಂತೆ ಎಲ್ಲಡಗಿದ್ದಳೋ ? ತನಗೆ ಅವಳನ್ನು ನೋಡದೇ ಹೋಗುವ ಮನಸ್ಸಿಲ್ಲ. ಅವಳಲ್ಲಿ ಕ್ಷಮೆ ಯಾಚಿಸದಿದ್ದರೆ ನನಗೆ ನೆಮ್ಮದಿಯಿಲ್ಲ....

"ರವಿ .. ಶುಭ....ಅತ್ತಿಗೆ ಎಲ್ಲಿ ಕಾಣುವುದಿಲ್ಲ ...ಅವರಿಗೆ ಹೇಳಿ ಹೋಗ ಬೇಕು...." ಎಂದಾಗ ರವಿ ಒಳಗೆ ಹೋಗಿ ಅವಳನ್ನು ಕೈ ಹಿಡಿದು ಕರೆತಂದಿರ ಲಿಲ್ಲವೇ ?

"ನೀನು ಹೋಗ್ತೀಂತ ಕೋಪ ಇರ್ಬೇಕು. ಅವಳಿಗೆ....ಅಲ್ವಾ ಶುಭಾ ?" ಎಂದು ರವಿ ಹೇಳಿದಾಗ ಅವಳು ತಲೆ ತಗ್ಗಿಸಿದ್ದಳು.

"ಕ್ಷಮಿಸಿ....ನಾನು ಇನ್ನೊಮ್ಮೆ ಹೀಗೆ ಅತಿಕ್ರಮಿಯಾಗಿ ಬರುವುದಿಲ್ಲ ... ನಾನು ಹೋಗುತ್ತೇನೆ" ಎಂದು ಧೈರ್ಯಮಾಡಿ ಹೇಳಿದಾಗ ಹತ್ತಿರದಲ್ಲೇ ನಿಂತಿದ್ದ ತನ್ನ ತಂದೆ ಹೇಳಿದ್ದರು.

"ಹೋಗುತ್ತೇನೆ ಅನ್ನಬಾರದಯ್ಯ ...ಹೋಗಿಬರುತ್ತೇನೆ ಅನ್ನು...."

ಕಣ್ಣೀರು ತುಂಬಿದ ತಾಯಿ, ದೈನ್ಯದಿಂದ ನೋಡುತ್ತಿದ್ದ ರವಿ, ವಾತ್ಸಲ್ಯ ಪೂರಿತರಾಗಿ ನೋಡುತ್ತಿದ್ದ ತಂದೆ ರವಿಯ ಬೆನ್ನ ಹಿಂದೆ ಮುಖ ಮರೆಸಿ ನಿಂತಿದ್ದ ಅವಳು....

ತಾನೇಕೆ ಇಷ್ಟು ಹಠಮಾರಿಯಾದೆ ? ತಾಯಿ ಇದ್ದಕ್ಕಿದ್ದ ಹಾಗೆ ಹೋಗಿಬಿಟ್ಟಳೆಂದು ತಂತಿ ಬಂದಾಗ ಆಫೀಸಿಗೆ ರಜ ಹಾಕಿ ದಿನವಿಡೀ ಅತ್ತಿದ್ದಷ್ಟೇ. ತಾನು ಹೋಗಿರಲಿಲ್ಲ ಮೇಲೆ ಮೇಲೆ ಬಂದ ಕಾಗದಗಳಿಗೆ ನಿರ್ವಿಕಾರನಾಗಿ ಉತ್ತರ ಕೊಡುತ್ತಿದ್ದುದಷ್ಟೇ....ಒಮ್ಮೊಮ್ಮೆ ಎಲ್ಲರನ್ನು ಮತ್ತೆ ನೋಡುವ ಬಯಕೆ ಮುಗಿಲೆತ್ತರಕ್ಕೆ ಹೋದಾಗ ತಾನು ಕ್ಲಬ್ಬಿಗೆ ಹೋಗಿ ಕಂಠಪೂರ್ತಿ ಕುಡಿದು ಅದರ ಮತ್ತಿನಲ್ಲಿ ಎಲ್ಲವನ್ನು ಮರೆಯಲು ಪ್ರಯತ್ನಿಸುತ್ತಿರಲಿಲ್ಲವೇ....?

"ಸಾಬ್, ಪಾನಿ ಥಂಡಾ ಆಗುತ್ತೆ, ಲೇಟಾಗುತ್ತೆ ಸಾಬ್...." ರಾಮ್ ಸಿಂಗ್ ಮತ್ತೆ ಎಚ್ಚರಿಸಿದಾಗ ಎದ್ದು ಬಚ್ಚಲ ಮನೆಯತ್ತ ನಡೆದನು.

ಬಿಸಿನೀರು ಮೈಗೆ ತಗಲಿದಾಗ ರಘುವಿಗೆ ಮತ್ತೆ ಮೈಯ್ಯಲ್ಲಿ ರಕ್ತಚಲನೆಯಾದಂತಾಯಿತು. ಅವನು ಸ್ನಾನ ಮುಗಿಸಿ ಬರುವಷ್ಟರಲ್ಲಿ ರಾಮ್‌ಸಿಂಗ್ ನಾಲ್ಕು ಪರೋಟಾ, ಒಂದು ಬಟ್ಟಲಲ್ಲಿ ಸಬ್ಜಿ ಮತ್ತೊಂದು ಬಟ್ಟಲಲ್ಲಿ ಅನ್ನ ಮೊಸರಿಟ್ಟಿದ್ದನು. ಅದನ್ನು ನೋಡುತ್ತಲೇ ರಘುವಿಗೆ ಅದೇಕೋ ವಾಕರಿಕೆ ಬಂದಹಾಗಾಯಿತು.

"ರಾಮ್‌ಸಿಂಗ್, ನಂಗೆ ಇದೆಲ್ಲಾ ಬೇಡ...ಲಸ್ಸೀ ಮಾಡಿಕೊಟ್ಟು ಬಿಡು, ಸಾಕು....ಯಾಕೋ ಮೈ ಚೆನ್ನಾಗಿಲ್ಲ ನನಗೆ"

ರಘು ಹೇಳಿದಾಗ ರಾಮ್‌ಸಿಂಗ್ ಗಡ್ಡ ಕೆರೆದುಕೊಂಡ

"ಸಾಬ್‌ಗೆ ನಿನ್ನೆ ಪಾರ್ಟೀ ದುಬಾರೀ ಆಗಿತ್ತು.."

"ನಿನಗ್ಯಾಕೆ ಅದೆಲ್ಲಾ. ನಾನು ಹೇಳಿದಷ್ಟು ಮಾಡು" ಎಂದು ರಘು ಹುಬ್ಬು ಗಂಟಿಕ್ಕಿದಾಗ ರಾಮ್‌ಸಿಂಗ್ ತಲೆ ಬಗ್ಗಿಸಿ ಅಡಿಗೆ ಮನೆಯತ್ತ ನಡೆದ.

ರಾಮ್‌ಸಿಂಗ್ ತಂದು ಕೊಟ್ಟ ಲಸ್ಸೀ ಕುಡಿದು ಬಟ್ಟೆ ಬದಲಿಸಿ ವಿಮನಸ್ಕನಾಗೇ ರಘು ಆಫೀಸಿಗೆ ಹೊರಟಾಗ ರಾಮ್‌ಸಿಂಗ್ ಅವನು ಕೈಗೆ ವಾಚೇ ಹಾಕಿಕೊಳ್ಳದೇ ಹೋಗುತ್ತಿದ್ದುದನ್ನು ಜ್ಞಾಪಿಸಬೇಕಾಯ್ತು.

"ಸಾಬ್, ರಿಸ್ಟ್‌ವಾಚೂ...."

ದಿನಕ್ಕಿಂತ ಕೊಂಚ ಹೊತ್ತಾಗಿ ಬಂದ ರಘುವನ್ನು ಕಂಡು 'ರಿಸೆಪ್ಷನ್' ನಲ್ಲಿದ್ದ ವಿನೀತಾಭಟ್ ಆಶ್ಚರ್ಯದಿಂದ ತನ್ನ ಗೀರು ಹುಬ್ಬನ್ನೆತ್ತಿ ಪ್ರಶ್ನಿಸಿದಳು.

"ಏನು ಮಿಸ್ಟರ್ ನಂದನ್, ಇವೊತ್ತು ಲೇಟು? ನೀವು ಬರುವುದಿಲ್ಲವೇನೋ ಅಂತ ಮಾಡಿದ್ದೆ. ಮಿಸ್ಟರ್ ಭಾಟಿಯಾ ನಿಮ್ಮನ್ನ ತುಂಬಾ ಕೇಳ್ತಾ ಇದ್ರು"

ರಘು ಅವಳತ್ತ ದೃಷ್ಟಿ ಹರಿಸದೆಯೇ ಉತ್ತರಿಸಿದ.

"ಐ ಆವ್ ಲೇಟ್ ಫೈ ಟೀನ್ ಮಿನಿಟ್ಸ್, ಭಾಟಿಯಾನ ನೋಡ್ತೀನಿ."

ವಿನೀತಾಗೆ ಕೊಂಚ ನಿರಾಸೆಯಾಯಿತು. ರಘು ಇನ್ನೂ ಬ್ರಹ್ಮಚಾರಿಯೆಂದೂ, ಬುದ್ಧಿವಂತನೆಂದೂ ರೂಪವಂತನೆಂದೂ ತಿಳಿದಿದ್ದ ಆಫೀಸಿನ ಮೂವರು ಹುಡುಗಿಯರಿಗೆ ಅವನ ಮೇಲೆ ಕಣ್ಣು. ವಿನೀತಾಭಟ್, ಸ್ಟೆನೋ ಆಗಿದ್ದ ಲೂಸಿ ರಾಡ್ರೀಗ್ಸ್‌ಗೆ ಮತ್ತು ಮಾನೇಜರ್ ಪಿ. ಎ. ಆಗಿದ್ದ ಪ್ರಭ

ಬಲ್ಲಾಳ್‌ಗೆ. ಅವರು ಮೂವರನ್ನೂ ಮಿಕ್ಕವರು ರಘುವಿನ ವಿಷಯಕ್ಕೆ ಹಾಸ್ಯ ಮಾಡುತ್ತಿದ್ದುದುಂಟು.

"ನೋಡಿ, ನಿಮ್ಮ ಮೋಸ್ಟ್ ಎಲಿಜಿಬಲ್ ರಘು ಬಂದರು...."

"ಮಿಸ್ ಭಟ್, ಇಷ್ಟೊಂದು ಅಲಂಕಾರ ದಂಡಾರೀ, ಇವೊತ್ತು ನಿಮ್ಮ ಮಿಸ್ಟರ್ ನಂದನ್ ಲೀವು...."

"ನೀವು ಯಾಕೆ ರಘುನಂದನ್‌ರವರ ಪಿ. ಎ. ಆಗೋಕೆ ಟ್ರೈ ಮಾಡೋಲ್ಲ, ಮಿಸ್ ಬಲ್ಲಾಳ್ ?"

ಅವರುಗಳಿಗೆ ಆ ತಮಾಷೆ ಬಹಳ ಪ್ರಿಯವಾಗಿದ್ದರೂ ರಘುವಿಗೆ ಸರಿ ಬರುತ್ತಿರಲಿಲ್ಲ. ಅವನ ಆಪ್ತ ಗೆಳೆಯನಾದ ಸತೀಷ್ ಭಾಟಿಯಾ ಅವರ ವಿಷಯವಾಗಿ ಹಾಸ್ಯಮಾಡಿದಾಗ ರೇಗುತ್ತಿದ್ದನು.

"ರಘೂ, ಪೂರ್ ಸೋಲ್ಸ್. ಈ ಮೂರು ಜನ ಬ್ಯೂಟೀಸ್‌ನ ಇಷ್ಟೊಂದು ಸತಾಯಿಸಬಾರದು. ನಿನ್ನ ಒಂದು 'ವಿಂಕ್'ಗೆ ಅವರು ಫುಲ್ ಸರೆಂಡರ್ ಆಗ್ತಾರೆ...." ಎಂದು ಸತೀಷ್ ಹೇಳಿದಾಗ ರಘು ಒಮ್ಮೆ ಹಲ್ಲು ಕಡಿದಿದ್ದ.

"ಡ್ಯಾಮ್ ದೀಸ್ ವಿಮೆನ್"

ಅವರಿಗ್ಯಾರಿಗೂ ರಘುವಿನ ಮನಸ್ಸು ತಿಳಿದಿರಲಿಲ್ಲ. ಅವರಿಗೇನು ಗೊತ್ತು ಅವನಿಗೆ 'ಶುಭ' ಒಬ್ಬಳನ್ನು ಬಿಟ್ಟರೆ ಪ್ರಪಂಚದಲ್ಲಿ ಹೆಂಗಸರೇ ಇಲ್ಲವೆಂದು ?

ರಘು ಒಳಗೆ ಬರುತ್ತಲೇ ಸತೀಶ ತನ್ನ ಜಾಗದಿಂದ ಎದ್ದು ಬಂದು ರಘುವಿನ ಭುಜದ ಮೇಲೆ ಕೈ ಹಾಕಿ ಹೇಳಿದ.

"ನೀನು ಇಷ್ಟೊತ್ತಾದ್ರೂ ಬರ್ದೇ ಇದ್ದಿದ್ದು ನೋಡಿ ನಾನು ಟೀಬ್ರೇಕ್‌ನಲ್ಲಿ ಬಂದು ನಿನ್ನ ನೋಡೋಣಾಂತಿದ್ದೆ. ನಿನ್ನೆ ಕ್ಲಬ್‌ನಲ್ಲಿ ಅಷ್ಟೊಂದು ಸ್ಕಾಚ್ ತೊಗೊಂಡಿದ್ದೀ....ಯೂ ವರ್ ಕಂಪ್ಲೀಟ್‌ಲೀ ಆಫ್....ಜ್ಞಾಪ್ಕ ಇದ್ಯಾ ?"

ರಘು ನಸುನಕ್ಕು ತನ್ನ ಜೇಬಿನಿಂದ ಸಿಗರೇಟ್ ಪ್ಯಾಕು ತೆಗೆದು ಸತೀಶ ನಿಗೊಂದಿತ್ತು ತಾನೊಂದು ತುಟಿಗಳ ಮಧ್ಯೆ ಇಟ್ಟುಕೊಂಡಾಗ ಸತೀಶ್ ಬೆಂಕಿ ಕಡ್ಡಿ ಗೀರಿ ರಘುವಿನ ಸಿಗರೇಟಿಗೆ ಬೆಂಕಿ ತಾಗಿಸಿ, ತಾನೂ ಹತ್ತಿಸಿ ಕೊಂಡನು.

"ಬಾ, ಹೊರಗೆ ಹೋಗೋಣ. ಇಲ್ಲಿ ಸ್ಮೋಕ್ ಮಾಡಿದ್ರೇ ಮ್ಯಾನೇಜರ್ ಕಣ್ಣು ಕೆಂಪಗೆ ಮಾಡ್ಕೋತಾರೆ...ನಿಂಗೊಂದು ಅರ್ಜೆಂಟ್ ವಿಷಯ ತಿಳಿಸ್ಬೇಕೂ...."

ರಘು ಸತೀಶನನ್ನು ಹಿಂಬಾಲಿ ಆಫೀಸಿನ ಕಾಂಪೌಂಡ್‌ನಲ್ಲಿದ್ದ 'ಗುಲ್‌ಮೊಹರ್' ಮರದ ಕೆಳಗೆ ಬಂದಾಗ ಸತೀಶ್ ಸಿಗರೇಟಿನ ಹೊಗೆ ಬಿಡುತ್ತಾ ಉಸುರಿದ.

"ರಘೂ,....ನಾನು ರೆಸಿಗ್ನೇಷನ್ ಕೊಡ್ತಾ ಇದ್ದೀನಿ. ನಾನು ನಮ್ಮೂರಿಗೆ ಹೋಗಿ ಪ್ರೈವೇಟ್ ಬಿಸಿನೆಸ್ ಮಾಡೋಣಾಂತಿದ್ದೀನಿ....ತಂದೆ, ತಾಯಿ ಇಬ್ರಿಗೂ ವಯಸ್ಸಾಯ್ತು. ನಾನು ಇಷ್ಟು ದೂರ ಬಂದ್ಬಿಟ್ರೆ ಅವರನ್ನ ಹೇಳೋರೂ ಕೇಳೋರೂ ಯಾರೂ ಇಲ್ಲ.."

ರಘುವಿಗೆ ಎಲ್ಲೋ ಆಸ್ಫೋಟನೆಯಾದಂತಾಯಿತು. ಇವನು ತನ್ನವರಿಗಾಗಿ ಕೆಲಸ ಬಿಟ್ಟು ಊರಿಗೆ ಮರಳುತ್ತಿದ್ದಾನೆ...ಆದರೆ ತಾನು ಕೆಲಸದ ನಿಮಿತ್ತ ಮಾಡಿಕೊಂಡು ತನ್ನವರಿಂದ ದೂರವಾಗಲು ಬಯಸುತ್ತಿದ್ದೇನೆ... ರಘು ಉಸಿರು ಬಿಗಿ ಹಿಡಿದ.

"ಯಾಕೆ ಸುಮ್ಮನಾದೆ ರಘು ?....ನಾನ್ಹೇಳ್ತೀನಿ ಕೇಳು— ನೀನೂ ಮಾಡ್ಬಿಡು. ನಿನ್ನ ಬ್ರದರ್‌ದು ಎಸ್ಟೇಟಿನ ಸಮಾಚಾರ ಹೇಳಿದ್ಯಲ್ಲಾ ನೀನು, ಅವನ್ಹೇಳಿದ್ಹಾಗೆ ಯಾಕೆ ಪಾರ್ಟ್‌ನರ್ ಆಗಿ ಇರ್ಬಾರ್ದು ? ನಿಮ್ಮ ತಾಯಿ ಹೋದ ದಿನ ಬಂದ ಟೆಲಿಗ್ರಾಂ ನೋಡಿ ನೀನು ಎಷ್ಟು ಅಪ್‌ಸೆಟ್ ಆಗಿದ್ದೀ ಜ್ಞಾಪ್ಕ ಇದ್ಯಾ ?"

"ಇಲ್ಲ ಸತೀಶ್....ನಿಂಗೆ ನನ್ನ ಡೈಲಾಮಾ ಗೊತ್ತಿಲ್ಲ. ನಾನು ಎಲ್ಲರಿಂದ ದೂರ ಇರ್ಬೇಕೂಂತ, ಬಂದಿರೋನೂ....ಐ ಡು ನಾಟ್ ವಾಂಟ್ ಎನಿ ಟೈಸ್...." ರಘು ಮುಗಿದ ಆ ಸಿಗರೇಟನ್ನು ದೂರ ಎಸೆದ. "ಆದ್ರೆ ನೀನು ಹೊರಟುಹೋದ್ರೆ ನಿನ್ನ ತುಂಬಾ ಮಿಸ್ ಮಾಡ್ತೀನಿ...."

ಸತೀಶ್ ಪ್ರೀತಿಯಿಂದ ರಘುವಿನ ಬೆನ್ನು ತಟ್ಟಿದ. "ನಾನೂ ನಿನ್ನ ಮಿಸ್ ಮಾಡ್ತೀನಿ....ನೀನು ಲೋನ್ ಉಲ್ಫ್ ಅಂತಾರಲ್ಲ ಹಾಗೇ ಒಂಟಿ ಜೀವನ ನಡೆಸ್ತಾ ಇದ್ದೀಯಾ...ನನ್ನ ಹಾಗೆ ಹೆಂಡ್ತೀ ಮಕ್ಳು ಇದ್ದಿದ್ರೆ ನಿನಗೆ ಲೋನ್ಲಿನೆಸ್ ಅಂದ್ರೆ ಏನೂಂತ ತಿಳ್ಯೋದು....ಈಗ್ಲೂ ಮನಸ್ಸು

ಮಾಡು....ಲೆಟ್ ಎ ಉಮನ್ ಎಂಟರ್ ಯುವರ್ ಲೈಫ್....ನೀನು ಆಮೇಲೆ ಖಂಡಿತ ಛೇಂಜ್ ಆಗ್ತೀ..."

ರಘು ತನ್ನ ಕೆನ್ನೆಯ ಮೇಲೆ ಕೈಯಾಡಿಸಿಕೊಂಡು ಒಣನಗೆ ನಕ್ಕನು. ಅವನ ಬದುಕಿನಲ್ಲಿ ಹೆಣ್ಣು ಬಂದು ಹೋಗಿಯಾಗಿತ್ತು. "ನನ್ನ ಲೈಫ್‌ನಲ್ಲಿ ಯಾವ ಉಮನ್ನೂ ಎಂಟರ್ ಆ ದಿರಲಿ ನಾನೂ ಯಾವ ಉಮನ್ ಲೈಫ್ ನಲ್ಲೂ ಎಂಟರಾಗದಿದ್ದರೆ ಸಾಕು....ನನಗೆ ಲೈಫ್‌ನಲ್ಲಿ ಹೆಣ್ಣಿನ ಜೊತೆ ಸುಖ, ದುಃಖ ಶೇರ್ ಮಾಡೋಕೆ ಇಷ್ಟ ಇಲ್ಲ...."

"ಸ್ಟ್ರೇಂಜ್ ಫೂಲ್" ಸತೀಷ್ ಉತ್ತರಿಸಿದಾಗ, ಮಾತು ಬದಲಿಸಿ ರಘು ಅವನನ್ನು ಆಫೀಸಿನೊಳಗೆ ಕರೆದೊಯ್ದ.

"ನಿನ್ನೆ ಎರಡು ಫೈಲ್ ಮುಟ್ಟೇ ಇಲ್ಲ. ಬಾ, ತುಂಬಾ ಕೆಲ್ಸ ಇದೆ. ಈವ್‌ನಿಂಗ್ ಕ್ಲಬ್‌ನಲ್ಲಿ ಮಾತಾಡೋಣ." ಇಬ್ಬರೂ ಒಳನಡೆದರು.

ಸಂಜೆ ರಘು ತನ್ನ ರೂಮಿಗೆ ಬಂದಾಗ ಮನಸ್ಸು ಬಹಳ ಉದ್ವಿಗ್ನ ವಾಗಿತ್ತು. ತನ್ನ ಆತ್ಮೀಯನಾಗಿದ್ದ ಸತೀಷ್ ಕೂಡ ಹೊರಟುಹೋಗುತ್ತಿದ್ದಾನೆ...ತನ್ನ ಬಾಳಿನಲ್ಲಿ ತನಗೆ ಬಹಳ ಬೇಕಾದವರೆಲ್ಲ ಹೀಗೆ ತನ್ನೆದುರಿನಿಂದ ನುಸುಳಿ ಹೋಗುತ್ತಿದ್ದರೆ...ಬಂದವನೇ ಮುಖ ತೊಳೆದು ಬಟ್ಟೆ ಬದಲಿಸಿ ರಾಮ್ ಸಿಂಗ್ ತಂದಿತ್ತ ಚಹಾ ಕುಡಿದು ತನ್ನ ಮಂಚದ ಮೇಲೆ ಅಡ್ಡಾದ. ಆದೇಕೋ ಅವನಿಗೆ ಕ್ಲಬ್ಬಿನತ್ತ ಹೋಗಲು ಮನಸ್ಸಾಗಲಿಲ್ಲ. ತಲೆಯ ಹಿಂದೆ ಕೈಯಿಟ್ಟು ಸೂರು ನೋಡುತ್ತಾ ಮಲಗಿದ್ದ ರಘುವನ್ನು ಕಂಡು ರಾಮ್‌ಸಿಂಗ್‌ಗೆ ಕೊಂಚ ಸಂತಸವಾಯಿತು. ಸಾಬ್ ಕ್ಲಬ್ಬಿಗೆ ಹೋದರೆ ಅವರು ಬರುವವರೆಗೆ ತಾನು ಕಾದು ಕೂತಿರಬೇಕಿತ್ತು. ಅವರು ಹೋಗದಿದ್ದರೆ ತಾನು ಕೊತ್ವಾಲನ ಮನೆ ಜಗಲಿಗೆ ಹೋಗಿ ಆರಕ್ ಹಾಕಿಕೊಂಡು ಇಸ್ಪೀಟಾಟ ಆಡಬಹುದು.

"ಸಾಬ್, ಕ್ಲಬ್‌ಗೆ ಹೋಗಲ್ವಾ ? ರಾತ್ರಿಗೆ ಅಡಿಗೆ ಏನು ಮಾಡ್ಲಿ ?" ಎಂದು ಕೇಳಿದಾಗ ರಘು ಅವನತ್ತ ನೋಡಿ ನಸುನಕ್ಕನು.

"ಏನೂ ಮಾಡ್ಬೇಡಾ....ಏನಾದ್ರೂ ಬೇಕಾದ್ರೆ ನಾನು ಮಾಡ್ಕೊತೀನಿ. ನಂಗೊತ್ತು, ನೀನು ಹೋಗ್ಬೇಕೂ ತಾನೆ ಕೊತ್ವಾಲನ ಮನೆಗೆ....?"

"ಜೀ, ಸಾಬ್..." ರಾಮ್‌ಸಿಂಗ್ ತಲೆ ಕೆರೆದುಕೊಂಡನು.

"ಸರಿ ಹೋಗು ಬೆಳಿಗ್ಗೆ ಬೇಗ ಬಾ, ಗೊತ್ತಾಯ್ತಾ ?" ರಘು ಕ್ಷೋಭೆಗೊಂಡ ಮನಸ್ಸನ್ನು ಸರಿಪಡಿಸಲು ಪ್ರಯತ್ನಿಸಿ ಕಣ್ಮುಚ್ಚಿದ.

ರಾಮ್‌ಸಿಂಗ್ ರಘುವಿಗೆ ಎಲ್ಲಾ ಎದುರಿಗೇ ಕಾಣುವಂತೆ ಅಡಿಗೆ ಪಾತ್ರೆಗಳನ್ನು ಅಡಿಗೆ ಮನೆಯ ಟೇಬಲ್ಲಿನ ಮೇಲಿಟ್ಟು ರೂಮಿನ ಬಾಗಿಲು ಮುಂದು ಮಾಡಿಕೊಂಡು ಹೊರಟುಹೋಗುತ್ತಲೇ ರಘು ಕಣ್ತೆರೆದ. ಮತ್ತೆ ಕಣ್ಣೆದುರಿಗೆ ಅದೇ ಕಾಗದ.

ಯಾವ ವಿಷಯಗಳಿಂದ ತಾನು ದೂರ ಇರಬಯಸಿದ್ದೆನೋ ಅವರದೇ ಸೆಳೆತ-ಯಾವುದನ್ನು ಯೋಚಿಸಲೇಬಾರದೆಂದು ಮನಸ್ಸು ಮಾಡಿದ್ದೆನೋ ಅವುಗಳ ಯೋಚನೆಯೇ ಅಗಾಧ.

ತಂದೆ, ತಾಯಿ, ರವಿ, ಶುಭ ಇವರುಗಳನ್ನು ಬಿಟ್ಟು ಹೊರಟಾಗ ತಾನು ಇನ್ನೆಂದಿಗೂ ಹಿಂತಿರುಗಬಾರದೆಂದು ಮನಸ್ಸು ಬಿಗಿ ಮಾಡಿಯಾಗಿತ್ತು. ಇವರೆಲ್ಲರ ಸಂಬಂಧವನ್ನು ಒಮ್ಮೆಗೇ ಕಡಿದುಹಾಕಿಬಿಡಬೇಕೆಂಬ ಹೆಬ್ಬಯಕೆ ಹೊತ್ತು ಬಂದಾಗಿತ್ತು. ಆದರೆ ಆ ನಿಷ್ಠುರ ಸಂಕಲ್ಪದಲ್ಲಿ ತಾನೊಂದು ಗಾಳಿಗೊಡ್ಡಿದ ಸೊಡರು. ವಾಸ್ತವಿಕತೆಯನ್ನು ಎದುರಿಸಲಾರದೆ ತೊಳಲಾಡುತ್ತಿರುವ ಹುಟ್ಟಿಲ್ಲದ ಹರಿಗೋಲು ತಾನು.

ರಘು ಎದ್ದು ಕುಳಿತು ಆ ಕಾಗದವನ್ನು ಚೂರು ಚೂರು ಮಾಡಿ ಎಸೆದ. ನೆಲದ ಮೇಲೆ ಚೆಲ್ಲಾಡಿದ ಕಾಗದದ ಚೂರುಗಳನ್ನು ನೋಡಿದಾಗ ಪ್ರತಿಯೊಂದು ಚೂರೂ ಭೂತಾಕಾರವಾಗಿ ಅವನೆದುರು ನಿಂತು ನಗುತ್ತಿರುವಂತೆ ತೋರಿತು. ಹಿಂದೆ ಬಂದ ಕಾಗದಗಳನ್ನೆಲ್ಲಾ ಹೀಗೆ ಹರಿದು ಹಾಕಿದಾಗ ನಿರಾಳವಾಗಿ ನಿಟ್ಟುಸಿರಿಟ್ಟು ಮನಸ್ಸು ಹಗುರಮಾಡಿಕೊಳ್ಳುತ್ತಿದ್ದುಂಟು. ಆದರೆ ಇವೇಕೆ ಇದು ಬಂದಾಗಿನಿಂದ ತನ್ನ ಮನಸ್ಸು ಇಷ್ಟು ಉದ್ವಿಗ್ನವಾಗಿದೆ ! ಆ ಕಾಗದದ ಚೂರಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ರಾಶಿಮಾಡಿ ಹತ್ತಿರದಲ್ಲಿದ್ದ ಬೆಂಕಿಪೊಟ್ಟಣ ತೆಗೆದುಕೊಂಡು ಕಡ್ಡಿಗೀರಿ ಹತ್ತಿಸಿದಾಗ ಕಾಗದದ ಚೂರುಗಳಿಗೆ ಬೆಂಕಿ ತಗಲಿ ಉರಿಯತೊಡಗಿದಾಗ, ಬೆಂಕಿ ನಾಲಿಗೆ ಚಾಚಿ ತನ್ನತ್ತ ನುಗ್ಗಿದಂತಾಯ್ತು. "ಅದೇಕೋ ಶುಭ, ನಿನ್ನ ವಿಷಯ ಬಂದಾಗ ಅತ್ತುಬಿಟ್ಟಳು" ರೂಮಿನಲ್ಲೆಲ್ಲ ಪ್ರತಿಧ್ವನಿಸುತ್ತಿರುವಂತಾಯಿತು.

'ಶುಭಾ....ಶುಭಾ ..' ರಘು ಎದ್ದು ಹಾಸಿಗೆಯ ಮೇಲುರುಳಿ ದಿಂಬಿನಲ್ಲಿ

ಮುಖ ಮುಚ್ಚಿ ಬಿಕ್ಕಿದ..."ಶುಭಾ, ಹಾಗಾದರೆ ನೀನು ಸುಖವಾಗಿಲ್ಲ... ಇಲ್ಲದಿದ್ದರೆ ನೀನು ಅಳುತ್ತಿರಲಿಲ್ಲ. ಶುಭ, ನೀನೂ ನನ್ನ ಹಾಗೆ, ನನ್ನ ಮರೆಯಲು ಯತ್ನಿಸಿ ವಿಫಲಳಾಗಿ ಸೋತಿದ್ದೀಯೆ, ನನಗಾಗಿ ಪರಿತಪಿಸಿ ಅಳುತ್ತೀಯೇ....ನೀನು ಬಹಳ ದುಡುಕಿಬಿಟ್ಟೆ-ನೀನು ಸುಖವಾಗಿಲ್ಲ ನಿನ್ನ ಸುಖ ಹಾಳುಮಾಡಿಕೊಂಡೆ- ನನ್ನ ಸುಖ ಹಾಳುಮಾಡಿದೆ-ರವಿಗೂ ಸುಖವಿದ್ದಂತೆ ಕಾಣಲಿಲ್ಲ....ಶುಭಾ... ಶುಭಾ...." ದಿಂಬಿನಲ್ಲಿ ಮುಖ ಮುಚ್ಚಿ ಬಿಕ್ಕಿ ಬಿಕ್ಕಿ ಅತ್ತಾಗ ರಘುವಿಗೆ ಕೊಂಚ ಹಾಯೆನಿಸಿತು. ತಾನು ಮಾಡುತ್ತಿರುವುದು ತಪ್ಪು. ಬಾಯಲ್ಲಿ 'ಅತ್ತಿಗೆ' ಎಂದು ಅವಳನ್ನು ಕರೆದು 'ನಿಮ್ಮಂತಹದೊಂದು ಪುಟ್ಟ ಶಿಲಾಬಾಲಿಕೆಯನ್ನು ನನಗೆ ಕೊಡಿ' ಎಂದು ಕೇಳಿ ಎಂತಹ ಸೋಗಿನ ನಾಟಕವಾಡಿದ್ದೆ ? ತನ್ನ ತನುಮನಗಳೆರಡೂ ಅದನ್ನೊಪ್ಪಿರಲಿಲ್ಲ. ತಾನೇಕೆ ಜೀಪು ಕಂಬಕ್ಕೆ ಹೊಡೆದಾಗ ಸಾಯಲಿಲ್ಲ ! ಶುಭ ತಮ್ಮಿಬ್ಬರನ್ನು ಬಿಟ್ಟು ಮತ್ತೆ ಬೇರಾವನಿಗಾದರೂ ಮನಸ್ಸು ಅರ್ಪಿಸಬಾರದಿತ್ತೇ ? ಅಥವಾ ತಾನು ಅವಳನ್ನು ಒಲಿದುದನ್ನು ತಿಳಿದೂ ತನ್ನ ಅಣ್ಣನನ್ನೇ ಮಾಡಿಕೊಳ್ಳುವುದರ ಬದಲು ಬೇರಾವನನ್ನಾದರೂ ಮಾಡಿಕೊಂಡಿದ್ದರೆ ತಾವಿಬ್ಬರಾದರೂ ಸುಖ ವಾಗಿರಬಹುದಿತ್ತೇನೋ....ತಾನು ಅವಳನ್ನು ಮರೆಯಬಹುದಿತ್ತೇನೋ....! ಯೋಚನೆ ಮಾಡಿದಷ್ಟೂ, ಅಗಾಧವಾಗಿ, ಅಪರಿಮಿತವಾಗಿ ಬೆಳೆಯುತ್ತಿದ್ದ ತನ್ನ ಸಮಸ್ಯೆಯನ್ನು ಬಿಡಿಸಲಾರದೇ ರಘು ತನ್ನ ತಲೆಕೂದಲನ್ನೇ ಕಿತ್ತು ಕೊಂಡು ಹಣೆ ಚಚ್ಚಿಕೊಂಡನು. ತಾನೇಕೆ ಇನ್ನು ಬದುಕಿರಬೇಕು ? ಮತ್ತೊಬ್ಬರಿಗೆ ತೊಂದರೆ ಮಾಡುವವನಾಗಿ ತಾನು ಬದುಕಬಾರದು. ಏನಾದರೂ ಮಾಡಿ ಈ ನೊಂದ ಜೀವವನ್ನು ಪರಿಸಮಾಪ್ತಿ ಮಾಡಬೇಕು...

ಹೊರಗಡೆ ತನ್ನ ಹೆಸರಿಡಿದು ಕರೆದಂತಾಗಿ ರಘು ಆಲಿಸಿದನು-ಹೌದು, ಯಾರೋ ಮೆಲ್ಲಗೆ ಕರೆಯುತ್ತಿದ್ದಾರೆ...ಶುಭ ಇರಬಹುದೇ ? ಅಗಲಿಕೆ ತಡೆಯಲಾರದೇ ಓಡಿಬಂದಿರಬಹುದೇ ? ರಘು ಎದ್ದು ನಿಂತು ಕಣ್ಣೀರನ್ನೊರಸಿ ಕೊಂಡು ಹೊರಬಾಗಿಲತ್ತ ಬಂದನು "ಯಾರು ?" ಅವನಾಸೆಗಳೆಲ್ಲ ಹುಚ್ಚೆದ್ದು ಕುಣಿಯಿತು.

"ಇದೇನು ರಘು, ಹೀಗೆ ಬಾಗಿಲು ಚಿಲಕ ಹಾಕದೇ ಒಬ್ಬನೇ ಇದ್ದೀಯಾ !" ಕನಸೆಲ್ಲಾ, ಆಸೆಯಲ್ಲಾ ಭಸ್ಮವಾಗಿಹೋಯಿತು. ಬಂದವನು ಸತೀಶ.

ನೀನು ಕ್ಲಬ್‌ಗೆ ಬರ್ದೇ ಇದ್ದಿದ್ದು ನೋಡಿ ನಾನೇ ಬಂದ್ಬಿಟ್ಟೆ. ಯಾಕೆ ಒಂದು ತರಾ ಇದ್ದೀಯಾ ? ಮೈಗೆ ಚೆನ್ನಾಗಿಲ್ಲವೇ ?" ಸತೀಶ ಬಾಗಿಲು ಮುಂದೆ ಮಾಡುತ್ತಾ ಕೇಳಿದ. ಅವನಿಗುತ್ತರ ಕೊಡಲು ರಘುವಿಗೆ ಆಗಲಿಲ್ಲ. ಸ್ವಲ್ಪ ಸಾವರಿಸಿಕೊಂಡು ಅವನಿಂದ ಮುಖ ಬೇರೆ ಕಡೆಗೆ ತಿರುಗಿಸಿ ಹೇಳಿದ.

"ಹಾಗೇನಿಲ್ಲ. ಯಾಕೋ ಮೈಂಡ್ ಸ್ವಲ್ಪ ಅಪ್‌ಸೆಟ್ ಆಗಿದೆ."

"ಅರೇ ಯಾರ್, ಅಷ್ಟೇ ತಾನೇ! ನಾನು ಸರಿಮಾಡ್ತೀನಿ ಬಾ... ನೋಡಿಲ್ಲಿ ಏನು ತಂದಿದ್ದೀನಿ, ನಮ್ಮಿಬ್ಬರಿಗೋಸ್ಕರ" ಸತೀಶ ತನ್ನ ಜೇಬಿನಿಂದ ಬ್ರಾಂಡಿಯ ಬಾಟಲೊಂದನ್ನು ಹೊರತೆಗೆದ.

ಅಂತಹುದಷ್ಟು ಕುಡಿದು ತಾನು ವಿಫಲನಾಗಿದ್ದು ಅವನಿಗೇನು ಗೊತ್ತು? ಅವನು ಮಾತಾಡದಿದ್ದುದನ್ನು ಕಂಡು ಸತೀಶ ಅವನ ಕೈಹಿಡಿದು ಹತ್ತಿರ ಇದ್ದ ಕುರ್ಚಿಯ ಮೇಲೆ ತಳ್ಳುತ್ತಾ—"ಕೂತ್ಕೊಳಯ್ಯ....ಏನು ಅಪ್ ಸೆಟ್ ಆಗಿರೋದು ಹೇಳು ? ನಾನು ಹೆಲ್ಪ್ ಮಾಡ್ತೀನಿ...." ಎಂದು ಹೇಳಿದಾಗ ರಘು ಅವನ ಕೈ ಕೊಸರಿ "ಇಲ್ಲಿ ಬೇಡಾ ಸತೀಶ್ ಬಾ, ಬೆಡ್ ರೂಮಿನಲ್ಲಿ ಕೂತ್ಕೊಳ್ಳೋಣ...." ಎಂದು ಹೇಳಿ-ಹೊರಬಾಗಿಲಿನ ಚಿಲುಕ ಹಾಕಿ ಬಂದಾಗ ಸತೀಶ್ ನೆಲದ ಮೇಲೆ ಅರ್ಧಂಬರ್ಧ ಉರಿದು ಆರಿಹೋಗಿದ್ದ ಕಾಗದದ ಚೂರುಗಳತ್ತ ನೋಡುತ್ತಿದ್ದನು. ಬಾಗಿಲ ಬಳಿ ಬಂದು ಪ್ರತಿಮೆಯಂತೆ ನಿಂತಿದ್ದ ರಘುವನ್ನು ನೋಡಿ ಸತೀಶ ದೊಡ್ಡದಾಗಿ ನಕ್ಕ.

"ಓಹೋ, ಇದಾ ನಿನ್ನ ಅಪ್‌ಸೆಟ್ ಮಾಡಿದ್ದು! ಯಾರ್ದೂ ಲವ್ ಲೆಟರ್ ?"

ರಘು ಅಲ್ಲವೆನ್ನುವಂತೆ ತಲೆಯಲ್ಲಾಡಿಸಿದ. ತಾನು ಇಷ್ಟು ದಿನ ತನ್ನ ಹೃದಯದಲ್ಲೇ ಅಡಗಿಸಿಟ್ಟಿದ್ದುದನ್ನು ಇವನ ಮುಂದೆ ಹೇಳಿಕೊಂಡರೆ ತನ್ನ ಮನಸ್ಸು ಹಗುರವಾಗಬಹುದೇ ? ಹೇಳಿಕೊಂಡರೆ ಅವನೇನು ತಾನೆ ಮಾಡ ಬಲ್ಲ! ತನಗೆಲ್ಲೋ ಭ್ರಾಂತಿಯಷ್ಟೇ. ರಘು ಮಂಚದ ಮೇಲಿದ್ದ ಹಾಸಿಗೆಯ ಮೇಲುರುಳಿದ. ಸತೀಶ ಒಳಗೆ ಹೋಗಿ ಹುಡುಕಿ ಎರಡು ಗಾಜಿನ ಲೋಟ ಗಳನ್ನು ಕೈಲಿ ಹಿಡಿದು ಅವನ ಹತ್ತಿರ ಬಂದಾಗ....ರಘು ಒಣನಗೆ ನಕ್ಕನು.

"ಬೇಡಾ ಸತೀಶ್, ನಂಗೆ ಬೇಡಾ. ನೀನು ಬೇಕಾದ್ರೆ ತೊಗೊ. ನಂಗ್ಯಾಕೋ ಮೂಡಿಲ್ಲ..."

ಸತೀಶ ಆಶ್ಚರ್ಯದಿಂದ ರಘುವಿನತ್ತ ನೋಡಿದ. ರಘು ಎಂದೂ ಬೇಡವೆಂದವನಲ್ಲ.

"ಡೆಫೆನೆಟ್ ಆಗಿ ನೀನು ಇವೊತ್ತು ಸರ್‍ಯಾಗಿಲ್ಲ. ಹೇಳು, ಹೋಗ್ಲಿ ಯಾರ್‍ದ್ದು ಈ ಲೆಟರ್? ಯಾಕೆ ಸುಟ್ಹಾಕ್ತಾ ಇದ್ದೀ? ಅದರ ಪೋಸ್ಟ್ ಮಾರ್ಕ್ಸನ್ ನಾನು ನೋಡ್ತೀನಿ...."

"ಛೆ....ಲವ್ ಲೆಟರ್ ನಂಗ್ಯಾರು ಬರೀತಾರೆ?....ಅದು ಮನೆಯಿಂದ ಬರೆದ ಕಾಗದ!" ರಘು ಒಲ್ಲದ ನಗು ಬರೆಸಿಕೊಂಡನು.

"ಮನೆಯಿಂದ ಬಂದ ಕಾಗ್ದಾನಾ? ಯಾಕೆ ಸುಟ್ಟುಹಾಕ್ಬೇಕೂ....
ಏನಾದ್ರೂ ನೀವು ಬ್ರದರ್ಸ್ ಮಿಸ್ ಅಂಡರ್‌ಸ್ಟ್ಯಾಂಡ್ ಮಾಡ್ಕೊಂಡೂ...."

"ಉಹೂಂ...ಹಾಗೇನಿಲ್ಲ-ಏನೋ ಬೇಜಾರಾಯ್ತು. ಅದಕ್ಕೆ ಹಾಗೆ ಮಾಡಿದೆ."

"ನಾನು ಹೇಳೋದು ಕೇಳು. ನಿನ್ನ ವಯಸ್ನಲ್ಲಿ ಒಬ್ಬನೇ ಹೀಗೆ ಕಾಲ ಕಳೆದರೆ ಹಾಗೇ ಆಗೋದು. ಬೇಗ ಯಾವ್ದಾದ್ರೂ ಲಕ್ಷಣವಾಗಿರೊ ಹುಡ್ಗೀನ ಮದ್ವೆ ಮಾಡ್ಕೋ, ಸರಿಹೋಗ್ತೀ..."

ಸತೀಶ ಬಾಟಲಿನಿಂದ ಲೋಟಕ್ಕೆ ಸುರಿದುಕೊಳ್ಳುತ್ತಾ ಹೇಳಿದ.

"ಅದನ್ನ ಹೇಳೋಕೆ ಕ್ಲಬ್ಬಿನಿಂದ ಇಲ್ಲಿವರ್‍ಗೂ ಬಂದ್ಯಾ?" ರಘು ಕೊಂಚ ಖಾರವಾಗೇ ಹೇಳಿದ.

"ಅರೇ, ಕೋಪ ಮಾಡ್ಕೋಬೇಡಾ....ಅದ್ಯಾಕೆ ಹುಡುಗಿಯರ ವಿಷಯ ಬಂದ್ರೆ ಹಾರಾಡ್ತೀಯಾ? ಯಾವ್ದಾದ್ರೂ ಹುಡ್ಗಿ ಕೈಕೊಟ್ಟಿರ್ಬೇಕೂ..." ಸತೀಶ ಲೋಟ ಬಾಯಿಗಿಟ್ಟುಕೊಂಡು ಹೇಳಿದಾಗ ರಘು ಅವನನ್ನು ದೀರ್ಘವಾಗಿ ನೋಡಿದ.

"ಸತೀಶ್, ನೀನು ಯಾರನ್ನಾದರೂ ಯಾವತ್ತಾದ್ರೂ ಪ್ರೀತಿಸಿದ್ದೀಯಾ?"

ಸತೀಶ್ ಹೊಟ್ಟೆ ಹಿಡಿದು ಬೇಕಾಗಿಯೇ ಜೋರಾಗಿ ನಕ್ಕನು.

"ರಘೂ, ನೀನು ಮರೆತಿದ್ದೀಯಾ. ನನಗೆ ಮದುವೆಯಾಗಿದೆ. ಗೊತ್ತಾ? ನಾನು ನನ್ನ ಸುಮ, ನನ್ನ ಹೆಂಡತಿಯನ್ನು ಎಷ್ಟು ಪ್ರೀತಿಸುತ್ತೇನೆಂದು ನಿನಗೇನು ಗೊತ್ತು? ನಮಗೆ ಮೂರು ಮಕ್ಕಳಿವೆ ಗೊತ್ತಾ?"

"ನನಗದೆಲ್ಲ ಬೇಡ ಸತೀಶ್... ನಾನು ಕೇಳಿದಕ್ಕೆ ಉತ್ತರ ಹೇಳು" ರಘು ಸೂರು ನೋಡುತ್ತಾ ಕೇಳಿದ. ಅವನ ಗಂಭೀರ ಮುಖ ನೋಡಿ ಸತೀಶ ಕೊಂಚ ಮೆತ್ತಗಾದನು.

"ನೋಡು ರಘು, ನಾನು ನೋಡಿದ್ದೇ ಸುಮನ್ನ. ನೋಡಿದೆ, ಪ್ರೀತಿಸಿದೆ, ಮದುವೆಯಾದೆ, ಅಷ್ಟೆ. ನಮ್ಮಿಬ್ಬರಲ್ಲಿ ಲವ್, ಪ್ರೀತಿ ಅದೇನೂ ನಮ್ಮಿಬ್ಬರಿಗೆ ಗೊತ್ತಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ, ಒಬ್ಬರನ್ನು ಬಿಟ್ಟು ಒಬ್ಬರು ಇರಲಾರೆವು..."

"ಹಾಗಾದ್ರೆ ನೀನು ಲಕ್ಕಿ ಬಿಡು..." ರಘು ಉತ್ತರಿಸಿದ. ಹೌದು ತಾನು ಸುಮನನ್ನು ನೋಡಿದ್ದೇನೆ—ಆ ಗಂಭೀರ, ಲಕ್ಷಣವಾದ ಮುಖ. 'ಭಾಭಿ' ಎಂದು ಎಷ್ಟೋ ಬಾರಿ ಕರೆದಿದ್ದೇನೆ...ಅವರನ್ನು ನೋಡಿದಾಗ ಗೌರವ, ವಾತ್ಸಲ್ಯಗಳೆರಡೂ ಉಕ್ಕಿ ಬರುತ್ತಿತ್ತು.

"ಅಂದ್ರೆ ನಿನ್ನ ಪ್ರಾಬ್ಲಮ್ ಏನೀಗ ?" ಸತೀಶ್ ರಘುವನ್ನು ದಿಟ್ಟಿಸಿದ. "ಆರ್ ಯೂ ಇನ್ ಲವ್ ?"

"ಯೆಸ್" ರಘು ತನ್ನ ಮುಂಗೈಯನ್ನು ಕಣ್ಣಿಗಡ್ಡವಾಗಿ ಹಿಡಿದು ಹೇಳಿದ

"ಯಾರಯ್ಯ ಹುಡುಗಿ ಹೇಳು. ನನಗೆ ಸಾಧ್ಯವಾದುದೆಲ್ಲ ಮಾಡ್ತೀನಿ. ಹ್ಯಾವ್ ಎ ಸಿಪ್." ಸತೀಶ ರಘುವಿನ ಮುಂದೆ ಲೋಟ ಹಿಡಿದ.

"ಬೇಡ ಸತೀಶ್. ನಾನು ಇವೊತ್ತು ಮುಟ್ಟೋಲ್ಲ-ನೀನು ನಂಗೆ ಹೆಲ್ಪ್ ಮಾಡಲು ಸಾಧ್ಯವಿಲ್ಲ.. ಇಟ್ ಈಸ್ ಬಿಯಾಂಡ್ ರಿಪೇರ್."

"ಅಂದ್ರೆ ?"

"ಅವಳಿಗೆ ಮದುವೆಯಾಗಿದೆ."

"ಅಂದ್ರೆ ಅವಳು ನಿಂಗೆ ಮೋಸ ಮಾಡಿದ್ಲಾ ? ದೆನ್ ಯೂ ಬೆಟರ್ ಫರ್‌ಗೆಟ್ ಹರ್...."

"ನನಗೆ ಅವಳು ಮೋಸ ಮಾಡಿದ್ಲಾ ? ನಾನೇ ಮೋಸಹೋದೆ. ಐ ಕೆನಾಟ್ ಫರ್‌ಗೆಟ್ ಹರ್...." ರಘು ಎದ್ದು ಕುಳಿತು ತನ್ನ ಮುಖವನ್ನು ಕೈಗಳಿಂದ ಮುಚ್ಚಿಕೊಂಡನು.

ಸತೀಶ್ ಎದ್ದು ಅವನ ಪಕ್ಕದಲ್ಲಿ ಕುಳಿತು ಬೆನ್ನ ಮೇಲೆ ಕೈ ಹಾಕಿದ.

"ಟೇಕ್ ಇಟ್ ಈಸಿ....ನೋಡು, ಇದೆಲ್ಲಾ ಇನ್‌ಫ್ಯಾಟುಯೇಷನ್. ಕಾಲ ಓಡ್ತಾ ಓಡ್ತಾ ಎಲ್ಲ ಮರ್‍ತು ಹೋಗುತ್ತೆ. ಅವಳು ಹೇಗಿದ್ರೂ ನಿನ್ನ ಕಣ್ಮುಂದೆ ಇರೋಲ್ಲ. ಬೇಗ ಮರೀಬಹುದು...."

"ಇಲ್ಲ ಸತೀಶ, ನಿಂಗೆ ತಿಳಿಯೋಲ್ಲ. ನಂಗೆ ಮರ್ಯೋಕೆ ಸಾಧ್ಯವೇ ಇಲ್ಲ...ದಾರಿಯೂ ಇಲ್ಲ." ರಘು ನಿಂತು ಸಿಗರೇಟು ಹಚ್ಚಿಕೊಂಡನು.

"ಯಾರಪ್ಪಾ ಅದು ಹಾಗಾದ್ರೇ, ಅಷ್ಟೊಂದು ಇನ್‌ವಾಲ್ ಆಗಿರೋದು ?"

"ನನ್ನ ಅತ್ತಿಗೆ....ಶುಭ !"

"ವಾಟ್ ?" ಸತೀಶ ಕುಡಿಯುತ್ತಿದ್ದ ಲೋಟ ಕೆಳಗಿಟ್ಟನು. ರಘು ಅವನಿಗೆ ಬೆನ್ನು ಮಾಡಿ ನಿಂತಿದ್ದನು. ಅವನ ಕೈಯಲ್ಲಿದ್ದ ಸಿಗರೇಟು ತನ್ನಷ್ಟಕ್ಕೆ ತಾನೇ ಉರಿಯುತ್ತಿತ್ತು—ಹೊಗೆ ಕಾರುತ್ತಿತ್ತು. ಸತೀಶ ಎದ್ದು ಬಂದು ಅವನ ಹಿಂದೆ ನಿಂತು ಅವನ ಕೈಲಿದ್ದ ಸಿಗರೇಟನ್ನು ಆರಿಸಿದ.

"ಐ ಆಮ್ ಸಾರಿ ರಘು...." ರಘುವನ್ನು ತನ್ನೆಡೆಗೆ ತಿರುಗಿಸಿಕೊಂಡನು. "ರಿಯಲಿ ಐ ಆಮ್ ವೆರಿ ಸಾರಿ." ರಘುವಿನ ಕಣ್ಣುಗಳು ಮಂಜಾಗಿತ್ತು. ಕಣ್ಣಿನಿಂದ ನೀರು ಕೆನ್ನೆಯ ಮೇಲಿಳಿಯುವ ಮುಂಚೆ ರಘು ರೂಮಿನಿಂದ ಹೊರಬಿದ್ದ. ಹೊರಬಾಗಿಲು ತೆರೆದು ಮೆಟ್ಟಿಲ ಮೇಲೆ ಕುಳಿತ. ಸತೀಶ ಬೇಕೆಂತಲೇ ಅವನನ್ನು ಹಿಂಬಾಲಿಸಲಿಲ್ಲ. ಮನಸ್ಸು ಕೊಂಚ ಸ್ಥಿಮಿತಗೊಂಡ ಮೇಲೆ ರಘು ಕುಳಿತಲ್ಲಿಂದಲೇ ಕೂಗಿದ.

"ಬಾ ಸತೀಶ್, ಇಲ್ಲೇ ಚೆನ್ನಾಗಿದೆ. ಮಾತಾಡ್ತಾ ಕೂತ್ಕೋ ಬಹುದು..." ಶತೀಶ ಕೈಯ್ಯಲ್ಲಿ ಎರಡು ಗಾಜಿನ ಲೋಟ ಹಿಡಿದು ಬಂದು ರಘುವಿನ ಪಕ್ಕದಲ್ಲಿ ಕುಳಿತು ಒಂದನ್ನು ರಘುವಿಗಿತ್ತಾಗ ರಘು ನಿರಾಕರಿಸಲಿಲ್ಲ. ಕೊಂಚ ಹೊತ್ತು ಇಬ್ಬರೂ ಮೌನ. ಸತೀಶನೇ ಮಾತು ಪ್ರಾರಂಭಿಸಿದ.

"ನಂಗೆ ಈಗ ತಿಳೀತು ರಘು, ನೀನ್ಯಾಕೆ ನಿಮ್ಮೂರಿಗೆ ಹೋಗ್ದೆ ಎರಡು ವರ್ಷದಿಂದ ಇಲ್ಲೇ ಕಾಲ ತಳ್ತಾ ಇದ್ದೀಯಾಂತ. ನಾನೊಂದು ಮಾತು ಹೇಳ್ತೀನಿ, ಕೇಳ್ತೀಯಾ ? ನೀನು ಬೇರೆ ಯಾವ್ದಾದ್ರೂ ಚೆನ್ನಾಗಿರೋ ಹುಡುಗೀನ ಮದ್ವೆ ಮಾಡ್ಕೋ....ಅವಳು ಅದನ್ನೆಲ್ಲಾ ಮರೆಸಬಹುದು...ವೈ ನಾಟ್

5

ಪ್ರಭ....ಅದೇ ಬಲ್ಲಾಳ...." ರಘುವಿನ ಮುಖಭಾವ ಕತ್ತಲಲ್ಲಿ ಸತೀಶನಿಗೆ ಕಾಣಲಿಲ್ಲ.

"ಚೆನ್ನಾಗಿದ್ದಾಳೆ, ಓದಿದ್ದಾಳೆ, ಬುದ್ಧಿವಂತಳು-ತಿಳುವಳಿಕೆ ಇರೋಳು, ತುಂಬಾ ಗಂಭೀರ. ನೀನು ಎಲ್ಲಾ ಹೇಳಿದರೂ ಅವಳು ನಿನ್ನ ಅರ್ಥ ಮಾಡ್ಕೋತಾಳೆ...ನಾನು ಅವಳಿಗೆ ಸಜೆಸ್ಟ್ ಮಾಡಲಾ ?"

ರಘು ಕತ್ತಲಲ್ಲಿ ಸತೀಶನ ಕೈ ಮೇಲೆ ಕೈ ಹಾಕಿದ.

"ಥ್ಯಾಂಕ್ಸ್. ನನಗೆ ಬೇರೆ ಯಾವ ಹೆಣ್ಣೂ ಬೇಡಾ....ಅವಳೊಬ್ಬಳೇ ನನ್ನಲ್ಲಿರುವುದು. ಆ ಜಾಗವನ್ನು ನಾನು ಯಾರಿಗೂ ಕೊಡಲು ತಯಾರಿಲ್ಲ."

"ಹಾಗೆಂದರೆ ಹೇಗೆ ರಘು ? ಅವಳು ಬೇರೆಯವಳೆಂದು ತಿಳಿದೂ ಹಾಗೇ ಇರುತ್ತೀಯಾ ? ನಿನ್ನ ನಂಬಿಸಿ ಮೋಸ ಮಾಡಿದ ಮೇಲೂ...."

ರಘು ಅವನ ಬಾಯಿ ಕೈಯ್ಯಿಂದ ಮುಚ್ಚಿದ...."ಶ್, ನೀನವಳ ವಿಷಯ ಕೆಟ್ಟದು ಏನೂ ಹೇಳಬೇಡ. ಅವಳು ನನ್ನನ್ನು ಪ್ರೀತಿಸುತ್ತಾಳೆ. ನನಗದು ಗೊತ್ತು."

"ನೀನೇಕೆ ಹಾಗಾದರೆ ಅವಳಿಂದ ದೂರ ಓಡುತ್ತೀಯಾ ?" ಸತೀಶ ಅವನ ಕೈ ತೆಗೆದ.

"ನಾನು ಅವಳಿಂದ ದೂರ ಇರಲು ಕಾರಣ ಬೇರೆ ಸತೀಶ್....ಅವಳೊಂದಿಗೆ ಇದ್ದರೆ ನಾನು ಅತಿಕ್ರಮಿಸಬಹುದು. ಅದಕ್ಕೇ ದೂರ ಇರಲು ಬಯಸುತ್ತೇನೆ. ನನ್ನ ಅಣ್ಣ ರವಿಯ ಬದುಕನ್ನು ಹಾಳು ಮಾಡಲಾರೆ..." ರಘು ಖಾಲಿಯಾದ ಲೋಟವನ್ನು ಕೆಳಗಿಟ್ಟನು. "ನಿನಗದು ಗೊತ್ತಿಲ್ಲ. ಅದೊಂದು ದೊಡ್ಡ ಕತೆ...ನಿನ್ನ ಮುಂದೆ ಮಾತ್ರ ಹೇಳುತ್ತೇನೆ. ಅದರಿಂದಲಾದರೂ ಮನಸ್ಸು ಹಗುರವಾಗಲಿ....ರಘು ಅವನಿಗೆ ಮೊದಲಿನಿಂದ ಎಲ್ಲ ವಿಷಯ ತಿಳಿಸಿದ. ಅವನು ಕಥೆ ಮುಗಿಸಿದ ಮೇಲೆ ಸತೀಶ ಕಲ್ಲಿನ ಬೊಂಬೆಯಂತೆ ಕುಳಿತ. ರಘುವಿನ ಈ ಒಲವಿನ, ಬದುಕಿನ ಆಂದೋಲನ ಅವನ ಮನಸ್ಸನ್ನೂ ಕಲಕಿತ್ತು.

ರಘು ತನ್ನ ಖಾಲಿಯಾದ ಲೋಟದೊಂದಿಗೆ ಆಡುತ್ತಾ ಕುಳಿತಿದ್ದ. ಎಷ್ಟೋ ಹೊತ್ತಿನ ಮೇಲೆ ರಘು ಎದ್ದು ನಿಂತ.

"ಬಾ, ಏಳು....ಹೊತ್ತಾಯ್ತು. ಇಲ್ಲೇ ಏನಿದ್ಯೋ ತಿಂದ್ಬಿಡೋಣ....

ಭಾಭಿ ಕಾಯ್ತಾ ಇರ್ತ್ಸೀವು....ನನ್ನ ಕತೆ ಕೇಳಿ ನೀನ್ಯಾಕೆ ಮನಸ್ಸು ಕೆಡಿಸ್ಕೋತೀ....?"

ಸತೀಶ ಎಷ್ಟು ಒಳಗೆ ಹೊರಟಾಗ ಮಾತಾಡಲಿಲ್ಲ. ರಘುವಿನ ರೂಮಿಗೆ ಹೋಗಿ ಲೋಟವನ್ನಿಟ್ಟು ತಾನು ಕಳಚಿಟ್ಟಿದ್ದ ಚಪ್ಪಲಿ ಮೆಟ್ಟಿಕೊಂಡನು. ಅಲ್ಲಿ ನೆಲದ ಮೇಲೆ ಅರ್ಧಂಬರ್ಧ ಉರಿದು ಬಿದ್ದಿದ್ದ ಕಾಗದದ ಚೂರುಗಳು ಮತ್ತೆ ಅವನ ಕಣ್ಣಿಗೆ ಬಿದ್ದವು. ಅವನನ್ನು ಹಿಂಬಾಲಿಸಿ ಬಂದ ರಘು ಅವನ ದೃಷ್ಟಿಯನ್ನು ಗಮನಿಸಿದನು. ಕಾಲಿನಿಂದ ಕಾಗದದ ಚೂರುಗಳನ್ನು ಸರಿಸ ಹೋದಾಗ ಸತೀಶ್ ಅವನನ್ನು ತಡೆದ.

"ನೋ ರಘು, ಡೋಂಟ್ ಡೂ ಇಟ್. ನೀನು ಎಸ್ಕೇಪ್ ಆಗೋಕೆ ಪ್ರಯತ್ನಿಸುವ ಬದಲು ನೀನು ಊರಿಗೆ ಹೋಗಿ ಫೇಸ್ ಮಾಡಿದ್ದರೆ ವಾಸಿ.... ಟ್ರೈ ಟು ಬಿಕಂ ಎ ರಿಯಲಿಸ್ಟ್...ಆಗ ನಿನ್ನ ಪ್ರಾಬ್ಲಮ್ಸ್ ಎಲ್ಲಾ ಸಾಲ್ವ್ ಆಗೋಗತ್ತೆ...ಗುಡ್ ನೈಟ್...ಏನಾದ್ರೂ ತಿಂದು ಮಲ್ಕೋ....ಸುಮ ಕಾಯ್ತಾ ಇರ್ತಾಳೆ...." ಸತೀಶ ತಲೆ ತಗ್ಗಿಸಿಕೊಂಡು ಮುಂಬಾಗಿಲು ಮುಂದೆ ಮಾಡಿಕೊಂಡು ಹೊರಗಿನ ಕತ್ತಲಲ್ಲಿ ಕರಗಿಹೋದನು.

ರಘು ನಿಂತಲ್ಲೇ ನಿಂತಿದ್ದನು. ನಿಜ....ಸತೀಶ ಹೇಳಿದ್ದು. ತಾನು ಎಲ್ಲರಿಂದಲೂ ದೂರ ಸರಿಯಲೆತ್ನಿಸಿ ಹೇಡಿಯಂತೆ ಬಾಳಬಾರದು. ಎಲ್ಲವನ್ನೂ ಎದುರಿಸಿ ಬಾಳಬೇಕು. ಏನಾದರಾಗಲಿ, ತಾನು ಬಂದುದನ್ನು ಎದುರಿಸಬೇಕು. ....ಎರಡು ವರ್ಷಗಳಿಂದ ತಾನು ಸಾಧಿಸಿದ್ದಾದರೂ ಏನು ? ತಾಯಿಯ ಮುಖವನ್ನೂ ನೋಡಲಿಲ್ಲ ; ಅಂತ್ಯಕ್ರಿಯೆಗಳಿಗೂ ಹೋಗಲಿಲ್ಲ. ತನಗಾಗಿ ಎಷ್ಟು ಹಂಬಲಿಸಿ ಕಣ್ಮುಚ್ಚಿದಳೋ...! ತನ್ನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿರುವ ಅಣ್ಣನಿಂದ ದೂರವಾಗಿ ಬಂದು ಮೇಲೆ ಮೇಲೆ ತನಗೆ ಬರುವಂತೆ ಕಾಗದ ಬರೆದರೂ ಹೋಗದೇ ಅವನಿಗೆಷ್ಟು ನೋವು ತಂದಿದ್ದೆ ! ಮೈಗೆ ಸರಿಯಿಲ್ಲನೆಂದು ಬರೆದಿದ್ದನು. ರವಿಗೆಂದೂ ಕಾಯಿಲೆ ಬಂದುದು ಕಾಣೆ . ತಂದೆ ವಯಸ್ಸಾದವರು ಹೇಗಿರುವರೋ....ಶುಭ ಹೇಗಿರುವಳೊ....ನನ್ನ ವಿಷಯ ಬಂದಾಗ ಅಳಲು ಕಾರಣ ! ಅದೇಕೆ ಮದುವೆಯಾಗಿ ಎರಡು ವರ್ಷಗಳಾದರೂ ರವಿ–ಶುಭ ಇವರಿಗೆ ಮಕ್ಕಳಿಲ್ಲ ...ಅವರ ದಾಂಪತ್ಯದಲ್ಲೇನಾದರೂ ವಿರಸವೇ ? ನಿಂತಲ್ಲೇ ಯೋಚಿಸಿ ಹಣ್ಣಾದ. ಕೈಗೆ ಸಿಕ್ಕಿದಷ್ಟನ್ನು ತಿಂದು ಹಾಸಿಗೆಯ

ಮೇಲುರುಳಿಕೊಂಡನು. ನಿದ್ದೆ ಅವನಿಂದ ಬಹಳ ದೂರವಾಗಿತ್ತು. ಅವನು ಕಣ್ಮುಂದೆ ರವಿ, ಶುಭ, ತಂದೆ, ನಂದಿನಿ, ಭಾಸ್ಕರ, ಸಂಜಯ ಸುಳಿದರು.

ಮಾರನೆಯ ದಿನ ಸತೀಶ್ ಬಂದು ಆಫೀಸಿನಲ್ಲಿ ರಘುವಿಗಾಗಿ ಹುಡುಕುತ್ತಿದ್ದಾಗ ಎದುರಿಗೆ ಬಂದ ಪ್ರಭ ಬಲ್ಲಾಳ ನಸುನಕ್ಕಳು. "ರಘುನಂದನ್ ಬಂದಿಲ್ಲ. ಅವರು ಲಾಂಗ್ ಲೀವ್ ಹೋಲಿದ್ದಾರೆ." ಅದನ್ನು ಕೇಳಿ ಸತೀಶ ನಿಟ್ಟುಸಿರಿಟ್ಟಾಗ ಅವಳು ಆಶ್ಚರ್ಯದಿಂದ ಅವಳನ್ನು ನೋಡಿದಳು.

o o o o

ಟ್ಯಾಕ್ಸಿಯಿಂದ ಇಳಿದು ರಘು ಸುತ್ತಲೂ ಕಣ್ಣು ಹಾಯಿಸಿದ. ತಾನು ಬೇರೆ ಎಸ್ಟೇಟಿಗೆ ತಪ್ಪಿ ಬಂದಿಲ್ಲವಷ್ಟೇ! ಎಷ್ಟು ಬದಲಾವಣೆಗಳು-ಅಥವಾ ತನ್ನ ನೆನಪೇ ತನಗೆ ಮೋಸಮಾಡುತ್ತಿದೆಯೋ! ತಾನು ಗೇಟು ದಾಟಿ ಬಂದಾಗ ನಾಮಫಲಕದಲ್ಲಿ ಚೆನ್ನಾಗಿ ಕಂಡಿರಲಿಲ್ಲವೇ 'ರವಿನಂದನ್ ಎಸ್ಟೇಟ್,' ಎಂದು.

ಟ್ಯಾಕ್ಸಿಯವನಿಗೆ ದುಡ್ಡು ಕೊಟ್ಟು, ತನ್ನ ಸಾಮಾನುಗಳನ್ನೆಲ್ಲಾ ತಾನೇ ಕೆಳಗಿಳಿಸಿಕೊಂಡರೂ ಹೊರಗೆ ಯಾರೂ ಬರುವುದು ಬೇಡವೇ? ಸಣ್ಣಯ್ಯ, ಬಾಬು, ಒಬ್ಬರೂ ಹೊರಬರಬೇಡವೇ? ಟ್ಯಾಕ್ಸಿಯವನತ್ತ ಹೋಗುತ್ತಲೂ ಸಾಮಾನುಗಳನ್ನು ಅಲ್ಲೇ ಬಿಟ್ಟು ರಘು ಮನೆಯ ಮುಂಬಾಗಿಲ ಬಳಿ ನಿಂತು ಅವಲೋಕಿಸಿದನು. ಮನೆಯ ಮುಂದಿದ್ದ ನೀರಿನ ಬುಗ್ಗೆಯ ಮಧ್ಯದಲ್ಲಿದ್ದ ಶಿಲಾಪ್ರತಿಮೆಯ ಕತ್ತು ಕೈಗಳು ಮುರಿದು ಹೋಗಿದ್ದವು. ಕಣ್ಣಿಗೆ ಹಬ್ಬದಂತಿರುತ್ತಿದ್ದ ಹಚ್ಚಹಸುರು ಹಲ್ಲು ಒಣಗಿ ನಿಂತಿತ್ತು. ಮನೆಯ ಮುಂದಿದ್ದ ವಿವಿಧ ರೀತಿಯ ಹೂವಿನ ಗಿಡಗಳ್ಯಾವುದೂ ಕಣ್ಣಿಗೆ ಬೀಳಲಿಲ್ಲ. ಎಲ್ಲೆಲ್ಲೂ ಹಾಳು ಸುರಿಯುತ್ತಿದಂತಿತ್ತು. ಎರಡು ವರ್ಷಗಳಲ್ಲಿ ಎಷ್ಟು ಬದಲಾವಣೆ! ನಗುನಗುತ್ತಾ ಸಂತಸ, ಸಂಭ್ರಮದಿಂದ ತನ್ನನ್ನು ಸ್ವಾಗತಿಸುತ್ತಿದ್ದ ತಾಯಿಲ್ಲ. ವರಾಂಡದಲ್ಲಿ ಕುರ್ಚಿಹಾಕಿಕೊಂಡು ಯಾವಾಗಲೂ ಓದುತ್ತಾ ಕುಳಿತಿರುತ್ತಿದ್ದ ತಂದೆಯೆಲ್ಲಿ—ಬೆಳಗ್ಗೆಯಾಯಿತೆಂದರೆ ಎಲ್ಲರನ್ನೂ ತ್ವರಿತಗೊಳಿಸಿ ಕೆಲಸಮಾಡಿಸುತ್ತಾ ಓಡಾಡುತ್ತಿದ್ದ ರವಿಯೆಲ್ಲಿ—? ಬಾಗಿಲಿಗೆ ಬಂದು ತನ್ನನ್ನು ಸ್ವಾಗತಿಸಬಹುದೆಂದು ಹೆಬ್ಬಯಕೆ ಹೊತ್ತು ಬಂದು ಇಲ್ಲಿ ಹೀಗೆ ನಿಂತರೂ ಅವಳು—

ಶುಭ ತನ್ನನ್ನು ಸ್ವಾಗತಿಸಬೇಡವೇ ? ರಘುವಿಗೆ ಗೂಡು ತಪ್ಪಿ ಬಂದ ಹಕ್ಕಿಯು ಹಾಗಾಗಿ ಗಂಟಲಲ್ಲೇನೋ ಸಿಕ್ಕಿಕೊಂಡ ಹಾಗಾಯಿತು.

ಧೈರ್ಯ ಮಾಡಿ ಮುಂಬಾಗಿಲು ದಾಟಿ ವರಾಂಡದಲ್ಲಿ ಕಾಲಿಟ್ಟು ಸುತ್ತಲೂ ಕಣ್ಣು ಹಾಯಿಸಿದ ಮನುಷ್ಯರೇ ಇಲ್ಲವೇನೋ ಎಂಬ ಭಾವನೆ ಮೂಡಿಸುತ್ತಿದ್ದ ನಿರ್ಜೀವ ವಾತಾವರಣ ಹಾಲಿನಲ್ಲಿ ಕಾಲಿಟ್ಟು ಡ್ರಾಯಿಂಗ್ ರೂಮಿಗೆ ಕಾಟ್ಟಾಗ, ಸೋಫಾದ ಮೇಲೆ ಕುಳಿತು ಯಾರೋ ಪೇಪರ್ ಓದುತ್ತಿದ್ದರು. ರಘುವಿನ ಕಾಲಿನ ಷೂಸಿನ ಶಬ್ದ ಕೇಳುತ್ತಲೇ ಪೇಪರನ್ನು ಕೆಳಗೆ ಮಾಡಿ ಮೂಗಿನ ಮೇಲಿನ ಕನ್ನಡಕ ಸರಿಮಾಡಿಕೊಂಡು ಕ್ಷೀಣವಾದ ಧ್ವನಿಯಲ್ಲಿ "ಯಾರು ?" ಎಂದು ಕೇಳಿದಾಗ ರಘು ಬೆಚ್ಚಿದ. ತನ್ನ ತಂದೆಯೇ ಇವರು ? ಜೀರ್ಣ ಶೀರ್ಣವಾದ ದೇಹ, ಅಲ್ಲಲ್ಲಿ ಸುಕ್ಕು ಸುಕ್ಕಾಗಿದ್ದ ಚರ್ಮ, ಗುಳಿಬಿದ್ದ ಕಣ್ಣು–ಎರಡು ವರ್ಷಗಳಲ್ಲಿ ಇಪ್ಪತ್ತು ವರ್ಷದ ಮುಪ್ಪು ಸೇರಿ ಬಂದಂತಿತ್ತು. ರಘು ಗಂಟಲು ಸರಿಮಾಡಿಕೊಂಡು ಅವರ ಮುಂದೆ ಬಂದು ನಿಂತು ಹೇಳಿದ.

"ನಾನಪ್ಪಾ ರಘೂ."

ಶಿವರಾಮಯ್ಯ ಕನ್ನಡಕ ತೆಗೆದು ತಮ್ಮ ಪಂಚೆಯಿಂದ ಒರೆಸಿಕೊಂಡು ಮತ್ತೆ ಹಾಕಿಕೊಂಡರು. "ಕಿವಿ ಸರಿಯಾಗಿ ಕೇಳಿಸೋಲ್ಲ ಈಚೀಚೆಗೆ.... ಯಾರೂಂದ್ರಿ ?" ರಘುವಿಗೆ ಎದೆಯಲ್ಲಿ ಶೂಲ ನೆಟ್ಟ ಹಾಗಾಯಿತು. ಅವರ ಕಿವಿಯ ಹತ್ತಿರ ಬಾಗಿ ಹೇಳಿದ.

"ಅಪ್ಪಾ....ನಾನು....ರಘು..."

ಶಿವರಾಮಯ್ಯ ಗಡಿಬಿಡಿಸಿ ಎದ್ದು ನಿಂತರು. "ರಘೂ ...ರಘೂ.... ನೀನಾ....? ಆದ್ಯಾವಾಗ್ಬಂದೀ....ನಾನು ಕನಸು ಕಾಣ್ತಾ ಇಲ್ಲ ತಾನೇ ?" ಅವನ ಮುಖದ ಹತ್ತಿರ ಮುಖವಿಟ್ಟು ನೋಡಿದರು. ಅವನ ಕೈ, ಮುಖ ಎದೆ ಮುಟ್ಟಿ ನೋಡಿದರು.

"ಏನೋಪ್ಪಾ, ಬರಬೇಕೂ ಅನ್ನಿಸ್ತಾ ? ಬರ್ತೀನಿಂತ ಒಂದು ಕಾಗದ ಹಾಕಬಾರದಿತ್ತೇ ?"

"ಇಲ್ಲಪ್ಪಾ, ಅದೇಕೋ ನೋಡಬೇಕೂ ಅನ್ನಿಸ್ತು. ಇದ್ದಕ್ಕಿದ್ದಹಾಗೇ

ಬಂದ್ಬಿಟ್ರಿ....ಕೂತ್ಕೋಪ್ಪಾ....ಯಾಕೆದ್ದಿರಿ ? ಬಾಬು ಇಲ್ವ ? ಎಲ್ಲರೂ ಎಲ್ಲಿ ? ಒಬ್ಬರೂ ಕಾಣ್ಸೋಲ್ಲ ?"

"ಬಾಬೂ....ಬಾಬೂ...." ಶಿವರಾಮಯ್ಯ ಕುಳಿತಲ್ಲಿಂದಲೇ ಕೂಗಿದರು.

"ಬಂದೆ ಇರಪ್ಪಾ, ಹೊರಗೆ ಸಾಮಾನೆಲ್ಲಾ ಇಟ್ಟಿದ್ದೀನಿ. ಒಳಗೆ ತಂದು ಬಿಡ್ತೀನಿ...." ರಘು ಹೊರಗೆ ಹೊರಟನು.

ರಘು ಸೂಟ್‌ಕೇಸನ್ನು ಕೈಗೆ ತೆಗೆದುಕೊಳ್ಳಲು ಬಗ್ಗಿದಾಗ "ಬಿಡೀ ಸಾರ್, ನಾನು ತರ್ತೀನಿ...."ಪಂಚೆ ಮೇಲೆತ್ತಿ ಕಟ್ಟಿದ್ದ ಬಾಬು ಓಡಿ ಬಂದನು. ರಘು ಅವನತ್ತ ತಿರುಗಿ ನೋಡಿದನು, ಅವನನ್ನೇ ನೋಡುತ್ತಿದ್ದ ಬಾಬುವಿನ ಕಣ್ಣುಗಳಲ್ಲಿ ನೀರು ಹೆಪ್ಪುಗಟ್ಟಿದ್ದರೂ ಮುಖ ನಗುತ್ತಿತ್ತು. "ಸಾರ್, ಅಂತೂ ಬಂದಿರಲ್ಲ ...ಎಷ್ಟು ದಿನಗಳಾಗಿ ಹೋಗಿತ್ತು ಸಾರ್...." ಬಾಬು ಕೊಂಚ ಸಣ್ಣಗಾಗಿದ್ದ ಹಾಗೆ ಕಂಡಿತು ರಘುವಿಗೆ.

"ಬಾಬೂ, ಎಲ್ರೂ ಎಲ್ಲಿ ಕಾಣಿಸ್ತಿಲ್ಲ... ? ಇದ್ಯಾಕೆ ಇಲ್ಲೆಲ್ಲಾ ಹೀಗೆ ಗಿಡ, ಮರಗಳೆಲ್ಲ ಒಣಗಿಹೋಗಿವೆ ?" ರಘು ಅಲ್ಲೇ ನಿಂತು ಕೇಳಿದ. "ನಿಮ್ಮ ಅಣ್ಣಾವ್ರು, ಅತ್ತಿಗೇನೂ ಬೆಂಗ್ಳೂರಿಗ್ಹೋಗಿದ್ದಾರೆ. ಅಮ್ಮಾವ್ರಿಗೆ ನಿನ್ನೆಯಿಂದ ಹುಷಾರಿಲ್ಲಿಲ್ಲ....ಅದಕ್ಕೇ ಬೆಳಿಗ್ಯೆ ಅಷ್ಟೊತ್ತಿಗೇ ಆಸ್ಪತ್ರೆಗೆ ಕರ್ಕೊಂಡ್ಹೋದ್ರು. ದೊಡ್ಡಮ್ಮಾವ್ರು ಹೋದ್ಮೇಲೆ ಮನೇ ಕಳೀನೇ ಹೊರಟುಹೋಯ್ತು ಸಾರ್" ಬಾಬು ಮಾತನಾಡುತ್ತಾ ಕೈಗೆ ರಘುವಿನ ಸಾಮಾನುಗಳನ್ನು ಎತ್ತಿಕೊಂಡನು.

ಶುಭನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದನೇ ರವಿ ? ಏನಾಗಿರ ಬಹುದು ? ಹೌದು. ಮನೆಯೇ ಕಳೆಯಿಲ್ಲ. ತಾಯಿ ಎಷ್ಟೇ ಗರ್ವದಿಂದ ಇದ್ದರೂ ಆ ಮನೆಯ ಅಂತಸ್ತು, ಗೌರವ ಅವಳಿಂದ ಉಳಿದಿತ್ತು. ಉಗುಳು ನುಂಗಿದ.

ರಘು ತಲೆ ತಗ್ಗಿಸಿ ತಂದೆಯಿದ್ದೆಡೆಗೆ ಬಂದು ಕುಳಿತನು. ಬಾಬು ಸಾಮಾನುಗಳನ್ನು ಯಾವಾಗಲೂ ರಘು ಇಳಿದುಕೊಳ್ಳುತ್ತಿದ್ದ ರೂಮಿಗೆ ಕೊಂಡೊಯ್ದನು.

"ರಘೂ, ನೀನು ಬಹಳ ಇಳ್ದುಹೋಗಿದ್ದೀ ! ಇದೇನು, ನಿನ್ನ ತಲೇಲಿ ಆಗ್ಲೇ ಬಿಳೀ ಕೂದ್ಲು ಬಂದುಬಿಡ್ತು ?" ಶಿವರಾಮಯ್ಯ ಕನ್ನಡಕದ ಕಣ್ಣು ಗಳಿಂದ ತೀಕ್ಷ್ಣವಾಗಿ ನೋಡುತ್ತಾ ಕೇಳಿದರು.

"ನಾನು ಇಳ್ದುಹೋಗಿಲ್ವಲ್ಲ....ನಿನ್ನ ಕಣ್ಣಿಗೆ ಹಾಗೆ ಕಾಣ್ಸತ್ತೆ ಅಷ್ಟೆ. ಬಿಳೀ ಕೂದ್ಲು ಬರ್ಲ್ವೇ ಏನು! ನಾನು ಎರಡು ವರ್ಷ ದೊಡ್ಡವನಾಗಿಲ್ವಾ? ಅಂದ್ಹಾಗೆ ಅಪ್ಪಾ....ಬಾಬು ಹೇಳ್ದ, ರವಿ ಶುಭನನ್ನು ಆಸ್ಪತ್ರೆಗೆ ಕರ್ಕೊಂಡ್ಹೋ ದಾಂತ ...ಏನಾಗಿತ್ತು ?"

ಶಿವರಾಮಯ್ಯನವರ ಸುಕ್ಕು ಮುಖದಲ್ಲಿ ಕಿರುನಗೆ ಕಂಡಿತು. "ಮ್ಯಾಟರ್ನಿಟಿ ಆಸ್ಪತ್ರೆಗೆ ಕರ್ಕೊಂಡ್ಹೋದ. ಇನ್ನೂ ಟೈಂ ಆಗಿಲ್ಲ. ಆದ್ರೆ ಅದೇನೋ ಮೈಗೆ ಸರಿಯಾಗಿಲ್ಲ ಅಂತಿದ್ಲು...ಮೂರು ಸಲ ಹಾಗೇ ಆಗಿತ್ತು. ನೋಡು, ನಮ್ಗೇನು ತಿಳ್ಯತ್ತೆ ? ಮನೇಲಿ ಹೆಂಗಸರಿದ್ದರೆ ಸರಿ. ಅವಳಿದ್ಲು, ಎಲ್ಲಾ ನೋಡ್ಕೊತಾ ಇದ್ಲು." ಶಿವರಾಮಯ್ಯನವರ ದೃಷ್ಟಿ ದಿಗಂತದತ್ತ ಹೋಯಿತು.

ಅಂದರೆ ಶುಭ, ರವಿಗೆ ಮಗನೋ ಮಗಳೋ....ಮೂರು ಬಾರಿ ಹೀಗೆ ಆಯಿತೆಂದರೆ....ರಘುವಿನ ತಲೆಯಲ್ಲಿ ಯೋಚನಾತರಂಗಗಳೆದ್ದವು. ತನಗೇಕೆ ಆ ವಿಚಾರ ಯಾರೂ ತಿಳಿಸಿರಲಿಲ್ಲ. ಮನೆಯಲ್ಲಿ ಇಂತಹ ಸಂದರ್ಭದಲ್ಲಿ ಹೆಂಗಸರು ಇಲ್ಲವೆನ್ನುವುದರ ಬದಲು ನಂದಿನಿಯನ್ನು ಕರೆಸಿದ್ದರೆ....!

"ಕಾಫಿ ತೊಗೋತೀರಾ ಸಾರ್....?" ಬಾಬು ಬಂದು ಕೇಳಿದಾಗ ರಘು ತನ್ನ ಯೋಚನೆಗಳಿಗೆ ಕಡಿವಾಣ ಹಾಕಿದನು.

"ಹೂಂ ಬಾಬು, ಹಾಗೇ ಸ್ನಾನಮಾಡಿ ನಾನು ಕೊಂಚ ಹೊರಗೆ ಹೋಗಿಬರ್ತೀನಿ ..." ರಘು ಹೇಳಿದಾಗ ಶಿವರಾಮಯ್ಯ ಎದ್ದು ನಿಂತು ಮೈ ಮುರಿದರು.

"ಏನಯ್ಯಾ, ಬಂದ ಕೂಡಲೇ ಹೊರಗೆ ಹೊರಡ್ತೀನಿ ಅಂತಿದ್ದೀಯಾ ? ಕೆಲ್ಸದ ಮೇಲೆ ಬಂದಿದ್ದೀ ಅನ್ನು ಹಾಗಾದ್ರೇ...."

"ಇಲ್ಲಪ್ಪಾ, ರವಿ—ಶುಭನ್ನ ನೋಡ್ಕೊಂಡು, ಹಾಗೇ ನಂದಿನೀನ್ನೂ ನೋಡ್ಕೊಂಡು ಬರೋಣಾಂತ. ಲಾಂಗ್ ಲೀವ್ ಮೇಲೆ ಬಂದಿದ್ದೀನಿ. ರಘು ಬಾಬು ತಂದಿತ್ತ ಕಾಫಿಯನ್ನು ಬಾಯಿಗಿಟ್ಟುಕೊಳ್ಳುತ್ತಾ ಹೇಳಿದನು.

"ಸರಿಯಪ್ಪಾ. ನೀನು ಲೀವಿನಲ್ಲಿರೋವರ್ಗೂ ಕೊಂಚ ಈ ಎಸ್ಟೇಟಿಂದು ಎಲ್ಲ ಸ್ವಲ್ಪ ಸರಿಮಾಡಿ ಹೋಗು. ಪಾಪ, ರವಿಯೊಬ್ಬನೇ ಎಲ್ಲಕ್ಕೂ ಓಡಾಡ್ಬೇಕೂ...."

"ಆಗಲೀಪ್ಪಾ ನಾನು ಬಂದಿದ್ದೀನಲ್ಲ, ನೋಡ್ಕೋತೀನಿ" ರಘು ಕಾಫಿಯ ಲೋಟವನ್ನು ಬಾಬುವಿನ ಕೈಗಿತ್ತು ತನ್ನ ರೂಮಿನತ್ತ ನಡೆದನು.

ರೂಮಿನಲ್ಲಿ ಸಾಮಾನುಗಳೆಲ್ಲ ಅಸ್ತವ್ಯಸ್ತವಾಗಿದ್ದವು ಟೇಬಲ್ಲು, ಮಂಚದ ಮೇಲೂ ಧೂಳು ತುಂಬಿತ್ತು. ಗೋಡೆಯ ಮೂಲೆಗಳಲ್ಲಿ ಇಕ್ಕಣ ಕಟ್ಟಿತ್ತು. ಗಾಜಿನ ಕಿಟಕಿಗಳ ಮೇಲೆ ಧೂಳು ಮುಚ್ಚಿ ರೂಮಿನ ತುಂಬಾ ಮಂಕು ಕವಿದಹಾಗಿತ್ತು. ನಿಂತಲ್ಲಿದಂದಲೇ ಕೂಗಿದನು "ಬಾಬು....ಇಲ್ಲಿ ...ಬಾ...ಕೆಲಸ ದವಳೆಲ್ಲಿ ? ಕರಿ, ಸ್ವಲ್ಪ ಕಸ ಗುಡಿಸಲಿ "

ಬಾಬು ಕೆಲಸದವಳನ್ನು ಮುಂದಿಟ್ಟುಕೊಂಡು ಬಂದನು. ಅವಳು ಕಸ ಗುಡಿಸಿ ಧೂಳು ತೆಗೆಯುವವರೆಗೆ ರಘು, ಬಾಬು ಇಬ್ಬರೂ ರೂಮಿನ ಹೊರಗೇ ನಿಂತರು.

"ಇದೇನು ಬಾಬು ? ಮನೆಯಲ್ಲಿ ಇಷ್ಟು ಗಲೀಜು ? ಕ್ಲೀನ್ ಮಾಡಿಸ ಬಾರ‍್ದಾ ?" ರಘು ಕೇಳಿದಾಗ ಬಾಬು ಮೌನ ನಗೆ ನಕ್ಕನು.

"ಎಷ್ಟ್ಹೇಳಿದ್ರೂ ಅಷ್ಟೇ ಸಾರ್....ಹಿಂದೆ ನಿಂತು ಕೆಲ್ಸ ಮಾಡ್ಸಿದ್ರೇ ಮಾಡೋದು. ರವಿಯಪ್ಪನೋರಿಗೆ ಯಾವಾಗ್ಲೂ ಕೆಲ್ಸ. ಅಮ್ಮಾವ್ರ ಕೈಲಿ ಆಗ್ತಾ ಇರ‍್ಲಿಲ್ಲ. ಐದು ತಿಂಗಳಿಂದ ಮಲಗೇ ಇದ್ರು. ಪಾಪ, ಅಂಥದ್ರಲ್ಲೂ ಹಾಸಿಗೆಯ ಮೇಲಿಂದ್ಲೇ ಕೂಗಿ ಕೂಗಿ ಮಾಡ್ಸೋರೂ....ಹೇಗಿದ್ರೂ ಅಮ್ಮಾವ್ರು ನೋಡೋಲ್ಲಾಂತ ಧೈರ್ಯ ಇವರುಗಳಿಗೆ. ಕೆಲ್ಸ ಮಾಡಿದ್ರೆ ಉಂಟು, ಇಲ್ದಿದ್ರೆ ಇಲ್ಲ. ನಾನು ಜೋರುಮಾಡಿ ಹೇಳಿದ್ರೆ.. 'ಓ ಈಯಪ್ಪ ಬಂದ್ಬುಟ್ಟ, ಮನೆ ಯಾಜಮಾನ ಯೇಳಾಕೆ' ಅಂತ ನನ್ಮೇಲೇ ಜೋರು ಮಾಡ್ತಾರೆ.... ದೊಡ್ಡವ್ರೋರು ಎಲ್ಲಾ ನಿಂತು ಮಾಡ್ಸೋರು. ಚಿಕ್ಕಮ್ಮಾವ್ರು ಬಹಳ ಮೃದು ಸ್ವಭಾವ. ಅದ್ಕೆ ಇವ್ರೆಲ್ಲಾ ದುರುಪಯೋಗಪಡಿಸಿಕೊಳ್ತಾರೆ "

ರಘು ಕೇಳುತ್ತಾ ನಿಂತನು. ಅಂದರೆ ತಾಯಿ ಹೋದ ಮೇಲೆ ಇವರೆಲ್ಲ ಶುಭನಿಗೆ ಬಹಳ ತೊಂದರೆ ಕೊಟ್ಟಿರಬೇಕು. ತನ್ನ ತಾಯಿಗೇನೂ ಹೋಗುವಷ್ಟು ವಯಸ್ಸಾಗಿರಲಿಲ್ಲ. ಇನ್ನೂ ಸ್ವಲ್ಪ ದಿನ ಬದುಕಿದ್ದರೆ....ತಾನು ಈಗ ಬಂದಾಗ ತನ್ನ ತಾಯಿ ಇದ್ದಿದ್ದರೆ ಮನೆಯ ತುಂಬಾ ಸಡಗರ ! ತಾಯಿಯ ಕೈಗಳ ಬಳೆಯ ಸದ್ದು. ಸೆರಗಿನ ಸರಸರ ಸದ್ದು. ಎಲ್ಲೆಲ್ಲೂ ಗಂಟಲೇರಿಸಿ ಮಾತಾಡುತ್ತಿದ್ದುದರಿಂದ ಮನೆಯಲ್ಲಿ ಜೀವಕಳೆ ಸುರಿಯುತ್ತಿದ್ದ ವೈಖರಿ. ತಾನು

ರವಿಯ ಮದುವೆಯಾದ ಮೇಲೆ ಹೊರಟುಹೋಗಬಾರದಿತ್ತು. ಅದೇ ತಾನು ಮಾಡಿದ ತಪ್ಪು. ಇದ್ದಿದ್ದರೆ....ಇದ್ದಿದ್ದರೆ ಏನೇನು ಅನಾಹುತ ವಾಗುತ್ತಿತ್ತೋ ! ಅವನ ಮನಸ್ಸು ಅದನ್ನು ಯೋಚಿಸಲು ಹಿಂತೆಗೆಯಿತು.

"ದೊಡ್ಡಮ್ಮಾವ್ರು ಬಚ್ಚಲ ಮನೇಲಿ ಜಾರಿಬಿದ್ದಿದ್ದೇ ನೋಡಿ ಸಾರ್, ತಿರಗ ಏಳ್ಲೇ ಇಲ್ಲ. ಲಕ್ವ ಹೊಡಿದಿತ್ತಂತೆ...ಅಂಥಾವ್ರಲ್ಲೂ ಮಲಗಿದ್ದಲ್ಲೇ ಎಲ್ಲಾ ಕೆಲ್ಸ ಮಾಡ್ಸೋರೂ....ಪಾಪ, ಚಿಕ್ಕಮ್ಮಾವ್ರೂ ಬಹಳ ಮಾಡಿದ್ರು. ದೊಡ್ಡಮ್ಮಾವ್ರನ್ನ ಅಷ್ಟು ಚೆನ್ನಾಗಿ ನೋಡ್ಕೊಂಡ್ರು. ಎಲ್ಲಾ ಮಲಗಿದ್ಕಡೇನೇ ಆಗ್ಬೇಕಾಗಿತ್ತು. ದೊಡ್ಡಮ್ಮಾವ್ರು ಹೇಳ್ತಾನೇ ಇದ್ರು 'ಬೇಡ್ವೇ ಶುಭ, ನೀನು ಇಷ್ಟು ಆಯಾಸ ಮಾಡ್ಕೋಬೇಡ, ಅಂತ. ಅವ್ರು ಕೇಳಿದ್ರಲ್ವೆ ? ಹದಿನೈದು ದಿನಗಳಲ್ಲಿ ಅವೆಷ್ಟು ಸೇವೆ ಮಾಡಿದ್ರು... ಅಮ್ಮಾವ್ರು ಹೋಗ್ಬಿಟ್ಮೇಲೆ ಚಿಕ್ಕಮ್ಮಾವ್ರು ಮಲಗಿಬಿಟ್ರು. ಆಸ್ಪತ್ರೇಲಿ ಹತ್ತು ದಿವ್ಸ ಇದ್ದು ಬಂದ್ರು.... ಆವಾಗ್ಲಿಂದ ಚಿಕ್ಕಮ್ಮಾವ್ರು ಬಾಳ ಇಳ್ದು ಹೋಗಿದ್ದಾರೆ....ದೊಡ್ಡಮ್ನೋರು ಹೋಗೋಕ್ಮುಂಚೆ ನಿಮ್ಮನ್ನ ಬಹಳ ಕೇಳಿದ್ರೂ ಸಾರ್....ಚಿಕ್ಕಮ್ಮಾವ್ರನ್ನ, ಇವರ್‍ಯಾರು ಬರೆದ್ರೂ ಬರ್‍ಲಿಲ್ಲ....ನೀನಾದ್ರೂ ಬರ್‍ಯೇ ತಾಯಿ, ಅವನು ಬರ್‍ಲಿ ಅಂತ ಹೇಳ್ತಾ ಇದ್ರು....."

ರಘುವಿನ ಕಣ್ಣುಗಳಿಂದ ನೀರು ಕೆನ್ನೆಯ ಮೇಲಿಳಿಯಿತು...."ಸಾಕು.... ಬಾಬು, ಸಾಕು...ನಂಗೆ ಅದೆಲ್ಲಾ ಕೇಳೋಕಾಗೋಲ್ಲ...." ರೂಮು ಸ್ವಚ್ಛ ವಾಗಿದ್ದರಿಂದ ಒಳಗೆ ಹೋಗಿ ತನ್ನ ಸೂಟ್‌ಕೇಸು ತೆಗೆದು ಬಟ್ಟೆಬರೆಗಳನ್ನು ಹೊರತೆಗೆಯುತ್ತಿದ್ದಾಗ, ಬಾಬು ಒಂದು ಕ್ಷಣ ಅಲ್ಲೇ ನಿಂತು ಅಡಿಗೆ ಮನೆಗೆ ನಡೆದನು. "ಚಿಕ್ಕರಾಯರು ಬಹಳ ಹಚ್ಚಿಕೊಂಡುಬಿಟ್ಟಿದ್ದಾರೆ. ದೊಡ್ಡಮ್ಮಾವ್ರು ಹೋಗಿದ್ದನ್ನ...." ಎಂದು ಕೆಲಸದವಳಿಗೆ ಹೇಳದೇ ಬಿಡಲಿಲ್ಲ.

ಪ್ಯಾಂಟು ಷರಟುಗಳನ್ನು ತೆಗೆದಿಡುತ್ತಿದ್ದ ರಘುವಿನ ಮನಸ್ಸು ಉಲ್ಕಾ ಪಾತದ ಮೇಲಿದ್ದ ಹಾಗಿತ್ತು. ಬಾಬು ಹೇಳಿದ್ದುದ್ದೆಲ್ಲಾ ಅವನ ಕಣ್ಣು ಮುಂದೆ ಬಂತು. ತಾಯಿ ತನಗಾಗಿ ಎಷ್ಟು ಹಂಬಲಿಸಿದಳೋ-ಅವಳಿಗೂ ತಿಳಿದಿತ್ತೇ ತನಗೆ ಶುಭ ಬರೆವರೆ ತಾನು ಬಂದೇ ಬರುತ್ತೇನೆಂದು ! ಶುಭ ಏಕೆ ತನಗೆ ಬರೆಯಲಿಲ್ಲ ? ಬರೆದಿದ್ದರೆ ...ತಾನು ಬರುತ್ತಿದ್ದೆನೆ ? ತಾಯಿ ತನ್ನನ್ನು ನೋಡಲು ಎಷ್ಟು ಕಾತರಿಸಿದಳೋ....ಪಾಪ ? ತಾನೆಂತಹ ಪಾಪಿ ! ತನಗಾಗಿ

ಜೀವ ಬಿಗಿಹಿಡಿದಿದ್ದ ತಾಯಿಯನ್ನೂ ನೋಡಲು ಬರಲಿಲ್ಲ. ಅದಕ್ಕೆ ಕಾರಣ ? ಶುಭಾ ! ಶುಭಾ ! ಎದುರಿಗಿದ್ದರೆ ಅವಳನ್ನು ಹಿಡಿದಲುಗಿಸಿ ಕೇಳಬಹುದಿತ್ತು, ನಿನ್ನಿಂದ ಇದೆಲ್ಲಾ ! ನೀನೇಕೆ ಇಲ್ಲಿ ಬಂದೆ, ನನ್ನ ಬದುಕು ಹಾಳು "ಮಾಡಲು ?"

"ನೀರು ಕಾದಿದೆ ಸಾರ್, ಸ್ನಾನ ಮಾಡ್ತೀರಾ ?" ಬಾಬು ಮತ್ತೆ ಬಂದು ನಿಂತನು.

"ಹೂಂ, ಬಾಬು. ಇಗೋ ಬಂದೆ." ರಘು ಕೈಯಲ್ಲಿ ಸೋಪು, ಟವಲು, ಟೂತ್ ಬ್ರಷ್ ಹಿಡಿದು ಎದ್ದು ನಿಂತನು.

"ಸಾರ್, ರವಿಯಪ್ನೋರೂ ಅರ್ಧ ಆಗೋಗಿದ್ದಾರೆ. ಹೋದ ವರ್ಷ, ಕೋಳಿಗಳಿಗೆಲ್ಲಾ ಅದೇನೋ ಕಾಯಿಲೆ ಬಂದು ಮುಕ್ಕಾಲೆಲ್ಲಾ ಸತ್ತು ಹೋದ್ವು. ಹಸುಗಳಿಗೆ ದೊಡ್ಡರೋಗ ತಗಲಿ ಅರ್ಧಕ್ಕರ್ಧ ಹೋಗಿಬಿಟ್ವು. ಭಾವೀಲಿ ಅದ್ಯಾವ್ದೋ ಬಂಡೆ ಅಡ್ಡ ಬಂದ್ಬಿಟ್ಟು ನೀರೇ ಸರ್ರ್ಯಾಗಿ ಬರ್ದೇ ಗಿಡಮರಗಳೆಲ್ಲ ಹಾಳಾಗಿಬಿಟ್ವು. ಸಾಲದಕ್ಕೆ ಮಳೇನೂ ಇರ್ಲಿಲ್ಲ. ಎಸ್ಟೇಟೆಲ್ಲ ಅರ್ಧ ಹಾಳಾಗಿಬಿಡ್ತು. ಮನೇ ಮುಂದೆ ಇರ್ಲಿಲ್ವಾ ಸಾರ್, ಆ ವಿಗ್ರಹಕ್ಕೆ ಸಿಡಲು ಹೊಡ್ದು ಅದರ ತಲೆ, ಕೈಕಾಲೆಲ್ಲ ಒಡೆದುಹೋಯ್ತು. ರವಿಯ ಪ್ನೋರಂತೂ ಒದ್ದಾಡಿಹೋದ್ರು. ಮನೇಲಿ ದೊಡ್ಡವ್ನೋರಿಗೆ ಸರ್ರ್ಯಾಗಿ ಗ್ಲಿಲ್ಲ. ಚಿಕ್ಕವ್ನೋರಿಗೆ ಸರ್ರ್ಯಾಗಿರ್ಲಿಲ್ಲ....ನೋಡಿದ್ರೆ ಎಸ್ಟೇಟು ಹೀಗೆ.... ಬೆಳಿಗ್ಯೆ ಅಪ್ಪೊತ್ತಿಗೇ ಎದ್ದು ರಾತ್ರಿಯೆಲ್ಲಾ ಬಾಟ್ಲು ಹಿಡಿದು ಕೂತ್ಬಿಡೋರೂ, ಈಗ್ಲೂ ಹಾಗೇನೇ....ಅಪ್ಪೊಂದು ಕುಡ್ಯೋದು ಒಳ್ಳೇದಲ್ಲ ಸಾರ್. ಹೊಟ್ಟೆ ನೋವೂಂತ ಎಷ್ಟೋ ದಿನ ಊಟಾನೇ ಮಾಡೋಲ್ಲ."

ರವಿ, ಪಾಪ ಒಬ್ಬನೇ ಸಿಕ್ಕಿಹಾಕಿಕೊಂಡು ಎಷ್ಟು ಬವಣೆಪಟ್ಟನೋ, ಅದಕ್ಕೇ ಪಾಪ, ಕಾಗದದಲ್ಲಿ ಅದೆಷ್ಟು ಸಲ ಬರೆದಿದ್ದ. ತಾನು ಬಂದು ಅವನಿಗೆ ಬೆಂಬಲಿಗನಾಗಿ ನಿಂತಿದ್ದರೆ ಎಲ್ಲ ವಿಷಯಗಳೂ ಈ ಸ್ಥಿತಿಗೆ ಬರುತ್ತಿರಲಿಲ್ಲ ....ಎಲ್ಲ ತನ್ನ ತಪ್ಪೇ....ತಾನೇ ತಪ್ಪಿತಸ್ಥ. ಇನ್ನು ಮಿಕ್ಕಿದವರನ್ನು ತಾನು ದಂಡಿಸಲಾಗಲೀ, ಕೇಳುವುದಾಗಲೀ ತಪ್ಪು. ತಾನೇ ಮಹಾ ದೊಡ್ಡ ತಪ್ಪಿತಸ್ಥ. ತನಗೇನು ಶಿಕ್ಷೆಯಿತ್ತರೂ ಸಾಲದು. ತನ್ನಿಂದಲೇ ಈ ಮನೆ

ಹೀಗಾಗಿರುವುದು. ನಾನು ನಿಂತು ಇದೆಲ್ಲವನ್ನೂ ಸರಿಮಾಡಬೇಕು ...ಸತೀಶ ಎಷ್ಟು ಬುದ್ಧಿವಂತ. ತನಗೆ ಸರಿಯಾಗಿ ಹೇಳಿದ. ತಾನು ಎಲ್ಲದರಿಂದ ಓಡಿಹೋಗುವ ಬದಲು ಅವುಗಳನ್ನು ಎದುರಿಸಿದ್ದಿದ್ದರೆ....ಈಗಾದರೂ ಅದನ್ನು ಸರಿಪಡಿಸಬೇಕು. ರಘು ತಲೆ ಕೊಡವಿಕೊಂಡ.

"ಸರಿ, ಬಾಬು. ನಾನು ಬಂದಿದ್ದೇನಲ್ಲಾ ಎಲ್ಲಾ ನೋಡ್ಕೋತೀನಿ...." ರಘು ಬಚ್ಚಲು ಮನೆಯೊಳಗೆ ಹೋಗಿ ಬಾಗಿಲು ಮುಚ್ಚಿಕೊಂಡನು.

ಸ್ನಾನ ಮಾಡಿ ಮುಗಿಸಿಕೊಂಡು ಹೊರಗೆ ಬಂದಾಗ ಬಾಬು ಮತ್ತೆ ಹಾಜರಾದನು. "ಸಾರ್, ಏನಾದ್ರೂ ತಿಂಡಿ ತೊಗೋತೀರಾ ?"

"ಬೇಡಾ....ಈಗೇನೂ ಬೇಡ. ಚಿಕ್ಕಮ್ಮಾವ್ರನ್ನ ನೋಡ್ಕೊಂಡು ಬರ್ತೀನಿ. ಅವರಿಗೆ ಏನಾವ್ರೂ ತೊಗೊಂಡು ಹೋಗೋಕೆ ಬೇಕಾದ್ರೆ ಕೊಡು." ರಘು ಟವಲಿನಿಂದ ಒದ್ದೆಯಾಗಿದ್ದ ತಲೆಯನ್ನು ಒರೆಸಿಕೊಳ್ಳುತ್ತಾ ಹೇಳಿದ.

"ಆಸ್ಪತ್ರೇಲಿ ನೊದ್ಲು ಎರಡು ಮೂರು ಸಲ ಅಮ್ಮಾವ್ರು ಇದ್ದಾಗ ರವಿಯ ಫ್ರೇರು ಮನೆಯಿಂದ ಏನೂ ತೊಗೊಂಡು ಹೋಗಿರಲಿಲ್ಲ. ಆಸ್ಪತ್ರೆಯಲ್ಲೇ ಎಲ್ಲಾ ಕೊಡುವಂತೆ ಏರ್ಪಾಡು ಮಾಡ್ತಾ ಇದ್ರು....ಈವೊತ್ತೇನಾದ್ರೂ ತೊಗೋತಾರೋ ಇಲ್ವೋ." ಬಾಬು ಮೂಗೆಳೆದಾಗ ರಘು ಅವನನ್ನು ತೀಕ್ಷ್ಣವಾಗಿ ನೋಡಿದನು.

"ನಿನ್ನ ತಲೆಹರಟೆ ಬೇಡಾ ಬಾಬು, ನಾನು ಹೇಳಿದಷ್ಟು ಕೇಳು. ಫ್ಲಾಸ್ಕಿನಲ್ಲಿ ಹಾಲೋ ಕಾಫೀನೋ ಹಾಕಿಕೊಡು...." ರಘುವಿನ ಧ್ವನಿ ಅಲಗಿ ನಂತಿತ್ತು. ರಘು ಎಂದೂ ಬಾಬುವಿನ ಮೇಲೆ ಹಾಗೆ ಕೋಪದಿಂದ ಮಾತಾಡಿಸಿ ರಲಿಲ್ಲ. ಬಾಬುವಿನ ಮುಖ ಚಿಕ್ಕದಾಯಿತು. ತಲೆ ತಗ್ಗಿಸಿ ಮೆಲ್ಲನುಸುರಿದ "ಆಗಲಿ ಸಾರ್"

ಬಟ್ಟೆ ಹಾಕಿಕೊಂಡು ಕಾಲಿಗೆ ಶೂಸು ಹಾಕುತ್ತಿದ್ದಾಗ ಬಾಬು ಫ್ಲಾಸ್ಕಿನಲ್ಲಿ ಹಾಲು, ಒಂದು ಪಾಕೆಟ್ ಬ್ರೆಡ್ ಎರಡನ್ನೂ ಒಂದು ಚರ್ಮದ ಚೀಲದೊಳಗೆ ಹಾಕಿ ರಘುವಿನ ಮುಂದಿಟ್ಟನು.

"ಬಾಬು, ಸಣ್ಣಯ್ಯ ಎಲ್ಲಿ ಕಾಣ್ಸೋಲ್ಲ!" ರಘುವಿನ ಧ್ವನಿಯಲ್ಲಿ ಮೊದಲಿನ ಗಡಸು ಇರಲಿಲ್ಲ.

"ಅವನು ಊರಿಗೆ ಹೋಗಿದ್ದಾನೆ. ಎರಡು ತಿಂಗಳು ರಜ ಕೇಳ್ಕೊಂಡು

ಹೋದವನು ಇನ್ನೂ ಬಂದಿಲ್ಲ. ಇಷ್ಟರಲ್ಲೇ ಬರಬಹುದು." ಬಾಬು ಕೊಂಚ ಸಂಯಮದಿಂದಲೇ ಮಾತನಾಡಿದ.

"ಪ್ಲೀಮತ್ ಕಾರೆಲ್ಲಿ ಕಾಣಿಸೋಲ್ಲ?" ರಘು ಕಾಲಿನ ಶೂ ಲೇಸು ಕಟ್ಟುತ್ತಾ ಕೇಳಿದ.

"ಶೆಡ್ಡಿನಲ್ಲಿ ಕೊಳೀತಾ ಇದೆ ಸಾರ್. ಅದನ್ನ ಉಪಯೋಗಿಸೋದೇ ಇಲ್ಲ, ಫಿಯಟ್ ಒಂದನ್ನೇ ಉಪಯೋಗಿಸೋದೂ...."

"ಅದರ ಸ್ವಿಚ್‌ಕೀ ಕೊಡು, ನೋಡೋಣ" ರಘು ಎದ್ದು ನಿಂತನು.

"ಅದೆಲ್ಲಿದೇಂತ ನಂಗೊತ್ತಿಲ್ಲ ಸಾರ್, ಮುಂಚೆ ಡ್ರಾಯಿಂಗ್ ರೂಂ ಗೋಡೆ ಮೇಲಿರ್ತಿತ್ತು. ಈಗ ರವಿಯಪ್ನೋರ ರೂಮ್ನಲ್ಲಿರಬಹುದು...."

ರವಿಯ ರೂಮಿನಲ್ಲಿದ್ದರೆ ತಾನು ಹೇಗೆ ತೆಗೆದುಕೊಳ್ಳುವುದು? ಮುಂಚೆ ಯಾದರೆ ತನಗೆ ಬೇಕಾದ ಸಾಮಾನುಗಳನ್ನು ರವಿಯನ್ನು ಕೇಳದೆಯೇ ಅವನ ರೂಮಿಗೆ ನುಗ್ಗಿ ತೆಗೆದುಕೊಳ್ಳುತ್ತಿದ್ದುದುಂಟು. ಆದರೆ ಈಗ? ಆ ರೂಮಿನಲ್ಲಿ ರವಿ ಮಾತ್ರವಲ್ಲ....ತಾನು ಯಾರಿಂದ ದೂರ ಸರಿದು ನಿಂತು ಬದುಕನ್ನು ಎದುರಿಸಬೇಕೆಂದು ಮನಸ್ಸು ಮಾಡಿ ಬಂದಿದ್ದನೋ ಅವಳೂ ಕೂಡ ಅಲ್ಲಿ! ತಾನು ಆ ರೂಮಿಗೆ ಹೋಗುವುದು ಸರಿಯೇ? ತಂದೆಯನ್ನೇ ಕೇಳುವುದು ಸರಿ.

"ಬಾಬೂ...ಕಾರು ಸ್ವಲ್ಪ ಒರೆಸು. ಬರ್ತೀನಿ..." ರಘು ವರಾಂಡ ದಲ್ಲಿ ಬೆನ್ನ ಹಿಂದೆ ಕೈ ಕಟ್ಟಿಕೊಂಡು ಅಲ್ಲಿಂದಿಲ್ಲಿಗೆ ಶಥಪಥ ತಿರುಗಾಡುತ್ತಿದ್ದ ತಂದೆಯ ಬಳಿ ಬಂದು ನಿಂತು ಕೆಮ್ಮಿದನು. ಶಿವರಾಮಯ್ಯ ನಡೆಯುವುದನ್ನು ನಿಲ್ಲಿಸಿ ಅಲ್ಲೇ ನಿಂತರು. ಶಿಸ್ತಾಗಿ ಅಲಂಕರಿಸಿಕೊಂಡಿದ್ದ ರಘು ಅವರ ಕಣ್ಣಿಗೆ ಬೆಳಕು ಮೂಡಿಸಿದ. ಇಷ್ಟು ಲಕ್ಷಣವಾದ ಹುಡುಗ, ಇವನೂ ಮದುವೆಯಾಗಿ ತನ್ನ ಮನೆಯಲ್ಲಿ ಹಾಯಾಗಿದ್ದಿದ್ದರೆ....!

"ಅಪ್ಪಾ, ಪ್ಲೀಮತ್ ಕಾರಿನ ಸ್ವಿಚ್‌ಕೀ ಎಲ್ಲಿ?"

ಶಿವರಾಮಯ್ಯ ಕ್ಷೀಣವಾಗಿ ನಕ್ಕರು.

"ನನಗೇನಯ್ಯ ಗೊತ್ತು? ಮನೆಯಲ್ಲಿ ಎಲ್ಲಾ ಅಸ್ತವ್ಯಸ್ತ. ರವಿಯ ರೂಮಿನಲ್ಲಿರಬಹುದು."

"ನಾನು ಹೇಗೆ ಹೋಗಿ ಹುಡುಕಲಿ? ಯಾವ ಆಸ್ಪತ್ರೆ ಅಂತ ಗೊತ್ತಾದರೆ ಫೋನ್ ಮಾಡಿ ಕೇಳುತ್ತೇನೆ." ಕೊಂಚ ಸಿಡಿಮಿಡಿಯಿಂದಲೇ ಕೇಳಿದ.

ಶಿವರಾಮಯ್ಯ ನಿಟ್ಟುಸಿರಿಟ್ಟರು. "ನನಗೆ ಫೋನ್ ನಂಬರ್ ಆಗಲೀ, ಆಸ್ಪತ್ರೆಯಾಗಲೀ ತಿಳಿದಿದ್ದರೆ ಇಷ್ಟೊತ್ತಿನವರೆಗೆ ಎಲ್ಲಿರ್ತಾ ಇದ್ದೆ ? ನಾನೂ ಹೋಗಿ ಪಾಪ, ಆ ಹುಡುಗಿ ಹೇಗಿದ್ದಾಳೇಂತ ನೋಡ್ಕೊಂಡು ಬರ್ತಾ ಇದ್ದೆ. ರವಿ ಯಾವುದೂ ತಿಳಿಸೊಲ್ಲ. ಹಾಗಂತ ನಾವುಗಳಿದ್ದರೂ ಹೇಳೋಲ್ಲ ಕೇಳೋಲ್ಲ. ತಾನಾಯಿತು, ತನ್ನ ಪಾಡಾಯಿತು."

"ಹಾಗಂದ್ರೇ ಹೇಗಪ್ಪಾ ? ನಂದಿನಿಗೆ ಗೊತ್ತಿರ್ಬ್ಬೋದೇನು ?" ರಘು ಬೇಸರದಿಂದ ಹಣೆಯ ಮೇಲೆ ಕೈಯ್ಯಾಡಿಸಿಕೊಂಡನು.

"ಗೊತ್ತಿರಬಹುದೇನೋ ...ವಿಚಾರಿಸಿ ನೋಡು—" ರಘುವಿಗೆ ಮೈ ಪರಚಿಕೊಳ್ಳುವಹಾಗಾಯಿತು. ಎಲ್ಲರಿಗೂ ಎಲ್ಲ ವಿಷಯದಲ್ಲೂ ನಿರಾಸಕ್ತಿ. ಒಬ್ಬರಿಗೊಬ್ಬರು ಅಪರಿಚಿತರಂತೆ ಆಡುತ್ತಾರಲ್ಲ !

ರಘು ಅಲ್ಲಿ ನಿಲ್ಲದೆ ರೂಮಿಗೆ ಹೋಗಿ ಫ್ಲಾಸ್ಕ್ ಇದ್ದ ಚೀಲವನ್ನು ಭುಜಕ್ಕೆ ತಗುಲಿಸಿಕೊಂಡು, ಹಿಪ್‌ಪ್ಯಾಕೆಟ್ಟಿನಿಂದ ಪರ್ಸ್ ತೆಗೆದು ಅದರಲ್ಲಿದ್ದ ದುಡ್ಡು ಎಣಿಸಿ ನೋಡಿ ಪೆಟ್ಟಿಗೆ ತೆಗೆದು ಪ್ಯಾಂಟುಗಳ ಮಧ್ಯೆ ಇಟ್ಟಿದ್ದ ಮತ್ತಷ್ಟು ದುಡ್ಡನ್ನು ಪರ್ಸಿಗೆ ಹಾಕಿಕೊಂಡು ಮಹಡಿಯೇರಿದನು.

ರವಿಯ ರೂಮಿನ ಬಾಗಿಲು ಮುಂದು ಮಾಡಿತ್ತು. ಬಾಗಿಲ ಬಳಿ ನಿಂತು ಒಂದರೆ ಕ್ಷಣ ಯೋಚಿಸಿದ. 'ತಾನು ಒಳಗೆ ಕಾಲಿಡಬಹುದೇ ?' ಅವನೆದೆ ಡವಡವನೆ ಹೊಡೆದುಕೊಂಡಿತು. ಮೈಯೆಲ್ಲಾ ಬಿಸಿಯಾದ ಹಾಗಾಯಿತು. ಕೊನೆಗೆ ಮನಸ್ಸು ಮಾಡಿ ಕಾಲಿನಿಂದ ಬಾಗಿಲನ್ನು ಮೆಲ್ಲನೆ ಸರಿಸಿದ. ಒಳಗೆ ಕಾಲಿಡದೆ ನಿಂತಲ್ಲೇ ರೂಮಿನ ಸುತ್ತ ನಿರುಕಿಸಿದನು. ದೊಡ್ಡ ಮಂಚದ ಮೇಲೆ ಅವಸರದಿಂದ ಸುಕ್ಕು ಸುಕ್ಕಾಗೇ ಹಾಸಿದ್ದ ಮೇಲು ಹೊದಿಕೆ, ನೆಲದ ಮೇಲೆ ಬಿದ್ದಿದ್ದ ಹಳದಿಯ ವಾಯಿಲ್ ಸೀರೆ. ಡ್ರೆಸ್ಸಿಂಗ್ ಟೇಬಲ್ಲಿನ ಮೇಲಿದ್ದ ಒಣಗಿದ್ದ ಮುಡಿದ ಹೂವು. ಕುರ್ಚಿಯ ಮೇಲಿದ್ದ ರವಿಯ ರಾತ್ರಿಯುಡುಪು, ಟೇಬಲ್ಲಿನ ಮೇಲೆ ಇನ್ನೂ ಉರಿಯುತ್ತಿದ್ದ ರಾತ್ರಿ ದೀಪ, ಕಿಟಕಿಗಳಿಗೆ ಹಾಕಿದ್ದ ಪರದೆಗಳು ತಂದೊಡ್ಡಿದ್ದ ಮಬ್ಬು ಬೆಳಕು-ಮಂಚದ ಕೆಳಗೆ ಉರುಳಿ ಬಿದ್ದಿದ್ದ, ಖಾಲಿ ಬಾಟಲುಗಳು-ಗಾಜಿನ ಲೋಟಗಳು-ಆಶ್ ಟ್ರೇಯಲ್ಲಿದ್ದ ಸಿಗರೇಟಿನ ತುಂಡುಗಳು-ದಿಂಬಿನ ಮೇಲಿದ್ದ ನೋವಾಲ್ಜಿನ್ ಮಾತ್ರೆಗಳ ಪಟ್ಟಿ, ಇನ್ನೊಂದೆಡೆ ತೆರೆದು ಬಿದ್ದಿದ್ದ

ಕತೆ ಪುಸ್ತಕ........ಮೂಲೆಯಲ್ಲಿದ್ದ ಟೀಪಾಯ್ ಮೇಲಿನ ಹೂ ಕುಂಡದಲ್ಲಿ ಒಣಗಿದ್ದ ಹೂಗೊಂಚಲು-ರಘು ನಿಟುಸಿರಿಟ್ಟನು. ರೂಮೆಲ್ಲಾ ಜೀವಂತ ವಾಗಿ ಮೌನವಾಗಿ ತನ್ನ ಕತೆ, ಬದುಕನ್ನು ತೋರಿಸುತ್ತಿದ್ದಂತಿತ್ತು. ರವಿ ಹಾಗಾದರೆ ಮಲಗುವ ಮುನ್ನ ಚೆನ್ನಾಗಿ ಕುಡಿದಿರಬೇಕು. ಶುಭನಿಗೆ ನಿದ್ದೆ ಹತ್ತಿದಂತೆ ಕಾಣದು. ಅದಕ್ಕೇ ಕತೆ ಪುಸ್ತಕ ಓದುತ್ತಿದ್ದಿರಬೇಕು -ಯಾವುದೋ ನೋವಿನಿಂದ ಪರಿತಪಿಸಿ ನೋವಾಲ್ಜಿನ್ ತೆಗೆದುಕೊಂಡಿರ ಬೇಕು—ಹಾಸಿಗೆ ಸರಿ ಮಾಡದೆ, ದೀಪ ಆರಿಸದೆ, ಬದಲಿಸಿದ ಬಟ್ಟೆ ತೆಗೆದು ಹಾಕದೇ ಇಬ್ಬರೂ ಅವಸರವಾಗಿ ಹೊರಟಿರಬೇಕು.—ಶುಭ ಈಗ ಹೆಗಿರಬಹುದು ? ದಪ್ಪವಾಗಿರಬಹುದು. ಇಂತಹ ಹೊತ್ತಿನಲ್ಲಿ ಹೆಂಗಸರು ತುಂಬಾ ಚೆನ್ನಾಗಿ ಕಾಣುತ್ತಾರೆಂದು ಕೇಳಿದ್ದ ನೆನಪು-ಮೊದಲೇ ಶುಭ ಚೆಲುವೆ-ಮತ್ತೂ ಚೆಲುವೆಯಾಗಿರಬಹುದೇ ? ಇಂತಹ ಹೆಂಡತಿಯಿರಬೇಕಾದರೆ ರವಿ ಇನ್ನೂ ಸಿಗರೇಟು, ಮದ್ಯವನ್ನು ಬಿಟ್ಟಿಲ್ಲವಲ್ಲ ! ಶುಭನ ನೆನಪಿನಿಂದಾಗಿ ರಘುವಿಗೆ ಮೈ ಹೂವರಳಿದಂತಾಯಿತು. ಒಳಗೆ ಮೆಲ್ಲನಡಿಯಿಟ್ಟನು. ನೆಲದ ಮೇಲೆ ಬಿದ್ದಿದ್ದ ಹಳದಿಯ ವಾಯಿಲ್ ಸೀರೆಯನ್ನು ಬಗ್ಗಿ ಕೈಗೆತ್ತಿಕೊಂಡನು. ಮೆತ್ತಗಿದ್ದ ಆ ಸೀರೆಯಲ್ಲಿ ಶುಭನ ಮೈಯಿನ ಕಾವಿನ್ನೂ ಆರಿದಂತೆ ಕಾಣಿಸ ಲಿಲ್ಲ. ಸೀರೆಯನ್ನು ಎದೆಗೆ, ತುಟಿಗೆ ಒತ್ತಿಕೊಳ್ಳುವ ಮನಸ್ಸಾಯಿತು. ಯಾರಾದರೂ ತನ್ನನ್ನು ನೋಡಿದರೆ ! ತಾನು ಹೀಗೆ ಮಾಡಬಹುದೇ ? ಅವನ ಮನಸ್ಸಿನಲ್ಲಿ ಬಿರುಗಾಳಿಯೆದ್ದಿತು. ಸೀರೆಯನ್ನು ತುಟಿಗಿಟ್ಟುಕೊಂಡಾಗ, ಎದೆಗೊತ್ತಿಕೊಂಡಾಗ ಶುಭನನ್ನೇ ಅಪ್ಪಿಕೊಂಡಷ್ಟು ಸಂತಸವಾಯಿತು. ಸೀರೆ ಯನ್ನು ಮಂಚದ ಮೇಲೆ ನಯವಾಗಿಟ್ಟನು. ದಿಂಬಿನ ಮೇಲಿದ್ದ ಪುಸ್ತಕ ವನ್ನು ಮುಚ್ಚಿಟ್ಟು, ನೋವಾಲ್ಜಿನ್ ಮಾತ್ರೆಗಳನ್ನು ಮಡಚಿ ಜೇಬಿನೊಳಗೆ ಸೇರಿಸಿದನು. ಡ್ರೆಸ್ಸಿಂಗ್ ಟೇಬಲ್ಲಿನ ಮೇಲಿದ್ದ ಮುಡಿದ ಒಣಗಿದ ಹೂವನ್ನು ಕೈಗೆ ತೆಗೆದುಕೊಂಡಾಗ, ಒಣಗಿದ್ದರೂ ಅದರ ಕಂಪಿನ್ನೂ ಹೋಗಿರಲಿಲ್ಲ. ಆಘ್ರಾಣಿಸಿ, ಕಿಟಕಿಯ ಪರದೆಗಳನ್ನು ಸರಿಸಿ ಕಿಟಕಿಯಿಂದ ಹೊರಗೆಸೆದನು. ಹೂ ಕುಂಡದಲ್ಲಿದ್ದ ಒಣಗಿದ ಹೂವನ್ನು ಹೊರಗೆಸೆದನು. ಮಂಚದ ಕೆಳಗೆ ತಬಿದ್ದಿದ್ದ ಬಾಟಲು ಲೋಟಗಳನ್ನು ಎತ್ತಿ ಟೇಬಲ್ಲಿನ ಮೇಲಿಟ್ಟನು. ಕೈ ತಗಲಿ ಲೋಟವೊಂದು ಕೆಳಗುರುಳಿದಾಗ ರಘು ಬೆಚ್ಚಿದ-ತಾನು ಬಂದುದು

ಏತಕ್ಕಾಗಿ, ಮಾಡುತ್ತಿರುವುದು ಏನು ! ಕೆಳಗಿನಿಂದ ಶಿವರಾಮಯ್ಯನವರ ಧ್ವನಿ ಮೂಡಿತು.

"ಏನಯ್ಯಾ, ಸ್ವಿಚ್‌ಕೀ ಸಿಕ್ಕಿತಾ ?" ರಘು ಎಚ್ಚೆತ್ತನು.

ರಘು ರೂಮಿನ ಗೋಡೆಯ ಸುತ್ತ ಕಣ್ಣಾಡಿಸಿದನು. ವಾರ್ಡ್ರೋಬಿನ ಮೂಲೆಯ ಗೋಡೆಯಂಚಿನಲ್ಲಿ ಸ್ವಿಚ್ ಕೀ ಕಾಣಿಸಿತು. ಅದರ ಮೇಲೆ ದಪ್ಪವಾಗಿ ಧೂಳು ಮುಚ್ಚಿತ್ತು. ಜೇಬಿನಿಂದ ಕರವಸ್ತ್ರ ತೆಗೆದು ಅದರಿಂದ 'ಕೀ'ಯನ್ನು ಒರೆಸಿಕೊಂಡು ರೂಮಿನ ರಾತ್ರಿ ದೀಪವಾರಿಸಿ, ಬಾಗಿಲು ಮುಂದು ಮಾಡಿಕೊಂಡು ಕೆಳಗಿಳಿದು ಬಂದನು. ಮೆಟ್ಟಿಲ ಬಳಿ ನಿಂತಿದ್ದ ಶಿವರಾಮಯ್ಯ ಪ್ರಶ್ನಾರ್ಥಕವಾಗಿ ನೋಡಿದಾಗ ಅವರ ಮುಂದೆ ಸ್ವಿಚ್‌ಕೀ ಹಿಡಿದು ತೋರಿಸಿ ಮೌನವಾಗಿ ಮನೆಯ ಮುಂಬಾಗಿಲಿನಿಂದ ಹೊರಬಿದ್ದು ಶೆಡ್ಡಿನತ್ತ ಹೆಜ್ಜೆ ಹಾಕಿದನು. ತನ್ನಲ್ಲಾದ ಬದಲಾವಣೆ ತಂದೆ ಗಮನಿಸಿರಬಹುದೇ ? ಅದೇಕೆ ತನ್ನತ್ತ ಹಾಗೆ ಪ್ರಶ್ನಾರ್ಥಕವಾಗಿ ನೋಡಿದ್ದರು ? ಅವರ ದೃಷ್ಟಿಯೇಕೆ ಅಷ್ಟು ತೀಕ್ಷ್ಣವಾಗಿತ್ತು ? ರಘು ಶೆಡ್ಡಿನ ಒಳಗೆ ಹೋಗುವ ಮೊದಲು ಒಂದರೆಕ್ಷಣ ತಡೆದನು. ಅವನು ಬಂದುದನ್ನು ಗಮನಿಸಿದ ಬಾಬು ಗಂಟಲು ಸರಿಮಾಡಿಕೊಂಡನು.

"ಸಾರ್, ಪೆಟ್ರೋಲು ಇದ್ಯೋ ಇಲ್ವೋ ಗೊತ್ತಿಲ್ಲ. ಆ ಮೂಲೇಲಿರೋ ಕ್ಯಾನಿನಲ್ಲಿ ಎಲ್ಲೋ ಸ್ವಲ್ಪ ಇರಬಹುದು, ಹಾಕಿಬಿಡಿ ಸಾರ್."

ರಘು ಅನ್ಯಮನಸ್ಕನಾಗಿ ಫ್ಲಾಸ್ಕನ್ನು, ಚೀಲವನ್ನು ಮುಂದಿನ ಸೀಟಿನಲ್ಲಿ ಹಾಕಿ ಮೂಲೆಯಲ್ಲಿದ್ದ ಪೆಟ್ರೋಲ್ ಕ್ಯಾನನ್ನು ಅಲ್ಲಾಡಿಸಿ ನೋಡಿ ಗೊತ್ತಾಗದೇ ಬೆಳಕಿಗೆ ಹಿಡಿದು ನೋಡಿದನು. ತಳದಲ್ಲಿದ್ದ ಪೆಟ್ರೋಲ್ ಕಂಡು ಅವನಿಗೆ ಜೀವ ಮರಳಿ ಬಂದಹಾಗಾಯಿತು. ಪೆಟ್ರೋಲನ್ನು ಟ್ಯಾಂಕಿಗೆ ಸುರಿದು ಮುಚ್ಚಳ ಭದ್ರಪಡಿಸಿ ಜೇಬಿನಿಂದ ಸ್ವಿಚ್‌ಕೀ ತೆಗೆದುಕೊಂಡು ಕಾರಿನಲ್ಲಿ ಕುಳಿತು, ಅದನ್ನು ಸ್ಟಾರ್ಟ್ ಮಾಡಲು ಯತ್ನಿಸಿದ. ಯಾವ ಕಾಲದಲ್ಲಿ ಸ್ಟಾರ್ಟ್‌ಮಾಡಿದ್ದೋ ಏನೋ ? ಬ್ಯಾಟರಿ ರನ್ ಡೌನ್ ಆಗಿರಬಹುದು.

"ಬಾಬು, ಈ ಕಾರು ಮುಟ್ಟಿ ಎಷ್ಟು ದಿನ ಆಯಿತು ? ಯಾರೂ ಸ್ಟಾರ್ಟ್ ಮಾಡೋದೇ ಇಲ್ವಾ ?" ಕಾರಿನ ಮುಂದಿನ ಗಾಜನ್ನು ಒರೆಸುತ್ತಿದ್ದ ಬಾಬುವನ್ನು ಕೇಳಿದನು.

"ರವಿಯಪ್ಪೋರು ಇವನ್ನು ದಿನಾ ಸ್ಟಾರ್ಟ್ ಮಾಡಿ, ಫಿಯಟ್ ಕಾರನ್ನ ತೆಗೆದುಕೊಂಡು ಹೋಗ್ತಾರೆ, ಸಾರ್. ಆದರೆ ಎರಡು ದಿನಗಳಿಂದ ಮಾಡಿದ ಹಾಗೆ ಕಾಣ್ನೋಲ್ಲ..." ಬಾಬು ಬಟ್ಟೆಗೆ ಕೈ ಒರೆಸಿಕೊಂಡನು ಸೆಲ್ಫ್ ಸ್ಟಾರ್ಟರ್ ಪ್ರಯತ್ನಿಸಿ ಸಾಕಾಗಿ ರಘು ಹೇಳಿದನು. "ಬಾಬು, ಕಾರನ್ನ ಕೊಂಚ ನೂಕ್ತೀಯಾ? ಕಾರನ್ನು ಬೆಂಗಳೂರಿನ ತನಕ ಓಡಿಸಿಕೊಂಡು ಹೋದರೆ ಸಾಕು, ಆಮೇಲೆ ಅದನ್ನು ನೋಡಿಕೋತೀನಿ..." ಎಂದು ಕ್ಲಾಪಿನ ಮೇಲೆ ಕೈಯ್ಯಾಡಿಸಿಕೊಂಡನು.

ಬಾಬುವಿನ ಜೊತೆ, ದನಗಳಿಗೆ ಹುಲ್ಲು ಹಾಕಲು ಬಂದಿದ್ದ ಸಿದ್ಧ ವೀರೂನೂ ನೂಕಿದ ಮೇಲೆ ಕಾರಿಗೆ ಜೀವ ಬಂತು, ರಘು ಸಮಾಧಾನದ ನಿಟ್ಟುಸಿರು ಬಿಟ್ಟನು.

"ಬಾಬೂ, ನಾನು ಬರುವುದು ಎಷ್ಟು ಹೊತ್ತಾಗುತ್ತೋ ಗೊತ್ತಿಲ್ಲ. ಯಾರೂ ಊಟಕ್ಕೆ ನನಗೆ ಕಾಯೋದು ಬೇಡಾ...." ಎಂದು ಕಾರನ್ನು ನಡೆಸಿ ಮುಂದೆ ಹೋಗುತ್ತಾ ರಘು ಹೇಳಿದಾಗ ಬಾಬುವಿಗೆ ನಗು ಬಂತು. ಈಗ ಯಾರಿಗೆ ಯಾರೂ ಕಾಯುವುದಿಲ್ಲವೆಂದು ರಘುವಿಗೇನು ಗೊತ್ತು ?

ಬಹಳ ಪ್ರಯಾಸದಿಂದ ಕಾರನ್ನು ಗ್ಯಾರೇಜಿನಲ್ಲಿ ರಿಪೇರಿಗಾಗಿ ಬಿಟ್ಟು ಆಟೋರಿಕ್ಷಾದಲ್ಲಿ ನಂದಿನಿಯ ಮನೆಗೆ ರಘು ತಲುಪಿದಾಗ ಹನ್ನೊಂದು ಗಂಟೆಯ ಮೇಲಾಗಿತ್ತು. ಗೇಟು ತೆರೆದು ಮನೆ ಬಾಗಿಲ ಬಳಿ ನಿಂತು ಕರೆಗಂಟೆಯೊತ್ತಿದಾಗ ರಘುವಿನ ಎದೆಯಲ್ಲಿ ನೆನಪಿನ ಘಟ್ಟ ತೆರೆಯೊಂದು ಉಕ್ಕಿಬಂದು ಅವನ ಇತರ ಭಾವನೆಗಳನ್ನೆಲ್ಲಾ ಕೊಚ್ಚಿಕೊಂಡು ಹೋಗಿ ತಾನು ಮೊದಲ ಬಾರಿ ಶುಭನನ್ನು ಕಂಡ ದಿನವನ್ನು ಅವನ ಕಣ್ಣ ಮುಂದೆ ತಂದೊಡ್ಡಿತು. ಅವನ ಕಣ್ಣುಗಳು ಆಸೆಯ ಬೆಳಕನ್ನು ಹೊತ್ತು, ತೆರೆ ಸರಿದು ಬಂದ ವ್ಯಕ್ತಿಯನ್ನು ಹೃದಯದಲ್ಲಿ ತುಂಬಿಕೊಳ್ಳಲು ಕಾತರಿಸಿತು.

"ಓ ಹೋ ಹೋ...ಇದೇನು ಸೂರ್ಯ ಇವೊತ್ತು ಪಶ್ಚಿಮದಲ್ಲಿ ಹುಟ್ಟಿರ್ಬೇಕೂ....ಯಾವಾಗ್ಬಂದೀ, ? ಏನ್ಕತೆ ? ನಮ್ಮೂರ್ಕಡೆ ಜ್ಞಾನ ತಿರುಗಿದ್ದು ಯಾವಾಗ ?" ಬಾಗಿಲು ತೆರೆಯಲು ಬಂದ ನಂದಿನಿಯನ್ನು ಅವನು ಕ್ಷಣ ಕಾಲ ಗುರುತಿಸಲಾರದಾದನು. ಅವನಿಗೆ ಕಂಡದ್ದು ತುಂಟನಗೆ

ಚೆಲ್ಲುತ್ತಾ, ಬಾಗಿಲು ತೆರೆಯಲು ಅನುಮಾನಿಸುತ್ತಾ "ನಂದಿನಿ ಮನೇಲಿಲ್ವಲ್ಲ!" ಎಂದಿದ್ದ, ಚೆಲುವೆ ಯುವತಿಯೊಬ್ಬಳ ಮುಖ ತೇಲಿ ಬಂತು.

"ಇವೇನೋ ಹೀಗೆ ನೋಡ್ತಾ ನಿಂತ್ಬಿಟ್ಟೆ? ನನ್ನ ಗುರ್ತೂ ಮರ್ತು ಹೋಯ್ತಾ?" ನಂದಿನಿ ...ಮತ್ತೆ ಪ್ರಶ್ನಿಸಿದಾಗ ರಘು ಎಚ್ಚೆತ್ತನು. "ಇಲ್ಲ.... ನಂದಿನಿ....ನಂಗೆ ನಿನ್ನ ಗುರ್ತು ಹತ್ತೋದು ಸ್ವಲ್ಪ ಕಷ್ಟ ಆಯ್ತು....ನೀನು ತುಂಬಾ ಬದಲಾಯಿಸಿಬಿಟ್ಟಿದ್ದೀ! ಯಾಕೆ ಇಷ್ಟು ಸಣ್ಣ ಆಗ್ಬಿಟ್ಟಿದ್ದೀ?" ರಘು ಕೊಂಚ ತಡವರಿಸಿದ.

"ಸರಿಹೋಯ್ತು ಬಿಡು. ಬದ್ಲಾಯಿಸಿರೋದು ನೀನು. ಎಲ್ರನ್ನೂ ಬದ್ಲಾಯಿಸಿದ್ದೀ ಅನ್ನು. ನೋಡು, ನೀನು ಎಷ್ಟು ಸಣ್ಣ ಆಗೋಗಿದ್ದಿ.... ಇದ್ಯಾಕೆ ತಲೇಲಿ ಇಷ್ಟೊಂದು ಬಿಳೀ ಕೂದಲು? ಒಂದು ತರಹಾ ಗಂಭೀರ ಆಗೋಗಿದ್ದೀ!" ನಂದಿನಿ ಅವನ ಕೈಯಿಂದ ಚೀಲವನ್ನು ತೆಗೆದುಕೊಂಡಳು. ಅದರಲ್ಲಿದ್ದ ಫ್ಲಾಸ್ಕು, ಬ್ರೆಡ್ಡಿನ ಪೊಟ್ಟಣ ಅವಳು ಅಷ್ಟಾಗಿ ಗಮನಿಸಲಿಲ್ಲ. "ಬಾ ಒಳಗೆ, ಬೀದೀಲೆ ನಿಂತು ಮಾತಾಡ್ತಾ ಇದ್ದಿ...."

ರಘು ನಂದಿನಿಯನ್ನು ಹಿಂಬಾಲಿಸಿದ. ಅವಳನ್ನು ಅವನು ಅನ್ಯಮನಸ್ಕನಾಗಿ 'ಸಣ್ಣ' ಅಂದದ್ದು ತಪ್ಪೆನಿಸಿತು. ನಂದಿನಿಗೆ ಕೊಂಚ ನೆನ್ನೆ ಬಂದಿತ್ತು.

"ಯಾವಾಗ್ಬಂದಿ?" ಕುರ್ಚಿಯ ಮೇಲೆ ಕುಳಿತ ರಘುವಿನೆದುರು ನಿಂತು ಕೇಳಿದಳು.

"ಬೆಳಿಗ್ಗೆ ಬಂದೆ....ನಿನ್ನ ನೋಡ್ಬೇಕಾಗಿತ್ತು. ಅದಕ್ಕೇ ಬಂದ್ಬಿಟ್ಟೆ" ಎಂದು ರಘು ಉತ್ತರಿಸಿದಾಗ ಅವನಿಗೆ ತಾನು ಅಲ್ಲಿಗೆ ಬಂದುದರ ಕಾರಣ ಜ್ಞಾಪಕಕ್ಕೆ ಬಂತು. ನಂದಿನಿ ಮನೆಯಲ್ಲೇ ಇದ್ದುದರಿಂದ ಅವಳಿಗೆ ಶುಭನ ವಿಷಯ ತಿಳಿದಮಟ್ಟಿಗೆ ಕಾಣಲಿಲ್ಲ. ಅವಳನ್ನು ಏನೆಂದು ಕೇಳುವುದು? ಕೇಳಿದರೆ ಅವಳು ರವಿಯ ಬಗ್ಗೆ ಕೋಪಗೊಂಡರೆ, ಬೇಸರಗೊಂಡರೆ!

"ಎಲ್ಲಾ ಮನೇಲಿ ಚೆನ್ನಾಗಿದ್ದಾರಾ? ಶುಭ ಹೇಗಿದ್ದಾಳೆ? ನೋಡಿ ತುಂಬಾ ದಿನವಾಯ್ತು!" ಎಂದು ನಂದಿನಿಯೇ ಅವನನ್ನು ಪ್ರಶ್ನಿಸಿದಾಗ ತಕ್ಷಣ ಉತ್ತರಿಸಲು ದಾರಿಗಾಣದಾದನು. ಹಾಗಾದರೆ ಅವಳಿಗೆ ಶುಭನ ಸಮಾಚಾರ ಅಷ್ಟಾಗಿ ಗೊತ್ತಿರುವಂತೆ ಕಾಣಲಿಲ್ಲ. "ಯಾಕೋ ಸುಮ್ಮನಾದಿ? ಏನು ವಿಶೇಷ?" ನಂದಿನಿ ಅವನ ಮುಂದಿನ ಕುರ್ಚಿಯಲ್ಲಿ ಕುಳಿತಳು.

"ನೋಡು ...ನಂದಿನಿ....ರವಿ ಬೆಳಿಗ್ಗೆ ಆಷ್ಟೊತ್ತಿಗೇ ಶುಭನನ್ನು ಆಸ್ಪತ್ರೆಗೆ ಕರ್ದುಕೊಂಡು ಹೋದ್ನಂತೆ....ಪಾಪ, ನಿಂಗೆ ಹೇಳಿಕಳಿಸಲೂ ಯಾರೂ ಇರ್ಲಿಲ್ವಂತೆ, ತಿಳ್ಕೊಳ್ಳೋಕೂ ಆಗ್ಲಿಲ್ವಂತೆ ನಾನು ಬಂದ ತಕ್ಷಣ ಅಪ್ಪಾ ನಿಂಗೆ ತಿಳ್ಸಿಬಿಟ್ಟು ಬಾ ಅಂತ ಇಲ್ಲಿಗೆ ಕಳಿಸಿದ್ರು...." ರಘುವಿಗೆ ಸುಳ್ಳಿನ ಕಂತೆ ಹೇಳಿದಾಗ ನಾಲಿಗೆ ಗಂಟಲು ಒಣಗಿದಂತಾಯಿತು.

ನಂದಿನಿ ಅವನೆಂದುಕೊಂಡತೆ ಆಶ್ಚರ್ಯಪಡಲಿಲ್ಲ. ಒಣನಗೆ ನಕ್ಕಳು. "ಬಿಡೋ ರಘು, ನಾನೆಲ್ಲಿಯವಳು ! ರವಿ ನನ್ನ ಯಾವುದಕ್ಕೂ ಕೇಳೋಲ್ಲ. ನಾನು ಎಷ್ಟೋ ಸಲ ಹೇಳಿಯಾಯ್ತು. ಹೆಂಗಸರಿಲ್ಲದ ಮನೇಲಿ ಬಸುರಿ ಹುಡುಗೀನ ಇಟ್ಕೋಬೇಡಾ. ನಮ್ಮನೇಲಿ ಬಿಡೂಂತಾ ...ಅವನು ಕೇಳ್ಬೇಕಲ್ಲಾ. ನಾವೆಂದರೆ ಅವನಿಗೆ ಬಹಳ ಸಿಕೃಷ್ಟ. ಅವನ ಹೆಂಡ್ತೀನ್ನ ಏನು ಮಾಡ್ಬಿಡ್ತೀನೋ ಅಂತ ಒದ್ದಾಡ್ತಾನೆ....ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಒಂದು ಧಿನಾನಾದ್ರೂ ಅವಳ್ನ ಮದ್ವೆಯಾದಾಗಿನಿಂದ ಕಳ್ಸಿದ್ದಾನೆ ಅಂದ್ಕೊಂಡಿದ್ದೀಯಾ !...." ನಂದಿನಿಯ ಕಣ್ಣುಗಳು ತುಂಬಿದವು. "ಪಾಪ, ಅದಕ್ಕೂ ತಿಳ್ಯೊಲ್ಲ. ಯಾರ್ಹತ್ರ ಹೇಳ್ಕೋತಾಳೇ ಹೇಳು. ನಂಗೆ ಆವಳನ್ನ ನೋಡಿದರೆ ಕರುಳು ಕಿತ್ತು ಬರೋಹಾಗೆ ಆಗುತ್ತೆ ..." ಸೆರಗಿನಿಂದ ಕಣ್ಣೊರಸಿಕೊಂಡಳು. "ನಂಗೊತ್ತು, ಈಗ ನೀನು ಫ್ಲಾಸ್ಕು, ಬ್ರೆಡ್ಡು ಯಾಕೆ ತಂದಿದ್ದೀಂತ ! ಯಾಕೆ ನಮ್ಮನೇಲಿ ಹಾಲು, ಕಾಫಿ, ಬ್ರೆಡ್ಡು ಇರ್ತಾ ಇರ್ಲಿಲ್ವಾ ?" ನಂದಿನಿ ಮೂಗು ಕಣ್ಣನ್ನು ಮತ್ತೆ ಒರೆಸಿಕೊಂಡು ಎದ್ದು ನಿಂತಳು.

ರಘು ಉಗುಳು ನುಂಗಿದನು. ರವಿ ಹಾಗಾದರೆ ಶುಭನನ್ನು ಜೈಲಿನಲ್ಲಿಟ್ಟಂತೆ ಇಟ್ಟಿರಬೇಕು-ನಂದಿನಿಯು ಮನೆಗೂ ಕಳಿಸದಿರುವ ಕಾರಣ ಅವಳ ಮೇಲಿರುವ ಅತಿಯೊಲವೋ ಅಥವಾ ಸ್ವಪ್ರತಿಷ್ಠೆಯೋ ! ಅಣ್ಣನನ್ನು ನಂದಿನಿಯು ಮುಂದೆ ಅಲ್ಲಗೆಳೆಯಬಹುದೇ ? ರಘು ಬಾರದ ನಗುವನ್ನು ತುಟಿಗಳ ಮೇಲೆ ಲೇಪಿಸಿಕೊಂಡನು.

"ಅವನ ಸ್ವಭಾವ ನಿಂಗೊತ್ತಲ್ಲ ನಂದೂ, ನಡಿ ಹೋಗೋಣ. ನಂಗೆ ದಾರೀಲಿ ಕಾರು ಬೇರೆ ಕೈ ಕೊಡ್ತು...ಸಮಯಾಂದ್ರೆ ಎಲ್ಲ ಒಟ್ಟಿಗೆ ಸೇರುತ್ತೆ, ನೋಡೂ...."

894.814 308 3
USH N77



ನಂದಿನಿ ಲಗುಬಗೆಯಿಂದ ಉಟ್ಟ ಸೀರೆಗಳನ್ನೇ ಸರಿ ಮಾಡಿಕೊಂಡಳು. ಕೈಗಳಿಂದ ತಲೆಗೂದಲು ಸರಿಪಡಿಸಿಕೊಂಡಳು.

"ಒಂದು ನಿಮಿಷ ಇರು, ಬಂದೆ." ಒಳಗೆ ಸರಿದಳು. ಅವಳೇನೋ ಬರುವಳು. ಆದರೆ ಆಸ್ಪತ್ರೆಗೆ ಹೇಗೆ ಕರೆದೊಯ್ಯುವುದು.? ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು.? ತನಗದು ತಿಳಿದಿಲ್ಲವೆಂದು ಅವಳಿಗೆ ಗೊತ್ತಾದರೆ ಅಪಹಾಸ್ಯಕ್ಕೆಡೆಯಾಗುವುದಿಲ್ಲವೇ ? ತಾನೆಷ್ಟು ಸೋಗಿನ ನಾಟಕ ವಾಡಬೇಕು ? ಕುಳಿತಲ್ಲಿಂದಲೇ ಕೂಗಿದ. "ನಂದಿನಿ....ಆಸ್ಪತ್ರೆ ಅಡ್ರೆಸ್ ಗೊತ್ತಾ, ಕಾರು ಗ್ಯಾರೇಜಿನಲ್ಲಿ ಬಿಟ್ಟೆಟ್ಟು ಬರುವಾಗ ಎಲ್ಲೋ ಆ ಪೇಪರ್ ಸ್ಲಿಪ್ ಬೀಳಿಸಿಬಿಟ್ಟೇಂತ ಕಾಣ್ಸುತ್ತೆ..." ನಂದಿನಿ ಬಾಗಿಲುಗಳನ್ನು ಭದ್ರ ಪಡಿಸುತ್ತಾ ಕೈಲೊಂದು ಚೀಲ, ಬೀಗ, ಬೀಗದ ಕೈ ಹಿಡಿದು ಬಂದಳು.

"ಗೊತ್ತು, ಬಾ. ರವಿ ಯಾವಾಗ್ಲೂ ಅವಳ್ನ ಅಲ್ಲೇ ಸೇರಿಸೋದು ... ಡಾಕ್ಟರ್ ಮಾಥ್ಯೂಸ್ ಅಂತ-ಭಾಳ ದೊಡ್ಡ ಲೇಡಿ ಡಾಕ್ಟರಪ್ಪಾ ಅವಳು..." ರಘು ನಿರಾಳವಾಗಿ ಉಸಿರಾಡಿಸಿದನು...ಎದ್ದು ಕೈಗೆ ತಾನು ತಂದಿದ್ದ ಚರ್ಮದ ಚೀಲವನ್ನು ತೆಗೆದುಕೊಂಡನು. ನಂದಿನಿಯ ಕೈಲಿದ್ದ ಚೀಲವನ್ನೂ ತೆಗೆದ ಕೊಂಡನು.

"ತಾಳು, ಬೀಗ ಹಾಕಿ ಪಕ್ಕದ ಮನೆಯವರಿಗೆ ಬೀಗದ ಕೈ ಕೊಟ್ಟೆಟ್ಟು ಒರ್‍ತೀನಿ. ಸಂಜಯಾನೋ, ಇವ್ರೋ ಬಂದ್ರೆ ಕೊಟ್ಬಿಡ್ಲಿ...." ನಂದಿನಿ ಹೊರ ಬಂದಳು. ರಘುವೂ ಅವಳನ್ನು ಹಿಂಬಾಲಿಸಿದನು.

"ನೀನು ಕೊಟ್ಟಿಟ್ಟಾ. ಅಷ್ಟರಲ್ಲಿ ಆಟೋನ ಕರೀತೀನಿ" ರಘು ರಸ್ತೆಗೆ ಕಾಲಿಟ್ಟನು.

ಆಟೋರಿಕ್ಷಾದಲ್ಲಿ ಇಬ್ಬರೂ ಕುಳಿತಾಗ ನಂದಿನಿ ಮತ್ತೆ ಕಣ್ಣಲ್ಲಿ ನೀರು ತಂದುಕೊಂಡಳು.

"ಶುಭಂಗೆ ಇನ್ನೂ ದಿನ ತುಂಬಿದ ಹಾಗೆ ಕಾಣಿಸಲಿಲ್ಲ. ಪಾಪ, ಮೂರು ಸಲ ಹೀಗೇ ಆಯ್ತು...ಎರಡೂ ಸಲಾನೂ ನಿಮ್ಮಮ್ಮ ಇದ್ರು. ಮೈಯಿಳಿದಾಗ ಅವರೇ ಓಡಾಡಿದರು, ನೋಡಿಕೊಂಡರು. ಅವಳು ಆಸ್ಪತ್ರೆಯಿಂದ ಮನೆಗೆ ಬರುವವರೆಗೂ ನಂಗೆ ತಿಳಿಸಲೇ ಇಲ್ಲ. ಮೂರು ತಿಂಗಳಾಗಿದ್ದು ನಂಗೆ ಗೊತ್ತಿಲ್ಲಿಲ್ಲ....ಅದೇನು ಆರೈಕೆ ಮಾಡಿಸಿಕೊಂಡಳೋ ಕಾಣೆ. ಡಾಕ್ಟರಂತೂ

ಹೇಳಿದ್ರಂತೆ ಗರ್ಭಿಣಿಯಾದ್ರೆ ಬಹಳ ಹುಷಾರಾಗಿರ್ಬೇಕೂಂತ! ಮೂರ್ನೇ ಸಲ ಐದು ತಿಂಗಳಾಗಿತ್ತು. ನಿಮ್ಮಮ್ಮ ಹೋಗ್ತೋಕ್ಮುಂಚೆ, ಆಮೇಲೆ, ಓಡಾಡಿ ಬಿಟ್ಟಳು. ಆಮೇಲೆ ಪ್ರೈಯಿಳಿದಾಗಲಂತೂ ಗುರುತೇ ಸಿಗದಹಾಗಾಗಿಬಿಟ್ಟಿದ್ಲು. ನಾನೆಷ್ಟೋ ಕೇಳಿಕೊಂಡೆ-"ರವಿ ಕಳಿಸಪ್ಪಾ. ಇಂತ ಹೊತ್ತಿನಲ್ಲಿ ಆರೈಕೆ ಚೆನ್ನಾಗಿ ಮಾಡ್ಬೇಕೂ. ಅಲ್ಲಿ ಯಾರೂ ಹೆಂಗಸರಿಲ್ಲಾಂತ. ಅವ್ನು ಕೇಳಿದ್ರೆ ಸರಿ ನೋಡು. 'ನಾನು ಎಲ್ಲಾ ನೋಡ್ಕೋತೀನಿ. ಸುಮ್ನಿರು ನಂದಿನಿ. ನೋಡ್ತಾ ಇರು. ಶುಭ ಹೇಗಾಗ್ತಾಳೆ ಅಂತ' ಅಂದ. ನೋಡೋವಂತೆ ಹೇಗಾಗಿದ್ದಾಳೇಂತ. ಒಂದೆರಡು ವರ್ಷ ಬಿಡಿ ಮನುಷ್ಯಳಾಗಿದ್ದರೆ ತೆಪ್ಪತ್ತು ಕೊಳ್ತಾ ಇದ್ಲೋ ಏನೋ....!" ಕಣ್ಣೀರು ಕೆನ್ನೆಯ ಮೇಲುರುಳಿತು.

ರಘುವಿನ ಮನಸ್ಸು ಉದ್ವಿಗ್ನತೆಯಿಂದ ಕೆಂಡವಾದಂತಾಯಿತು. ಅಂದರೆ ರವಿ ಮನುಷ್ಯನಲ್ಲ, ಪಶುವಂತಾಗಿರಬೇಕು. ಅವನನ್ನು ಕಟ್ಟಿಕೊಂಡು ಶುಭ ಪಟ್ಟ ಸುಖವಾದರೂ ಏನು? ಅವಳೆಷ್ಟು ನೊಂದಳೋ. ಎಷ್ಟು ಕಣ್ಣೀರ್ಗರೆದಳೋ, ಎಷ್ಟು ಪರಿತಪಿಸಿದಳೋ. ಅವಳು ತನ್ನವಳಾಗಿ, ತನ್ನ ಬಳಿಯಿದ್ದಿದ್ದರೆ ತಾನು ಆವಳನ್ನು ಮಡಿಲಲ್ಲಿ ಹೂವಿನಂತಿಟ್ಟುಕೊಂಡು ಕಾಪಾಡಬಹುದಿತ್ತು. ಎಲ್ಲಾ ಏರುಪೇರಾಗಿಹೋಯಿತು. ಬೇಸರವುಕ್ಕಿ ಹರಿಯಿತು.

ಅವನ ಬೇಸರ ತುಂಬಿದ ಮುಖ ನೋಡಿ ನಂದಿನಿ ಅವನ ಕೈ ಮೇಲೆ ಕೈ ಹಾಕಿ ಹೇಳಿದಳು.

"ನೀನು ಬೇಜಾರು ಮಾಡ್ಕೋಬೇಡಾ....ರವಿನ್ನ ಅಂತೀನೀಂತ. ಶುಭನ್ನ ಕಂಡ್ರೆ ಪ್ರಾಣ ಬಿಡ್ತಾನೆ. ಅವ್ಳ್ನ ಬಿಟ್ಟು ಒಂದು ನಿಮಿಷ ಇರೋಕ್ಕೆ ಆಗೋಲ್ಲ. ಈ ಸಲವಂತೂ ಅವ್ಳ್ನ ಹಾಸಿಗೆ, ಮಂಚದಿಂದ ಕೆಳಗೇ ಇಳಿಸ್ಲಿಲ್ವಂತೆ ಹಾಗೆ ನೋಡ್ಕೋತಾ ಇದ್ದ. ಈ ಸಲವಾದ್ರೂ ಮಗು ಕೈಗೆ ಬಂದ್ರೆ ಸಾಕೂಂತ ಇದ್ದೆ. ಅದ್ಯಾಕ್ಹಾಗಾಯ್ತೋ !"

ರಘು ಮಾರ್ಮಿಕವಾಗಿ ನಕ್ಕು ನಂದಿನಿಯ ಕೈಯನ್ನು ಹಿಡಿದು ಹೇಳಿದ "ಒಳ್ಳೇ ಡಾಕ್ಟರಂದೀ. ಏನೂ ಆಗೋಲ್ಲ ಬಿಡು. ನೀನ್ಯಾಕೆ ಬೇಜಾರು ಮಾಡ್ಕೋತಿ. ಏನಾದ್ರೂ ಮಾಡಿ ರವಿನ್ನ ಒಪ್ಸಿ ಶುಭನ್ನ ನಿನ್ನ ಮನೇಗೆ ಕಳೀಸ್ತೀನಿ...." ತನಗೆಂತಹ ಅಗ್ನಿಪರೀಕ್ಷೆ ! ತಾನೆಣಿಸಿದಂತೆ ರವಿ ಶುಭನನ್ನು ನಿರ್ಲಕ್ಷಿಸಿಲ್ಲ. ಅವಳ ಮೇಲಿನ ಪ್ರೇಮ ಅವನಿಗೆ ಅಗಾಧವಾಗಿ ಹಿಮಾಲಯ

ದಂತೆ ಬೆಳೆದಿರಬೇಕು. ಅದಕ್ಕೆ ಆವರಿಸಿರುವ ಮಂಜಿನಂತೆ ಅವಳು ಅವನನ್ನು ಆವರಿಸಿಕೊಂಡಿರಬೇಕು. ಆದರೆ...ಮನೆಯಲ್ಲಿನ ತೊಡಕು ಅಸ್ತವ್ಯಸ್ತತೆಗೆ ಕಾರಣವೇನಿರಬಹುದು ? ಎಸ್ಟೇಟಿನ ಆಗುಹೋಗುಗಳಲ್ಲಿ ರವಿಗೆ ಬಹಳ ಹಣದ ಕೊರತೆಯಿರಬಹುದೇ ? ತಾಯಿಯ ಸಾವು ಬೇಸರ ತಂದಿರ ಬಹುದೇ ? ಶುಭನ ದೇಹಾಲಸ್ಯ ಎಲ್ಲರಿಗೂ ವ್ಯಥೆಯನ್ನುಟುಮಾಡಿರ ಬಹುದೇ !

"ನೋಡು, ಆ ಮೂಲೇಲಿರೋ ದೊಡ್ಡ ಹಳದಿ ಬಿಲ್ಡಿಂಗ್....ಅದೇ ನರ್ಸಿಂಗ್ ಹೋಂ....!" ನಂದಿನಿ ಅವನ ಯೋಚನೆಗೆ ತಡೆ ಹಾಕಿದಳು. ರಘು ಆಟೋವನ್ನು ನಿಲ್ಲಿಸ ಹೇಳಿದ. ಇಬ್ಬರೂ ಇಳಿದರು. ರಘು ಆಟೋದವನಿಗೆ ದುಡ್ಡಿತ್ತು ಚಿಲ್ಲರೆ ವಾಪಸ್ಸು ತೆಗೆಯುವ ವೇಳೆಗೆ ನಂದಿನಿ ನರ್ಸಿಂಗ್ ಹೋಂ ಆವರಣವೊಳಗೆ ಕಾಲಿಟ್ಟಿದ್ದಳು. ರಘು ಸರಸರನೆ ಅವಳ ಹಿಂದೆ ಹೆಜ್ಜೆ ಹಾಕಿದನು.

ರಘು ಆವರಣದಲ್ಲಿ ನಿಂತಿದ್ದ ಅನೇಕ ಕಾರುಗಳತ್ತ ಕಣ್ಣು ಹಾಯಿಸಿದ. ಅವನಿಗೆ ಬೇಕಾದ ಕಾರು ಕಾಣಲಿಲ್ಲ. ಒಂದು ವೇಳೆ ಶುಭನನ್ನು ಕರೆದು ಕೊಂಡು ರವಿ ಮನೆಗೆ ಹಿಂತಿರುಗಿ ಹೋಗಿದ್ದರೆ....ವೃಥಾ ನಂದಿನಿಯನ್ನು ಹೆದರಿಸಿ ತಾನು ಹೆದರಿ ಬಂದ ಹಾಗಾಯಿತು.

"ಎಲ್ಲಿ ನಂದಿನಿ, ರವಿಯ ಕಾರು ಕಾಣ್ಸೋಲ್ಲ !" ರಘು ಮುಂದೆ ಹೋಗುತ್ತಿದ್ದ ನಂದಿನಿಯನ್ನು ಕೇಳಿದ.

"ಶುಭಂಗೆ ಅಷ್ಟೇನೂ ತೊಂದರೆಯಿರುವ ಮಟ್ಟಿಗೆ ಕಾಣಿಸೋಲ್ಲ ಹಾಗಾ ದರೆ. ಅವಳನ್ನು ಬಿಟ್ಟು ತನ್ನ ಕೆಲಸಕ್ಕಾಗಿ ಎಲ್ಲಾದರೂ ಹೋಗಿರಬಹುದು...." ನಂದಿನಿ ನರ್ಸಿಂಗ್ ಹೋಂನ ವರಾಂಡದಲ್ಲಿದ್ದ ರಿಸೆಪ್ಷನಿಸ್ಟನನ್ನು ವಿಚಾರಿಸಲ ಹೋದಳು.

ರಘು ತನ್ನ ಸುತ್ತ ಕಣ್ಣಾಡಿಸಿದ. ದೊಡ್ಡ ನರ್ಸಿಂಗ್ ಹೋಂ ಬಹಳ ಶುಚಿಯಾಗಿತ್ತು. ಅಲ್ಲಿಂದಿಲ್ಲಿಗೆ ಸರಸರನೆ ಓಡಾಡುತ್ತಿದ್ದ ನರ್ಸುಗಳು, ಡಾಕ್ಟರು ಗಳನ್ನು ನೋಡಿದಾಗ ಶಿಸ್ತು ಬಲವಾಗಿದೆಯೆಂದುಕೊಂಡನು. ಡಾಕ್ಟರನ್ನು ನೋಡಲು ಬಂದಿದ್ದವರೆಲ್ಲರೂ ಹಣವಂತರಂತೆ ಕಾಣುತ್ತಿದ್ದರು. ಆವರಣ

ದಲ್ಲಿದ್ದ ಹತ್ತಾರು ಕಾರುಗಳು ಆಸ್ಪತ್ರೆ ಬಹಳ ದುಬಾರಿಯದೆಂದೂ ತಿಳಿಸು ತ್ತಿತ್ತು.

"ಬಾರೋ, ರೂಂ ನಂಬರ್ ಆರರಲ್ಲಿದ್ದಾಳಂತೆ ನಿನ್ನ ನೋಡಿದ್ರೆ ಏನಂತಾಳೋ....ತುಂಬಾ ದಿನಗಳಾಯ್ತಲ್ಲವಾ ನೋಡಿ... !" ನಂದಿನಿ ಬೇಗ ಬೇಗ ಹೆಜ್ಜೆ ಹಾಕುತ್ತಾ ವಾರ್ಡುಗಳತ್ತ ನಡೆದಳು.

ಅವಳನ್ನು ಹಿಂಬಾಲಿಸಿದ ರಘುವಿಗೆ ಏನೋ ಅಳುಕು, ಕಳವಳ. ಅವಳ ನ್ನೆದುರಿಸುವುದು ಹೇಗೆ ? ಏನಂದು ಅವಳನ್ನು ಮಾತನಾಡುವುದು. ಒಂದು ವೇಳೆ ಅವಳು ತನ್ನನ್ನು ಮಾತನಾಡಿಸದೇ ಇದ್ದು ಬಿಟ್ಟರೆ....!

ನಂದಿನಿ ರೂಮೊಂದರ ಪರದೆ ಸರಿಸಿ ಒಳಗೆ ಕಾಲಿಟ್ಟಳು. ರಘು ಎರಡು ಮನಸ್ಸಿನಿಂದ ಹಿಂದೆ ನಿಂತು ಆಲಿಸಿದ, ಆ ಧ್ವನಿಗಾಗಿ-ನಂದಿನಿ ಶುಭ ನಿಗೆ ತಾನು ಬಂದಿರುವ ಸಮಾಚಾರ ಹೇಳಬಹುದು-ಅದಕ್ಕೆ ಅವಳೇನು ಉತ್ತ ರಿಸಬಹುದು ! ಅವಳುತ್ತರ ಕೇಳಿ ತಾನು ಒಳಗೆ ಕಾಲಿಟ್ಟರೆ ಸರಿ. ಆದರೆ ಅವನು ಊಹಿಸಿದಂತೆ ಯಾವ ಧ್ವನಿಯೂ ಕೇಳಲಿಲ್ಲ ಅವನಿಗೆ ಕೇಳಿಸಿದುದು ನಂದಿನಿಯ ದನಿ, ಮತ್ತೊಬ್ಬರ ಅಪರಿಚಿತ ಧ್ವನಿ ! ರಘು ನಿಸ್ಸ್ವಾರಗಾಗಿ ಪರದೆ ಸರಿಸಿ ಒಳಗೆ ಕಾಲಿಟ್ಟನು. ಅವನು ಒಳಗಡೆ ಬಂದ ತಕ್ಷಣ ನಂದಿನಿ ತುಟಿಯ ಮೇಲೆ ಬೆರಳಿಟ್ಟು ಸುಮ್ಮನಿರುವಂತೆ ಹೇಳಿದಳು. ಅವಳ ಜೊತೆ ನಿಂತು ಮಾತಾಡುತ್ತಿದ್ದ ನರ್ಸ್ ರಘುವಿನತ್ತ ನೋಡಿದಳು. ಅವನು ಮಂಚದ ಮೇಲೆ ಮಲಗಿದ್ದ ಶುಭನನ್ನು ನೋಡುತ್ತಿದ್ದ.

"ಶ್ .. ಗಲಾಟೆ ಮಾಡಬೇಡಿ. ಈಗ್ತಾನೆ ನಿದ್ದೆ ಹತ್ತಿದೆ ಎಚ್ಚರಿಕೆ ಯಾದ್ರೆ ತೊಂದರೆಯಾಗುತ್ತೆ. ಹೊರ್ಗೆ ಕುಳಿತು ಮಾತಾಡ್ಬೋದೂ " ನಂದಿನಿ ಆಗಲೆನ್ನುವಂತೆ ತಲೆಯಲ್ಲಾಡಿಸಿದಳು ರಘುವಿನ ಕಣ್ಣುಗಳು ಶುಭ ನಲ್ಲಿ ನಾಟಿದ್ದವು. ಅವನೆದೆ ಏರಿಳಿಯುತ್ತಿತ್ತು. ಕಣ್ಣುಗಳಂಚಿನಲ್ಲಿ ಕಂಡೂ ಕಾಣದ ಹಾಗೆ ನೀರು ಜಿನುಗಿತ್ತು.

'ಶುಭಾ ! ಇವಳು ತಾನು ಕಂಡ ಶುಭಾನೇ ! ಎಂದಿಗೂ ಇಲ್ಲ. ಗುಳಿ ಬಿದ್ದ ಕಣ್ಣುಗಳು, ಸವೆದುಹೋದ ಕೆನ್ನೆ, ಬಿಳಚಿಕೊಂಡಿದ್ದ ಮುಖ, ಕತ್ತು ಕೈಗಳ ಮೇಲೆ ಎದ್ದುಕಾಣುತ್ತಿದ್ದ ಎಲುಬುಗಳು, ನಿದ್ದೆಯಲ್ಲಿ ಏರಿಳಿಯುತ್ತಿದ್ದ ಬತ್ತಿದ ದೇಹ. ಕೆದರಿದ್ದ ಮುಂಗುರುಳು. ಶುಭಾ . ಶುಭಾ ಇದೇಕೆ

ಹೀಗಾದೆ ? ನಿನಗೇನಾಗಿದೆ ? ನಾನು ನಿನ್ನ ಬಿಟ್ಟು ಹೋದೆನೆಂದು ಹೀಗಾದೆಯಾ ? ನಿನಗೆ ಬೇಕಾದದ್ದು ನನ್ನೊಲವು ! ಅದು ದಕ್ಕವೇ ನೀನು ಹೀಗೆ ನಶಿಸಿಹೋದೆಯಾ ? ಹೇಗಿದ್ದವಳು ಹೇಗಾಗಿದ್ದೀಯಾ ? ಯೌವನದ ರಸ ಪೂರಿತ ಕನಸಿನಂತಿದ್ದವಳು ಹೀಗೇಕಾದೆ ?, ರಘುವಿನ ರೋಮ ರೋಮವೂ ನರನರವೂ ಮೌನವಾಗಿ ಚೀರುತ್ತಿದ್ದವು,

"ಬಾ, ರಘು ಹೊರಗೆ ಹೋಗೋಣ. ಡಾಕ್ಟರ್ ಬಂದರೆ ಕೋಪಿಸಿಕೊಂಡಾರು." ನಂದಿನಿ ಅವನನ್ನು ಮುಟ್ಟಿ ಎಚ್ಚರಿಸಿದಳು. ರಘು ಅವಳನ್ನೊಮ್ಮೆ, ವರ್ಷನ್ನೊಮ್ಮೆ ತೀಕ್ಷ್ಣವಾಗಿ ನೋಡಿ ಹೊರಗೆ ಹೊರಟನು. ರೂಮಿನ ಹೊರಗಿದ್ದ ಕುರ್ಚಿಯೊಂದರಲ್ಲಿ ಕುಳಿತ. ಅವನು ಭಾವೋದ್ವೇಗದಿಂದ ಮೂಕನಾಗಿದ್ದನು. ಶುಭ ಹೀಗಾಗುವಳೆಂದು ತಿಳಿದಿದ್ದರೆ ತಾನು ಮನೆ ಬಿಟ್ಟು ಹೊರಡುತ್ತಲೇ ಇರಲಿಲ್ಲ. ಒಂದು ಮಾತು ಅವಳು ಹೀಗಾಗಿರುವಳೆಂದು ಯಾರಾದರೂ ಒಂದು ವಾಕ್ಯ ಬರೆದಿದ್ದರೆ ತಾನು ಓಡಿ ಬರುತ್ತಿರಲಿಲ್ಲವೇ ?-ಶುಭನಿಗಿಂತ ತನಗೆ ಬದುಕಿನಲ್ಲಿ ದೊಡ್ಡದಾವುದಿದೆ ? ನಂದಿನಿ ಅವನ ಪಕ್ಕದ ಕುರ್ಚಿಯಲ್ಲಿ ಕುಳಿತು ಅವನಿಗೆ ಹೇಳಿದುದು ಅವನ ಕಿವಿಗೆ

"ನೋವು ಶುರು ಆಗಿದ್ಯಂತೆ—ನಾರ್ಮಲ್ ಡೆಲಿವರಿ ಆಗೋಲ್ಲ, ಆಪರೇಷ್ ಮಾಡಿ ಮಗೂನ ತೆಗ್ದು ಬಿಟ್ರೆ, ಮಗೂನೂ ಉಳೀಬೋದೂ. ಶುಭಂಗೂ ಆಯಾಸ ಕಡಿಮೆ ಆಗ್ಬೋದೂಂತ ಡಾಕ್ಟರ್ ಹೇಳಿದ್ರಂತೆ. ಒಂದು ಘಂಟೆಗೆ ಆಪರೇಷ್ ಮಾಡ್ತಾರಂತೆ. ಅದಕ್ಕ್ಮುಂಚೆ ನಿದ್ದೆಗೆ ಔಷಧಿ ಕೊಟ್ಟಿದ್ದಾರಂತೆ. ರವಿಗೆ ಬಂದ ತಕ್ಷಣ ಡಾಕ್ಟರ್ ಹೇಳಿದ್ರಂತೆ. ಆಪರೇಷ್ ಹೊತ್ತಿಗೆ ಬಂದ್ಬಿಡ್ತೀನಿ ಅಂತ ಹೋದ್ನಂತೆ....!"

ಅವಳು ಹೇಳಿದುದು ಅವನಿಗೆ ಕೇಳಲಿಲ್ಲವೆಂದು ತಿಳಿದ ನಂದಿನಿ ಕುರ್ಚಿಯ ಮೇಲಿದ್ದ ಅವನ ಕೈ ತಟ್ಟಿದಳು.

ಯೋಚನಾಕ್ರಾಂತನಾಗಿದ್ದ ರಘು ಒಮ್ಮೆಗೇ ಬೆಚ್ಚಿ ಬಿದ್ದ.

"ಏನು ನಂದಿನಿ, ನೀನು ಹೇಳಿದ್ದು ನಂಗೆ ಅರ್ಥ ಆಗಲಿಲ್ಲ....!"

"ಏನಿಲ್ಲ ...ರವಿ, ಶುಭನ್ನ ಆಸ್ಪತ್ರೆಗೆ ಅಡ್ಮಿಟ್ ಮಾಡಿ ಪುನಃ ಹನ್ನೆರಡು

ಗಂಟೆಗೆ ಬರ್ತೀನೀಂದ್ನಂತೆ....ಅದಕ್ಕೇ ಟೈಂ ಎಷ್ಟೂಂತ ಕೇಳ್ದೆ." ನಂದಿ ಅವನ ವಿಮನಸ್ಕತೆಯನ್ನು ಗಮನಿಸಿ ಹೇಳಿದಳು.

"ಹನ್ನೊಂದುಮುಕ್ಕಾಲು .... ಇನ್ನೇನು ಬರ್ಬ್ಬೇಕಲ್ಲಾ .... ಅಲ್ವಾ ?" ರಘು ಮತ್ತೆ ಎದ್ದು ನಿಂತನು. ಜೇಬಿಗೆ ಕೈ ಹಾಕಿ ಸಿಗರೇಟು ಪ್ಯಾಕು ತೆಗೆದಾಗ,

"ಶ್....ಇದೇನೋ ಹೀಗೆ ? ಇಲ್ಲೆಲ್ಲಾ ಸಿಗರೇಟು ಸೇದ್ಬಾರ್ದು !" ನಂದಿನಿ ಮೆಲ್ಲನೆ ಗದರಿಸಿದಳು. ರಘು ಕೈಗೆ ಒಂದು ಸಿಗರೇಟು ತೆಗೆದು ಬಾಯಿಗಿಟ್ಟುಕೊಂಡು ಪ್ಯಾಕನ್ನು ಜೇಬಿಗೆ ಮತ್ತೆ ಸೇರಿಸಿದ.

"ಇಲ್ಲಿ ಸೇದಲ್ಲ. ಹೊರಗೆ ಹೋಗಿ ಸೇದ್ತೀನಿ....ಹಾಗೇ ರವಿ ಬರ್ತಿದ್ದಾನಾ, ನೋಡ್ಕೊಂಡು ಬರ್ತೀನಿ...."

"ಸಧ್ಯ ಹಾಗೆ ಮಾಡ್ಬೇಡಾ....ಇಲ್ಲೇ ಇರು, ರವಿ ಬಂದ್ರೆ ಇಲ್ಲಿಗ್ತಾನೆ ಬರ್ತಾನೆ. ಡಾಕ್ಟರ್ ಯಾವ್ದಕ್ಕಾದ್ರೂ ಕರೆದ್ರೇ ಏನ್ಮಾಡೋದೂ....ಹನ್ನೆರಡು ಗಂಟೆಗೆ ಅವಳ್ನ ಥಿಯೇಟರ್‌ಗೆ ಕರ್ಕೊಂಡು ಹೋಗ್ತಾರಂತೆ...."

ರಘು ಒಂದು ನಿಮಿಷ ನಿಂತು ದೀರ್ಘವಾಗಿ ಯೋಚಿಸಿದ. ರವಿ ಈಗ ಶುಭನನ್ನು ಬಿಟ್ಟು ಹೋಗಬಾರದಿತ್ತು. ಅವನಿಗೇನು ಅಂತಹ ಕೆಲಸ ವಿದ್ದದ್ದು ! ನಂದಿನಿ, ತಾನೂ ಬರದಿದ್ದರೆ ಶುಭ ಹೀಗೆ ಒಬ್ಬಳೇ....ಹೇಳುವವರು ಕೇಳುವವರೂ ಇಲ್ಲವೆ ! ಬಾಯಲ್ಲಿದ್ದ ಸಿಗರೇಟನ್ನು ಕೈಗೆ ತೆಗೆದುಕೊಂಡು ಮುಸುರಿ ಎದುರಿಗಿದ್ದ ಕಿಟಕಿಯಾಚೆ ಎಸೆದು ಹೊರಗೆ ಪ್ರಖರವಾಗುತ್ತಿದ್ದ ಬಿಸಿಲನ್ನು ಕಣ್ಣು ಕಿರಿದು ಮಾಡಿ ನೋಡಿದನು. ಸೂರ್ಯನಾದರೋ ತನ್ನ ಉರಿಯನ್ನು ಮತ್ತೊಬ್ಬರ ಮೇಲೆ ಕಾರುತ್ತಾನೆ ತನ್ನಲ್ಲಿರುವ ಉರಿಯನ್ನು ತಾನೇ ನುಂಗಬೇಕಾಗಿದೆಯಲ್ಲಾ ! "ನಂದಿನಿ ಶುಭ ಬಹಳ ಇಳಿದುಹೋಗಿದ್ದಾಳಲ್ವಾ ? ನನಗೆ ಗುರುತೇ ಹತ್ತಲಿಲ್ಲ !" ಅವನರಿವಿಲ್ಲದೆಯೆ ಮಾತು ತುಟಿಯಿಂದ ಹೊರಬಿತ್ತು. "ನೀವೆಲ್ಲಾ ಇದ್ದು ಹೀಗೇನಾ ನೋಡ್ಕೊಳ್ಳೋದೂ ?" ಆ ಮಾತು ತಾನು ಆಡಬಾರದಿತ್ತೆನಿಸಿತು ಅವನಿಗೆ.

"ನಂಗೇನು ಹೇಳ್ತೀ ರಘು. ನಿಮ್ಮಣ್ಣ ರವಿ ಬರೋತ್ಲೂ ಆ ಮಾತು ಅವನಿಗ್ಹೇಳು. ನಿಮ್ಮನೇಗೆ ಶುಭನ್ನ ಯಾವಾಗ ಕಳಿಸಿಬಿಟ್ಟೆನೋ ಅವ್ಳು

ನಿಮ್ಮ ಆಸ್ತಿ ಆಗೋದಿಲ್ಲ....ನನ್ನಿಷ್ಟ್ಯಲಿ ಏನಿದೆ ?" ನಂದಿನಿ ಕೊಂಚ ಖಾರವಾಗೇ ಹೇಳಿದಳು.

ರಘು ನಿರುತ್ತರವಾಗಿ ರೂಮಿನ ಬಾಗಿಲ ಬಳಿ ನಿಂತು ಪರದೆ ತೆಗೆದು ಮತ್ತೆ ಇಣುಕಿ ನೋಡಿದ. ಶುಭ ನಿಶ್ಚೇಷ್ಟೆಯಲ್ಲಿದ್ದಳು. ಕುಂದಿದ್ದ ದೇಹದಲ್ಲಿ ಕಾಣುತ್ತಿದ್ದುದು ಉಬ್ಬಿದ ನಡುಭಾಗ ಮಾತ್ರ. ಯಾವ ಸುಖಕ್ಕಾಗಿ ಈ ಮಗು ಈಗ ಬರಬೇಕಿತ್ತು ? ಜಿಗುಪ್ಸೆಯಿಂದ ಮುಖ ತಿರುಗಿಸಿ ನಂದಿನಿಯ ಪಕ್ಕದಲ್ಲಿ ಬಂದು ನಿಂತನು. ಇಬ್ಬರಿಗೂ ಮಾತು ಬೇಡವಾಗಿತ್ತು. ವ್ಯಾಕುಲ ದಿಂದ ನಂದಿನಿಯ ಸ್ವರ, ಪಶ್ಚಾತ್ತಾಪದಿಂದ ರಘುವಿನ ಹೃದಯ ಎರಡೂ ಹೆಪ್ಪುಗಟ್ಟಿ ಮೌನವಾಗಿದ್ದವು. ಎಷ್ಟು ಹೊತ್ತು ಮೌನಗರ್ಭದಲ್ಲಿ ಸಂಕುಚಿತ ರಾಗಿ ಕುಳಿತಿದ್ದರೋ ಇಬ್ಬರಿಗೂ ತಿಳಿಯದು.

ಕಾಲಿನ ಶೂಸಿನ ಶಬ್ದ ಹತ್ತಿರ ಕೇಳಿದಾಗಲೇ ತಲೆ ತಗ್ಗಿಸಿ ಕುಳಿತಿದ್ದ ರಘು ತಲೆಯೆತ್ತಿದ್ದ. ನಂದಿನಿ ಗಡಬಡಿಸಿ ಎದ್ದು ನಿಂತದ್ದು. ಆದರೆ ಬಂದವನು ರವಿಯಾಗಿರಲಿಲ್ಲ. ಬಂದವಳು ಹೆಡ್ ನರ್ಸ್. "ಇಲ್ಲಿರೋ ಪೇಶೆಂಟ್ ಶುಭಾ ಹಸ್ಬೆಂಡ್ ನೀವೇನಾ ?" ರಘುವನ್ನು ಪ್ರಶ್ನಿಸಿದಾಗ ರಘು ತತ್ತರಿಸಿ ಎದ್ದು ನಿಂತನು. ಗಂಟಲಲ್ಲಿ ಸ್ವರ ಹೊರಡದಾಯಿತು. ನಂದಿನಿ ಏನೋ ಹೇಳಲು ಬಾಯಿ ತೆರೆದುದು ಹಾಗೇ ಉಳಿಯಿತು. ನರ್ಸ್ ಬೆನ್ನು ತಿರುಗಿಸಿ ನಿಂತು ಅವರುತ್ತರ ಕಾಯದೇ "ಡಾಕ್ಟರ್ ಕರೀತಾ ಇದ್ದಾರೆ.... ಡಿಕ್ಲರೇಷನ್ ಸೈನ್ ಮಾಡಬೇಕಂತ ..." ಎಂದು ಹೇಳಿ ಡಾಕ್ಟರ್ ಕನ್ಸಲ್ಟಿಂಗ್ ರೂಮಿನತ್ತ ಹೆಜ್ಜೆ ಹಾಕಿದಳು.

ರಘು ನಂದಿನಿಯ ಮುಖ ನೋಡಿದನು. ಇಬ್ಬರ ಯೋಚನೆಯೂ ಒಂದಾಗಿತ್ತು. ರವಿಯೇಕೆ ಇನ್ನೂ ಬರಲಿಲ್ಲ ? ಅವನಿಲ್ಲದೇ ಶುಭನನ್ನು ಆಪರೇಷನ್ ಥಿಯೇಟರಿಗೆ ಕಳಿಸಬಹುದೇ ? "ನಂದಿನಿ, ನಾನು ಮನೆಗೆ ಫೋನ್ ಮಾಡಿ ಕೇಳಲಾ ರವಿ ಬಂದಿದ್ದಾನಾ ಅಂತ?" ರಘು ಆತಂಕದಿಂದ ಮೆಲ್ಲನುಸುರಿ ದಾಗ ಅವ ನೆವೆ ಏರಿಳಿಯುತ್ತಿತ್ತು. ಉಸಿರು ಬಿಸಿಯಾಗಿತ್ತು.

ನಂದಿನಿಯ ಹಣೆಯಲ್ಲಿ ತೆರೆಗಳು ಮೂಡಿದವು ಕಣ್ಣಲ್ಲಿ ಮೂಕ ನೋವು ಆವರಿಸಿತು. ತುಟಿಗಳು ನಡುಗಿದವು ಅವಳು ರಘುವಿನ ಎರಡು ಕೈಗಳನ್ನು ತನ್ನ ಹಣೆಗೊತ್ತಿಕೊಂಡು ಎದೆಗೊತ್ತಿ ಕೊಂಡಳು. "ರಘು, ಇಂದು

ನೀನೇ ಶುಭನನ್ನು ನನಗೆ ಉಳಿಸಿಕೊಡಬೇಕು. ಅದಕ್ಕೇ ದೇವರು ನಿನ್ನನ್ನು ಇಂದೇ ಊರಿಗೆ ಬರುವಹಾಗೆ ಮಾಡಿದಂತೆ ಕಾಣಿಸುತ್ತೆ. ನನ್ನ ಶುಭನನ್ನು ನನಗೆ ಉಳಿಸಿಕೊಡು. ರವಿಗಾಗಿ ಕಾಯುವುದು ಬೇಡಾ !" ನಂದಿನಿಯ ಕಣ್ಣುಗಳು ತುಂಬಿ ನೀರು ಕೆನ್ನೆಗೆ ಇಳಿದು ರಘುವಿನ ಮುಂಗೈ ಮೇಲುರುಳಿತು. ರಘುವಿನ ಗಂಟಲುಬ್ಬಿ ಬಂದು ಕಣ್ಣಲ್ಲಿ ನೀರು ಜಿನುಗಿತು. ಹೌದು, ಎಂದೋ ಆ ಕೆಲಸ ತಾನು ಮಾಡಬೇಕಿತ್ತು. ನಂದಿನಿಯ ಶುಭನಲ್ಲ. ಅವಳು ತನ್ನ ಶುಭ ! ಉಗುಳು ನುಂಗುತ್ತಾ ನಂದಿನಿಯ ಕೈ ಅದುಮಿ ಭರವಸೆಯಿತ್ತು, ತನ್ನ ಕಣ್ಣೀರು ಅವಳಿಗೆ ಕಾಣದಿರಲೆಂದು ಮುಖ ತಿರುಗಿಸಿದನು.

ದೂರದಲ್ಲಿ ಹೆಡ್ ನರ್ಸ್ ಮತ್ತೆ ಅವರತ್ತ ಬರುತ್ತಿರುವುದು ಕಂಡು ರಘು ಅವಳತ್ತ ಹೆಜ್ಜೆ ಹಾಕಿದನು. ಅವನ ಮೈ ಸಣ್ಣಗೆ ನಡುಗುತ್ತಿತ್ತು. ಇದ್ದಕ್ಕಿದ್ದಂತೆ ಮೈಯಲ್ಲಿ ಚಳಿ ಮೂಡಿತು. "ಬೇಗ ಸೈನ್ ಮಾಡ್ಬಿಡಿ. ಅವರು ತುಂಬಾ ಬ್ಲೀಡ್ ಆಗ್ತಾ ಇದ್ದಾರೆ. ಆಮೇಲೆ ಆಪರೇಷನ್ ಕಷ್ಟ ಆಗುತ್ತೆ. ಮೊದ್ಲೆ ಅವರು ಬಹಳ ವೀಕಾಗಿದ್ದಾರೆ. !" ರಘು ಅವಳು ತೋರಿದ ರೂಮಿನೊಳಗೆ ಕಾಲಿಟ್ಟನು. ಧೀರವಾದ ಎತ್ತರ ನಿಲುವು, ಗಂಭೀರ ಮುಖ, ಉಟ್ಟಿದ್ದ ಬಿಳಿಯ ಸೀರೆ. ಕತ್ತಿನಲ್ಲಿದ್ದ ಸ್ಟೆತಾಸ್ಕೋಪು-ಒಮ್ಮೆಗೇ ಭಯ, ಭಕ್ತಿ ಹುಟ್ಟಿಸುತ್ತಿದ್ದ ಆ ಅಚಲ ದೃಷ್ಟಿ ಮಧ್ಯವಯಸ್ಸಾದರೂ, ಕೊಂಚ ಸ್ಥೂಲವಾದರೂ ಚಟುವಟಿಕೆ ಎತ್ತಿ ತೋರುತ್ತಿದ್ದ ಕೈ ಕಾಲು ಒಮ್ಮೆಗೇ ಅವನಿಗೆ ಈಕೆ ಬಹಳ ಬುದ್ಧಿವಂತ, ಒಳ್ಳೆಯ ಪರಿಣಿತ ಡಾಕ್ಟರೆನಿಸಿತು. ರಘು ಅವರಿಗೆ ಕೈ ಮುಗಿದನು. "ನಾನು ರವಿನಂದನ್‌ನ ಬ್ರದರ್ರು...ಅವರಿನ್ನೂ ಬಂದಿಲ್ಲ. ಯಾಕೋ ತಿಳೀಲಿಲ್ಲ...ಬೇಕಾದರೆ ನಾನು ಡಿಕ್ಲರೇಷನ್ ಸೈನ್ ಮಾಡ್ತೀನಿ, ಅವನೇನೂ ಅಬ್ಜೆಕ್ಟ್ ಮಾಡುವುದಿಲ್ಲ...."

ಆಕೆಯೂ ಕೈ ಮುಗಿದರು. "ಕೂತ್ಕೊಳ್ಳಿ, ನಿಮ್ಮನ್ನ ಇವೇ ಮೊದಲ್ನೇ ಸಲ ನೋಡ್ತಾ ಇರೋದೂ....ನಿಮ್ಮನ್ನ ಕಂಡದ್ದು ಬಹಳ ಸಂತೋಷ. ರವೀನೂ ನಾನೂ ಇಂಗ್ಲೆಂಡ್‌ನಲ್ಲಿ ಇಂಡಿಯನ್ ಕ್ಲಬ್‌ನಲ್ಲಿ ಬಹಳ ಸ್ನೇಹಿತರಾಗಿದ್ದೆವು. ಆಗ ಅವ್ರು ನಿಮ್ಮ ವಿಷಯ ಆಗಾಗ ಹೇಳುತ್ತಿದ್ದ ನೆನಪು ... ಯಾಕೆ ರವಿ ಬರ್ಲಿಲ್ಲಾ ! ಅವ್ರು ಯಾವಾಗ್ಲೂ ಮಿಸೆಸ್‌ನ ಕಂಡ್ರೆ ಒದ್ದಾಡ್ತಾ ಇದ್ರು. ಏನೋ ಅಪ್‌ಸೆಟ್ ಆಗಿರ್ಬೇಕೂ....!"

ರಘು ಅವರೆದುರಿಗಿದ್ದ ಕುರ್ಚಿಯಲ್ಲಿ ಕುಳಿತನು. "ನೋಡಿ, ಆಕೆ ತುಂಬಾ ವೀಕಾಗಿದ್ದಾರೆ. ತುಂಬಾ ಎನಿಮಿಕ್ ಕೂಡ. ಮೂರ್ಸಲ ಪ್ರೆಗ್ನೆನ್ಸೀಸ್ ಟರ್ಮಿನೇಟ್ ಆಗೋವಾಗ್ಲೂ ತುಂಬಾ ಹೆಮರೇಜ್ ಆಗಿ ಬಹಳ ಎನಿಮಿಕ್ ಆಗಿದ್ದಾರೆ. ಅವ್ರು ಲಾಸ್ಟ್ ಟೈಂ ಬಂದಾಗ್ಲೇ ರವಿಗೆ ಹೇಳಿದ್ದೆ. ಸಧ್ಯಕ್ಕೆ ಮಗು ಬೇಡಾ ಅಂತ. ಅವ್ರು ನೋಡ್ದಿಂದ್ಲೂ ನಂಗೆ ತಿಳ್ದಿರೋ ಹಾಗೆ ತುಂಬಾ ಇಂಪೆಚ್ಯುಯಸ್. ಈಗ ಸ್ಲೋ ಆಗಿ ಸಿಂಕ್ ಆಗ್ತಾ ಇದ್ದಾರೆ. ಅವಷ್ಟು ಬೇಗ ಬೇಬೀನ ತೆಗೆದುಬಿಟ್ವಿ, ಪಾಪ ಬೇಬಿಗೆ ಫುಲ್ ಟರ್ಮ್ ಆಗಿಲ್ಲ. ಅದು ಸರ್ವೈವ್ ಆಗುತ್ತೋ ಇಲ್ವೋ ಹೇಳ್ಲಾರೆ...ಮುಂದೆ ಅವರಿಗೆ ಪ್ರೆಗ್ನೆನ್ಸೀಸ್ ತರ್ಬಾರ್ದು. ಇಲ್ದಿದ್ರೆ ಅವ್ರು ಕ್ರಾನಿಕ್ ಎನಿಮಿಯ ಪೇಶೆಂಟ್ ಆಗೋಗ್ತಾರೆ. ಅವಕ್ಕೇ ರವೀನೇ ಬಂದಿದ್ರೆ ಚೆನ್ನಾಗಿರ್ತಿತ್ತು. ಸ್ಟರಲೈಸ್ ಮಾಡ್ಬಿಡ್ತಿದ್ದೆ, ರಿಸ್ಕ್ ಬೇಡಾಂತ...!" ಡಾಕ್ಟರ್ ಹಣೆಯ ಮೇಲೆ ಕೈಯಾಡಿಸಿಕೊಂಡು ಯೋಚನಾ ಮಗ್ನರಾದರು. ರಘುವಿನ ಎದೆ ಏರಿಳಿಯುತ್ತಿತ್ತು. ಶುಭ ಅಷ್ಟು ಕ್ಷಮಿಸಿ ಹೋದಳೆ? ಆರೋಗ್ಯ ಚಿಮ್ಮುತ್ತಿದ್ದ ಮುಖ ಇದ್ದಕ್ಕಿದ್ದಹಾಗೇ ಬತ್ತಿ ಹೋದಂತಾಗಿದೆಯಲ್ಲಾ! ರವಿಯೇಕೆ ಇವಳನ್ನು ಇಷ್ಟು ನಿರ್ಲಕ್ಷಿಸಿದ? ಅವಳನ್ನು ಕಂಡರೆ ಪ್ರೀತಿಯಿಲ್ಲವೇ? ಎಲ್ಲಾ ಕೆಲಸದ ಜವಾಬ್ದಾರಿಯೂ ಅವನ ತಲೆಯ ಮೇಲೆ ಬಿದ್ದು ಅವನಿಗೆ ಅವಳತ್ತ ಗಮನಹರಿಸಲು ಆಗಲಿಲ್ಲವೇ? "ನೋಡಿ, ಆಗ್ಲೇ ಹನ್ನೆರಡು ಗಂಟೆಯಾಗಿ ಐದು ನಿಮಿಷ ಆಗೋಯ್ತು. ಲೆಟ್ ಅಸ್ ಡಿಸೈಡ್. ನಿಮ್ಮ ಜೊತೆ ಯಾರು ಬಂದಿದ್ದಾರೆ?" ಡಾಕ್ಟರ್ ಎದ್ದು ನಿಂತರು.

"ನನ್ನ ಕಸಿನ್, ಮಿಸಸ್ ರವಿನಂದನ್‌ರವರ ಅತ್ತಿಗೆ ಬಂದಿದ್ದಾರೆ.' ರಘುವೂ ಎದ್ದು ನಿಂತನು.

'ನರ್ಸ್!' ನಿಂತಲ್ಲಿಂದಲೇ ಡಾಕ್ಟರು ಕೂಗಿದರು. ಡಾಕ್ಟರ ಕೂಗು ಕೇಳುತ್ತಲೇ ರೂಮಿನ ಹೊರಗೆ ನಿಂತಿದ್ದ ನರ್ಸ್ ಒಳಗೆ ಬಂದಳು.

"ನೋಡು....ಮಿಸೆಸ್ ಶುಭಾ ರವಿನಂದನ್, ರೂಂ ನಂ ಆರರಲ್ಲಿರುವ ಪೇಶೆಂಟ್ ರಿಲೇಟೀವ್ ಒಬ್ಬರಿದ್ದಾರೆ, ಕರೆದುಕೊಂಡು ಬಾ" ಡಾಕ್ಟರ್ ರಘುವಿನ ಮುಂದೆ ರುಜು ಹಾಕಬೇಕಾಗಿದ್ದ ಕಾಗದವನ್ನು ಹಿಡಿದರು. ಅದನ್ನು ಕೈಗೆ ತೆಗೆದುಕೊಂಡಾಗ ಅವನ ಕೈ ನಡುಗುತಿತ್ತು. ಹೊರಗೆ ಹೊರಟ ನರ್ಸ್

ನಂದಿನಿಯನ್ನು ಕರೆದು ತರುವುದನ್ನೇ ಕಾಯುತ್ತಿದ್ದರು ಡಾಕ್ಟರು. ಆ ಕಾಗದ ದಲ್ಲಿದ್ದ ಅಕ್ಷರಗಳ ಮೇಲೆ ಕಣ್ಣಾಡಿಸಿದ. ಆ ಡಿಕ್ಲರೇಷ‌ ಓದುತ್ತಾ, ಓದುತ್ತಾ ಅವನ ಕಣ್ಮುಂದೆ ಶುಭನ ಸೊರಗಿದ ಮುಖ ತೇಲಿ ಬಂತು. ತಕ್ಷಣ ಕಾಗದ ವನ್ನು ಟೇಬಲ್ಲಿನ ಮೇಲಿಟ್ಟು ಪೆನ್ನಿಗಾಗಿ ಜೇಬು ತಡಕಾಡಿದನು. ಅದನ್ನು ಗಮನಿಸಿದ ಡಾಕ್ಟರ್ ಟೇಬಲ್ಲಿನ ಡ್ರಾಯರಿನ ಒಳಗಿದ್ದ ಪೆನ್ನನ್ನು ಅವನ ಕೈಗಿತ್ತರು.

ರಘು ಪೆನ್ನನ್ನು ಕೈಗೆ ತೆಗೆದುಕೊಂಡಾಗ ನಂದಿನಿ ನರ್ಸಿನೊಡನೆ ಬಂದಳು.

"ನಮಸ್ಕಾರ ಡಾಕ್ಟರ್...." ನಂದಿನಿ ಕೈ ಮುಗಿದಳು.

"ನಮಸ್ಕಾರ....ಮೊದಲು ಒಂದೆರಡು ಸಲ ನಿಮ್ಮನ್ನು ನೋಡಿದ್ದೇನೆ. ಲಾಸ್ಟ್ ಟೈಂ ಶುಭ ಬಂದಾಗ ನಿಮ್ಮನ್ನು ನೋಡಿದ ನೆನಪಿಲ್ಲ ಶುಭನ ಹಸ್ಬೆಂಡ್ ಇನ್ನೂ ಬರ್‍ಲಿಲ್ವಲ್ಲಾ....ಅವರ ಬ್ರದರ್ ಕೈಲಿ ಸಿಗ್ನೇಚರ್ ತೊಗೊಂಡು ಆಪೇರೇಷ‌ ಮಾಡಿಬಿಡೋಣಾ ಅಂತ. ಯಾಕಂದ್ರೆ ಈ ಕೇಸಾದ ಮೇಲೆ ಮಧ್ಯಾಹ್ನ ಎರಡು ಗಂಟೆಯ ಮೇಲೆ ಅನೇಕ ಕೇಸುಗಳಿವೆ. ನಂಗೆ ಡಿಲೇ ಮಾಡೋಕೆ ಇಷ್ಟವಾಗೋಲ್ಲ...." ಡಾಕ್ಟರ್ ಬಗ್ಗಿ ರುಜು ಮಾಡು ತ್ತಿದ್ದ ರಘುವಿನತ್ತ ನೋಡಿದರು.

"ಹಾಗೇ ಮಾಡಿ ಡಾಕ್ಟರ್....ನಾವೆಲ್ಲಾ ಶುಭನ ಹಿತೈಷಿಗಳೇ....!" ನಂದಿನಿ ಮೆಲ್ಲನುಸುರಿದಳು.

ನಿದ್ದೆಯ ಮಂಪರಿನಲ್ಲಿದ್ದ ಶುಭನನ್ನು ಸ್ಟ್ರೆಚರಿನ ಮೇಲೆ ಮಲಗಿಸಿಕೊಂಡು ಕರೆಯೊಯ್ಯುವಾಗ ನಂದಿನಿ ಅವಳ ತಲೆ ಸವರಿದಳು. ಕೆನ್ನೆಗೆ ಬಾಗಿ ತುಟಿ ತಾಗಿಸಿ "ಶುಭಾ....ನೋಡು, ನಾನು....ನಂದಿನಿ ಬಂದಿದ್ದೇನೆ...." ಎಂದು ಉಸುರಿದಾಗ ನರ್ಸ್ ನಂದಿನಿಯನ್ನು ತಡೆದಳು. "ಶ್....ಎಬ್ಬಿಸಬೇಡಿ, ಬೇಕೆಂತಲೇ ನಾವು ನಿದ್ದೆಗೆ ಮೆಡಿಸನ್ ಕೊಟ್ಟಿದ್ದೇವೆ."

ನಂದಿನಿಯ ಸ್ಪರ್ಶದಿಂದ ಕೊಂಚ ಕಣ್ತೆರೆದ ಶುಭ ಅವಳತ್ತ ಅರೆಮುಚ್ಚಿದ ಕಣ್ಣಿನಿಂದ ನೋಡಿದಳು. ಅವಳ ಪಕ್ಕದಲ್ಲೇ ಆತಂಕ, ಆತುರಗಳಿಂದ ತುಂಬಿದ ರಘುವಿನ ಮುಖವೂ ಕಣ್ಣಿಗೆ ಬಿದ್ದಾಗ ಬಲವಂತವಾಗಿ ಕಣ್ಣಗಲಿಸಿ ನೋಡಲು ಪ್ರಯತ್ನಿಸಿದಳು. ಅದನ್ನು ಕಂಡ ರಘು ಅವಳ ಮುಖದೆಡೆಗೆ

ಬಾಗಿ ಮೆಲ್ಲನುಸುರಿದನು. "ಹೌದು, ಶುಭ ...ನಾನೇ ...ಬಂದಿದ್ದೀನಿ." ಆಪರೇಷನ್ ಥಿಯೇಟರಿನ ಬಾಗಿಲು ಮುಚ್ಚಿ ಹತ್ತು ನಿಮಿಷಗಳಾದ ಮೇಲೆ ರವಿ ಏದುತ್ತಾ ಬಂದನು. ಅವನ ಬಟ್ಟೆಯೆಲ್ಲ ಅಸ್ತವ್ಯಸ್ತ. ದುಗುಡ ತುಂಬಿದ ಮುಖ. ಮೈ ಮೇಲೆ ಅಲ್ಲಲ್ಲಿದ್ದ ಕಾರಿನ ಎಣ್ಣೆಯ ಕಲೆಗಳು....ರಘುವನ್ನು ಕಾಣುತ್ತಲೇ ಓಡಿ ಬಂದು ಅವನನ್ನು ತಬ್ಬಿ ಹಿಡಿದನು.

"ನನ್ನ ಮಗನೇ, ಇಷ್ಟು ದಿನ ಎಲ್ಲಿ ಹಾಳಾಗಿಹೋಗಿದ್ಯೋ ?....ಅಪ್ಪಾ ಹೇಳೋತ್ಲೂ ಕಾರು ಹಾಗೇ ತಿರುಗಿಸ್ಕೊಂಡು ಬಂದ್ಬಿಟ್ಟೆ ..." ರವಿ ರಘುವನ್ನು ತನ್ನೆದುರು ಹಿಡಿದು ನಿಲ್ಲಿಸಿ ಕಣ್ತುಂಬಾ ನೋಡಿದ.

"ಲೋ...ಬಹಳ ಇಳಿದುಹೋಗಿದ್ದಿಯ್ಯೋ. ಯೂ ಲುಕ್ ಟ್ವೆಂಟಿ ಇಯರ್ಸ್ ಓಲ್ಡರ್...ಆಗ್ಲೇ ನೋಡು, ಹಣೆಯ ಪಕ್ಕದಲ್ಲಿ ಎಷ್ಟು ಬಿಳಿ ಕೂದಲು ....ಐ ಮಿಸ್ಡ್ ಯೂ ಲೈಕ್ ಹೆಲ್...." ಪ್ರೇಮಾದರ ತುಂಬಿದ ಕಣ್ಣುಗಳಿಂದ ಅವನನ್ನೀಕ್ಷಿಸಿದನು. ರಘುವಿಗೂ ಕವಿದ ಮೋಡವೆಲ್ಲ ಸರಿದು ಇದ್ದಕ್ಕಿದ್ದ ಹಾಗೆ ಎಳೆಬಿಸಿಲು ಬಂದಂತಾಯಿತು.... "ರವಿ....ರವಿ....ನಾನೂ ಬಹಳ ಮಿಸ್ ಮಾಡ್ದೆ....ನೋಡವೆ-ಅದಕ್ಕೇ ಇದ್ದಕ್ಕಿದ್ದ ಹಾಗೆ ಹೇಳದೇ ಕೇಳದೇ ಬಂದ್ಬಿಟ್ಟೆ. ....ನೀನು, ಹಾಗೇ ಇದ್ದೀಯಾ ನೋಡು ಒಂದು ಸ್ವಲ್ಪಾನೂ ಬದಲಾಯಿಸಿಲ್ಲ-ತಲೇ ಕೂದಲು ಮಾತ್ರ ಅಲ್ಲಲ್ಲಿ ಉದುರಿದ ಹಾಗೇ ಕಾಣತ್ತೆ ಅಷ್ಟೆ...." ಅವರಿಬ್ಬರಿಗೂ ತಾವಿರುವ ಸ್ಥಳ, ಪರಿಸರ ಮರೆತಂತಾಗಿತ್ತು. ದೂರದಲ್ಲಿ ಕಣ್ಣೆಲ್ಲಾ ಆಪರೇಷನ್ ಥಿಯೇಟರಿನತ್ತ ಮಾಡಿಕೊಂಡು ಕುಳಿತಿದ್ದ ನಂದಿನಿ ಮೆಲ್ಲನೇ ಕೆಮ್ಮಿದಾಗ ಇಬ್ಬರೂ ಎಚ್ಚೆತ್ತರು.

"ನಂದಿನಿ ...ಐ ಆಮ್ ವೆರಿ ಸಾರಿ....ನಿಂಗೆ ತಿಳ್ಸೋಕೇ ಆಗಲಿಲ್ಲ. ಬೆಳಿಗ್ಗೆ ಶುಭ ನಂಗ ಕೈಕಾಲೇ ತೋಚದ ಹಾಗೆ ಮಾಡಿಬಿಟ್ಳು."

ರಘು ದೂರ ಸರಿದು ಅಣ್ಣನನ್ನು ತೀಕ್ಷ್ಣವಾಗಿ ನೋಡಿದನು. ಇವನು ರವಿಯೇ ? ಅಲ್ಲಿಂದ ಏದುತ್ತಾ ಬಂದರೂ ಶುಭಳ ವಿಚಾರ ಏನನ್ನೂ ವಿಚಾರಿಸಲಿಲ್ಲವಲ್ಲ ! ಇವನಿಗೆ ಅವಳ ವಿಷಯದಲ್ಲಿ ಯಾವ ಆಸಕ್ತಿಯೂ ಇರುವ ಮಟ್ಟಿಗೆ ಕಾಣಲಿಲ್ಲ. ರವಿಗೆ ಶುಭನನ್ನು ಕಂಡರೆ ಆದರವಿಲ್ಲ. ಬಿಸಿಯೆಲ್ಲಾ ಒಮ್ಮೆಗೇ ಇಳಿದುಹೋಗಿರಬೇಕು-ಮರಳು ತುಂಬಿದ್ದ ಬೊಗಸೆಯಿಂದ ನೀರು ಸ್ವಲ್ಪ ಸ್ವಲ್ಪವಾಗಿ ತೊಟ್ಟಿಕ್ಕಿ ಎಲ್ಲಾ ಸುರಿದುಹೋಗುವಂತೆ ಇವರ ಬದುಕಿನಲ್ಲೂ

ಒಲವು ಹಸಿ ಹಸಿಯಾಗಿ ತೊಟ್ಟಿಕ್ಕಿಹೋಗಿವೆಯೇ ? ರಘು ಕೊಂಚ ಅಸಮಾಧಾನದಿಂದಲೇ ಕೇಳಿದ.

"ಅವೆಲ್ಲಾ ಸರಿಯಯ್ಯ. ಇಷ್ಟು ಹೊತ್ತು ಎಲ್ಲಿ ಹೋಗಿದ್ದೀ ? ಹೆಂಡತಿ ಆಸ್ಪತ್ರೇಲಿರೋದೂ ಮರ್ತುಹೋಯ್ತಾ? ಎಷ್ಟು ಹೊತ್ತು ಬರೋದೂ? ನಾನೇ ಡಿಕ್ಲರೇಷನ್ ಸೈನ್ ಮಾಡಿಯಾಯ್ತು."

ರವಿ ತಲೆ ಕೊಡವಿಕೊಂಡನು. "ಅಯ್ಯೋ ಅದೆಲ್ಲ ದೊಡ್ಡ ಕತೆ. ಅವಳಿಗೆ ಈಗಲೇ ಆಪರೇಷನ್ ಮಾಡ್ತಾರೇಂತ ಗೊತ್ತಾದ ಮೇಲೆ ನಂದಿನಿಗೆ ತಿಳ್ಸಿ, ಅಪ್ಪಂಗೂ ತಿಳ್ಸಿ ಇಬ್ರನ್ನೂ ಕರ್‍ಕೊಂಡು ಬರೋಣಾಂತ ಹೋದೆ. ಮಧ್ಯ ದಾರೀಲಿ ನನ್ನ ಕಾರು ಕೈ ಕೊಡ್ತು. ಬ್ಯಾಕ್ ವೀಲ್ ಫ್ಲಾಟ್ ಆಗಿ, ಕಾರನ್ನ ಅಲ್ಲೇ ಸರಿಮಾಡೋಕೆ ಆಗ್ದೇ ನನ್ನ ಫ್ರೆಂಡ್ ಗುರುಗೆ ಫೋನ್ ಮಾಡಿ ಅವನ ಕಾರು ತೆಗೆದುಕೊಂಡು ಹೋಗಿ ಅಪ್ಪನ್ನ ಕರೆದೆ. ಅವರ್‍ಯಾಕೋ ತುಂಬಾ ನರ್ವಸ್ ಆಗಿದ್ರು...ಅವ್ರು ನೀನು ಬಂದ ಸಮಾಚಾರಾನೂ ಹೇಳಿದ್ರು. ನೀನು ಬಂದ್ಮೇಲ ನಂಗೆ ನಾಲ್ಕು ಕೈ ಬಂದ ಹಾಗೆ ಕಣಯ್ಯ..." ರವಿ ರಘುವಿನ ಹೆಗಲ ಮೇಲೆ ಕೈ ಹಾಕಿದ... "ನಂದಿನಿ ಮನೆಗೆ ಹೋದರೆ ಬೀಗ.... ಪಕ್ಕದ ಮನೆಯವರು ಹೇಳಿದರು ನೋಡು. ಇಲ್ಲಿಗೆ ಬಂದೆ....ಸ್ಪೇರ್ ಸ್ಟೆಪ್ನಿನ ಶೆಡ್‌ನಲ್ಲಿ ಹಾಕ್ಬಿಟ್ಟು, ನನ್ನ ಕಾರು ಕೈ ಕೊಡ್ತು ನೋಡು....ನಂಗೆ ಕೈಕಾಲೆ ಆಡಲಿಲ್ಲ. ಅಪ್ಪ ನೀನು ಶುಭನನ್ನು ನೋಡಲು ಹೋಗಿದ್ದಾನೇಂತ ತಿಳಿ ನೋತ್ಲೂ ನಂಗೆ ಅರ್ಧ ಜೀವ ಬಂದಹಾಗಾಯ್ತು. ಥ್ಯಾಂಕ್ಸ್. ನಂದಿನಿ, ನೀನು ಇಲ್ಲಿರ್‍ಬೇಕಾದ್ರೆ ನಂಗೇನು ಯೋಚನೆ....ಅಂದ್ಹಾಗೆ ಶುಭ ಹುಷಾರಾಗಿದ್ಲು ತಾನೇ...ಆಪರೇಷನ್ ಆಗಿರೋದ್ರಿಂದ ವಾಸಿ....! ಆ ಪೆಯಿನ್, ಆ ಕೂಗಾಟ, ಕಿರಿಚಾಟ ನಾನು ಕೇಳ್ಲಾರೆ ರಘೂ....ಸಧ್ಯ ಲೆಟ್ ಹರ್ ಫಿನಿಷ್ ದಿಸ್ ಆಫ್....ನಂಗೆ ಅವಳ ಜೊತೆ ಆಸ್ಪತ್ರೆಗೆ ಅಲೆದೂ ಅಲೆದೂ ನಾಕಾಗಿಹೋಗಿದೆ..."

ರಘು ನಂದಿನಿಯತ್ತ ತಿರುಗಿ ನೋಡಿದ. ಆವಳೆತ್ತಲೋ ನೋಡುತ್ತಿದ್ದಳು. "ನಂದಿನಿ ...ಇಲ್ಲಿ ಬಾ." ರಘು ಕರೆದನು. "ರವಿ ಶುಭ ಹುಷಾರಾಗಿದ್ಲಾ ಅಂತ ಕೇಳ್ತಾ ಇದ್ದಾನೆ. ನೀನೇ ಹೇಳು ...ನಾನು ಹೊರಗೆ ಹೋಗಿ ಒಂದು ಸಿಗರೇಟ್ ಎಳೆದು ಬರ್‍ತೀನಿ..." ರಘು ಅವರಿಬ್ಬರಿಂದ ದೂರ ಸರಿದ.

ಆವರಣದಲ್ಲಿ ಸಿಗರೇಟೊಂದನ್ನು ಹತ್ತಿಸಿಕೊಂಡಾಗ ರಘುವಿನ ಕೈ ಕೊಂಚ ತಡೆಯಿತು. ಬೆಂಕಿಯ ಕಡ್ಡಿಯ ತುದಿಯಲ್ಲಿ ಉರಿಯುತ್ತಿದ್ದ ಬೆಂಕಿಯಂತೆ ತನ್ನ ಮನಸ್ಸಲ್ಲಿ. ತನಗೆ ಬೇಕಾದವರಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ. ಇವನ್ನು ಆರಿಸುವ ಬಗೆ? ಇವನ್ನು ಊದಿ ಆರಿಸಬಹುದು. ನಂದಿನಿ, ರವಿಯರ ಮಧ್ಯೆ ಮೊದಲಿನ ಸಲಿಗೆಯಿಲ್ಲ. ರವಿ ಶುಭರ ಮಧ್ಯೆ ಒಲವಿನ ಲೋಪ, ತಂದೆಯ ನೀರಸ ಪ್ರವೃತ್ತಿ...ಹತ್ತಿ ಉರಿಯುತ್ತಿದ್ದ ಕಡ್ಡಿಯನ್ನು ಸಿಗರೇಟಿಗಿಟ್ಟುಕೊಂಡು ಅನಂತರ ಕಡ್ಡಿ ಕೊಡವಿ ಆರಿಸಿದ.

ಊರು ಬಿಟ್ಟು ಹೊರಟಾಗಿನಿಂದ ಮನದಲ್ಲಿ ಕೊರೆಯುತ್ತಿದ್ದ ಒಂದು ಬಗೆಯ ಅಸ್ಫುಟ ಅನುಭವದಿಂದಲೂ, ಬೆಳಿಗ್ಗೆ ಊರಿಗೆ ಬಂದಾಗಿನಿಂದ ಒಂದೊಂದಾಗಿ ಕಣ್ಣಿಗೆ ಕಾಣುತ್ತಿದ್ದ ಬೇಸರ ತರಿಸುವ ಸಮಸ್ಯೆಗಳಿಂದಲೂ ಅವನಿಗೆ ಸಣ್ಣಗೆ ತಲೆನೋಯುತ್ತಿತ್ತು. ಸಿಗರೆಟು ಸೇದಿ ಅರ್ಧಕ್ಕೇ ಎಸೆದು ಆಸ್ಪತ್ರೆಯಿಂದ ಕೊಂಚ ದೂರ ಹೊರಗೆ ನಡೆದು ರಸ್ತೆಯ ಬದಿಯಲ್ಲಿದ್ದ ಅಂಗಡಿಯೊಂದರಲ್ಲಿ ಒಂದು ಆಸ್ಪ್ರೋ ಕೊಂಡು ಮತ್ತೆ ಆಸ್ಪತ್ರೆಯತ್ತ ಹೆಜ್ಜೆ ಹಾಕಿದನು ಅವನಿಗೇಕೋ ಆಪರೇಷನ್ ಥಿಯೇಟರಿನ ಮುಂದೆ ನಿಲ್ಲುವ ಮನಸ್ಸಾಗಲಿಲ್ಲ. ರವಿ ಹೇಳಿದ ಹಾಗೆ ಅಕಸ್ಮಾತ್ತಾಗಿ ಶುಭ ಕೂಗಿದರೆ, ಕಿರಿಚಿದರೆ ತಾನು ಅದನ್ನು ತಾಳಬಲ್ಲೆನೇ? ತಾನೇಕೆ ಅಲ್ಲಿರಬೇಕು? ಶುಭ ಸಂಕಟ ಪಡುವುದನ್ನು ತಾನು ನೋಡಲಾರೆ. ತಾನೇಕೆ ಕಾರನ್ನು ರಿಪೇರಿಗೆ ಕೊಟ್ಟಿರುವನಲ್ಲಿಗೆ ಹೋಗಬಾರದು? ಹೋಗುವುದಕೊಂದು ನೆಪ ಸಿಕ್ಕಹಾಗಾಯಿತು. ರವಿಗೆ ಓಡಾಟಕ್ಕೆ ಕಾರೂ ಸರಿ ಮಾಡಿಸಿಕೊಟ್ಟಂತಾಯಿತು....ಅವನು ಹೊರಗೇ ನಿಂತಿದ್ದುದನ್ನು ಕಂಡು ರಿಸೆಪ್ಷನಿಸ್ಟ್ ಬಳಿ ನಿಂತಿದ್ದ ನರ್ಸೊಬ್ಬಳು ಮುಗುಳ್ನಕ್ಕಳು.

"ಒಳಗೆ ಕೂತ್ಕೊಳ್ಳಿ. ಹೊರಗೆ ಬಿಸಿಲು ..."

ರಘು ಮನಸ್ಸಿಲ್ಲದ ಮನಸ್ಸಿನಿಂದ ಆಸ್ಪತ್ರೆಯೊಳಗೆ ಹೋಗಿ ವಿಸಿಟರ್ಸ್ ಕುಳಿತುಕೊಳ್ಳುವಲ್ಲಿ ಕುಳಿತುಕೊಂಡನು. ತಲೆಯೂ ವಿಪರೀತ ನೋಯುತ್ತಿತ್ತು. ಜೇಬಿನಲ್ಲಿದ್ದ ಆಸ್ಪ್ರೋ ನೆನಪಾಗಿ ಅವನು ನರ್ಸನ್ನು ಕೇಳಿದ

"ಒಂದು ಲೋಟ ನೀರು ಬೇಕಿತ್ತು ಸಿಸ್ಟರ್...."

'ಅಗೋ ಅಲ್ನೋಡಿ. ಲೆಫ್ಟ್ ಸೈಡ್ ಪ್ಯಾಸೇಜಿನಲ್ಲಿ ಡ್ರಿಂಕಿಂಗ್ ವಾಟರ್ ಇದೆ. ತಂದುಕೊಡಲೇ ?"

"ಬೇಡಾ, ಥ್ಯಾಂಕ್ಸ್. ನಾನೇ ತೊಗೋತೀನಿ."

ರಘು ಅಲ್ಲಿಂದ ಎದ್ದು ಲೋಟದಲ್ಲಿ ನೀರು ತೆಗೆದುಕೊಂಡು ಆಸ್ಪ್ರೋ ನುಂಗಿದ. ಮತ್ತೆ ಒಂದು ಲೋಟ ನೀರು ಕುಡಿದು ಮೊದಲಿನ ಸ್ಥಾನಕ್ಕೆ ಬಂದು ಕುಳಿತನು...ಅವನಿಗೆ ಓಡಾಡುತ್ತಿದ್ದ ನರ್ಸುಗಳು ತನ್ನ ಅವಸ್ಥೆ ನೋಡಿ ನಗುವರೋ ಏನೋ ಎಂಬ ಅಳುಕು. ಎದುರಿಗಿದ್ದ ಟೇಬಲ್ಲಿನ ಮೇಲೆ ಹರಡಿದ್ದ ಪುಸ್ತಕಗಳತ್ತ ಕಣ್ಣು ಹಾಯಿಸಿ ಯಾವುದೋ ಒಂದು ಮೆಡಿಕಲ್ ಮ್ಯಾಗಜೀನೊಂದನ್ನು ಕೈಗೆತ್ತಿಕೊಂಡನು. ಮುಖಕ್ಕೆ ಅಡ್ಡಲಾಗಿ ಹಿಡದು ಕುರ್ಚಿಗೊರಗಿ ಒಂದು ನಿಮಿಷ ಕಣ್ಮುಚ್ಚಿದನು. ಆಗಲೂ ಕಣ್ಮುಂದೆ ಶುಭಾ....ತಾನು ಮೊದಲ ಬಾರಿ ನೋಡಿದ ತುಂಟತನ ಒಸರುತ್ತಿದ್ದ ಯುವತಿ ಶುಭಾ...? ಎಷ್ಟು ಹೊತ್ತು ಹಾಗೇ ಕುಳಿತಿದ್ದನೋ ಅವನಿಗೇ ತಿಳಿಯದು. ನಂದಿನಿಯದನಿ. "ಎಲ್ಲೊ ಹೊರಟುಹೋಗಿದ್ದ್ಯೋಂತ ಅಂದ್ಕೊಂಡಿದ್ದೆ. ಇಲ್ಲೇ ಇದ್ಯಾ? ರವಿಗೆ ಮಗಳು ಹುಟ್ಟಿದ್ದಾಳಪ್ಪಾ ..." ಎಲ್ಲಿಂದಲೋ ಕೇಳಿ ಬಂದಂತಾಗಿ ಕಣ್ತೆರೆದನು. ಕೈಲಿದ್ದ ಪುಸ್ತಕ ಕೆಳಗೆ ಬಿತ್ತು. ನಂದಿನಿಯ ಮುಖ ಅರಳಿ ಕೊಂಡಿದೆ. ನಗು, ಸಂತಸವುಕ್ಕಿ ಹರಿಯುತ್ತಿದೆ "ಯಾಕೋ, ಹಾಗ ನೋಡ್ತೀ ? ಶುಭಂಗೆ ಹೆಣ್ಣು ಮಗು. ಮಗೂನ ತೊಳೆದು ತರ್ತಾರೆ. ಬಾ.... ರವಿನ್ನಂತೂ ಹಿಡಿಯೋರೇ ಇಲ್ಲ....ಸುದ್ದಿ ಹೇಳಿದ ನರ್ಸಿಗೆ ಜೇಬಿಗೆ ಕೈಹಾಕಿ ಎಷ್ಟು ದುಡ್ಡು ಬಂತೋ ಅಷ್ಟು ಸುರಿದುಬಿಟ್ಟ...."

ರಘು ಕೊಂಚ ಸಾವರಿಸಿಕೊಂಡು ಎದ್ದು ನಿಂತನು

"ಏನು ? ಶುಭಂಗೆ ಹೆಣ್ಣು ಮಗೂನೇ ?....ಶುಭ ಹೇಗಿದ್ದಾಳೆ ?"

"ಬಾಪ್ಪಾ, ಅವೆಲ್ಲಾ ಡಾಕ್ಟ್ರು ಬಂದು ಹೇಳ್ತೀಕೂ..." ನಂದಿನಿ ರಘು ನ್ನು ಕರೆದುಕೊಂಡು ಹೋದಳು ರಘುವಿಗೆಲ್ಲಾ ಕನಸಿನಂತಿತ್ತು. ಆಪರೇಷನ್ ಥಿಯೇಟರಿನ ಬಳಿ ಬಂದಾಗ ರವಿ ಡಾಕ್ಟರೊಡನೆ ಮಾತನಾಡುತ್ತಾ ಇದ್ದನು.

ಬನ್ನಿ. ಕಂಗ್ರಾಟ್ಸ್ ನಿಮಗೊಬ್ಬ ನೀಸ್. ಬಂದಿದ್ದಾಳೆ..." ಡಾಕ್ಟರ್ ರಘುವನ್ನು ಕಂಡು ಮುಗುಳ್ನಕ್ಕರು, "ರವಿ, ನಿಮ್ಮ ಬದ್ರರ್

ನಿಮಗಿಂತ ತುಂಬಾ ಹ್ಯಾಂಡ್ಸಮ್...." ರವಿ ಜೋರಾಗಿ ನಕ್ಕನು. "ಅವನು ಇನ್ನೂ ಒಬ್ಬಂಟಿಗ. ಲೆಟ್ ಹಿಮ್ ಮ್ಯಾರಿ ಯೂ, ವಿಲ್ ಸೀ ವ್ಹಾಟ್ ಹಾಪೆನ್ಸ್ ಟೂ ಹಿಸ್ ಹ್ಯಾಂಡ್ಸಮ್‌ನೆಸ್...."

ಅಷ್ಟರಲ್ಲಿ ನರ್ಸೊಬ್ಬಳು ಮಗುವನ್ನು ಕಂಬಳಿಯಲ್ಲಿ ಸುತ್ತಿಕೊಂಡು ಬಂದಳು. ನಂದಿನಿ ಕೈಯೊಡ್ಡಿ ಮಗುವನ್ನು ಎತ್ತಿಕೊಂಡಳು. ಮಗು ಕೆಂಪಗೆ ಮುದ್ದಾಗಿತ್ತು. ತಲೆ ತುಂಬ ಕೂದಲು. ಎದೆಯ ಮೇಲೆ ಮುಷ್ಟಿ ಬಿಗಿದು ಪುಟ್ಟ ಕೈಗಳನ್ನು ಇಟ್ಟು ಮಲಗಿದ್ದ ಮಗುವನ್ನು ಕಂಡು ರವಿ, ರಘು ಇಬ್ಬರೂ ಅವರತ್ತ ಬಗ್ಗಿ ನೋಡಿದರು.

"ಷೀ ಈಸ್ ಎ ವೆರಿ ಪ್ರೆಟ್ಟೀ ಗರ್ಲ್. ಚೆನ್ನಾಗಿ ಡೆವಲಪ್ ಆಗಿದ್ದಾಳೆ. ಒಂದೆರಡು ತಿಂಗಳು ಚೆನ್ನಾಗಿ ನೋಡಿಕೊಂಡರೆ ಸಾಕು. ದೆನ್ ಷಿ ವಿಲ್ ಬಿ ಆಲ್‌ರೈಟ್...." ಡಾಕ್ಟರು ಮಗುವನ್ನು ನೋಡುತ್ತಾ ಹೇಳಿದರು.

ನಂದಿನಿ ಮಗುವನ್ನೇ ನೋಡುತ್ತಾ ಮೈ ಮರೆತಿದ್ದಳು.

"ಎಲ್ಲಾ ಶುಭನ ಹಾಗೇ. ಕಣ್ಣು, ಮೂಗೂ, ಹುಬ್ಬು, ಬಾಯಿ, ತಲೆ ತುಂಬ ಕೂದಲು....ಎಲ್ಲಾನೂ ಅಷ್ಟೆ. ಅವಳು ಚಿಕ್ಕ ಮಗುವಾಗಿದ್ದಾಗ ತೆಗೆದ ಫೋಟೋ ಇದೆ ಅಲ್ಬಂನಲ್ಲಿ...."

ರವಿ ಮಗುವನ್ನೇ ದಿಟ್ಟಿಸಿ ನೋಡಿದ. ನಂದಿನಿ ಹೇಳಿದ ಹಾಗೆ ಮಗುವಿಗೇನೋ ತಲೆ ತುಂಬ ಕೂದಲು, ಮೂಗೂ ಕೊಂಚ ಉದ್ದ. ತುಟಿಗಳ ಆಕಾರವೂ ಹಾಗೇ... ಹೌದು, ಮಗುವಿಗೆ ಶುಭನ ಹೋಲಿಕೆಯಿದೆ. ಅವನಿಗರಿವಿಲ್ಲದೆಯೇ ಅವನ ಕೈಗಳು ಮಗುವಿನ ಕೆನ್ನೆ ಸವರಿತು. "ಯೆಸ್, ಷೀ ಈಸ್ ಎ ಪ್ರೆಟ್ಟೀ ಬೇಬಿ..." ಎಂದು ಮೆಲ್ಲನುಸುರಿದನು. ರವಿ ಮಗುವನ್ನು ಎತ್ತಿಕೊಳ್ಳಲು ಕೈ ನೀಡಿದಾಗ ನಂದಿನಿ ಗದರಿಕೊಂಡಳು. "ಸುಮ್ನಿರು.... ಮಗೂನ ಹಾಗೆಲ್ಲ ಒಡ್ಡೊಡ್ಡಾಗಿ ಎತ್ಕೋಬಾರ್ದು. ನಿಂಗೆ ಮಗೂನ ಎತ್ಕೋಳ್ಳೋಕೇ ಬರೋಲ್ಲ, ಸುಮ್ನಿರು."

ಡಾಕ್ಟರ್ ನಕ್ಕು "ಎಲ್ರೂ ಮಗೂ ಸುತ್ಲೂ ತುಂಬ್ಕೊಂಡ್ರೇ ಹೇಗೆ ? ಸಿಸ್ಟರ್, ನಾಲ್ಕು ಗಂಟೆಗೆ ಪೇಡಿಯಾಟ್ರಿಷಿಯನ್ ಸುಜಾತ ಬಂದಾಗ ಮಗೂನ ತೋರ್ಸಿ ಥರೋ ಎಕ್ಸಾಮಿನ್ ಮಾಡಿಸು. ತುಂಬಾ ಎಕ್ಸ್‌ಪೋಸ್ ಮಾಡ್ಬೇಡಾ..."

ಅಷ್ಟರಲ್ಲಿ ಆಪರೇಷನ್ ಥಿಯೇಟರಿನ ತೆರೆದ ಬಾಗಿಲಿನಿಂದ 'ಅಮ್ಮಾ' ಎಂದು ನರಳುವ ಸದ್ದು ಕೇಳಿತು. "ಷೀ ಈಸ್ ಕಮ್ಮಿಂಗ್ ರೌಂಡ್. ಇನ್ನೇನು ....ಇನ್ನೊಂದು ಟೆನ್ ಮಿನಿಟ್ಸ್‌ನಲ್ಲಿ ವಾರ್ಡಿಗೆ ಹಾಕ್ತಾರೆ....' ಡಾಕ್ಟರ್ ರವಿಗೆ ಹೇಳಿದರು. ಮತ್ತೆ ನರಳಿದ ಸದ್ದು.

"ಈಸ್ ಷಿ ಆಲ್ ರೈಟ್ ?" ಕೇಳಿದವನು ರಘು.

ತೆರೆದ ಬಾಗಿಲಿನತ್ತ ಧಾವಿಸಿದನು ರವಿ.

"ಗಂಡಸರು ಅಲ್ಲಿ ಹೋಗ್ಬಾರ್ದು...." ಡಾಕ್ಟರ್ ಕರೆದರು. "ಬೇಕಾದ್ರೆ ನೀವು ಹೋಗಿ ನೋಡ್ಬೋದು...." ನಂದಿನಿಯ ಕಡೆ ತಿರುಗಿ ಹೇಳಿದರು. ನಂದಿನಿ ಮಗುವನ್ನೆತ್ತಿಕೊಂಡೇ ಒಳಗೆ ಹೋದಳು.

"ರವಿ, ನೀವು ಸ್ವಲ್ಪ ನಂಜೊತೆ ಬನ್ನಿ. ಕೆಲವು ಮೆಡಿಸನ್ಸ್ ಬರೆದು ಕೊಡ್ತೀನಿ. ಸಂಜೆಗೆ ಕೊಡ್ಬೇಕೂ...." ರವಿಯನ್ನು ಡಾಕ್ಟರ್ ಕರೆದುಕೊಂಡು ಹೋದಾಗ ರಘುವೊಬ್ಬನೇ ಹಿಂದುಳಿದ. ಒಳಗಡೆಯಿಂದ ಇನ್ನೂ ಆಗಾಗ ನರಳುವಿಕೆ ಕೇಳಿಬರುತ್ತಿತ್ತು. ಪ್ರತಿಸಲವೂ ರಘುವಿಗೆ ಅದು ಕೇಳಲಸಾಧ್ಯವಾಗಿ ಅಲ್ಲಿಂದ ಕಾಲ್ತೆಗೆದನು. "ದೇವರೇ, ಶುಭಸಿಗೇನೂ ಆಗದಿರಲಿ" ಅವನ ಮೂಕ ಪ್ರಾರ್ಥನೆ ಅವನ ನಿಟ್ಟುಸಿರಿನಲ್ಲಿ, ಹೆಜ್ಜೆಯಲ್ಲೂ ಕೇಳಬರುತ್ತಿತ್ತು.

ಹೊರಬಾಗಿಲತ್ತ ಹೆಜ್ಜೆಯಿಟ್ಟಾಗ ಹಿಂದಿನಿಂದ ರವಿಯ ಧ್ವನಿ ಕೇಳಿ ಹಿಂತಿರುಗಿ ನೋಡಿದ.

"ಇದೇನು, ಹೊರಟುಬಿಟ್ಯಾ ?" ರವಿಯ ಹಣೆ, ಕತ್ತಿನ ಮೇಲೆ ಬೆವರಿದ ಹನಿ ಸಾಲುಗಟ್ಟಿತ್ತು. ರಘುವಿಗೆ ಅವನನ್ನು ಕಂಡು ಮರುಕವುಕ್ಕಿ ಬಂತು.

"ಮನೆಗೆ ಹೊರಟಿಲ್ಲ...ನಿನ್ನ ಪ್ಲೀಮತ್‌ನ ಗ್ಯಾರೇಜಿಂದ ತರೋಕೆ ಹೊರಟೆ, ಎರಡು ಕಾರೂ ನಿಂತೋದ್ರೆ ಓಡಾಡೋದು ಹೇಗೆ ?"

"ಗುಡ್....ರಘು, ನೀನು ಇವೊತ್ತು ಬರ್ದೇ ಇದ್ರೆ ನಂಗೆ ಹುಚ್ಚು ಹಿಡಿದ್ಬಿಡ್ತಿತ್ತು. ತಾಳು ರಿಪೇರಿ ಚಾರ್ಜಸ್ ಕೊಟ್ಬಿಡ್ತೀನಿ, ಹಾಗೇ ನನ್ನ ಗಾಡೀನೂ ಒಂದ್ಸಲ ನೋಡ್ಕೊಂಡು ಬಂದ್ಬಿಡು-ನಾನು ಶುಭನ್ನ ವಾರ್ಡಿಗೆ ಹಾಕೋತ್ಲೂ ಬರ್ತೀನಿ."

ರವಿ ಜೇಬಿಗೇ ಕೈಹಾಕಿ ಪರ್ಸ್ ತೆಗೆದಾಗ, ರಘು ಅವನನ್ನು ತೀಕ್ಷ್ಣ ವಾಗಿ ನೋಡಿದ.

"ನನ್ನ ಹತ್ರಾನೂ ದುಡ್ಡಿದೆ.. ಯಾವಾಗ್ಲಿಂದ ನನ್ನ ಬೇರೆಯವನಾಗಿ ಮಾಡ್ದೆ ?" ರಘುವಿನ ಧ್ವನಿ ಅಳುವಂತೆ ಹರಿತವಾಗಿತ್ತು.

ರವಿಯ ಮುಖ ಬಿಳಿಚಿಕೊಂಡಿತು. ಒಣನಗೆ ನಕ್ಕನು.

"ನೀನು ಬಹಳ ದಿನ ದೂರ ಇದ್ದಿದ್ರಿಂದ ನೀನೇ ಬೇರೆಯವನಾಗಿ ಬಿಟ್ಟಿಯೇನೋ ಅನ್ನಿಸಿಬಿಟ್ಟಿತು ನಂಗೆ..."

ರಘುವಿಗೆ ತನ್ನ ತಪ್ಪಿನ ಅರಿವಾಗಿತ್ತು. ರವಿಯ ಕೈಲಿ ಹಿಡಿದಿದ್ದ ಪರ್ಸ್‌ನ್ನು ಮತ್ತೆ ಅವನ ಜೇಬಿಗೇ ತುರುಕಿ, ಷರಟಿನ ಜೇಬಿನಲ್ಲಿ ಕಾಣುತ್ತಿದ್ದ ಬಿಳಿಯ ಕಾಗದದ ಮಡಿಕೆಯನ್ನು ಕೈಗೆ ತೆಗೆದುಕೊಂಡನು

"ಅದು ಮೆಡಿಸನ್ಸ್, ಮಗಂಗೆ ತರ್ಬೇಕಾಗಿರೋದೂ...ನಿಂಗ್ಯಾಕೆ ಅದೂ, ಕೊಡಿಲ್ಲಿ ...!" ರವಿ ಅವನ ಕೈ ತಡೆದನು

ರಘು ಅವನಿಗೆ ಉತ್ತರಿಸದೇ ಆ ಕಾಗದದ ಮಡಿಕೆಯನ್ನು ತನ್ನ ಜೇಬಿಗೆ ಸೇರಿಸಿಕೊಂಡು ಹಿಂತಿರುಗಿ ನೋಡದೇ ಬಾಗಿಲಿನಿಂದ ಹೊರಬಿದ್ದನು. ರವಿ ಗೇಟು ದಾಟಿ ರಸ್ತೆಗೆ ಕಾಲಿಟ್ಟು ಮಾಯವಾದ ತಮ್ಮನನ್ನೇ ನೋಡುತ್ತಾ ಕೆನ್ನೆ ಸವರಿಕೊಂಡನು.

ಶ್ರೀಮಂತ್ ಕಾರು ಮನೆಯ ಮುಂದೆ ನಿಂತಾಗ ಭಾಸ್ಕರನಿಗೆ ಆಶ್ಚರಿಯಾಯಿತು. ಯಾರಿರಬಹುದು, ಬಗ್ಗಿ ನೋಡಿದಾಗ ರಘು ಕಾರಿನಿಂದ ಇಳಿಯುತ್ತಿದ್ದುದು ಕಂಡು ಅವನಿಗೆ ಮತ್ತೂ ಆಶ್ಚರ್ಯವಾಯಿತು. ರೇಡಿಯೋ ತಿರುಗಿಸಿಕೊಂಡು ತನಗೇ ಅರ್ಥವಾಗದ ಯಾವುದೋ ಇಂಗ್ಲೀಷ್ ಸಂಗೀತವನ್ನು ಹಾಕಿಕೊಂಡು ಕುಳಿತಿದ್ದ ಮಗನಿಗೆ ಕೂಗು ಹಾಕಿದನು

"ಸಂಜೂ, ಸಂಜೂ....ನೋಡು, ರಘು ಬಂದಾಂತ ಕಾಣ್ಸುತ್ತೆ, ಬಾಗಿಲು ತೆಗಿ..."

ರಘು ಬಾಗಿಲಿಗೆ ಬರುವುದಕ್ಕೂ ಸಂಜಯ ಬಂದು ಬಾಗಿಲು ತೆಗೆಯುವುದಕ್ಕೂ ಸರಿಯಾಯಿತು. ತನ್ನ ಸಮಕ್ಕೂ ಬೆಳೆದು ನಿಂತಿದ್ದ ಸಂಜಯನನ್ನು ಅವನು ಒಂದು ನಿಮಿಷ ಗುರುತಿಸಲಾರದೇ ಹೋದನು.

"ಹೈ...ಹೌ ಡು ಯೂ ಡೂ ? ಐ ಆಮ್ ಸಂಜಯ್ .. ಮೇ ಐ ನೋ ಯೂ ಪ್ಲೀಸ್ ?" ಎಂದು ಸಂಜಯ ನಾಟಕೀಯವಾಗಿ ಹೇಳಿದಾಗ ರಘು ನಕ್ಕುಬಿಟ್ಟನು.

"ಅರೇ ಬಡ್ಡೀಕೆ ! ನನ್ನೆತ್ರ ಆಗೋದ್ಯಲ್ಲೋ ! ಗುರ್ತೇ ಸಿಗಲಿಲ್ಲ ನಂಗ."

"ಬಾರಯ್ಯಾ ಒಳಗೆ....ನನ್ನ ಗುರ್ತು ಯಾಕೆ ಸಿಗುತ್ತೆ ಹೇಳು ನಿಂಗೆ ? ಸಧ್ಯ ಮನೆ ಗುರ್ತಾದ್ರೂ ಸರ್ಯಾಗಿ ಇಟ್ಕೊಂಡು ಬಂದ್ಯಲ್ಲಾ !" ಒಳಗಿನಿಂದ ಭಾಸ್ಕರನೂ ಬಂದಿದ್ದರಿಂದ ಮಾತು ಅಲ್ಲಿಗೆ ನಿಂತಿತು.

"ಶುಭಂಗೆ ಹೆಣ್ಣು ಮಗು....ತಿಳಿಸ್ಬಿಟ್ಟು ಹೋಗೋಣಾಂತ ಬಂದೆ. ನಂದಿನಿ ಅಲ್ಲೇ ಇದ್ದಾಳೆ...." ರಘು ಹೇಳಿದಾಗ ಭಾಸ್ಕರ ಸಮಾಧಾನದ ನಿಟ್ಟುಸಿರು ಬಿಟ್ಟನು.

"ಸಧ್ಯ, ಹೆಣ್ಣೋ, ಗಂಡೋ, ಒಂದು ಮಗೂಂತ ಆಯ್ತಲ್ಲ. ಸಾಕು ಬಿಡು. ಶುಭ ಹೇಗಿದ್ದಾಳೆ ?"

"ಇನ್ನೂ ವಾರ್ಡಿಗೆ ಹಾಕಿರಲಿಲ್ಲ....ಅಷ್ಟೆ, ತಿಳ್ಸೋಕೆ ಬಂದೆ... ನಾ ಬರ್ತೀನಿನ್ನು...." ರಘು ಬಾಗಿಲಿನಿಂದ ಒಳಗೆ ಹೋಗದೆ ಹೇಳಿದಾಗ ಭಾಸ್ಕರ ಕೈಯೆತ್ತಿ ಮುಗಿದು, "ಒಳ್ಳೆಯದು" ಎಂದಾಗ ರಘುವಿಗೆ ಅರ್ಥವಾಗಲಿಲ್ಲ. ಪ್ರಶ್ನಾರ್ಥಕವಾಗಿ ಅವನನ್ನು ನೋಡಿದಾಗ ಭಾಸ್ಕರನೇ ಉತ್ತರಿಸಿದನು.

"ನೀನೇನಪ್ಪಾ ದೊರೆಮಗ, ರವಿಯು ಹಾಗೆ, ನಾವೆಲ್ಲಿಯವರು ? ಅವ್ನೂ ನಿಮ್ಮಮ್ಮ ಇಬ್ರೂ ಶುಭನ್ನ ನಮ್ಮನೆ ಹತ್ರಾನೂ ಸುಳ್ಯೋಕೆ ಬಿಡ್ತಾ ಇರ್ಲಿಲ್ಲ....ನೀನೂ ಹಾಗೆ....ಆದ್ರೆ ನಮ್ಮೆಲ್ಲರ ಜ್ಞಾಪಕ ನಿಂಗಿದ್ಯಲ್ಲಾ ಬಹಳ ಸಂತೋಷ...."

ರಘುವಿಗೆ ಭಾಸ್ಕರನ ಕಹಿ ಅನುಭವ ಅರ್ಥವಾಯಿತು. "ಹಾಗೇನಿಲ್ಲ, ನಾನಿವತ್ತು ತಾನೇ ಬಂದೆ. ನಂಗೇನೂ ಗೊತ್ತಿಲ್ಲಪ್ಪಾ ಆ ಸಮಾಚಾರ ಎಲ್ಲಾ. ನಾನು ಇವತ್ತೂ ಮೊದಲಿನ ರಘೂನೆ....ಈವಾಗ ಟೈಂ ಇಲ್ಲ. ಇನ್ನೂ ಇರ್ತೀನಿ–ನಿಧಾನವಾಗಿ ಬರ್ತೀನಿ... ನೋ ಹಾರ್ಡ್ ಫೀಲಿಂಗ್. ಅಲ್ದೇ ಅಪ್ಪಂಗೆ ಇನ್ನೂ ತಿಳ್ಸಿಲ್ಲ. ಫೋನುಮಾಡಿದಾಗ ಅಪ್ಪಾ ಮಲಗಿದ್ರಂತೆ. ಬಾಬು ಹೇಳಿದ. ಸಾಯಂಕಾಲ ಆದ್ರೆ ಬರ್ತೀನಿ...."

"ಸರಿಯಪ್ಪಾ....ನಾನು ಈಗ ಹೋದ್ರೇ ಶುಭನ್ನ ನೋಡ್ಬೋದಾ ? ಬಿಡ್ತಾರೆ ತಾನೇ ?" ಭಾಸ್ಕರ ಕೇಳಿದಾಗ ರಘು ತಲೆ ಚಚ್ಚಿಕೊಂಡನು.

"ಥೂ, ನನ್ನ ಮರೆವೆಗಿಷ್ಟು....ದಯವಿಟ್ಟು ಸಂಜಯನ ಕೈಲಿ ನಂದಿನಿಗೆ ಏನಾದ್ರೂ ಕಳ್ಸಿ. ಬೆಳಗಿನಿಂದ ಏನೂ ತಗೊಂಡಿಲ್ಲ. ನಾನು ಅವಸರ ಮಾಡಿ

ಕರ್ಕೊಂಡು ಹೊರಟ್ಹೋದೆ....ನೀವು ಸಂಜೆ ಹೋಪ್ರೆ ವಾಸೀ ಅನ್ನತ್ತೆ. ಶುಭನಿಗೆ ಇನ್ನೂ ಜ್ಞಾನ ಬಂದಿರೋಲ್ಲ."

ರಘು ಮತ್ತು ತಂಪೆಯ ನಡುವೆ ನಡೆಯುತ್ತಿದ್ದ ಮಾತುಕತೆ ಆಲಿಸುತ್ತಿದ್ದ ಸಂಜಯ ರಘುವಿನ ಬೆನ್ನಿನ ಮೇಲೆ ಗುದ್ದಿದ.

"ಲೋ, ನಂದಿನಿ ಬೆಳಗಿನಿಂದ ಏನೂ ತೊಗೊಂಡಿಲ್ಲ ಅಂದ್ಯಲ್ಲಾ ನೀನೇನು ತೊಗೊಂಡಿದ್ದೀ ? ಮುಖ ನೋಡಿಪ್ರೇ ಹತ್ತು ದಿನದಿಂದ ಉಪವಾಸ ಇದ್ಹಾಗಿದ್ದೀಯ! ಒಳಗೆ ಬಾರೋ, ಫಸ್ಟ್ ಕ್ಲಾಸ್ ಕಾಫಿ ಮಾಡ್ಕೊಡ್ತೀನಿ. ಕುಡಿದ್ಬಿಟ್ಟು ಹೋಗು. ಆಮೇಲೆ ಅಮ್ಮಂಗೆ ನಾನೇನಾದ್ರೂ ತೊಗೊಂಡ್ಹೋಗ್ತೀನಿ .. "

"ಹೌದು ರಘು, ಹಾಗೇ ಮಾಡು. ನಮ್ಮನೇಗೆ ಈಗ ಸಂಜಯನೇ ಬಾಸ್." ಭಾಸ್ಕರ ನಕ್ಕನು.

ರಘು ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಮನೆಯೊಳಗೆ ಕಾಲಿಟ್ಟ. ಎಲ್ಲಾ ಹಾಗೆಯೇ ಇತ್ತು. ಕುರ್ಚಿಯ ಮೇಲೆ ಕುಳಿತು ಎದುರಿಗಿದ್ದ ಫಿಲಂಫೇರ್ ಕೈಗೆ ತೆಗೆದುಕೊಂಡಾಗ "ತುಂಬಾ ಬಾಯಾರಿಕೆ ಇರ್ಬೇಕೂ...ಇನ್ನೊಂದು ಲೋಟ ನೀರು ತಂದು ಕೊಡ್ಲಾ ?" ಶುಭ ತನ್ನೆದುರು ನಿಂತು ಕೇಳಿದಂತಾಯಿತು. ಭಾಸ್ಕರ, ಸಂಜಯ ಇಬ್ಬರೂ ಅಡಿಗೆ ಮನೆಯಲ್ಲಿ ಸೇರಿದ್ದರಿಂದ ಅವನ ಮುಖಭಾವ ಗಮನಿಸಲು ಯಾರೂ ಇರಲಿಲ್ಲ. ಮತ್ತೆ ಮತ್ತೆ ಆ ನಗುಮುಖ, ತುಂಟ ಕಣ್ಣುಗಳು ಅವನ ಮುಂದೆ ಕುಣಿಯಿತು.

ಸಂಜಯ ತಟ್ಟೆಯಲ್ಲಿ ಎರಡು ಲೋಟ ಕಾಫಿ ಹಿಡಿದು ಅವನ ಮುಂದೆ ಹಿಡಿದಾಗ ರಘುವಿಗೆ ತಟ್ಟನೆ ನೆನಪಿಗೆ ಬಂತು "ಎರಡೂ ನಂಗೇನಾ ? ನಂಗೊತ್ತಿಲ್ಲ ತಡೀರಿ ಅತ್ತಿಗೇನ ಕೇಳ್ಕೊಂಡು ಬರ್ತೀನಿ....ನಿಮ್ಗೆ ಕೊಡು ಅಂದ್ರು ಕೊಟ್ಟೆ, ಅಷ್ಟೆ... "

"ಕೆಲವು ಸಮಯ ನಾವೇ ಬುದ್ಧಿ ಉಪಯೋಗಿಸಿಕೊಳ್ಳಬೇಕೂ ಒಂದು ನಿಮಗೆ, ಒಂದು ನನಗೆ...."

"ಏನಯ್ಯಾ, ಲೋಟನ್ನ ಹಾಗೆ ದುರುದುರು ನೋಡ್ತಾ ಇದ್ದೀಯಾ. ಕೊಳಕಿಲ್ವೋ, ಚನ್ನಾಗಿ ವಿಮ್ ಹಾಕಿ ತೊಳ್ದು ತಂದಿದ್ದೀನಿ...." ಸಂಜಯ ಹೇಳಿದಾಗ ರಘು ನೆನಪಿನಾಳದಿಂದ ಎಚ್ಚೆತ್ತನು.

"ಏನು ? ಎರಡೂ ನಂಗೇನಾ ?" ನಗುತ್ತಾ ಕೇಳಿದ.

"ನಂಗೊಂದು, ನಿಂಗೊಂದು ...ಹೊಟ್ಟೆಗೆ ಆಗಾಗ ಪೆಟ್ರೋಲ್ ಬೀಳ್ದಿದ್ರೆ ಹೇಗಯ್ಯ ನಾನು ಕೆಲ್ಸ ಮಾಡೋದು ?....ಇದು ಕುಡಿದುಬಿಟ್ರೆ, ನೋಡ್ತಾ ಇರು. ರಾಕೆಟ್ ಹಾಗೆ ಹಾಸ್ಪಿಟಲ್‌ಗೆ ಒಂದು ಸೆಕೆಂಡ್ನಲ್ಲಿ ಹೊರಟು ಹೋಗ್ತೀನಿ...." ಸಂಜಯ ಒಂದು ಲೋಟ ತುಟಿಗಿಟ್ಟುಕೊಂಡು ಇನ್ನೊಂದನ್ನು ರಘುವಿಗಿತ್ತನು.

"ಮುಂಚೆ ಬಂದವರಿಗ ಕೊಟ್ಟು, ಆಮೇಲೆ ನೀನು ತೊಗೋಬೇಕು." ಮಗನನ್ನು ಭಾಸ್ಕರ ಗದರಿಕೊಂಡಾಗ ಸಂಜಯ ಒಂದೇ ಗುಟುಕಿಗೆ ಕಾಫಿ ಯೆಲ್ಲವನ್ನೂ ಕುಡಿದು ಬರಿಯ ಲೋಟವನ್ನು ಟೇಬಲ್ಲಿನ ಮೇಲಿಟ್ಟನು.

"ಇಂಗ್ಲೀಷಿನಲ್ಲಿ ಫಸ್ಟ್ ಪರ್ಸನ್ ಈಸ್ ಐ.. ಅಂದರೆ ನಾನು. ಥರ್ಡ್ ಪರ್ಸನ್ ಈಸ್....ಹೀ....ಅಂದರೆ ರಘು ...ಅದಕ್ಕೇ ನಾನಾದ ಮೇಲೆ ಅವನು" ಎಂದು ಹೇಳಿದಾಗ ರಘು ನಕ್ಕು ಕುಡಿದ ಲೋಟವನ್ನು ತಾನೂ ಟೇಬಲ್ಲಿನ ಮೇಲಿಟ್ಟನು.

"ಇವನೂ ಒಳ್ಳೆಯ ಲಾಯರ್ ಆಗ್ತಾನೆ ನಿಮ್ಮ ಹಾಗೇ....ಆದ್ರೇ ಆಗಾಗ ಯಾರಾದ್ರೂ ಬಗ್ಗಿಸ್ತಾ ಇರ್ಬೇಕೂ....ಅಲ್ವೇನೋ ಸಂಜೂ ?" ಭಾಸ್ಕರನೂ ನಕ್ಕನು- "ನಾನೂ, ನಂದಿನಿ ಇಬ್ರೂ ಅವನ್ನ ಬಗ್ಗಿಸೋಕೆ ಆಗೋಲ್ಲ. ದೊಡ್ಡೋನಾದ್ಮೇಲೆ ಅವನ ಹೆಂಡ್ತೀನಾದ್ರೂ ಬಗ್ಗಿಸ್ತಾಳೇನೋ ನೋಡ್ಬೇಕೂ."

"ಹುಟ್ಟಿದ್ದಾಳಲ್ಲ....ಹೆಂಡ್ತೀ... ಶುಭನ ಮಗಳು, ಬಗ್ಗಿಸ್ತಾಳೆ...." ರಘು ಕೀಟಲೆ ಮಾಡಿದಾಗ ಸಂಜಯ ಸೆಟೆದು ನಿಂತನು.

"ಆ ಹೆಂಡ್ತೀಗೆ ಇಲ್ಲಿಂದ್ಲೇ ದೊಡ್ಡ ನಮಸ್ಕಾರ. ಶುಭನ ಮಗಳಾಗಿದ್ರೆ ಮಾಡ್ಕೋತಾ ಇದ್ದೆ....ರವಿ ಮಗಳ್ನ ಮಾಡ್ಕೋಳ್ಳೋಲ್ಲಪ್ಪಾ ಸಧ್ಯ" ಎಂದಾಗ ರಘುವಿಗೆ ಮುಖಕ್ಕೆ ರಕ್ತ ಚಿಮ್ಮಿತು. ಅವಮಾನದಿಂದಲೋ ಕೋಪದಿಂದಲೋ ಅವನಿಗೆ ತಿಳಿಯಲಿಲ್ಲ.

ದಾರಿಯಲ್ಲಿ ಕಾರು ನಿಲ್ಲಿಸಿ ಶುಭಳಿಗಾಗಿ ಕೊಳ್ಳಬೇಕಾಗಿದ್ದ ಔಷಧಿ ಗಳನ್ನು, ಇಂಜಕ್ಷನ್ ಟ್ಯೂಬುಗಳನ್ನೂ ಕೊಂಡು ಕೈಲಿ ಹಿಡಿದಾಗ ರಘು ವಿಗೆ ಏನೋ ಒಂದು ಬಗೆಯ ಸಂತೃಪ್ತಿ ಮೈಯೆಲ್ಲಾ ಆವರಿಸಿತು. ಕಾರ

ನಲ್ಲಿ ಕುಳಿತು ಪಕ್ಕದ ಸೀಟಿನ ಮೇಲೆ ಅವುಗಳನ್ನು ಇಟ್ಟಾಗ, ಅವಳೇ ತನ್ನ ಪಕ್ಕ ಕುಳಿತಂತೆ ಆಯಿತು. ಔಷಧಿಯ ಪ್ಯಾಕೆಟ್ಟನ್ನು ಮೆಲ್ಲನೆತ್ತಿ ತುಟಿಗಿಟ್ಟುಕೊಂಡನು.

ಕಾರು ಪೋರ್ಟಿಕೋದಲ್ಲಿ ಬಂದು ನಿಲ್ಲುತ್ತಲೇ ಬಾಬು ಹೊರಗೋಡಿ ಬಂದನು. ಅವನ ಮುಖದಲ್ಲಿ ಮಂದಹಾಸ ಚಿಮ್ಮುತ್ತಿತ್ತು.

"ಮಗು ಹೇಗಿದೆ ಸಾರ್? ಚಿಕ್ಕಮ್ಮಾವ್ರು ಚೆನ್ನಾಗಿದ್ದಾರಾ?"

"ನಾನು ಇವತ್ತಿನವರೆಗೂ ಇರಯ್ಯಾ....ಎಲ್ಲಾ ಹೇಳ್ತೀನಿ. ಅಪ್ಪ ಎದ್ದಿದ್ದಾರಾ?" ರಘು ಕಾರಿನ ಬಾಗಿಲು ತೆರೆದು ಇಳಿಯುತ್ತಾ ಕೇಳಿದ.

"ಈಗ್ತಾನೇ ಎದ್ರು ಸಾರ್....ಸಮಾಚಾರ ಕೇಳಿ ಏನೂ ಉತ್ತರ ಹೇಳ್ದೇ ಹಾಗೇ ಕೂತ್ಕೊಂಬಿಟ್ಟಿದ್ದಾರೆ. ಕಾಫೀನೂ ಕುಡಿದಿಲ್ಲ ಇನ್ನೂ...."

ಹತ್ತು ಹೆಜ್ಜೆಗಳನ್ನು ಒಂದೇ ಹೆಜ್ಜೆಯಲ್ಲಿ ಹಾಕುತ್ತಾ ರಘು ಒಳಗೆ ಬಂದಾಗ ಶಿವರಾಮಯ್ಯನವರು ಕುರ್ಚಿಯ ಮೇಲೆ ವಿಗ್ರಹದಂತೆ ಅಲುಗದೇ ಕುಳಿತಿದ್ದರು. ರಘುವಿನ ಹೆಜ್ಜೆ ಸದ್ದು ಕೇಳಿ ಅವನತ್ತ ತಿರುಗಿದರು

"ಅಪ್ಪಾ, ರವಿಗೆ...ಸುಂದರಂಗ ಹೆಣ್ಣು ಮಗು ...ಮಗು ಎಲ್ಲಾ ಶುಭನ ಹಾಗೇ ಇದೆ..." ಎಂದು ಹೇಳಿ ಅವರ ಮುಂದಿನ ಕುರ್ಚಿಯಲ್ಲಿ ಕುಳಿತ. ದೂರದಲ್ಲಿ ನಿಂತಿದ್ದ ಬಾಬು ಅದನ್ನು ಕೇಳಿ ಹಲ್ಕಿರಿದನು

"ಬಾಬೂ, ನಂಗೆ, ಅಪ್ಪಂಗೆ ಕಾಫೀನೂ, ಏನಾದ್ರೂ ತಿಂಡೀನೂ ತೊಗೊಂಡ್ಬಾ" ರಘು ಹೇಳಿದಾಗ ಅರೆಮನಸ್ಸಿನಿಂದ ಬಾಬು ಒಳಗೆ ಹೋದನು.

"ನಂಗೊತ್ತಿತ್ತು, ರವಿಗೆ ಹೆಣ್ಣು ಮಗೂನೇ ಆಗೋದೂಂತ... ಇವಳು ಹೋದ್ಮೇಲೆ ತಾನೇ ಹುಟ್ತಾ ಇರೋದೂ ಅಜ್ಜಿಯ ಹಾಗಿದ್ದರೆ ಚೆನ್ನಾಗಿ ರ್ತಿತ್ತು...ಅಲ್ವೇನೋ?" ಶಿವರಾಮಯ್ಯ ಅಳಿದ ಹೆಂಡತಿಯನ್ನು ನೆನೆದು ಹೇಳಿದರು.

"ನಂಗೊತ್ತಿಲ್ಲಪ್ಪಾ ...ಸಾಯಂಕಾಲ ಆರು ಗಂಟೆಗೆ ಹೋಗ್ತಾ ಇದ್ದೀನಿ ರೆಡಿಯಾಗಿರಿ, ಕರ್ಕೊಂಡ್ಹೋಗ್ತೀನಿ. ನೀವೇ ನೋಡಿ..." ರಘು ಶೂಸು ಬಿಚ್ಚುತ್ತಾ ಹೇಳಿದ.

"ಮನೇಲಿ ಮಕ್ಕಳಿದ್ರೇ ಚೆನ್ನ ನೋಡು....ಇನ್ನೊಂದು ನಾಲ್ಕಾಗಲಿ ಹೀಗೇ....ಮನೆ ನಂದಗೋಕುಲದ ತರಹ ಇರುತ್ತೆ. ನೀನೂ, ರವಿ

ಇಬ್ರೂ ಮಕ್ಕಳಾದಾಗ ಮನೆ ತುಂಬಿದ ಹಾಗಿರೋದೂ. ನಿಮ್ಮಿಬ್ಬರ ಮುಖ ನೋಡ್ತೋತ್ಲೂ ನಾವಿಬ್ರೂ ನಮ್ಮ ಕಷ್ಟಾನೆಲ್ಲಾ ಮರ್ತುಬಿಡ್ತಾ ಇದ್ವಿ. ಇಷ್ಟು ದೊಡ್ಡ ಬಂಗಲೆ, ಇಷ್ಟು ದೊಡ್ಡ ಮನೆ-ಮಕ್ಕಳಿಲ್ದೇ ಹಾಳು ಸುರೀತಿತ್ತು. ಇನ್ಮೇಲೆ ನೋಡ್ತಾ ಇರು, ಮನೆ ಹೇಗಿರುತ್ತೇಂತ....ಸಿಂಗೂ ಆದಷ್ಟು ಬೇಗ ಮದುವೆ ಮಾಡ್ಬಿಡ್ಬೇಕೂ....ಶುಭ ಮನೆಗೆ ಬಂದ್ಮೇಲೆ ಅವಳಿಗೆ ನಿನ್ನ ಮದುವೆ ಜವಾಬ್ದಾರಿ ಹೊರಿಸ್ತೀನಿ...."

ರಘು ಅವರ ಮಾತನ್ನೂ ಕೇಳುತ್ತಾ ಹಾಗೇ ಕುರ್ಚಿಗೊರಗಿ ಕಣ್ಮುಚ್ಚಿ ಕುಳಿತಿದ್ದನು. ದೇಹದ, ಮನಸ್ಸಿನಿಂದ ಎರಡರ ಆಯಾಸದಿಂದಲೂ ಅವನಿಗೆ ಸಾಕಾಗಿ ಹೋಗಿತ್ತು.

"ಶುಭ ಏನಂದ್ಲು ನಿನ್ನ ನೋಡಿ? ನೀನು ಊರಿಗೆ ಬರ್ದೇನೇ ಇದ್ದದ್ದು ನೋಡಿ ಬಹಳ ಬೇಜಾರು ಮಾಡಿಕೊಂಡಿದ್ಲು...."

ರಘು ಕಣ್ಮುಚ್ಚಿಕೊಂಡೇ ಉತ್ತರಿಸಿದನು.

"ಅವಳು....ಅವರಿನ್ನೂ ನನ್ನ ನೋಡಿಯೇ ಇಲ್ಲ....ನಾನು ಬಂದಾಗ ಜ್ಞಾನ ಬಂದಿರ್ಲಿಲ್ಲ...ಆಪರೇಷನ್ ಥಿಯೇಟರಿನಲ್ಲೇ ಇದ್ದದ್ದು...."

"ಈಗಿನ ಕಾಲದ ಹುಡುಗರೇ ಹಾಗೆ....ನಮ್ಕಾಲದಲ್ಲಿ ಹೆಣ್ಣು ಹುಡುಗಿಯರು ಎಷ್ಟು ಗಟ್ಟಿಮುಟ್ಟಿಯಾಗಿರುತ್ತಿದ್ದರು. ಹತ್ತು ಮಕ್ಕಳನ್ನ ಹಡೆದು ಹಾಯಾಗಿ ಓಡಾಡಿಕೊಂಡಿರುತ್ತಾ ಇದ್ರು. ಈಗ ಕೂತ್ರೆ ನಿಂತೆ ಆಪರೇಷನ್...."

ರಘುವಿಗೆ ಅದು ಯಾವುದೂ ಬೇಕಾಗಿರಲಿಲ್ಲ. ಅವನ ಉದಾಸೀನತೆಯನ್ನು ಕಂಡು ಶಿವರಾಮಯ್ಯ ಹೇಳಿದರು.

"ಸಾಕಾಗಿದ್ರೆ ಹೋಗಿ ರೂಮಿನಲ್ಲಿ ಮಲಕ್ಕೋ....ಹೋಗು....ಪಾಪ, ಆ ರವಿನೋ ಬೆಳಿಗ್ಗೆಯಿಂದ ಮನೆ ಸೇರಿಲ್ಲ. ಅವನಿಗಂತೂ ರೆಸ್ಟೇ ಇಲ್ಲ."

ಬಾಬು ಕೈಯಲ್ಲಿ ಕಾಫಿ ತಿಂಡಿ ಹಿಡಿದು ಬಂದಾಗ ರಘು ಹಾಗೇ ಕಣ್ಮುಚ್ಚಿ ಮಲಗಿದ್ದ. ಆಗತಾನೇ ನಿದ್ದೆಯ ಜೊಂಪು ಹತ್ತಿತ್ತು. ಶಿವರಾಮಯ್ಯ ತಾವು ಕಾಫಿ ತಿಂಡಿ ತೆಗೆದುಕೊಂಡು ರಘುವನ್ನು ಎಬ್ಬಿಸಬೇಡವೆಂದು ಕೈ ಸನ್ನೆ ಮಾಡಿ ಬಾಬುವನ್ನು ಒಳಗೆ ಕಳಿಸಿಬಿಟ್ಟರು.

ಕುರ್ಚಿಗೊರಗಿದ್ದ ಮಗನನ್ನು ನೋಡಿದರು. ಚಿನ್ನದಂತಾ ಹುಡುಗ

ಯಾಕೆ ಇವನು ಹೀಗಾದ ? ಮನಸ್ಸಿಗೆ ಏನೋ ಕೊರೆ ಹಚ್ಚಿಕೊಂಡಿದ್ದಾನೆ, ಒಳಗೇ ಕೊರಗುತ್ತಾನೆ. ಈ ವಯಸ್ಸಿಗೆ ಬಿಳಿಕೂದಲೆಂದರೇನು ? ಕಣ್ಣಿನ ಕೆಳಗೆ ಕರಿ ಗೆರೆಗಳೆಂದರೇನು ?

ಇನ್ನು ರವಿಯೋ ಪಾಪ-ಅವನಿಗೆ ವಿಪರೀತ ತಾಪತ್ರಯ. ಎಸ್ಟೇಟಿನ ನಿರ್ವಹಣೆ ಎಲ್ಲಾ ಒಬ್ಬನೇ ಮಾಡಬೇಕು. ಸಾಲದಕ್ಕೆ ಆರೋಗ್ಯವೂ ಅಷ್ಟು ಸರಿಯಾಗಿಲ್ಲ. ಅಷ್ಟೊಂದು ಕುಡಿದರೆ ಹೇಗೆ ? ಹೆಂಡತಿ, ಶುಭನಾದ್ರೂ ತಡೆಯ ಬಾರದೇ ? ಪಾಪ, ಅವಳೇನು ತಾನೇ ಮಾಡುತ್ತಾಳೆ. ಮನೆಯಲ್ಲಿ ತಡೆ ದರೆ ಹೊರಗೆ ಹೋಗಿ ಕುಡಿದು ಬರುತ್ತಾನೆ. ತನ್ನದೇ ತಪ್ಪು ...ಅಲ್ಲ ತನ್ನ ತಾಯಿಯದೇ ತಪ್ಪು. ಮುದ್ದು ಮಗ ಮಾಡಿದುದೆಲ್ಲಾ ಚೆನ್ನವೆಂದು ಪುರೆಸಿದ್ದೇ ತಪ್ಪು. ಎಲ್ಲಾ ತನ್ನ ಹಣೆಯಬರಹ....! ಶಿವರಾಮಯ್ಯ ನಿಟ್ಟು ಸಿರಿಟ್ಟು ಎದ್ದು ವರಾಂಡದತ್ತ ನಡೆದರು.

ರವಿ ಬಂದಾಗ ರಘು ಕುರ್ಚಿಗೊರಗಿ ಸಣ್ಣ ಗೊರಕೆ ಹೊಡೆಯುತ್ತಿ ದ್ದನು. ರವಿಯನ್ನು ನಗುತ್ತಾ ಸ್ವಾಗತಿಸಿದ ಶಿವರಾಮಯ್ಯನವರು ರಘುವಿನ ಕಡೆ ಕೈಮಾಡಿ ತೋರಿಸಿದಾಗ ರವಿಯೂ ನಸುನಕ್ಕನು. ಅವನಿಗೆ ಎಚ್ಚರ ಮಾಡೀತೆಂದು ತಂದೆ ಮಕ್ಕಳಿಬ್ಬರೂ ಮಹಡಿ ಮೆಟ್ಟಿಲ ಬಳಿ ನಿಂತರು.

"ಪಾಪ, ಬೆಳಿಗ್ಗೆ ಊರಿಗೆ ಬಂದೋನು, ತುಂಬಾ ಆಯಾಸವಾಗಿರ ಬೇಕು....ಸಧ್ಯ ಬಂದನಲ್ಲ. ನೀವಿಬ್ಬರೂ ಮಾತಾಡಿ ಯಾವುದಾದರೊಂದು ನಿರ್ಣಯಕ್ಕೆ ಬಂದುಬಿಡಿ...." ಶಿವರಾಮಯ್ಯ ಹೇಳಿದರು.

"ಶುಭ ಚೆನ್ನಾಗಿದ್ದಾಳೆ ತಾನೇ, ಮಗಳೇನೆನ್ನುತ್ತಾಳೆ ?"

ರವಿಯು ಮುಗುಳ್ನಕ್ಕನು. "ಶುಭನಿಗೆ ಇನ್ನೂ ಪೂರ್ತಿ ಜ್ಞಾನ ಬಂದಿಲ್ಲ....ಮಗಳು ತುಂಬಾ ಚೆನ್ನಾಗಿದ್ದಾಳೆ. ಎಳೂವರೆ ಪೌಂಡಿದ್ದಾಳೆ." ಮಗನಾಗಿದ್ದರೆ ಚೆನ್ನಾಗಿತ್ತು ಅನ್ನಿಸಿದರೂ ಅವಳ ಮುಖ ನೋಡಿದ ಮೇಲೆ ಅದನ್ನು ಪೂರ್ಣ ಮರೆತಿದ್ದನು, ಮಗಳಾದರೇನು ? ಮಗನಂತೆ ಅವಳೇ ಎಲ್ಲವನ್ನೂ ನೋಡಿಕೊಳ್ಳಬಹುದು.

"ನಾನೂ ಬರಲೇ, ಮಗೂನ ನೋಡೋಕೆ ? ರಘು ಆದೂವರೆ ಹೊತ್ಗೆ ಹೋಗೋಣಾಂದಿದ್ದ." ಶಿವರಾಮಯ್ಯನವರಿಗೆ ಕೊಂಚಕೊಂಚವಾಗಿ ಬದುಕಿ ನಲ್ಲಿ ಆಸೆಯ ಬಳ್ಳಿಯೊಂದು ಚಿಗುರಹತ್ತಿತು.

"ಆಗಲಿ....ಅವನ ಜೊತೆ ಹೋಗು. ಪಾಪ, ನಂದಿನಿಯೊಬ್ಬಳೇ ಬೆಳಗಿನಿಂದ ಇದ್ದಾಳೆ. ರಾತ್ರಿಗೆ ಆಯಾನ ಗೊತ್ತು ಮಾಡಿ ಬಂದೆ, ನಾನು ಎಂಟು ಗಂಟೆಯ ಹೊತ್ತಿಗೆ ಹೋಗ್ತೀನಿ ...ನನಗೂ ಸಾಕಾಗಿಹೋಗಿದೆ." ರವಿ ತಂದೆಗೆ ಬೆನ್ನು ಮಾಡಿ ಮಹಡಿಯೇರಿದನು.

ಡ್ರಿಂಕ್ಸ್ ಇಟ್ಟಿದ್ದ ಕ್ಯಾಬಿನೆಟ್ ಬಳಿ ಬಂದಾಗ ಅವನ ಮನಸ್ಸು ಒಂದು ಘಳಿಗೆ ತಡೆಯಿತು. ಬೆಳಗಿನ ಝಾವ ಶುಭ ಆಸ್ಪತ್ರೆಗೆ ಹೋಗುವ ಮುನ್ನ ತನ್ನ ಕೈಯನ್ನು ಅದುಮಿ ಹೇಳಿದ್ದಳು "ನೋಡಿ, ನೀವು ನಾನು ಬರೋವರ್ಗ್ಗೂ ಡ್ರಿಂಕ್ಸ್ ತೊಗೋಬಾರ್ದು....ಡಾಕ್ಟರ್ ಏನ್ಹೇಳಿದ್ದಾರೆ ಗೊತ್ತಿದೆ ತಾನೇ ?"

"ಆಗಲಿ ಶುಭ, ಈಗ್ಯಾಕೆ ಅದರ ಸಮಾಚಾರ ? ನಡಿ ಹೋಗೋಣ. ನಂಗೆ ಗೊತ್ತು ! ನೀನು ಬರೋವರ್ಗ್ಗೂ ಮುಟ್ಟೋಲ್ಲ. ಹೆದರ್ಬೇಡ" ಎಂದು ಆಶ್ವಾಸನೆಯನ್ನು ಕೊಟ್ಟಿದ್ದು ನಿಜ. ಕ್ಯಾಬಿನೆಟ್ಟಿನಲ್ಲಿ ಕಂಡ ಬಾಟಲುಗಳನ್ನು ಗಮನಿಸಿದಾಗ ಅವನ ಮನಸ್ಸು ಉಯ್ಯಾಲೆಯಾಡಿತು. ಹಿಂದಿನ ದಿನ ರಾತ್ರಿಯೂ ಅಷ್ಟೆ. ಶುಭನಿಮರಿಗೆ ಮುಟ್ಟದಿದ್ದರೂ ಅವಳು ಮಲಗಿದ ಮೇಲೆ ಎದ್ದು ಕುಡಿದಿರಲಿಲ್ಲವೇ ? ಸಧ್ಯ ಅದು ಅವಳ ಗಮನಕ್ಕೆ ಬಂದಿರಲಿಲ್ಲ. ತನ್ನ ನೋವಿನಲ್ಲಿ ಅವಳಿಗೆ ಯಾವುದರ ಗಮನವೂ ಇರಲಿಲ್ಲ. ಅವಳು ಬೆಳಗಿನ ಝಾವ ಮೂರು ಗಂಟೆಗೆ ತನ್ನನ್ನು ತಟ್ಟಿ ಎಬ್ಬಿಸಿದಾಗ ತನಗಿನ್ನೂ ಮತ್ತು ಪೂರ ಇಳಿದಿರಲಿಲ್ಲ.

"ಇಲ್ಲ ನೋಡಿ, ರವಿ, ರವಿ, ನಂಗ್ಯಾಕೋ ಸರ್ರ್ಯಾಗಿಲ್ಲ....ಏಳ್ತೀರಾ ?" ಅವಳು ಕಿವಿಯಲ್ಲಿ ಉಸುರಿದಾಗ ತಟಕ್ಕನೇ ಎದ್ದು ಕುಳಿತು ಅವಳ ಮುಖವನ್ನೇ ಪ್ರಶ್ನಾರ್ಥಕವಾಗಿ ನೋಡಿರಲಿಲ್ಲವೇ ?

"ರವಿ, ಪ್ಲೀಸ್ ಎಚ್ಚರಿಕೆ ಮಾಡ್ಕೊಳ್ಳಿ. ನಂಗ್ಯಾಕೋ ಸರ್ರ್ಯಾಗಿಲ್ಲ. ಪೈಯಿನ್ ಸ್ಟಾರ್ಟ್ ಆದಹಾಗಿದೆ. ಹೋದ ಸಲದ ಹಾಗೆ ಆದ್ರೆ....!" ಅವಳ ಕಣ್ಣಲ್ಲಿ ನೀರು ಕಟ್ಟಿತ್ತು. ತಾನು ಮನಸ್ಸಿಲ್ಲದ ಮನಸ್ಸಿನಿಂದ ಎದ್ದಾಗಿತ್ತು. ಮನಸ್ಸಿನ ಆತಂಕದಿಂದ ಶುಭನಿಗೆ ಬಟ್ಟೆ ಬದಲಿಸಲೂ ಆಗದಿದ್ದಾಗ ತಾನೇ ಅವಳಿಗೆ ಸೀರೆಯೊಂದನ್ನು ತೆಗೆದು ಉಡಿಸಿರಲಿಲ್ಲವೇ ? ಸಣ್ಣಗೆ ನಡುಗುತ್ತಾ, ನೋವಿನಿಂದ ಮುಖ ಹಿಂಡುತ್ತ, ಕಂಬನಿ ತುಂಬಿದ್ದ ಅವಳನ್ನು ತನಗೊರಗಿಸಿಕೊಂಡು ಕೆಳಗೆ ಕರೆದುಕೊಂಡು ಬಂದು ಕಾರಿನಲ್ಲಿ ಕೂರಿಸಿದಾಗ

ಮನೆಯಲ್ಲಿ ದಟ್ಟ ನೀರವತೆ. ತಂದೆಯ ರೂಮಿನ ಬಾಗಿಲು ಹಾಕಿತ್ತು. ಎಬ್ಬಿಸಲು ಮನಸ್ಸು ಬಾರದೇ ಬಾಬುವನ್ನು ಎಬ್ಬಿಸಿರಲಿಲ್ಲವೇ ? ಅಡಿಗೆ ಮನೆಯ ಒಂದು ಮೂಲೆಯಲ್ಲಿ ಮುದುರಿದ್ದ ಬಾಬುವನ್ನು ಎಬ್ಬಿಸಲು ತನಗೆ ಕೊಂಚ ಕಷ್ಟವೇ ಆಗಿತ್ತು.

ಕಾರಿನಲ್ಲಿ ಸೀಟನ್ನೊರಗಿ ಕಂಬನಿ ತುಂಬಿದ್ದ ಶುಭನನ್ನು ತಾನು ಸಾಂತ್ವನ ಗೊಳಿಸಿ ಧೈರ್ಯ ಕೊಡುವ ಬದಲು ಹುಬ್ಬು ಗಂಟುಹಾಕಿ ಸಿಡುಕಿ ಹೇಳಿದು ದುಂಟು.

"ಯಾಕೆ ಇಷ್ಟು ಫಸ್ ಮಾಡ್ತೀ ? ನಂಗೂ ನರ್ವಸ್ ಮಾಡ್ತೀಯಲ್ಲ ! ಪ್ರಪಂಚದಲ್ಲಿ ಯಾರಿಗೂ ಮಗೂನೇ ಹುಟ್ಟೋಲ್ವಾ ?" ಅವಳ ಪಕ್ಕದಲ್ಲಿ ಕುಳಿತು ಕಾರು ಸ್ಟಾರ್ಟ್ ಮಾಡಿದಾಗ ಅವಳು ತುಟಿ ಕಚ್ಚಿ ಅಳುವನ್ನು ನುಂಗಿದ್ದಳು. ತಾನು ಮಾಡಿದುದು ಸರಿಯೇ ? ನರ್ಸಿಂಗ್ ಹೋಂ ತಲುಪುವ ವರೆಗೂ ತಾನು ಅವಳೊಡನೆ ಒಂದು ಮಾತೂ ಆಡಿರಲಿಲ್ಲ. ತನ್ನ ಪರಿಚಯ ವಿದ್ದ ಡಾಕ್ಟರ್ ಮಾಥ್ಯೂಸ್ ಅವಳನ್ನು ಒಳಗೆ ಕರೆದುಕೊಂಡು ಹೋಗಿ ಪರೀಕ್ಷಿಸಿ ಹೇಳುವವರೆಗೆ ತಾನು ಹೊರಗೆ ಚಳಿಯಲ್ಲಿ ನಿಂತು ಯೋಚಿ ಸಿರಲಿಲ್ಲವೇ ? ತಾನು ಮಾಡುತ್ತಿರುವುದು ಸರಿಯೇ ಎಂದು ಶುಭ ನನ್ನು ಕಂಡರೆ ತನಗೆ ಪ್ರೀತಿ ಕಡಿಮೆಯಾಗುತ್ತಿದೆಯೇ ? ಎಂದಿಗೂ ಇಲ್ಲ. ಅವಳಿಂದ ಈಚೀಚೆಗೆ ದೂರ ಸರಿದಾಗ ಅವಳು ನೋವಿನ ನಗೆ ನಕ್ಕಿದ್ದಳು. ತಾನು ಕುಡಿದು ಮುಗಿಸಿದ ಬಾಟಲನ್ನೆತ್ತಿ ತನ್ನ ಮುಂದೆ ಹಿಡಿದು ತೋರಿದ್ದಳು.

"ಇದರ ತುಂಬಾ ವಿಸ್ಕಿಯಿದ್ದಾಗ ಇದು ನಿಮಗೆ ಬೇಕಾಗಿತ್ತು. ಈಗ ಅದು ಖಾಲಿಯಾಗಿದೆ. ಹಾಗೇ ನಾನೂನೂ...." ಶುಭ ತನ್ನನ್ನು ಎಷ್ಟು ಅಪಾರ್ಥ ಮಾಡಿಕೊಂಡಿದ್ದಳು. ಅವಳಿಗೇನು ಗೊತ್ತು, ತಾನು ಬೇಕೆಂತಲೇ ಅವಳಿಂದ ದೂರ ಹೋಗಬಯಸುತ್ತಿದ್ದುದು, ಅವಳು ತನ್ನನ್ನು ನಿರ್ಲಕ್ಷಿಸಬೇಕು. ಅವಳು ತನ್ನನ್ನು ಬಹಳವಾಗಿ ಹಚ್ಚಿಕೊಳ್ಳಬಾರದು-ತನ್ನಿಂದ ಬೇರೆಯಾಗಿರುವುದನ್ನು ಕಲಿಯಬೇಕೆಂದು ತಾನೆಷ್ಟು ನಟನೆ ಮಾಡಬೇಕಿತ್ತು ! ಡಾಕ್ಟರ್ ಮಾಥ್ಯೂಸ್ ಅಂದು ತನ್ನನ್ನು ಕರೆದುಕೊಂಡು ಹೋಗಿ ಫಿಸಿಷಿಯನ್ ಆಗಿದ್ದ ಡಾ|| ಕೃಷ್ಣಗೆ ತೋರಿಸಿದಾಗ ಅವರು ಹೇಳಿದ್ದರು 'ಬಹಳ ಅಡ್ವಾನ್ಸ್ಡ್ ಸಿರೋಸಿಸ್. ನೀವು ಡ್ರಿಂಕ್ಸ್, ಸ್ಮೋಕಿಂಗ್ ಎಲ್ಲಾ ನಿಲ್ಲಿಸಿಬಿಡಬೇಕು. ಇಲ್ಲಿದ್ರೆ ಫೇಟಲ್"

ಅಂತ. ಆದರೆ ತಾನು ಶುಭ, ಡ್ರಿಂಕ್ಸ್, ಸಿಗರೇಟಿಲ್ಲವೆ ಬದುಕಬಹುದೇ ? ಹೊಟ್ಟೆ ಕಿತ್ತುಬರುವಷ್ಟು ನೊಂದರೂ ಸರಿ, ಅವುಗಳಿಲ್ಲದೇ ಬದುಕಲಾರೆ. ಡಾಕ್ಟರ್ ಮಾಥ್ಯೂಸಿನ ಬಳಿ ತಾನು ಭಾಷೆ ತೆಗೆದುಕೊಂಡಿರಲಿಲ್ಲವೇ ? "ಏನಾದ್ರೂ ಈ ಸಮಾಚಾರ ಶುಭಂಗೆ ಹೇಳಬಾರದು" ಎಂದು, ತಾನು ಬದುಕಿರುವವರೆಗೂ ಕುಡಿದು, ತಿಂದು ಬದುಕಿನಲ್ಲಿ ಸಂತಸಪಡಬೇಕೆಂಬ ಹಿರಿಯಾಸೆ ತನಗಿರಲಿಲ್ಲವೇ ? ತನ್ನ ದುರಭ್ಯಾಸಗಳ ಗುಂಪಿನ ನಡುವೆ ತಾನು ಬದುಕಿರಬಹುದಾದ ದಿನಗಳು ಬಹಳ ಕಡಿಮೆ. ತನಗೇನಾದರೂ ಆದರೆ ಶುಭನ ಗತಿ ? ಅವಳಿಗೆ ತಾನಿಲ್ಲದೇ ಬದುಕಲೇಬಾರದು. ಮದುವೆಯಾದ ದಿನದಿಂದ ನನ್ನನ್ನು ನೆರಳಿನಂತೆ ಹಿಂಬಾಲಿಸಿದ್ದಳು. ಅವಳು ಉಸಿರನ್ನು ತನ್ನಲ್ಲಿ ಅಡಗಿಸಿದ್ದಳು. ಜೀವವನ್ನು ತನ್ನುಸಿರಿನಲ್ಲಿ ಬೆರೆಸಿದ್ದಳು. ಅವಳ ಹೃದಯದ ಮಿಡಿತವನ್ನು ತನ್ನ ಹೃದಯದಲ್ಲಿ ಮಿಡಿಸಿದ್ದಳು. ತಾನು ಅವಳನ್ನು ಒಂದರೆ ಕ್ಷಣ ಬಿಟ್ಟಿರಲಾರದೇ ಒದ್ದಾಡುತ್ತಿರಲಿಲ್ಲವೇ ? "ಮ್ಯಾಚಸ್ ಆರ್ ಮೇಡ್ ಇನ್ ಹೆವೆನ್' ಅನ್ನಾರೆ ಚಿನ್ನಾ, ನಾನ್ಹೇಳೋದು ಏನೂ ಗೊತ್ತಾ 'ಇಟ್ ಈಸ್ ಎ ಹೆವೆನ್ ವೇರ್ ದಿಸ್ ಮ್ಯಾಚ್ ಗೋಸ್' ಅಂತ ! ಅಂದು ಅವಳನ್ನಪ್ಪುತಿರಲಿಲ್ಲವೇ ? ಘಳಿಗೆಗೊಂದು ಬಾರಿ ಅವಳನ್ನು ಮುತ್ತಿಟ್ಟು "ಐ ಲವ್ ಯೂ ಡಾರ್ಲಿಂಗ್" ಎನ್ನುತ್ತಿರಲಿಲ್ಲವೇ ? ಅವಳೂ ತನಗೆ ಹಾಗೆ ಉತ್ತರ ಹೇಳದಿದ್ದರೆ ಪೀಡಿಸಿ ಕಾಡಿಸಿ ಹೇಳಿಸುತ್ತಿರಲಿಲ್ಲವೇ ?

ರಘು ಊರಿಗೆ ಹೊರಡುವ ಹಿಂದಿನ ದಿನವಂತೂ ತನಗಾಗಿ ಕಾದು ಸೋಫಾದ ಮೇಲೆಯೇ ಮಲಗಿಬಿಟ್ಟಿದ್ದಾಗ ತಾನು ಅವಳನ್ನು ತಬ್ಬಿ ತನ್ನ ರೂಮಿಗೆ ಕರೆದುಕೊಂಡು ಹೋಗಿ ಕೂಡಿಸಿಕೊಂಡಾಗ ತನ್ನನ್ನು ಎರಡು ಬಾಹುಗಳಿಂದ ಅಪ್ಪಿ, ತನ್ನೆದೆಯ ಮೇಲೆ ಮುಖವಿಟ್ಟು ಅಳುತ್ತಿದ್ದಳು 'ರವಿ ನನ್ನಾಣೆ, ನೀವು ನನ್ನ ಒಬ್ಬಳನ್ನೇ ಬಿಟ್ಟು ಹೋದರೆ. ನಾನು ಬೇರೆ ಯಾರ ಜೊತೆಗಾದರೂ ಓಡಿ ಹೋಗಿಬಿಡುತ್ತೇನೆ. ಇಲ್ಲಾ, ಯಾರಾದರೂ ನನ್ನ ಎತ್ತಿಕೊಂಡು ಹೊರಟುಹೋಗ್ತಾರೆ. ಆಮೇಲೆ ನಾನು ನಿಮ್ಮ ಕೈಗೆ ಖಂಡಿತ ಸಿಗೋಲ್ಲ' ಅಂತ. ಹುಚ್ಚು ಹುಡುಗಿ !

ರವಿ ಕೈಗೆ ಬಾಟಲೊಂದನ್ನು ಎತ್ತಿಕೊಂಡು ಅದನ್ನು ನೇವರಿಸಿದನು.

ತನ್ನ ತಾಯಿಯೂ ಎಷ್ಟು ಹೌಹಾರಿದ್ದಳು. "ಇದೇನು ಹುಚ್ಚಾಟ ರವಿ. ಹೆಂಡತೀಂದ್ರೆ ಪ್ರೀತಿ ನಿಜ. ಆದ್ರೇ ಹೋದ ಬಂದ ಕಡೆಗೆಲ್ಲಾ ಕಟ್ಟಿಕೊಂಡು ತಿರುಗಾಡ್ತಿಯಲ್ಲ. ಜನ ನಗೋಲ್ವೇ ?" "ನನ್ನ ಹೆಂಡ್ತೀನ ನಾನು ಕಟ್ಕೊಂಡು ತಿರುಗಾಡಿದ್ರೆ ಜನ ಯಾಕೆ ನಗ್ಬೇಕು ?" ತಾನು ಉತ್ತರಿಸಿರಲಿಲ್ಲವೇ ?

ಮೊದಲ ಸಲ ತಾನು ಗರ್ಭಿಣಿಯೆಂದು ಶುಭ ತಿಳಿಸಿದಾಗ ತಾನು ಅವಳನ್ನು ಅಪ್ಪಿ ಮುದ್ದಾಡಿರಲಿಲ್ಲವೆ ? ನಡೆದರೆ ಕಾಲು ಸವೆದೀತೆಂದು ಮಾತಾಡಿದರೆ ಗಂಟಲಿಗೆ ಆಯಾಸವೆಂದು ತಾನು ಹೂವಿನಂತೆ ಅವಳನ್ನು ನೋಡಿಕೊಂಡಿರಲಿಲ್ಲವೇ ? ಆದರೆ ಡಾಕ್ಟರು ತನಗೆ ಕೊಟ್ಟ ಶಿಕ್ಷೆಯಾದರೂ ಏನು ? "ರವಿ, ನೀವು ಶುಭನಿಂದ ದೂರ ಇರ್ಬೇಕೂ ...ಇಲ್ಲಿದ್ರೆ ಪ್ರೆಗ್ನೆನ್ಸಿ ಟರ್ಮಿನೇಟ್ ಆಗೋ ಚಾನ್ಸಸ್ ತುಂಬಾ ಇದೆ...." ಎಂದು. ಶುಭನಿಂದ ದೂರವಿರಲು ತನಗೆ ಸಾಧ್ಯವೇ ? ಅದು ಸಾಧ್ಯವಾಗದಿದ್ದಾಗ ಸುರಾದೇವಿಯನ್ನು ಆಶ್ರಯಿಸಿ ಕಂಠಪೂರ್ತಿ ಕುಡಿದು, ಕುಡಿದ ಅಮಲಿನಲ್ಲಿ ಶುಭನನ್ನು ಸೇರಿರ ಲಿಲ್ಲವೇ ? ವೈಯಿಳಿದಾಗ ತಾಯಿಯೂ ಕೊಂಚ ಖಾರವಾಗಿಯೇ ಹೇಳಿದ್ದರು. "ನಾಲ್ಕು ದಿನ ಅವಳನ್ನು ಹಾಯಾಗಿ ಬಿಡಬಾರದೇ ? ಮೂರು ಹೊತ್ತೂ ನಿನ್ನ ಮುಂದೆ ಕುಳಿತಿದ್ದರೆ ಹೇಗೆ ? ನಾವೂ ನಿನ್ನ ಹೆಂಡತಿ ಜೊತೆ ಮಾತು ಕತೆ ಆಡಬಾರದೇ ? ಯಾವಾಗಲೂ ನೀನಾಯ್ತು, ಅವಳಾಯ್ತು. ಮದುವೆ ಯಾದಾಗಿನಿಂದ ಒಂದು ದಿನವಾದರೂ ಮನೆ ಜವಾಬ್ದಾರಿ ತೊಂಗೊಂಡು ನೋಡಿ ಕೊಂಡಿದ್ದಾಳಾ ? ಹೀಗಾದರೆ ಹೇಗೆ ? ನಾನೇ ಯಾವಾಗಲೂ ಶಾಶ್ವತಾನಾ ?"

ತನ್ನ ಬಳಿ ಶುಭ ಬಂದಾಗ ತಾಯಿ ಬೇಕೆಂತಲೇ ಶುಭನನ್ನು ಯಾವುದಾ ದರೂ ಕೆಲಸಕ್ಕೆ ಕರೆಯುತ್ತಿದ್ದರು. ತಾನು ಎಸ್ಟೇಟಿನ ಕೆಲಸಕ್ಕೆ ಹೋಗುವ ಮುನ್ನ ಐದು ನಿಮಿಷ ಸಿಕ್ಕಿದರೆ ಮತ್ತೆ ಊಟಕ್ಕೆ ಮನೆಗೆ ಬಂದಾಗ ಒಂದೆರಡು ನಿಮಿಷ, ಶುಭ ಸಂಜೆ ಒಂದು ಹತ್ತು ನಿಮಿಷ, ರಾತ್ರಿಯ ಹೊತ್ತು ಮಾತ್ರ ತನ್ನ ಕೈಗೆ ಪೂರ ಸಿಗುತ್ತಿದ್ದುದು. ಮನೆಯ ಉಸ್ತುವಾರಿ, ಕೆಲಸದವರ ಉಸ್ತುವಾರಿ, ಅಡಿಗೆಯ ಉಸ್ತುವಾರಿ ಎಲ್ಲವನ್ನೂ ಅವಳಿಗೆ ಒಪ್ಪಿಸಿ ತಾಯಿ ಬೇಕಾಗಿಯೇ ತನ್ನ ಕೊಠಡಿಯಲ್ಲಿರುತ್ತಿರಲಿಲ್ಲವೇ ? ರಾತ್ರಿ ಮಲಗುವ ಹೊತ್ತಿಗೆ ಶುಭನಿಗೆ ಸಾಕಾಗಿಹೋಗಿರುತ್ತಿತ್ತು. ತನಗೆ ಧರ್ಮಪತ್ನಿಯಾಗತೊಡಗಿದ್ದಳು- ಪ್ರೇಯಸಿಯಾಗಿಯಲ್ಲ !

ಎರಡನೆಯ ಸಲ ಗರ್ಭಿಣಿಯಾದಾಗ ತಾಯಿ ಬೇಕೆಂತಲೇ ಖಾಯಿಲೆಯ ನೆವ ಮಾಡಿಕೊಂಡು ತನ್ನ ಬಳಿ ಶುಭನನ್ನು ಬಹಳ ಹೊತ್ತು ಕೂರಿಸಿಕೊಂಡು ತನ್ನ ಕೈಗೇ ಸಿಗದ ಹಾಗೆ ಮಾಡಿದಾಗ ತಾನು ರೊಚ್ಚಿಗೆದ್ದಿರಲಿಲ್ಲವೇ ? ಶುಭನ ಮೇಲೆ ಹಾರಾಡಿರಲಿಲ್ಲವೇ ? ರಾತ್ರಿ ಪೂರ ಕುಡಿದು ಬಾಯಿಗೆ ಬಂದ ಹಾಗೆ ಶುಭನನ್ನು ಬೈದಿರಲಿಲ್ಲವೇ "ನೀನಲ್ದೇ ಇದ್ರೆ ನಿನ್ನಂತಹ ನೂರು ಜನ ಸಿಗ್ತಾರೆ. ನಾನು ದುಡ್ಡು ಕೊಟ್ರೇ....ಹೋಗೋಗು ಅಮ್ಮನ ಚಾಕರಿ ಮಾಡ್ಕೋಗು ..." ತಂದೆ ತಾಯಿಯರ ಮುಂದೆ ಶುಭ ಜೀವವನ್ನು ಒಂದು ಹಿಡಿಮಾಡಿಕೊಂಡು ತನ್ನನ್ನು ಕೈಮುಗಿದು ಬೇಡಿರಲಿಲ್ಲವೇ ? "ದಯವಿಟ್ಟು ಹೀಗೆ ಕೂಗಾಡಬೇಡಿ, ಅಪ್ಪ ಅಮ್ಮನ ಮುಂದೆ. ನಿಮಗಿಷ್ಟ ಬಂದ ಹಾಗೆ ಮಾಡಿ" ಅಪ್ಪ ಅಮ್ಮನೆದುರೇ ಅವಳನ್ನು ದರದರನೆ ಕೈ ಹಿಡಿದೆಳೆದುಕೊಂಡು ಹೋಗಿರಲಿಲ್ಲವೇ ? ಅಮಲಿಳಿದು ತನ್ನ ಬಾಹುಗಳಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿದ ಶುಭನನ್ನು ಅಪ್ಪಿ ತಾನೂ ಕಣ್ಣೀರಿಟ್ಟಿರಲಿಲ್ಲವೇ ?

"ಶುಭಾ... ನನ್ನ ಕ್ಷಮಿಸು....ನಾನು ಕಟುಕ....ನಿಂಗೆ ಗೊತ್ತಿಲ್ಲ. ನಾನು ನಿಂಗೆ ಸರಿಯಾದ ಗಂಡ ಅಲ್ಲ ...ನೀನು ರಘೂನ ಮದ್ವೆ ಮಾಡ್ಕೋಬೇಕಿತ್ತು... ಅವನು ನನ್ನ ಹಾಗಲ್ಲ." ಶುಭ ಸಿಡಿದೆದ್ದು ಕುಳಿತು ಕಿರಿಚಿರಲಿಲ್ಲವೇ ? "ರವಿ ಆ ಮಾತಾಡುವ ಬದಲು ನನಗೆ ಎಲ್ಲಿಂದಲಾದರೂ ವಿಷ ತಂದು ಕೊಡ ಬಾರದೇ ? ನಾನು ಈ ನರಕದಿಂದ ಪಾರಾಗುತ್ತೇನೆ !" ಎಂದು. ಅವಳನ್ನು ಸಮಾಧಾನ ಮಾಡಲು ತಾನು ಪಟ್ಟ ಪ್ರಯತ್ನವೆಷ್ಟು !

ಶುಭ ಬರುಬರುತ್ತಾ ಮೌನಿಯಾಗುತ್ತಿದ್ದಳು. ಎರಡು ಸಲ ಮೈಯಿಳಿದಾಗಿ ನಿಂದ ಆರೋಗ್ಯವೂ ಕೆಡುತ್ತಿತ್ತು. ಕುಳಿತರೆ ನಿಂತರೆ ಸುಸ್ತು. ಎರಡು ಮಾತಾಡಿ ದರೆ ಹೆಚ್ಚು, ಎರಡು ಮಾತಾಡಿದರೆ ಕಡಿಮೆ. ಮಾತಿಗೆ ಮುಂಚೆ ಕಣ್ಣಲ್ಲಿ ಕಂಬನಿಯ ಕೋಡಿ–ಅವಳನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗುತ್ತಿತ್ತು. ಒಮ್ಮೆ ನಂದಿನಿಯ ಮನೆಗೆ ಹೋಗಬೇಕೆಂದು ಹಟಮಾಡಿದಾಗ ತಾನು ಕರೆದು ಕೊಂಡು ಹೋದುದು-ಶುಭ ಅಲ್ಲಿಂದ ಹಿಂತಿರುಗಿದ ಮೇಲೆ ತಾನು ನಂದಿನಿಯ ಮನೆಯಲ್ಲೇ ಕೊಂಚ ದಿನಗಳನ್ನು ಕಳೆಯುವುದಾಗಿ ಹೇಳಿದಾಗ ತಾನೆಷ್ಟು ಬೆದರಿದ್ದೆ. ಅಂದಿನಿಂದ ನಂದಿನಿಯ ಮನೆಗೆ ಅವಳನ್ನು ಕಳಿಸುತ್ತಿರಲೇ ಇಲ್ಲ. ಆದಷ್ಟು ಶುಭ ಹೇಳಿದಂತೆ, ಅವಳ ಮೂಗಿನ ನೇರಕ್ಕೇ ಹೋಗಲು ಮೊದಲ.

ಮಾಡಿರಲಿಲ್ಲವೇ ? ತಾನಾಗಿಯೇ ಒಲಿದು ಬಂದರೆ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳುತ್ತಿದ್ದುದು. ಎರಡು ಬಾರಿ ಅವಳು ಅನುಭವಿಸಿದ ನರಕಯಾತನೆ ತನ್ನನ್ನು ಎಚ್ಚರಿಸಿರಲಿಲ್ಲವೇ ?

ಬರುಬರುತ್ತಾ ಶುಭನ ರೀತಿಯೇ ಬದಲಾಯಿಸಿತು ತಾನು ಬೇಕೆಂತಲೇ ಅವಳನ್ನು ನಿರ್ಲಕ್ಷಿಸುತ್ತಿರುವೆನೆಂದು ಅವಳ ಭಾವನೆ. ಬೇಕೆಂತಲೇ ಅಲಂಕರಿಸಿಕೊಂಡು ಬಂದು ತನ್ನ ಮುಂದೆ ನಿಂತು "ನೋಡಿ, ನಾನ್ಹೇಗೆ ಕಾಣ್ತೀನಿ ಈಗ ?" ಎಂದಾಗ ತಾನು ಅವಳ ನೋಡಿಗೆ ಸಿಕ್ಕಬಾರದೆಂದು, ಅವಳು ಚೆಲುವು ಅವಳಿಗೇ ಮಾರಕವಾಗಬಾರದೆಂದು ಅವಳತ್ತ ನೋಡದೆಯೇ "ಫಸ್ಟ್‌ಕ್ಲಾಸ್, ನೀನು ಹೇಗೆ ಡ್ರೆಸ್ ಮಾಡಿಕೊಂಡರೂ ಚೆನ್ನ...." ಎಂದುತ್ತರಿಸಿದರೆ ಶುಭ ಕಣ್ಣೀರಿಟ್ಟು ಗೊಂದಲವೆಬ್ಬಿಸುತ್ತಿರಲಿಲ್ಲವೇ ? "ನಿಮಗೆ ನನ್ನ ಕಂಡರೆ ಮೊದಲಿನಷ್ಟು ಪ್ರೀತಿಯಿಲ್ಲ..." "ನಿಮಗೆ ಬೇರೆ ಯಾರಾದ್ರೂ ಇದಾರೋ ಹೇಗೆ ?" "ಯಾವಾಗ್ಲೂ ಆ ಕೆಲಸದವಳ ಹತ್ತಿರ ಏನು ಮಾತು ?" ಹೀಗೆ ನೂರಾರು ಬಗೆಯ ಪ್ರಶ್ನೆಗಳನ್ನು ಹಾಕಿ ಅವಳೂ ನೊಂದು ತನ್ನನ್ನೂ ನೋಯಿಸುತ್ತಿರಲಿಲ್ಲವೇ? ಅಂತಹ ಸಮಯದಲ್ಲಿ ಅವಳನ್ನು ಸಮಾಧಾನ ಮಾಡಹೋಗುವಾಗ ತಾನು ಸಂಯಮ ಬಿಟ್ಟು ನಡೆದಿರಲಿಲ್ಲವೇ ?

ಹಸುಗಳಿಗೆ, ಕೋಳಿಗಳಿಗೆ ರೋಗ ತಗುಲಿದಾಗ ತಾನು ಹೆಚ್ಚು ಹೊತ್ತು ಎಸ್ಟೇಟಿನಲ್ಲೇ ಉಳಿದು ಮನೆಗೆ ತಡವಾಗಿ ಬರುತ್ತಿದ್ದುದೇ ಅಪರೂಪವಾದಾಗ ಶುಭ ತಪಸ್ವಿನಿಯ ಹಾಗಾಗುತ್ತ ಬಂದಿದ್ದಳು ಅಲಂಕಾರದಲ್ಲಿ ಮೊದಲಿನ ಆಸಕ್ತಿಯಿರಲಿಲ್ಲ. ಯಾವುದೋ ಹಳೆಯ ಸೀರೆ, ಕೆದರಿದ ತಲೆ, ನಿರ್ವಿಕಾರವಾದ ಮುಖ, ಜೊತೆಗೆ ಮಿತವಾದ ಮಾತು-ತನಗೇ ಅವಳನ್ನು ಮಾತನಾಡಿಸಲು ಹೆದರಿಕೆಯಾಗುತ್ತಿತ್ತು. ಮೂರು ಹೊತ್ತೂ ಕೈಯಲ್ಲಿ ಪುಸ್ತಕ ಹಿಡಿದು ಕುಳಿತಿರುತ್ತಿದ್ದಳು-ಅವಳು ದೂರವಾದಂತೆಲ್ಲ ತನಗೆ ಕುಡಿತದ ಚಟ ಜೋರಾಗುತ್ತಿತ್ತು. ಕುಡಿದ ಅಮಲಿನಲ್ಲಿ ಸೌಮ್ಯವಾಗಿ, ಮೌನವಾಗಿ ಮಲಗಿರುತ್ತಿದ್ದ ಶುಭನನ್ನು ಹಿಂಸಿಸಿ, ನೋಯಿಸಿ ತನ್ನವಳನ್ನಾಗಿ ಮಾಡಿಕೊಂಡು ಪಶುವಂತೆ ವರ್ತಿಸಿರಲಿಲ್ಲವೇ ? ಒಂದೆಡೆ ಹಸುಗಳ, ಕೋಳಿಗಳ ರೋಗದಿಂದ ಕ್ರಮೇಣ ಇಳಿಮುಖವಾಗುತ್ತಿದ್ದ ತನ್ನ ಹಣ, ಮಳೆಯಿಲ್ಲದೇ ಒಣಗಿದ್ದ ಭಾಗದಲ್ಲಿ ಬಂಡೆಯೊಂದು ಅಡ್ಡ ಎದ್ದು ನೀರು ತಡೆದು ಒಣಗಿಹೋದ ಪೈರುಗಳು—

ಹುಲ್ಲು, ಹೂವಿನ ಗಿಡಗಳು....ಸಾಲವಕ್ಕೆ ಮನೆಯಲ್ಲಿ ಸಿಗದ ತಾನು ಬಯಸಿದ ಸುಖ-ತಾನು ಬೆಳಿಗ್ಗೆ, ಮಧ್ಯಾಹ್ನ ಸಂಜೆ, ಕುಡಿದು ಕಷ್ಟ ಮರೆಯಲು ಯತ್ನಿಸಿರಲಿಲ್ಲವೇ ? ಇದ್ದಕ್ಕಿದ್ದಹಾಗೆ ಪ್ರಾರಂಭವಾದ ಹೊಟ್ಟೆ ನೋವು, ವಾಕರಿಕೆ, ಸುಸ್ತು ತನ್ನನ್ನು ಅರ್ಧ ಮಾಡಿರಲಿಲ್ಲವೆ ? ಮನೆಯವರಿಗೆ ತಿಳಿಸದೇ ಒಮ್ಮೆ ದಾರಿಯಲ್ಲಿ ಭೇಟಿಯಾದ ಡಾಕ್ಟರ್ ಮಾಥ್ಯೂಸ್‌ಗೆ ತನ್ನ ಹೊಟ್ಟೆ ನೋವಿನ ಬಗ್ಗೆ ತಿಳಿಸಿದಾಗ ಅವರು ಬಲವಂತ ಮಾಡಿ ತನ್ನನ್ನು ಡಾ॥ ಕೃಷ್ಣ ಬಳಿಗೆ ಕರೆದೊಯ್ದಿರಲಿಲ್ಲವೇ ? ಇದಕ್ಕೆ ಸೇರುವಂತೆ ಶುಭ ಮತ್ತೆ ಗರ್ಭಿಣಿಯೆಂದು ತಿಳಿಸಿದಾಗ ತಾನು ಹೆದರಿರಲಿಲ್ಲವೇ ? ಡಾಕ್ಟರ್ ಮಾಥ್ಯೂಸ್ ಬಳಿ ಹೋಗಿ ಗುಟ್ಟಾಗಿ ಬಸಿರಿಳಿಸಿಬಿಡುವಂತೆ ಕೇಳಿಕೊಂಡಿರಲಿಲ್ಲವೇ ? ಆದರೆ ಆಕೆ ಒಪ್ಪದೇ ತನಗೆ ಶುಭನನ್ನು ಬಹಳ ಹುಷಾರಿನಿಂದ ಮೂರು ನಾಲ್ಕು ತಿಂಗಳು ನೋಡಿಕೊಳ್ಳಬೇಕೆಂದು ಹೇಳಿ ಕಳಿಸಿರಲಿಲ್ಲವೇ ? ಆದರೆ ಶುಭನಿಗ ಅದು ಸರಿಬರುತ್ತಿರಲಿಲ್ಲ. "ನನಗೇಕೆ ವಿಶ್ರಾಂತಿ ? ನನಗೇನಾಗಿದೆ ಧಾಡಿ ?" ಎಂಬ ಧೋರಣೆ. ಗಡುವು ದಾಟಿದ ಮೇಲೆ ತನಗೆ ಸಮಾಧಾನದ ನಿಟ್ಟುಸಿರು. ಆದರೆ ಬರಸಿಡಿಲಿನಂತೆ ಬಂದ ತಾಯಿಯ ಖಾಯಿಲೆ-ಸಾವು-ಶುಭಳ ಓಡಾಟ ಶ್ರಮ.... ತಾಯಿ ಕಣ್ಮುಚ್ಚಿದ ಹದಿನೈದು ದಿನಗಳಲ್ಲಿ ಮತ್ತೆ ಶುಭ ಆಸ್ಪತ್ರೆಯಲ್ಲಿ ಮೂರನೇ ಬಾರಿಯೂ ಹೀಗಾದ ಮೇಲೆ ಡಾಕ್ಟರ್ ತನಗೆ ಹೇಳಿದ್ದರು. "ರವಿ, ಶುಭ ತುಂಬಾ ಎನಿಮಿಕ್. ಸಧ್ಯಕ್ಕೆ ಮಕ್ಕಳ ಯೋಚನೆ ಬೇಡಾ....ಸ್ವಲ್ಪ ಸುಧಾರಿಸಿಕೊಂಡ ಮೇಲೆ ನೋಡೋಣ...."

ತಾಯಿ ಸತ್ತಾಗಲೂ ಬಾರದಿದ್ದ ರಘು, ತನಗೊಂದು ಸಮಸ್ಯೆಯಾಗಿರಲಿಲ್ಲವೇ ? ಮನೆಯ ಜವಾಬ್ದಾರಿ, ಎಸ್ಟೇಟಿನ ಜವಾಬ್ದಾರಿ, ತಾಯಿ ಹೋದ ಮೇಲೆ ಕ್ಷೀಣಿಸುತ್ತಿದ್ದ ತಂದೆ, ನಿತ್ರಾಣಳಾಗಿದ್ದ ಶುಭ, ಎಲ್ಲರನ್ನೂ ಎಲ್ಲವನ್ನೂ ತಾನೊಬ್ಬನೇ ಹೇಗೆ ನೋಡಿಕೊಳ್ಳುವುದು ? ಒಡಹುಟ್ಟಿದ ತಮ್ಮನಿಗೆ ಬರೆದರೂ ಏನೂ ಪ್ರಯೋಜನವಿರಲಿಲ್ಲ....

ಮನೆಯೊಂದು ಮಸಣದಂತಾಗಿತ್ತು. ವಾನಪ್ರಸ್ಥದತ್ತ ಮುನ್ನಡೆಯುತ್ತಿದ್ದ ತಂದೆ ತನಗೆ ಬೆಳಗಿನಿಂದ ರಾತ್ರಿಯವರೆಗೆ ಎಸ್ಟೇಟಿನ ಕೆಲಸ.... ಇದರ ಮಧ್ಯೆ ಶುಭ, ಒಂಟಿ, ಅನಾಥೆ, ಅಬಲೆ. ಎರಡು ಹಸುಗಳು ಒಮ್ಮೆಗೆ ಕರು ಹಾಕಿದ ಮೇಲೆ ಮಧ್ಯ ರಾತ್ರಿಯ ವೇಳೆಗೆ ತಾನು ಮನೆಗೆ ಬಂದಾಗ ಶಿಲೆ

ಯಂತೆ ಕುಳಿತಿದ್ದ ಶುಭ—ಕಣ್ಣಲ್ಲಿ ನೀರು-"ನನ್ನನ್ನು ಹೀಗೇ ಒಂಟಿಯಾಗಿಟ್ಟು ಹುಚ್ಚು ಹಿಡಿಸುತ್ತೀರೇನು ? ಇದಕ್ಕೆ ನನ್ನನ್ನು ಮದುವೆಯಾದಿರಾ ?....ನಾನು ತಡೆಯಲಾರೆ, ನಾನು ಇಲ್ಲಿರಲಾರೆ. ಈ ಎಸ್ಟೇಟನ್ನು ಮಾರಿಬಿಡಿ... ನಾನು ನೀವೂ ಇಬ್ಬರೂ ಬೆಂಗಳೂರಿನಲ್ಲಿ ಹಾಯಾಗಿರಬಹುದು. ನಾನು ಕೆಲಸ ಕ್ಕಾದರೂ ಸೇರುತ್ತೇನೆ..." ಶುಭಳ ಗೋಳು. ತಾನೇನು ಮಾಡುವುದು ? "ನಾನು ಇಲ್ಲಿ ಯಾರಿಗೂ ಬೇಡವಾದವಳು....ಇದ್ದ ಅಣ್ಣ ಅತ್ತಿಗೆ ತೊರೆಸಿ ಕರೆದುಕೊಂಡು ಬಂದಿರಿ....ಇದೊಂದು ಜೈಲು ನನಗೆ..." ದಿನಬೆಳಗಾದರೆ ಶುಭನ ಕಣ್ಣೀರು. ಶುಭ ಕಣ್ಣೀರು ಹಾಕುತ್ತಲೇ ತಲೆಗೂದಲನ್ನು ಕೆದರಿ ಉಟ್ಟ ಸೀರೆಯನ್ನೇ ಹರಿದು ಚಿಂದಿ ಮಾಡಿದಾಗ ತಾನು ಬೆದರಿ ಅವಳನ್ನಪ್ಪಿ, ಮುದ್ದಿನ ಮಳೆಗರೆದು ಸಮಾಧಾನ ಮಾಡಿರಲಿಲ್ಲವೇ? "ಆಗಲಿ ಚಿನ್ನ, ಈ ಎಸ್ಟೇಟು ಮಾರಿಬಿಟ್ಟು ನಾವಿಬ್ಬರೇ ಎಲ್ಲಾದರೂ ಹಾಯಾಗಿದ್ದು ಬಿಡೋಣ" ಎಂದು ಅವಳನ್ನು ಒಳ್ಳೆಯ, ಸ್ನೇಹಮಯ, ಪ್ರೇಮಮಯ ಪರಿಸರದಲ್ಲಿಡಲು ತಾನು ಪ್ರಯತ್ನಿಸುತ್ತಾ ತನ್ನ ದೇಹದಲ್ಲಿ ಬೆಳೆಯುತ್ತಿದ್ದ ಖಾಯಿಲೆಯನ್ನು ನಿರ್ಲ ಕ್ಷಿಸಲಿಲ್ಲವೇ ? ಶುಭ ಮತ್ತೆ ಮೊದಲಿನಂತೆ ತನ್ನನ್ನೇ ಬಲವಾಗಿ ಹಿಡಿದಿದ್ದಳು. "ನನಗಿರುವವರು ನೀವೊಬ್ಬರೇ ನೀವು ನನ್ನ ದೂರಮಾಡಿದರೆ ನಾನು ನೀವು ತೋಡಿಸಿರುವ ಬಾವಿಯಲ್ಲೇ ಬಿದ್ದು ಪ್ರಾಣ ಕಳೆದುಕೊಳ್ಳುತ್ತೇನೆ" ಎಂದು ತನ್ನೆದೆಯ ಮೇಲೆ ಮಲಗಿ ಅತ್ತಿರಲಿಲ್ಲವೇ ? ಒಮ್ಮೆ ರಾತ್ರಿ ಊಟ ಮಾಡಿ ದಿನ ನಿತ್ಯದಂತೆ ಹಾಸಿಗೆಗೊರಗಿ ಕುಳಿತು ಮಾತನಾಡುತ್ತಿದ್ದಾಗ ಶುಭ ತನ್ನ ತಲೆಗೂದಲೊಡನೆ ಆಡುತ್ತಾ ಹೇಳಲಿಲ್ಲವೇ ? "ರಿ, ನಿಮಗೆ ಮಕ್ಕಳೆಂದರೆ ಇಷ್ಟವಿಲ್ಲವೇ ? ನಿಜ ಹೇಳಿ...." ಇದ್ದಕ್ಕಿದ್ದ ಹಾಗೆ ಬಂದ ಮಾತು ಕೇಳಿ ತಾನು ಹೌಹಾರಿ ಉತ್ತರಿಸದಿದ್ದಾಗ,

"ನನಗೆ ಗೊತ್ತು. ನಿಮಗಿಷ್ಟ. ಆದರೆ ನನಗೆ ಒಂದೂ ಉಳಿಯಲಿಲ್ಲ. ನನ್ನ ಡೈವೋರ್ಸ್ ಮಾಡಿಬಿಡಿ....ಬೇರೆ ಯಾರನ್ನಾದರೂ ಮಾಡ್ಕೊಳ್ಳಿ. ನಿಮ್ಮ ಆಸ್ತಿನೆಲ್ಲಾ ನೋಡ್ಕೋಳ್ಳೋದಕ್ಕೆ ಒಬ್ಬ ಮಗನಾದರೂ ಬೇಡವೇ ? "ತಾನು ಉಕ್ಕಿ ಬಂದ ಅಳಲನ್ನು ಅದುಮುತ್ತ ನಗು ಲೇಪಿಸಿಕೊಂಡು ಹೇಳಿರಲಿಲ್ಲವೇ "ಅದ್ಯಾಕೆ ನೀನೇನು ಮುದುಕೀನೇ....ಈಗಲ್ಲದಿದ್ದರೆ ಇನ್ನು ನಾಲ್ಕು ವರ್ಷ

ವಾದ ಮೇಲೆ ಆಗಲಿ ಬಿಡು. ನನಗೆ ನಿನ್ನ ಮಗೂನೆ ಬೇಕು-ಬೇರೆ ಯಾರದೂ ಬೇಡ .."

ಶುಭ ತನ್ನೆದೆಯ ಮೇಲೆ ಕೈಯಾಡಿಸುತ್ತಾ ಮುದ್ದಾಗಿ ಹೇಳಿರಲಿಲ್ಲವೇ ? "ನಾನು ನಾಲ್ಕು ವರ್ಷ ತಡೆಯಲಾರೆ ನನಗೆ ಈಗಲೇ ಮಗು ಬೇಕು." ಆ ಸಂದಿಗ್ಧದಲ್ಲಿ ತನ್ನ ಪಾತ್ರವೇನು ? "ಆಗಲಿ... ಈಗ ಅದ ಮಾತೇಕೆ....ನನಗೆ ಮಗು ಬೇಕೆನಿಸಿದಾಗ ನಿನಗೆ ಹೇಳುತ್ತೇನೆ-ನನಗೆ ಈಗ ಬೇಡ..." ಆದರೆ ಆ ನನ್ನ ಉತ್ತರಕ್ಕೆ ಮರುತ್ತರವಾಗಿ ಹರಿದ ಕಣ್ಣೀರು. ತನ್ನನ್ನು ಕರಗಿಸಿರಲಿಲ್ಲವೇ ? ಅವಳನ್ನು ತಕ್ಕೈಸಿ ಸಮಾಧಾನಪಡಿಸಿ "ಆಗಲಿ....ಚಿನ್ನ, ನಿನ್ನ ಇಷ್ಟವೇ ನನ್ನಿಷ್ಟ" ಎಂದು ಅವಳ ಬೇಡಿಕೆಗೆ ತಲೆಬಾಗಿರಲಿಲ್ಲವೇ ?

ತನಗೆ ಮತ್ತೆ ಮಗುವಾಗಲಿರುವುದೆಂದು ತಿಳಿದ ಶುಭ ಎಷ್ಟು ಎಚ್ಚರಿಕೆಯಿಂದ ಅದನ್ನು ಕಾಯ್ದುಕೊಂಡು ಬಂದಿದ್ದಳು.

"ನನಗೆ ನಿಮ್ಮಂತಹ ಮಗಳು ಬೇಕು ..." ಎಂದು ತನ್ನೊಡನೆ ನುಡಿದಾಗ ತಾನು ಅವಳ ತುಟಿಯ ಮೇಲೆ ಮುತ್ತಿಟ್ಟು, "ಊಹೂಂ, ನನಗೆ ನಿನ್ನಂತಹ ಮಗ ಬೇಕು...." ಎಂದಿರಲಿಲ್ಲವೇ ..? "ನಮ್ಮ ರಘುವಿಗೆ ಜೀವಂತ ಶಿಲಾಬಾಲಿಕೆ ಬೇಕೆಂದು ಹೇಳಿದ್ದೆನಲ್ಲಾ !" ಎಂದು ಬಾಯ್ತಪ್ಪಿ ಬಂದಾಗ ಶುಭನ ಕಣ್ಣಲ್ಲಿ ನೀರಾಡಿತ್ತು.

"ಅವರೆಲ್ಲಿ ಬರುತ್ತಾರೆ ಶಿಲಾಬಾಲಿಕೆ ನೋಡಲು ! ನಾನಿರುವವರೆಗೆ ಬರುವುದಿಲ್ಲ ! ಬರುವುದು ನಾನು ಸತ್ತ ಮೇಲೆ !" ಎಂದು ಶುಭ ಕಣ್ಣೊರಸಿಕೊಂಡಾಗ ತನಗೆ ಅರಿವಾಗಿತ್ತು, ಅವಳು ರಘು ಬಾರದಿರುವುದಕ್ಕಾಗಿ ಎಷ್ಟು ಬೇಸರಪಟ್ಟಿರುವಳೆಂದು. ರಘುವಿಗೆ ಮಾರನೆಯ ದಿನವೇ ಕಾಗದ ಹಾಕಿರಲಿಲ್ಲವೇ ?

"ಸಾರ್....ಏನಾದ್ರೂ ತೊಗೋತೀರಾ ?" ಬಾಬುವಿನ ಧ್ವನಿ ಕೇಳಿ ರವಿ ಬೆಚ್ಚಿದ. ತನ್ನ ಭಾವುಕತೆಗೆ ತಾನೇ ನಕ್ಕನು.

"ಈಗ ಬೇಡಾ ಬಾಬು ಡ್ರಿಂಕ್ಸ್ ತೊಗೊಂಡ ಮೇಲೆ....! ಸ್ವಲ್ಪ ಚಿಪ್ಸ್ ತೊಗೊಂಡು ಬಾ...ಬೇಕು ನಂಗೆ !" ರವಿ ಬಾಟಲನ್ನು ಕೈಗೆತ್ತಿಕೊಂಡು ಮುಚ್ಚಳ ತೆಗೆಯಲುದ್ಯುಕ್ತನಾದನು.

"ಸಾರ್....ಅಮ್ಮಾವ್ರು ಬೈಯ್ತಾರಲ್ಲ....ಸಾರ್....ಡ್ರಿಂಕ್ಸ್ ಬೇಡಾ

ಸಾರ್....!" ಬಾಬು ರವಿಯ ಬಳಿಯಿದ್ದ ಸಲಿಗೆಯಿಂದ ಹೇಳಿದಾಗ ರವಿ ನಗುತ್ತಾ–"ನೀನೂ ತೊಗೊಂಡು ಬಾ-ಕೊಡ್ತೀನಿ....ಇವೊತ್ತು ನನ್ನ ಯಾರೂ ತಡೆಯೋಕಾಗೋಲ್ಲ...ಮಗಳು ಬಂದಿದ್ದಾಳೆ. ಸೆಲಬ್ರೇಟ್ ಮಾಡ್ಬೇಡ್ವಾ ?"

ಬಾಬು ನಿರುತ್ತರನಾದ. ತಲೆ ಕೆರೆದುಕೊಂಡು ಹಲ್ಕಿರಿದನು.

"ಮಗೂನ್ನ ನೋಡೋಕೆ ನಾನು ಯಾವಾಗ ಬರ್ಲಿ ಸಾರ್ ?"

"ನಾಳೆ....ಬೆಳಿಗ್ಗೆ ನೀನೆ ಅಮ್ಮಾವ್ರಿಗೆ ಹಾಲು, ಬ್ರೆಡ್ಡು ತೊಗೊಂಡ್ಹೋಗಿ ಕೊಡುವಿಯಂತೆ ..." ರವಿ ಗ್ಲಾಸಿಗೆ ಮದ್ಯ ಬಗ್ಗಿಸುತ್ತಾ ಹೇಳಿದನು.

ರಘುವಿಗೆ ಕನಸು-ಎಲ್ಲೋ ಯಾರೋ 'ಅಮ್ಮಾ....ಅಯ್ಯೋ ' ಎಂದು ನರಳಿದ ಕನಸು. ಬೆವರಿ ಬೆಚ್ಚಿ ಕಣ್ತೆರೆದ. ತಾನಿರುವುದೆಲ್ಲಿ ! ಕಣ್ಣುಜ್ಜಿ ಕೊಂಡು ಎಚ್ಚರ ಮಾಡಿಕೊಂಡನು. ಇದೇನು, ತಾನು ಹೀಗೆ ಕುಳಿತು ನಿದ್ದೆ ಮಾಡಿಬಿಟ್ಟೆನೇ ? ಹೊತ್ತಾಗಿಹೋಯಿತಲ್ಲ! ಬಾಬುವಿಗೆ ತನಗೆ ಕಾಫಿ, ತಿಂಡಿ ತರಲು ಹೇಳಿದ ನೆನಪು....!

"ಬಾಬೂ....ಬಾಬೂ !" ರಘು ಗಂಟಲೇರಿಸಿ ಕೂಗಿದ. ಶಿವರಾಮಯ್ಯ ಕೋಟಿನ ಕಾಲರ್ ಸರಿ ಮಾಡಿಕೊಳ್ಳುತ್ತಾ ಬಂದರು

"ಆಯ್ತೇನಯ್ಯಾ ನಿದ್ದೆ ? ಹೊರಡೋಣೇನು ?"

ಬಾಬು ಕೈಯ್ಯಲ್ಲಿ ಕಾಫಿ ತಿಂಡಿ ಹಿಡಿದು ಬಂದನು ರಘು ಮೈ ಮುರಿದು ಆಕಳಿಸಿದನು. ತಾನು ಕುಳಿತಲ್ಲೇ ನಿದ್ದೆ ಮಾಡಿಬಿಟ್ಟೆನೆಲ್ಲಾ ಎಂದು ಕೊಂಚ ನಾಚಿಕೆಯಾದರೂ ತೋರಿಸಿಕೊಳ್ಳದೇ ಬಾಬು ಇತ್ತ ಕಾಫಿ ತಿಂಡಿ ತೆಗೆದ ಕೊಳ್ಳುವ ನೆವದಿಂದ ಎದ್ದು ನಿಂತನು.

"ಹೋಗೋಣಾಪ್ಪಾ....ಇದನ್ನ ಮುಗಿಸಿ ಮುಖ ತೊಳೆದು ಬರ್ತೀನಿ...."

"ರವಿ ಬಂದಿದ್ದಾನೆ...ಕೇಳಿಬಿಡು, ಏನಾದ್ರೂ ತೊಗೊಂಡು ಹೋಗ ಬೇಕೇನೂಂತ....ಆಗಲೇ ಆರೂವರೆ ಆಗೋಯ್ತು...." ಶಿವರಾಮಯ್ಯ ನಯ ವಾಗಿ ಎಚ್ಚರಿಸಿದರು.

ರಘು ಕುಡಿದ ಲೋಟವನ್ನು ಬಾಬುವಿನ ಕೈಗಿತ್ತಾಗ ಬಾಬುವಿಗೆ ರವಿ ಮಹಡಿಯ ಮೇಲೆ ಕುಡಿಯುತ್ತಾ ಕುಳಿತಿರುವುದು ಹೇಳುವ ಮನಸ್ಸಾಯಿತು. ಆದರೆ ಹಾಗೆ ಹೇಳದೆ ನಯವಾಗಿ ಗಂಟಲು ಸರಿಮಾಡಿಕೊಂಡನು. "ಮಹಡಿ

ಮೇಲಿದ್ದಾರೆ ಸಾರ್". ಅಣ್ಣನ ಜಾಡನ್ನರಿತ ರಘುವಿಗೆ ಹೆಚ್ಚಿಗೆ ಹೇಳಬೇಕಾಗಿಲ್ಲ.

ರಘು ಮುಖ ತೊಳೆದು ಬಟ್ಟೆ ಬದಲಿಸಿ ತಂದೆಗೆ ಕಾರ ಬಳಿಯಿರುವಂತೆ ಹೇಳಿ ಮಹಡಿಯೇರಿದನು. ರವಿ ಒಂದು ಕೈಯ್ಯಲ್ಲಿ ಮದ್ಯ ತುಂಬಿದ ಗ್ಲಾಸು ಮತ್ತೊಂದು ಕೈಯ್ಯಲ್ಲಿ ಸಿಗರೇಟು ಹಿಡಿದು ಕುಳಿತಿದ್ದನು. ಅವನ ಮುಖ ಕೊಂಚ ಕೆಂಪೇರಿತ್ತು. ಕಣ್ಣುಗಳು ಅರ್ಧ ಮುಚ್ಚಿದ್ದವು. ರಘುವಿನ ಮುಖ ನೋಡುತ್ತಲೇ ಬಾಯಿ, ಮೂಗಿನಿಂದ ಹೊಗೆ ಬಿಡುತ್ತಾ ಕುಳಿತುಕೊಳ್ಳುವಂತೆ ಕಣ್ಸನ್ನೆ ಮಾಡಿದನು. ರಘು ಕುಳಿತುಕೊಳ್ಳಲಿಲ್ಲ.

"ರವಿ... ನೀನು ಈಗ ಮಾಡ್ತಾ ಇರೋದೂ ಸರೀನಾ ? ಅಲ್ಲಿ ಶುಭ ಹಾಗಿರ್ಬೇಕಾದ್ರೆ ನೀನಿಲ್ಲಿ ಹೀಗೆ ಕೂತ್ರೆ ಹೇಗೆ ? ಇದನ್ನ ಹಾಕ್ಕೊಂಡು ಆಸ್ಪತ್ರೆಗೆ ಬರ್ತೀಯಾ ?" ರಘುವಿನ ಮುಖದಲ್ಲಿ ಅಸಮಾಧಾನದ ಗೆರೆಗಳು ಮೂಡಿದವು.

"ನಾನೇನು ಮಾಡ್ಬೇಕೂ ಅಂತಿ ? ನಾನು ರಾತ್ರಿ ಹತ್ತು ಗಂಟೆ ಮೇಲೆ ಹೋಗ್ತೀನಿ....ಅಷ್ಟೊತ್ತಿಗೆ ಎಲ್ಲಾ ಇಳಿದುಹೋಗಿರುತ್ತೆ...." ರಘು ಉತ್ತರಿಸಲಿಲ್ಲ. ರವಿಯ ಕೈಯ್ಯಿಂದ ಗ್ಲಾಸನ್ನು ಕಿತ್ತುಕೊಂಡು, ಟೇಬಲ್ಲಿನ ಮೇಲೆ ಕುಕ್ಕಿದನು. ಅವನ ಕೈಲಿದ್ದ ಸಿಗರೇಟನ್ನು ಕಿತ್ತು ಕಾಲಿನಡಿಯಲ್ಲಿ ಹಾಕಿ ಹೊಸಕಿ ಆರಿಸಿದನು. "ಐ ಸೇ, ಗೆಟ್ ಅಪ್...." ರಘುವಿಗೆ ಕೋಪ ವುಕ್ಕಿತು. ಕಣ್ಣು ಕಿರಿದು ಮಾಡಿ, ಹುಬ್ಬು ಗಂಟಿಕ್ಕಿ ಕುಳಿತಿದ್ದ ತನಗೆರ ಡರಷ್ಟುದ್ದ ನಿಂತಿದ್ದ ರಘು ರವಿಗೆ ಬಹಳ ಅಪರಿಚಿತ. ರವಿ ಕೊಂಚ ತಲ್ಲಣಿಸಿದನು. ರಘು ಮತ್ತೂ ಕನಲಿದ. ತನ್ನನ್ನೇ ದುರು ದುರು ನೋಡುತ್ತಿದ್ದ ರವಿಯ ಕೈ ಹಿಡಿದು ಎಳೆದು, ಎಬ್ಬಿಸಿ ನಿಲ್ಲಿಸಿದ. "ಐ ಸೆಡ್, ಗೆಟ್ ಅಪ್...!" ರವಿ ಅವನೆಳೆದ ರಭಸಕ್ಕೆ ಕೊಂಚ ತೂರಾಡಿದ...ಆದರೂ ಸಾವರಿಸಿಕೊಂಡು ಸರಿಯಾಗಿ ನಿಂತು ರಘುವನ್ನು ತೀಕ್ಷ್ಣವಾಗಿ ನೋಡಿದನು. "ವ್ಹಾಟ್ ಡಿಡ್ ಯೂ ಸೇ ? ಸೇ ಇಟ್ ಎಗೈನ್ !" ತನ್ನ ತಮ್ಮ ತನ್ನ ಮೇಲೆಯೇ ಜೋರು ಮಾಡಬಹುದೇ ? ರವಿಗೆ ಕುಡಿದ ಮತ್ತು ನೆತ್ತಿಗೇರಿತು. ತನ್ನ ಕೈ ಹಿಡಿದಿದ್ದ ರಘುವಿನ ಕೈಯನ್ನು ಕಿತ್ತೊಗೆದನು.

"ಯೂ ಡೇರ್ ನಾಟ್ ಟಚ್ ಮೀ...ದಿಸ್ ಈಸ್ ಮೈ ಹೌಸ್....
ಇದು ನನ್ನ ಮನೆ...!"

ರಘುವಿಗೆ ಬರಸಿಡಿಲಿನಂತೆ ಆ ಮಾತು ಬಂದೆರಗಿತು. ತನ್ನ ಅಣ್ಣನಾದ ರವಿ ಹೀಗಾಗುವನೆಂದು ತಾನೆಂದೂ ನಂಬಿರಲಿಲ್ಲ. ಮದುವೆಯಾದ ಮೇಲೆ ಶುಭನಿಗೆ ತಕ್ಕವನಾಗಿ ನಡೆಯುತ್ತಾನೆಂದು ನಂಬಿರಲಿಲ್ಲವೇ ? ಅವನನ್ನು ನಂಬಿ ಮದುವೆಯಾದ ಶುಭನ ಬಾಳೂ ಕಣ್ಣೀರೆ! ಛೀ, ಎಂತಹ ಅನಾಹುತ ವಾಯಿತು ! ಇವನಿಂದ ಯಾರಿಗೂ ಸುಖವಿಲ್ಲ. ದುಡ್ಡಿದ್ದರೇನು ಬಂತು ! ರವಿಯ ಮುಖಕ್ಕೆ ಉಗುಳಿಬಿಡುವಷ್ಟು ಅಸಹ್ಯವಾಯಿತು. ಬಂದ ಉರಿಗೋಪ ವನ್ನು ತಡೆದು ಹಿಡಿದನು. ಶುಭ ತನ್ನನ್ನು ತಪ್ಪಾಗಿ ತಿಳಿಯಬಾರದು. ಎದುರಿಗೆ ಮೇಲುಸಿರು ಬಿಡುತ್ತಾ ಕೆಂಪಡರಿದ ಕಣ್ಣುಗಳಿಂದ ನೋಡುತ್ತಾ ನಿಂತಿದ್ದ ರವಿಯನ್ನು ಒಂದರ ಘಳಿಗೆ ದಿಟ್ಟಿಸಿ, ಎಡಗೈಯಿಂದ ಅವನನ್ನು ಕುರ್ಚಿಯ ಮೇಲೆ ಮತ್ತೆ ತಳ್ಳಿ, ಟೇಬಲ್ಲಿನ ಮೇಲಿದ್ದ ಗ್ಲಾಸನ್ನು ಅವನ ಕೈಗೆ ತುರುಕಿದನು. ತನ್ನ ಜೇಬಿನಿಂದ ಸಿಗರೇಟು ಪ್ಯಾಕನ್ನು ತೆಗೆದು ಅವನ ಮುಂದೆಸೆದು, ಅವನಿಗೆ ಬೆನ್ನು ತಿರುಗಿಸಿದನು.

"ಸಾರಿ ರವಿ. ನಾನು ಒಂದು ಕ್ಷಣ ಮರೆತೆ, ಇದು ನಿನ್ನ ಮನೇಂತ" ದಡದಡನೇ ಮೆಟ್ಟಲಿಳಿದು ರಘು ಹೊರಟುಹೋದಾಗ ರವಿ ಎಚ್ಚೆತ್ತನು. ಲೋಟದಲ್ಲಿದ್ದುದೆಲ್ಲವನ್ನೂ ಗಂಟಲಿಗೆ ಸುರಿದುಕೊಂಡು ರಘುವನ್ನು ಕೂಗುತ್ತಾ ಬಂದಾಗ ರಘು ಕಾರಿನಲ್ಲಿ ಕುಳಿತು ತಂದೆಯೊಡನೆ ಹೇಳುತ್ತಿದ್ದನು.

"ರವಿಗೆ ತುಂಬಾ ಆಯಾಸವಾಗಿದೆ. ಅವ್ನು ಮನೇಲೇ ಇರ್ಲಿ.... ಇವೊತ್ತು ಎಲ್ಲಾ ನಾನು ನೋಡ್ಕೋತೀನಿ ..."

ರವಿಗೆ ಆ ಮಾತು ಕಿವಿಗೆ ಬಿದ್ದಾಗ ಬಾಗಿಲ ಬಳಿಯೇ ನಿಂತನು. ಅವನು ನಿಂತಿದ್ದುದು ರಘುವಿಗೆ ಕಾಣದಂತೆ ಪರದೆಯನ್ನು ಅಡ್ಡಲಾಗಿ ಹಿಡಿದನು.

ಕಾರು ಸ್ಟಾರ್ಟ್ ಆಗಿ ಹೊರಟುಹೋದ ಮೇಲೆ ರವಿ ಕಣ್ಣಲ್ಲಿ ಬಂದ ನೀರನ್ನು ಪರದೆಯಲ್ಲೇ ಒರಸಿಕೊಂಡನು. ಬೆವತಿದ್ದ ಮುಖವನ್ನು ಒರಸಿ ಕೊಂಡನು. ಹೊಟ್ಟೆಯಲ್ಲಿ ಏನೋ ಉರಿ, ಸಂಕಟ, ಹೊಟ್ಟೆ ತೊಳಸಿ ಬಂದಂತಾಗಿ, ಕಣ್ಣು ಕತ್ತಲಿಟ್ಟಿತು. ನಿಂತಲ್ಲೇ ಹೊಟ್ಟೆಯಲ್ಲಿದ್ದುದೆಲ್ಲ ಗಂಟಲಿ ನಿಂದ ಬಾಯಿಗೆ ನುಗ್ಗಿ ಬಂದಾಗ ಬಾಗಿಲನ್ನು ಬಲವಾಗಿ ಹಿಡಿದನು.

ಒಳಗಿದ್ದ ಬಾಬುವಿಗೆ ರವಿ ವಾಂತಿ ಮಾಡಿದ ಸದ್ದು ಕೇಳಿಸಿ ಹೊರ ಗೋಡಿ ಬಂದನು. ರವಿಯನ್ನು ಕಂಡ ಕೂಡಲೇ ಬಂದು ತಬ್ಬಿ ಹಿಡಿದು ಕೊಂಡನು.

"ನೀವು ಡ್ರಿಂಕ್ಸ್ ತೊಗೋಬೇಡೀಂದ್ರೆ ಕೇಳೋಲ್ಲ....ಬನ್ನಿ ಸಾರ್, ಈ ಕುರ್ಚಿಯಲ್ಲಿ ಕೊತ್ಕೊಳ್ಳಿ...!" ಅವನನ್ನು ಮೆಲ್ಲಗೆ ಕುರ್ಚಿಯ ಮೇಲೆ ಕೂಡಿಸಿದನು. ಒಳಗೆ ಹೋಗಿ ಒಂದು ಪಾತ್ರೆಯಲ್ಲಿ ತಣ್ಣೀರು ತಂದು ರವಿಯ ಮುಖವನ್ನು ಒರೆಸಿದನು. ಟವಲು ತಂದು ಮುಖ ಒರಿಸಿ, ಕುರ್ಚಿಯಿಂದ ಎಬ್ಬಿಸಿ ಮೆಲ್ಲನೆ ಸೋಫಾದ ಮೇಲೆ ಮಲಗಿಸಿದನು. ರೆಫ್ರಿಜಿರೇಟರ್‌ನಿಂದ ನಿಂಬೆಹಣ್ಣನ್ನು ತೆಗೆದು ಪಾನಕ ಮಾಡಿ ತಂದು ರವಿಯ ತುಟಿಗಿಟ್ಟನು. ಅದನ್ನು ಗುಟಕರಿಸಿದ ರವಿ ಬಾಬುವಿನ ಕೈಯ್ಯನ್ನು ಎರಡು ಕೈಗಳಿಂದೆತ್ತಿ ಕೊಂಡು ಕಣ್ಣೊತ್ತಿಕೊಂಡನು. ಅವನ ಕಣ್ಣಗಳಲ್ಲಿ ನೀರಿತ್ತು. ಬಾಬು ಕಣ್ಣೀರೊರೆಸಿ ಮೆಲ್ಲನುಸುರಿದನು.

"ಬೇಜಾರು ಮಾಡ್ಕೋಬೇಡಿ ಸಾರ್, ನಾನದನ್ನೆಲ್ಲ ಕ್ಲೀನ್ ಮಾಡ್ತೀನಿ ....ಆದ್ರೇ ಎಷ್ಟು ದಿನ ಹೀಗೆ ಕುಡಿದು ಆರೋಗ್ಯ ಹಾಳು ಮಾಡ್ಕೋತೀರಿ. ಈಗ ಮಲಗಿ....ಇವೊತ್ತು ಇಲ್ಲೇ ಮಲಗಿರಿ ಸಾರ್....ಮಹಡಿಯ ಮೇಲೆ ಬೇಡಾ...!" ಬಾಬು ರವಿಯ ತಲೆಗೊತ್ತಿಗೊಂದು ದಿಂಬಿಟ್ಟು ಬಾಗಿಲತ್ತ ಆಗಿದ್ದ ಗಲೀಜನ್ನು ಶುಚಿಮಾಡಲು ಹೋದಾಗ ರವಿ ಕಣ್ಣಿಗಡ್ಡವಾಗೆ ಕೈ ಹಿಡಿದು ಕಣ್ಮುಚ್ಚಿದನು. ಅವನ ನಿಟ್ಟುಸಿರಿನೊಂದಿಗೆ ಬಂದ ಒಂದು ಶಬ್ದ ಬಾಬುವಿನ ಕಿವಿಗೂ ಬಿತ್ತು "ಶುಭಾ....!"

ಆಸ್ಪತ್ರೆಯಲ್ಲಿ ತೊಟ್ಟಿಲಿನ ಸುತ್ತ ಜನ. ಕಣ್ಮುಚ್ಚಿ ಮಲಗಿದ್ದ ಮಗುವಿನ ಸುತ್ತ, ಭಾಸ್ಕರ, ನಂದಿನಿ, ಸಂಜಯ, ಶಿವರಾಮಯ್ಯ ರಘು....! ರಘು, ಮಗುವಿನ ಚಿಗುರಿನಂತಿದ್ದ ಕೈಗಳನ್ನು ಮುಟ್ಟಿದಾಗ ಶಿವರಾಮಯ್ಯನವರು ಗದರಿಕೊಂಡರು.

"....ಶ್ ಸುಮ್ನಿರಪ್ಪಾ, ಮಲಗಿದೆ ಮಗು ಬೆಚ್ಚಗೆ. ಎಬ್ಬಿಸಬೇಡಾ.... ಹಾಗೆಲ್ಲಾ ಮಗೂನ ಎಬ್ಬಿಸಬಾರ್ದು ! 'ಹಾಕಿದ್ದ, ನೀಲಿಯ ಉಣ್ಣೆಯ ಟೋಪಿಯೊಳಗಿಂದ ಇಣುಕುತ್ತಿದ್ದ ಪುಟ್ಟ ಕೂದಲಿನ ಗುಪ್ಪವೊಂದನ್ನು ಅವರೇ ಸವರಿ ಹಿಂದೆ ಸರಿಸಿದಾಗ ರಘು ತಂದೆಯನ್ನು ಗದರಿದ.

"ಬೇಡಾಪ್ಪ, ಮಗು ಎದ್ದುಬಿಡುತ್ತೆ !" ಭಾಸ್ಕರ, ನಂದಿನಿ, ಇಬ್ಬರೂ ತಂದೆ ಮಗ ಇಬ್ಬರ ವಾಗ್ವಾದ ಕಂಡು ನಕ್ಕರು.

"ಅಮ್ಮಾ...ಕಂಬಳಿ ತೆಗೀವ್ಮಾ. ಅದರ ಕಾಲು, ಬೆರಳು ಹೇಗಿದೇಂತ ನೋಡ್ಬೇಕು...." ಸಂಜಯ ಮಗುವಿಗೆ ಹೊದಿಸಿದ ಕಂಬಳಿಯನ್ನು ಎಳೆದಾಗ ನಂದಿನಿ ಅವನನ್ನು ದೂರ ಸರಿಸಿ...."ಪಾಪಾ, ನನ್ನ ಚಿನ್ನ ಮರೀನ ಎಲ್ರೂ ಹಿಂಸೆ ಮಾಡ್ತಾರೆ...ಬಾಮ್ಮಾ" ಕಂಬಳಿ ಸರಿಮಾಡಿ ಮಗೂನ್ನ ಎತ್ತಿಕೊಂಡಳು. ಅವಳ ಕೈಯ್ಯಲ್ಲಿ ಮುದ್ದಾಗಿ ಮಲಗಿದ್ದ ಮಗುವನ್ನು ನೋಡಿ ಭಾಸ್ಕರನೂ ಕೈಯೊಡ್ಡಿದನು "ಇಲ್ಕೊಡೇ ನಂದೂ, ನಾನೂ ಎತ್ಕೋತೀನಿ....!"

"ಸಾಕು ಸಧ್ಯ, ನಿಮ್ಮ ಕೈಲಿ ಕೊಡೋಕೆ ಇದೇನು ಆಟದ ಸಾನೂನಿನ ಬೊಂಬೇನಾ ?"

ಇದ್ಯಾವುದರ ಪರಿವೆಯೋ ಇಲ್ಲದೆ ಶುಭ ಮಲಗಿದ್ದಳು. ನಾಲ್ಕು ಗಂಟೆಯಲ್ಲಿ ಒಂದು ಸಲ ಕಣ್ತೆರೆದು ನರಳಿದಾಗ ನಂದಿನಿ ಅವಳ ತಲೆ ಸವರಿದ್ದಳು.

"ನೋಡ್ತೀಯಾ ಶುಭಾ, ನಿನ್ನ ಮಗಳನ್ನ ತೋರಿಸಲಾ ?" ನರ್ಸ್ ಮಗುವನ್ನು ತಂದು ತೋರುವಷ್ಟರಲ್ಲಿ ಮತ್ತೆ ಕಣ್ಮುಚ್ಚಿದ್ದಳು. ತುಟಿಯೊಣಗಿ ನಾಲಿಗೆಯಿಂದ ತುಟಿಯೊರಸಿಕೊಂಡಾಗ ನಂದಿನಿ ಎಳನೀರನ್ನು ಎರಡು ಚಮಚ ಶುಭನ ಬಾಯಿಗೆ ಹನಿಸಿದ್ದಳಷ್ಟೇ. ಗ್ಲೂಕೋಸ್ ಡ್ರಿಪ್ ಕೊಟ್ಟಿದ್ದರಿಂದ ಅವಳಿಗೆ ಏನೂ ಆಹಾರದ ಅವಶ್ಯತೆಯಿಲ್ಲನೆಂದು ಡಾಕ್ಟರು ಹೇಳಿದ್ದರಿಂದ ರಘು ತಂದಿದ್ದ ಹಾಲು, ಹಾರ್ಲಿಕ್ಸ್ ಎಲ್ಲಾ ಲಾಕರ್ ಒಳಗಿಟ್ಟಾಗಿತ್ತು. ಅವನು ತಂದಿದ್ದ ಔಷಧಿಗಳನ್ನು ಡಾಕ್ಟರ ಕೈಗಿತ್ತಾಗ ಡಾಕ್ಟರ್ ರಘುವನ್ನು ಕೇಳಿದರು.

"ರವಿ ಬರೋಲ್ವ ? ಎಲ್ಲಾ ನೀವೇ ತಂದುಬಿಟ್ಟಿದ್ದೀರಲ್ಲಾ !"

"ಅವನಿಗೆ ಅಷ್ಟು ಮೈ ಚೆನ್ನಾಗಿಲ್ಲ, ನಾನೇ ಅವನನ್ನ ಮನೆಯಲ್ಲಿ ಕೂಡಿಸಿ ಬಂದಿದ್ದೇನೆ. ಇವೊತ್ತು ರೆಸ್ಟ್ ತೊಗೊಳ್ಳಿ..." ರಘು ಉತ್ತರಿಸಿದಾಗ ಡಾ|| ಮಾಥ್ಯೂಸ್ ಅರ್ಥಗರ್ಭಿತವಾಗಿ ನಕ್ಕರು.

"ಇವೊತ್ತು ರಾತ್ರಿ ಯಾರೂ ಬೇಡಾ....ರಾತ್ರಿ ಒಂಭತ್ತು ಗಂಟೆಗೆ ಮಾರ್ಫಿನ್ ಕೊಡ್ತೀವಿ. ಆದ್ರಿಂದ ಅವರಿಗೆ ಎಚ್ಚರಿಕೆ ಆಗೋಲ್ಲ-ಏನಿದ್ರೂ ನಾಳೆಯಿಂದ ಯಾರಾದ್ರೂ ಇರ್ಬೋದೂ..!" ಮಗೂನ ನರ್ಸ್‌ಗಳು

ನೋಡ್ಕೋತಾರೆ !" ಡಾಕ್ಟರ್ ರಘುವಿನ ಆತಂಕ ಕಡಿಮೆ ಮಾಡಲು ಹೇಳಿದಾಗ ರಘು ಸಮಾಧಾನದ ಉಸಿರೆಳೆದ. ಸಧ್ಯ ಶುಭನಿಗೆ ನಾಳೆ ಬೆಳಿಗ್ಗೆ ರವಿ ಬರುವವರೆಗೂ ಎಚ್ಚರವಾಗಿದಿದ್ದರೆ ಸಾಕು. ಆಕಸ್ಮಿಕವಾಗಿ ಅವಳಿಗೆ ಎಚ್ಚರವಾಗಿ ಅವಳು ರವಿಯನ್ನು ಕೇಳಿದರೆ ! ಅವಳಿಗೆ ಉತ್ತರ ಹೇಳಲು ಯಾರೂ ಮನೆಯವರು ಇರುವುದಿಲ್ಲವಲ್ಲ....ಬದುಕಿದೆ ಎಂದುಕೊಂಡನು.

ನರ್ಸ್ ಬಂದು ಮಗುವನ್ನು ಎತ್ತಿಕೊಂಡು ಹೋದಾಗ ಶಿವರಾಮಯ್ಯ ಉದ್ಗರಿಸಿದರು. "ನಾವಿರೋತನ್ಕ ಮಗು ಇಲ್ಲಿದ್ದಿದ್ರೆ ಏನಾಗ್ತಿತ್ತು ? ನರ್ಸಿಗೇನು ಅವಸರ ! ಮಗು ಅಳ್ತಾ ಇರ್ಲಿಲ್ಲ, ಒಂದೂ ಇಲ್ಲ....!"

"ಮಾವಾ ...ನೀವು ನೋಡಿಯಾಯ್ತಲ್ಲ, ಹೊರಡಿ....ನಾನು ಡಾಕ್ಟರ್ ಶುಭಂಗೆ ಔಷಧಿ, ಇಂಜೆಕ್ಷನ್ ಕೊಡುವವರೆಗೂ ಇದ್ದು ಹೋಗ್ತೀನಿ–ಇವರಿರ್ತಾರೆ ಜೊತೆಗೆ !" ನಂದಿನಿ ಹೇಳಿದಾಗ ರಘು ತಡೆದ.

"ಬೇಡಾ ನಂದಿನಿ. ನೀನು ಹೋಗು. ನಾವಿಬ್ರೂ ಇದ್ಬಿಟ್ಟು ಹೋಗ್ತೀವಿ....!"

"ರವಿ ಒಬ್ಬನೇ ಮನೇಲಿರ್ತಾನೆ....ನೀವಿಬ್ರೂ ಹೋದ್ರೇ ವಾಸಿ....!" ಭಾಸ್ಕರ ಹೇಳಿದಾಗ ಅವನ ಮಾತಿಗೆ ಶಿವರಾಮಯ್ಯ ಒಪ್ಪಿದರು.

"ಹೌದು, ಅವ್ನು ಹೇಳೋದು ನಿಜ. ರವಿ ಪಾಪ ಒಬ್ಬನೇ....! ಬಾ ರಘು ಹೊರಡೋಣ....!" ಶಿವರಾಮಯ್ಯ ಶುಭಳ ಮಂಚದ ಹತ್ತಿರ ಬಂದು ನಿಂತನು. ಸೊರಗಿದ್ದ ಸೊಸೆಯ ಮುಖವನ್ನೀಕ್ಷಿಸಿದರು. "ಮಗೂ, ಪಾಪ. ಬಹಳ ಇಳಿದುಹೋಗಿದ್ದಾಳೆ ! ವಾತ್ಸಲ್ಯದಿಂದ ಅವಳ ಮುಖದ ಮೇಲೆ ಕಣ್ಣಾಡಿಸಿದರು.

ರಘು ದೂರ ನಿಂತು ಕೈ ಕಟ್ಟಿ ನೋಡುತ್ತಿದ್ದನು. ವಾತ್ಸಲ್ಯಮಯಿಯಾದ ಮಾವ, ಆದರಿಸುವ ಅಣ್ಣ ಅತ್ತಿಗೆ, ಪ್ರೀತಿಯ ಪತಿಯಿದ್ದೂ ಶುಭ ಏಕೆ ಹೀಗಾದಳು ! ಬೇಡದಿರುವಾಗ ಹಾಲೂ, ಜೇನೂ ಕಹಿಯೆನಿಸುವುದಿಲ್ಲವೇ ? ಅವಳಿಗೆ ಇವರ ಯಾರ ಪ್ರೇಮ, ಪ್ರೀತಿ ವಾತ್ಸಲ್ಯ ಬೇಕಿರಲಿಲ್ಲವೋ ಏನೋ ! ತನ್ನಿರುವು ಬಯಸಿರಬಹುದೇ ? ಅವಳು ತನಗಾಗಿ ಹಾತೊರೆದು ಇಷ್ಟೊಂದು ಕ್ಷಯಿಸಿರಬಹುದೇ ? ತಾನು ಅವಳಿಗಾಗಿ ಬಂದಿರು

ವುದು ತಿಳಿದರೆ ಎಷ್ಟು ಸಂತಸಪಡಬಹುದು ! ಒಮ್ಮೆ ಕಣ್ತೆರೆದು ತನ್ನತ್ತ ನೋಡಿದರೆ ಅವಳೆಷ್ಟೋ ಗೆಲುವಾಗಬಹುದು.

"ಯಾಕೆ, ಹಾಗೆ ನೋಡ್ತಾ ನಿಂತ್ಬಿಟ್ಟೆ ! ನಡಿ ಹೋಗೋಣಾ !" ಶಿವರಾಮಯ್ಯ ಮಗನನ್ನು ಆತುರಪಡಿಸಿದರು.

"ನಿಂಗೆ ಹೇಗೆ ಋಣ ತೀರಿಸೋದೊ ತಿಳ್ಯೋಲ್ಲ. ಬಹಳ ತೊಂದರೆ ಕೊಡ್ತಾ ಇದ್ದೀನಿ" ಎಂದು ರಘು ಹೇಳಿದಾಗ ನಂದಿನಿ ನಸುಮುನಿದಳು.

"ಸಾಕು ಸುಮ್ನಿರೋ, ಅತೀ ಮಾಡ್ಬೇಡಾ. ನಿನಗೆ ಅಣ್ಣನ ಹೆಂಡತಿ, ಸಂಬಂಧ ದೂರವಾಯ್ತು ! ಅವಳು ನನ್ನ ಮಗಳು....ಸಾಕುಮಗಳು. ಸಂಬಂಧ ಬಹಳ ಹತ್ತಿರ, ಆದಕ್ಕೇ ನಾನು ಇರೋದೂ !"

'ನಂದಿನಿ, ನಿನಗೆ ಗೊತ್ತಿಲ್ಲ. ನನ್ನ ಶುಭನ ಸಂಬಂಧ ದೂರವಾದುದಲ್ಲ. ಅದು ಜನ್ಮ ಜನ್ಮದ ಪ್ರೇಮಾನುಬಂಧ' ಎಂದು ಹೇಳುವ ಮನಸ್ಸಾಯಿತು ರಘುವಿಗೆ. ಹಲ್ಲು ಕಚ್ಚಿ ಆ ಮಾತು ತಡೆದನು.

ರವಿ ಗೊತ್ತುಪಡಿಸಿದ್ದ ಆಯಾ ದೇವಮ್ಮ ಬರುತ್ತಲೇ ರಘು ಅವಳನ್ನು ಕೂಲಂಕಷವಾಗಿ ಗಮನಿಸಿದ. ಶುಚಿಯಾಗಿ, ನಗುಮುಖದವಳಾಗಿದ್ದರಿಂದ ರಘುವಿಗೆ ಶುಭನನ್ನು ನೋಡಿಕೊಳ್ಳಲು ಸರಿಯಾದವಳೆಂದೆನಿಸಿತು.

ಶಿವರಾಮಯ್ಯ ರಘು ಮನೆಗೆ ಬಂದಾಗ ರಾತ್ರಿ ಒಂಭತ್ತಾಗಿತ್ತು. ಕಾರನ್ನು ಪೋರ್ಟಿಕೋದಲ್ಲಿ ನಿಲ್ಲಿಸಿದಾಗ ಸುತ್ತಮುತ್ತಲೂ ಆವರಿಸಿದ್ದ ನೀರವತೆ ರಘುವಿನ ಮನಸ್ಸನ್ನು ಗೊಂದಲಕ್ಕೀಡು ಮಾಡಿತು. ತಾನು ರವಿಯೊಂದಿಗೆ ನಡೆದುಕೊಂಡ ರೀತಿ ಸರಿಯೇ ? ಅವನು ಕೋಪಗೊಂಡು ತನ್ನನ್ನು ಮನೆಯೊಳಗೆ ಸೇರಗೊಡದಿದ್ದರೆ ?

ಶಿವರಾಮಯ್ಯ ಕಾರಿನಿಂದ ಇಳಿದು ಮನೆಯೊಳಗೆ ಕಾಲಿಟ್ಟರು. ಅವರೆದುರಿಗೇ ಬಂದ ಬಾಬು ಏನೋ ಮೆದುದನಿಯಲ್ಲಿ ಮಾತಾಡುತ್ತಿದ್ದನು. ಕಾರಿನ ಬಾಗಿಲುಗಳನ್ನು ಭದ್ರಪಡಿಸಿ ತನ್ನ ಬರುವಿಕೆಯನ್ನೇ ಕಾಯುತ್ತಾ ನಿಂತಿದ್ದ ಇಬ್ಬರನ್ನೂ ಕಂಡು ರಘುವಿನ ಎದೆ ಹಾರಿತು.

"ಯಾಕೆ, ಏನಾಯ್ತು ?" ರಘು ಅವರತ್ತ ಧಾವಿಸಿದನು.

ಶಿವರಾಮಯ್ಯನವರು ಮೌನವಾಗಿ ಮನೆಯೊಳಗೆ ನಡೆದರು. ಬಾಬುವೂ ಅವನನ್ನು ಹಿಂಬಾಲಿಸಿದನು. ಅವರಿಬ್ಬರನ್ನೂ ಹಿಂಬಾಲಿಸಿದ

ರಘು ಡ್ರಾಯಿಂಗ್ ರೂಮಿನ ಬಾಗಿಲ ಬಳಿಯೇ ನಿಂತನು. ಸೋಫಾದ ಮೇಲೆ ರವಿ ಕುತ್ತಿಗೆಯವರೆಗೆ ಕಂಬಳಿ ಹೊದೆದು ನಿದ್ರಿಸುತ್ತಿದ್ದನು. ಶಿವ ರಾಮಯ್ಯನವರು ಬಗ್ಗಿ ಅವನ ಹಣೆ ಮುಟ್ಟಿ ನೋಡಿದರು.

"ನಾನು ಹೇಳಿದೆ ಸಾರ್, ಇಲ್ಲೇ ಮಲಗಿ ಅಂತ. ಮಹಡಿಯ ಮೇಲೆ ಹೋಗಿ ರೂಮಿನೊಳಗೆ ಸೇರಿಕೊಂಡರೆ ಏನು ಕೂಗಿದರೂ ಕೇಳಿಸುವುದಿಲ್ಲ. ವಾಂತಿ ಮಾಡಿಕೊಂಡ ಮೇಲೆ ತುಂಬಾ ಸುಸ್ತು. ನಿಂಬೆ ಹಣ್ಣಿನ ಪಾನಕ ಎರಡು ಸಲ ಕೊಟ್ಟಿದ್ದೇನೆ"—ಬಾಬು ಹೇಳಿದ.

"ನಂಗೇನೋ ಅವನಿಗೆ ಜ್ವರ ಬಂದಿದೆ ಅನ್ನಿಸುತ್ತೆ" ಶಿವರಾಮಯ್ಯ ನವರು ಹೇಳಿದಾಗ ರಘು ರವಿಯತ್ತ ಧಾವಿಸಿದ ಕಳಾವಿಹೀನವಾದ ಮುಖ, ಒಣಗಿದ್ದ ತುಟಿಗಳು, ಗುಳಿಬಿದ್ದ ಕಣ್ಣುಗಳು. ರಘುವಿಗೆ ಅಣ್ಣನಿರುವುದು ಕಂಡು ಮರುಕವುಕ್ಕಿ ಬಂತು. ತಾನು ಅವನೊಡನೆ ಅಷ್ಟು ಒರಟಾಗಿ ನಡೆದುಕೊಳ್ಳಬಾರದಿತ್ತು ಎನಿಸಿತು. ಬಗ್ಗಿ ಅವನ ಮುಖ, ಕೆನ್ನೆ, ಹಣೆ ಸವರಿದನು–ಹೌದು, ಮೈ ಬಿಸಿಯಾಗಿದ್ದುದು ನಿಜ. ರಘು ರವಿಯ ಕಾಲ ಬಳಿ ನಿಂತಿದ್ದ ಬಾಬುವಿನತ್ತ ತಿರುಗಿದನು.

"ಬಾಬೂ, ಯಾವಾಗ ರವಿ ವಾಂತಿ ಮಾಡಿಕೊಂಡದ್ದು ?"

"ನೀವು ಕಾರಿನಲ್ಲಿ ಕುಳಿತುಕೊಂಡಿದ್ದಾಗ ಮಹಡಿಯಿಂದ ಇಳಿದು ಏನೋ ಹೇಳಲು ಬಂದರೂ ಅಂತ ಕಾಣ್ಸುತ್ತೆ ಸಾರ್. ಬಾಗಿಲು ಹಿಡಿದು ಅಲ್ಲೇ ನಿಂತುಬಿಟ್ಟರು. ಆವಾಗಲೇ ಅವರು ವಾಂತಿ ಮಾಡಿಕೊಂಡದ್ದು ಪಾಪ." ಅವನು ಏನು ಹೇಳಲು ಬಂದನೋ ಏನೋ ! ಮೆಲ್ಲನೆ ಅವನ ಕೆನ್ನೆ ತಟ್ಟಿ "ರವಿ, ರವಿ....!"

ರವಿ ಕೆಂಪಡರಿ, ನೋವು ತುಂಬಿದ ಕಣ್ಣುಗಳನ್ನು ಮೆಲ್ಲನೇ ತೆರೆದನು– ಅವನಿಗೆ ತನ್ನ ಮುಖದ ಹತ್ತಿರವಿದ್ದ ರಘುವಿನ ಮುಖವನ್ನು ಗುರುತಿಸಲು ಒಂದರೆ ಕ್ಷಣ ಬೇಕಾಯಿತು.

"ಏನಾಗ್ತಾ ಇದೆ ರವಿ ? ಡಾಕ್ಟರನ್ನ ಕರೆಸಲಾ ?" ರಘು ಆತಂಕದಿಂದ ಕೇಳಿದಾಗ ಬೇಡೆನ್ನುವಂತೆ ತಲೆಯುಲ್ಲಾಡಿಸಿದನು.

"ಇಲ್ಲೇ ಕೂತ್ಕೋ, ನನ್ನ ಹತ್ತಿರ ರಘು....!" ಮೆಲ್ಲನೇ ಬಹಳ ಪ್ರಯಾಸದಿಂದ ಹೇಳಿ ರಘುವಿನ ಕೈ ಹಿಡಿದು ತನ್ನೆದೆಯ ಮೇಲಿರಿಸಿಕೊಂಡು

ಮತ್ತೆ ಕಣ್ಮುಚ್ಚಿದನು. ಶಿವರಾಮಯ್ಯನವರು ತಮ್ಮ ಸುಕ್ಕುಗಟ್ಟಿದ್ದ ಹಣೆಯ ಮೇಲೆ ಕೈಯಾಡಿಸಿಕೊಂಡರು.

"ಸ್ವಾಮಿ, ಭಗವಂತ, ಏನೇನು ಕಾಣಬೇಕೋ ಇನ್ನೂ ನಾನು !"

"ನೀವು ಹೋಗಿ ಊಟ ಮಾಡಿ ಮಲ್ಕೊಳ್ಳಿ ಅಪ್ಪಾ, ನಾನು ಎಲ್ಲಾ ನೋಡ್ಕೋತೀನಿ. ರವಿಯ ಪಕ್ಕದಲ್ಲಿದ್ದ ಕುರ್ಚಿಯೆಳೆದುಕೊಂಡು ಕುಳಿತನು ಅವನು ರವಿಯ ಮುಖವನ್ನೀಕ್ಷಿಸಿದನು. ಮುಖ ಕೊಂಚ ಹಳದಿಯ ಬಣ್ಣಕ್ಕೆ ತಿರುಗಿರುವಂತೆ ಕಾಣಿಸಿತು. ರವಿಯ ಎದೆಯ ಮೇಲಿದ್ದ ಕೈಯ್ಯ ಕೆಳಗಡೆ ಅವನ ಹೃದಯದ ಬಡಿತ ಬಿರುಸಾಗಿತ್ತು, "ಹೋಗು ರಘು, ನೀನು ಊಟಮಾಡಿ ಬಾ. ನಾನು ಅವನ ಹತ್ತಿರ ಇರ್ತೀನಿ. ಆಮೇಲೆ ನಾನು ಮಾಡ್ತೀನಿ" ಶಿವರಾಮಯ್ಯನವರು ಹೇಳಿದಾಗ ರಘು ಕಣ್ಮುಚ್ಚಿ ಹೇಳಿದನು. "ನಂಗೆ ಈಗ ಹಸಿವಿಲ್ಲಪ್ಪಾ, ನಾನು ಆಮೇಲೆ ಮಾಡ್ತೀನಿ.... ಎಲ್ರೂ ನಾನು ಹೇಳಿದಹಾಗೆ ಕೇಳಿದರೆ ನನಗೆ ಎಲ್ಲಾ ಮಾಡಲು ಸುಲಭ ವಾಗುತ್ತೆ !" ರಘು ಎಣಿಸಿದುದಕ್ಕಿಂತ ಅವನ ಗಂಟಲು ಗಡುಸಾಗಿತ್ತು.

"ಹಾಗೇ ಆಗಲಿ, ನಿನ್ನಿಷ್ಟ ! ನಾಳೆ ಬೆಳಿಗ್ಗೆ ಅವನನ್ನು ಡಾಕ್ಟರ ಹತ್ತಿರ ತೋರಿಸಿದರೆ ವಾಸಿ !" ತಮ್ಮಷ್ಟಕ್ಕೆ ತಾವೇ ಮಾತಾಡಿಕೊಳ್ಳುತ್ತಾ ಶಿವರಾಮಯ್ಯನವರು ಬಟ್ಟೆ ಬದಲಿಸಲು ತಮ್ಮ ರೂಮಿನತ್ತ ನಡೆದರು.

ರಾತ್ರಿಯೆಲ್ಲಾ ರವಿಯ ಪಕ್ಕದಲ್ಲೇ ಕುರ್ಚಿಗೊರಗಿ ಮಲಗಿದ್ದ ರಘುವಿಗೆ ನಿದ್ದೆಯಿಲ್ಲದೇ ಕಣ್ಣುರಿಯುತ್ತಿತ್ತು. ಮಧ್ಯರಾತ್ರಿಯ ಹೊತ್ತಿಗೆ ಕೆಂಡದಂತೆ ಸುಡುತ್ತಿದ್ದ ರವಿಯ ಮೈ ಆಗಾಗ ನಡುಗುತ್ತಿತ್ತು. ಮೈಮೇಲೆ ಪ್ರಜ್ಞೆ ಯಿಲ್ಲದೇ ನರಳುತ್ತಾ ಮಲಗಿದ್ದ ರವಿಯನ್ನು ಹೇಗೆ ಉಪಚರಿಸಬೇಕೆಂದು ತಿಳಿಯದೇ ರಘು ತವಕಿಸಿದನು. ಶುಭನೋ, ತನ್ನ ತಾಯಿಯೋ ಇದ್ದಿದ್ದರೆ ! ಬಾಬುವಿನ ಬಲವಂತದಿಂದ ಕುಡಿದ ಹಾಲು, ತಿಂದ ಎರಡು ಬಾಳೆಹಣ್ಣು ಬಿಟ್ಟು ರಘು ಮತ್ತೇನನ್ನೂ ಮುಟ್ಟಿರಲಿಲ್ಲ. ಆಗಾಗ ಬಾಯೊಣಗಿ ಬಂದಾಗ ರವಿಗೆ ಒಂದೆರಡು ಚಮಚ ನಿಂಬೆ ಹಣ್ಣಿನ ಪಾನಕ ಕುಡಿಸಿ ಬಾಯೊರೆಸಿದ್ದನು. ಬಾಬುವೂ ರವಿಯ ಕಾಲ ಬಳಿ ಕುಳಿತು ರಘುವಿನ ಜೊತೆಗೆ ನಿದ್ರೆಕೆಟ್ಟನು.

ಶಿವರಾಮಯ್ಯನವರು ಮಧ್ಯರಾತ್ರಿ ಎದ್ದು ಬಂದು ರವಿಯ ದೇಹಸ್ಥಿತಿ

ವಿಚಾರಿಸಿದಾಗ ರಘು ಸಿಡುಕಿದ್ದನು "ಸುಮ್ನೇ ಮಲ್ಕೋಬಾರ್‍ದಾಪ್ಪಾ, ನೀವೂ ಏನಾದ್ರೂ ಮಾಡ್ಕೊಳ್ಳಿ ಇಷ್ಟು ಸಧ್ಯ !"

"ಬಾಬೂ, ರವಿಗೆ ಹೀಗೆ ಯಾವಾಗ್ಲಾದ್ರೂ ಆಗಿತ್ತಾ ?"

"ಇಲ್ಲ ಸಾರ್, ಹೊಟ್ಟೆನೋವೂಂತ ಆಗಾಗ ಒದ್ದಾಡ್ತಾ ಇದ್ರು. ಊಟ ತಿಂಡಿ ಸೇರ್‍ತಾನೇ ಇರ್‍ಲಿಲ್ಲ ಈಚೀಚೆಗೆ. ಚಿಕ್ಕಮ್ಮಾವ್ರನ್ನ ಕೇಳಿದ್ರೆ ಗೊತ್ತಾಗುತ್ತೆ !"

"ಡಾಕ್ಟರಿಗೆ ತೋರಿಸಿರ್‍ಲಿಲ್ವಾ ?"

"ತೋರ್‍ಸಿದ್ರೂಂತ ಕಾಣ್ಸುತ್ತೆ ಸಾರ್, ಯಾವ್ದೋ ಮಾತ್ರೆಗಳನ್ನ, ಟಾನಿಕ್ಕುಗಳ್ನ ತೊಗೋತಾ ಇದ್ರು. ಅದೂ ಚಿಕ್ಕಮ್ಮಾವ್ರಿಗೆ ಗೊತ್ತು !"

ಈ ಪರಿಸ್ಥಿತಿಯಲ್ಲಿ ಶುಭನನ್ನೇನು ಕೇಳುವುದು ? ಅವಳು ಇದನ್ನು ಮನಸ್ಸಿಗೆ ಹಚ್ಚಿಕೊಂಡು ಕೊರಗಿದರೆ ! ಬೆಳಿಗ್ಗೆಯಾದರೆ ಸಾಕೆಂದು ರಘು ಹೊತ್ತು ಮೂಡುವುದನ್ನೇ ಕಾದು ಕುಳಿತನು. ತಾನೇ ಬೆಳಗಾಗುತ್ತಲೇ ಹೋಗಿ ಭಾಸ್ಕರನನ್ನು ಕೇಳಿ ಯಾವುದಾದರೂ ದೊಡ್ಡ ಡಾಕ್ಟರಿಗೆ ರವಿಯನ್ನು ತೋರಿಸಬೇಕೆಂದುಕೊಂಡನು.

ಹೊತ್ತು ಮೂಡುತ್ತಲೇ ದಡದಡನೆದ್ದು, ತಣ್ಣೀರಿನಲ್ಲಿ ನಿದ್ರೆ ಯಾವರಿಸಿದ್ದ ಕಣ್ಣು ಮುಖ ತೊಳೆದುಕೊಂಡನು. ಫ್ಲಾಸ್ಕಿನಲ್ಲಿ ಶುಭಳಿಗಾಗಿ ಹಾಲನ್ನು ಹಾಕಿಡಲು ಬಾಬುವಿಗೆ ಹೇಳಿ ಸ್ನೈ ತೊಳೆದು ಬಟ್ಟೆ ಬದಲಿಸಿ ಸಿದ್ಧನಾದನು. ರವಿಯಿನ್ನೂ ಜ್ವರದ ತಾಪದಲ್ಲಿ ನಿದ್ದೆಯ ಮಂಪರಿನಲ್ಲಿದ್ದನು.

"ಬಾಬೂ, ನೀನು ಯಾವ ಕೆಲ್ಸ ಮಾಡ್ದಿದ್ರೂ ಪರವಾಗಿಲ್ಲ. ರವಿಯನ್ನು ಬಿಟ್ಟು ಅಗಲಕೂಡದು. ನಾನು ಹೋಗಿ ಡಾಕ್ಟರನ್ನ ಕರೆದುಕೊಂಡು ಬರ್‍ತೀನಿ..." ರಘು ಬಾಬುವನ್ನು ಎಚ್ಚರಿಸಿ ಹೊರಟನು.

ನರ್ಸಿಂಗ್ ಹೋಂಗೆ ಬಂದಾಗ ಬೆಳ್ಳಗೆ ಬೆಳಕಾಗಿತ್ತು. ಎದುರಿಗೆ ಬಂದ ನರ್ಸ್‌ಗಳು ಅವನ ಮುಖ ನೋಡಿ ನಕ್ಕರು.

"ಅವರಿಗೆ ಪೂರ್ತಿ ಎಚ್ಚರ ಆಗಿದೆ."

ಹಿಂದಿನ ದಿನವೆಲ್ಲ ಅವಳು ಎಚ್ಚರವಾದರೆ ಸಾಕೆಂದು ಹಂಬಲಿಸಿದ್ದ

ರಘುವಿಗೆ ಈಗ ಶುಭಳಿಗೆ ಏಕೆ ಎಚ್ಚರವಾಯಿತೆಂದು ಬೇಸರವಾಯಿತು. ಅವನಿಗೆ ಈಗ ಶುಭನ ಯೋಚನೆಗಿಂತ ರವಿಯದೇ ಭಾರಿಯಾಗಿತ್ತು.

ರೂಮಿನ ಬಾಗಿಲು ಮೆಲ್ಲಗೆ ತಳ್ಳಿ ಒಳಗೆ ಬಂದಾಗ ಶುಭ ದಿಂಬಿಗೆ ಕೊಂಚ ಒರಗಿ ಮಲಗಿದ್ದಳು. ಅವನ ಹೆಜ್ಜೆ ಸದ್ದು ಕೇಳಿ ಕಣ್ತೆರೆದಳು. ರಘುವನ್ನು ನೋಡಿ ಅವಳ ಕಣ್ಣುಗಳು ಅರಳಿದವು, ತುಟಿಗಳು ಕಂಪಿಸಿದವು. ತುಟಿ, ಕಣ್ಣುಗಳಲ್ಲಿ ಮಂದಹಾಸ ಉಕ್ಕಿ ಬಂದು ಮುಖವರಳಿತು. ಬಿಸಿಲು ಮಳೆಯಂತೆ ಕಣ್ಣಿನಲ್ಲಿ ಸಂತಸವುಕ್ಕಿ, ಹನಿಗಟ್ಟಿತು.

"ರಘೂ! ನೀವೂ!" ಕಂಬಳಿಯ ಒಳಗಿದ್ದ ಕೈ ತೆಗೆದು ಅವನತ್ತ ನೀಡಿದಳು. ರಘುವಿನ ಮೈ ಕಂಪಿಸಿತು. ಮೈಯೆಲ್ಲ ಹೂವಿನಷ್ಟು ಹಗುರ ವಾಯಿತು. ಮೋಡದಂತೆ ಎಲ್ಲೋ ತೇಲಿಕೊಂಡು ಹೋದ ಹಾಗಾಯಿತು. ಅವಳತ್ತ ಧಾವಿಸಿ ಎರಡೂ ಬಾಹುಗಳಲ್ಲಿ ಅವಳನ್ನಡಗಿಸಿಕೊಂಡು, ಮುತ್ತಿನ ಮಳೆಗರೆಯುವ ಬಯಕೆ ಚಿಮ್ಮಿತು. ತೊಟ್ಟಿಲಿನಲ್ಲಿದ್ದ ಮಗು ಮಿಸುಕಾಡಿ ಮೆಲ್ಲನೇ ಅತ್ತಿದ್ದರಿಂದ ರಘು ಎಚ್ಚೆತ್ತನು. ಅವಳ ನೀಡಿದ ಕೈಯನ್ನು ತನ್ನ ಕೈಲಿ ತೆಗೆದುಕೊಂಡು ನಿರ್ವಿಕಾರನಾಗಿ ಉತ್ತರಿಸಿದನು.

"ಹೌದು, ನಾನು. ನಿನ್ನೆ ಬಂದೆ! ನಿಮ್ಮ ಮಗಳು ನಾನು ಬಂದ ಮೇಲೆ ಬಂದದ್ದು!" ಸಲ್ಲದ, ಒಲ್ಲದ ನಗು ಬರೆಸಿಕೊಂಡನು. "ನೀವು ಬಹಳ ಇಳಿದುಹೋಗಿದ್ದೀರಿ!"

ಶುಭ ರಘುವಿನ ಕೈ ಹಿಡಿತ ಸಡಿಲಿಸದೇ ಉತ್ತರಿಸಿದಳು. "ಎಷ್ಟು ದಿನ ಗಳಾಗಿಹೋಗಿತ್ತು ನಿಮ್ಮನ್ನು ನೋಡಿ! ನಾನು ಈ ಜನ್ಮದಲ್ಲಿ ನಿಮ್ಮನ್ನು ಪುನಃ ನೋಡುವುದಿಲ್ಲವೆಂದುಕೊಂಡಿದ್ದೆ!" ಶುಭನ ಎದೆ ಉದ್ವೇಗದಿಂದ ಏರಿಳಿಯು ತ್ತಿತ್ತು.

"ಶುಭಾ.... ನನ್ನನ್ನು ಮತ್ತೆ ನಿನ್ನ ಮೋಡಿಗೆ ಸಿಲುಕಿಸಿಕೊಳ್ಳಬೇಡಾ" ರಘುವಿನ ಹೃದಯ ಚೀರಿತು.

"ನೀವೂ ತುಂಬಾ ಇಳಿದುಹೋಗಿದ್ದೀರಿ.... ನನಗೆ ನಿಮ್ಮ ಗುರುತೇ ಹತ್ತ ಲಿಲ್ಲ! ಇನ್ಮೇಲೆ ಬಿಡಿ, ಸರಿಯಾಗ್ತೀರಿ–ಅಂತೂ ನಿಮ್ಮ ಪ್ರಾಮಿಸ್ ಉಳಿಸಿ ಕೊಂಡು, ನನ್ನ ಶಿಲಾಬಾಲಿಕೆ ಕೊಟ್ಟುಬಿಟ್ಟಿರಿ!" ರಘು ಪ್ರಯಾಸದಿಂದ ಅವಳಿಂದ ದೂರ ಸರಿದು ತೊಟ್ಟಿಲಿನಲ್ಲಿ ಮಿಸುಕಾಡುತ್ತಿದ್ದ ಮಗುವಿನತ್ತ

ಸರಿದನು. ಶುಭ ಮನಸಾರೆ ನಕ್ಕಳು. ಅವಳು ನಕ್ಕ ರೀತಿ ಕಂಡು, ರಘು ಹಾಗೆ ಅವಳೂ ನಕ್ಕು ಬಹಳ ದಿನಗಳಾಗಿರಬೇಕೆಂದುಕೊಂಡನು.

"ಯಾರ್ಹಾಗಿದ್ದಾಳೆ ನನ್ನ ಮಗಳು ?"

"ಎಲ್ಲಾ ನಿಮ್ಮ ಹಾಗೇಇದ್ದಾಳೆ!" ತೊಟ್ಟಿಲಿನ ಪರದೆ ಸರಿಸಿ ಕೈಯನ್ನು ಬಾಯಿಗೆ ತುರುಕಿಕೊಳ್ಳುತ್ತಾ ಕೊಸರಾಡುತ್ತಿದ್ದ ಮಗುವನ್ನು ಮುದ್ದಿಟ್ಟನು. "ಹಸಿವೂಂತ ಕಾಣ್ಸತ್ತೆ....ನಾಪ್‌ಕಿನ್ ಒಳಗೆ ದೊಡ್ಡ ಕೆಲಸ ಮಾಡಿದ್ದಾಳೇಂತ ಕಾಣ್ಸುತ್ತೆ...."

"ಹೌದಾ ? ಸ್ವಲ್ಪ ಆಯಾನ್ನ ಕರೀತೀರಾ ? ಬೆಡ್‌ಶೀಟ್ ತರಲು ಹೋಗಿದ್ದಾಳೆ...!" ಶುಭ ಹೇಳಿದಾಗ, ಅಲ್ಲಿಂದ ಕಾಲ್ತೆಗೆದರೆ ಸಾಕೆಂದು ಕಾದಿದ್ದ ರಘು ಹೊರಗೆ ಹೊರಟನು. ಶುಭಳಿಗೆ ರವಿಯ ಚಿಂತೆಯಿಲ್ಲವೇ ? ಅವನೇಕೆ ಬರಲಿಲ್ಲವೆಂದು ಏಕೆ ಕೇಳಲಿಲ್ಲ! ಎದುರಿಗೇ ಬರುತ್ತಿದ್ದ ಆಯಾನನ್ನು ಕೇಳಿದನು.

"ದೊಡ್ಡ ಡಾಕ್ಟರ್ ಇದ್ದಾರಾ ?"

"ಕನ್ಸಲ್ಟಿಂಗ್ ರೂಮಿನಲ್ಲಿದ್ದಾರೆ. ಈಗ್ತಾನೇ ಬಂದ್ರು !"

ರಘು ಬಂದಾಗ ಡಾ|| ಮಾಥ್ಯೂಸ್ ಮುಗುಳ್ನಕ್ಕರು.

"ಗುಡ್‌ಮಾರ್ನಿಂಗ್, ಗಾಡ್ ಡಾಟರ್‌ನ ನೋಡೋಕೆ ನೀವೇ ಬಂದ್ಬಿಟ್ರಾ ? ರವಿ ಬರ್ಲಿಲ್ವಾ ?"

"ಗುಡ್‌ಮಾರ್ನಿಂಗ್ ಡಾಕ್ಟರ್....ರವಿಗೆ ನೆನ್ನೆ ರಾತ್ರಿಯಿಂದ ಮೈ ಚೆನ್ನಾಗಿಲ್ಲ....ತುಂಬಾ ಜ್ವರ ವಾಂತಿ....!"

"ಛೇ ; ಛೇ ! ಪೂರ್ ಫೆಲೋ....ಡಾ|| ಕೃಷ್ಣಗೆ ತೋರಿಸಿದಾಗ ಅವ್ರು ರವಿಗೆ ಬಹಳ ಅಡ್ವೈಸ್ ಮಾಡಿದ್ರು. ರವಿ ಎಲ್ಲಿ ಅವೆಲ್ಲಾ ಫಾಲೋ ಮಾಡ್ತಾರೆ ? ಅವರು ಬಹಳ ಮೊಂಡು....! ಡಾಕ್ಟರಿಗೆ ತೋರ್ಸಿದ್ರೆ ವಾಸಿ....! ಅವರಿಗೆ ಅಡ್ವಾನ್ಸ್ ಅಕ್ಯೂಟ್ ಸಿರೋಸಿಸ್ ನಿಮ್ಗೆ ಗೊತ್ತಿರ್ಬೇಕೂ !" ಡಾಕ್ಟರ್ ನಿರ್ವಿಕಾರವಾಗಿ ಹೇಳಿದರು. ಆದರೆ ಅದನ್ನು ಕೇಳಿದ ರಘುವಿಗೆ ಸಿಡಿಲೆರಗಿದಂತಾಯಿತು.. ರವಿಗೆ ಅಕ್ಯೂಟ್ ಸಿರೋಸಿಸ್....ಆದರೆ ಅದಕ್ಕಾಗಿ ಅವನೇನೂ ಔಷಧಿ ತೆಗೆದುಕೊಂಡ ಹಾಗೆ ಕಾಣದು. ಅದಕ್ಕಾಗಿ ಏನೂ ಪಥ್ಯ

ಮಾಡಿದ ಹಾಗೆ ಕಾಣುವುದಿಲ್ಲ ! ಇದನ್ನು ಅವನು ಎಲ್ಲರಿಂದಲೂ ಮುಚ್ಚಿಟ್ಟಿದ್ದಾನೆ !

"ಡಾಕ್ಟರ್, ನಿಮ್ಮನ್ನೊಂದು ಮಾತು ಕೇಳ್ತೀನೆ....ದಯವಿಟ್ಟು, ನನಗೆ, ನಿಜ ಹೇಳಬೇಕು....ರವಿಯ ಖಾಯಿಲೆ ಎಷ್ಟು ಸೀರಿಯಸ್ ಹೇಳ್ತೀರಾ ?"

"ಬಹಳ ಅಕ್ಯೂಟ್ ಕೇಸು. ಡಯಟ್‌ನಲ್ಲಿದ್ರೆ ಸ್ವಲ್ಪ ವಾಸಿ, ಇಲ್ದಿದ್ರೆ ಇನ್‌ಕ್ಯೂರಬಲ್-ಲಿವರ್ ಕಂಪ್ಲೀಟಾಗಿ ಡ್ಯಾಮೇಜಾಗಿಬಿಟ್ಟಿದೆ....!"

"ಡಾ|| ಕೃಷ್ಣ ಅಡ್ರೆಸ್ಸು ಗೊತ್ತಾ ? ರವಿನ್ನ ಅಲ್ಲಿಗೆ ಕರ್ಕೊಂಡು ಹೋಗೊಣಾಂತಿದ್ದೀನಿ. ಅವನು ಅವನ ಖಾಯಿಲೆಯ ವಿಚಾರ ಒಬ್ಬರಿಗೂ ತಿಳಿಸಿಲ್ಲ. ಅವನ ಮಿಸೆಸ್‌ಗೂ ಗೊತ್ತಿಲ್ಲಾಂತ ಕಾಣ್ಸತ್ತೆ."

"ಡಾಕ್ಟರ್ ಕೃಷ್ಣ ಅಡ್ರೆಸ್ಸು ಕೊಡ್ತೀನಿ. ಹಿ ವಿಲ್ ಗೈಡ್ ಯೂ. ಆದರೆ ಆ ವಿಚಾರ ಅವರ ಮಿಸೆಸ್‌ಗೆ ಸಧ್ಯಕ್ಕೆ ತಿಳಿಸಬೇಡಿ."

ಡಾಕ್ಟರ್ ರಘುವಿನ ಕೈಗೆ ಡಾ|| ಕೃಷ್ಣರವರ ಅಡ್ರೆಸ್ಸು ಬರೆದು ಕೊಟ್ಟರು.

"ಥ್ಯಾಂಕ್ಸ್ ಡಾಕ್ಟರ್....ಶುಭಂಗೆ ಏನಾದ್ರೂ ಬೇಕಾಗಿದ್ರೆ ನಿಮ್ಮ ಕೈಲಿ ದುಡ್ಡು ಕೊಟ್ಟಿರ್ತೀನಿ. ದಯವಿಟ್ಟು ತರಿಸಿಕೊಳ್ಳಿ !"

ರಘುವಿನ ಧ್ವನಿಯಲ್ಲಿ ಕಂಪನವಿತ್ತು.

"ಛೇ, ಎಲ್ಲಾದರೂ ಉಂಟಾ ? ಏನಾದ್ರೂ ನಾವು ಅವರನ್ನ ನೋಡ್ಕೋತೀವಿ. ಬಿಲ್ ಆಮೇಲೆ ಕೊಡ್ತೀನಿ. ಮುಂಚೆ ರವಿನ್ನ ಅಟೆಂಡ್ ಮಾಡಿ."

ರಘುವಿಗೆ ರವಿಯ ಸ್ಥಿತಿಯರಿವಿನಿಂದಾಗಿ ಕೈಕಾಲು ಮರಗಟ್ಟಿದಂತಾಗಿತ್ತು. ಕೈಯ್ಯಲ್ಲಿ ಹಿಡಿದಿದ್ದ ಡಾ|| ಕೃಷ್ಣರವರ ಅಡ್ರೆಸ್ ಬರೆದ ಚೀಟಿಯನ್ನು ಮತ್ತೆ ಮತ್ತೆ ಓದಿದನು. ಅವನು ಹೋಗದೇ ತಮ್ಮ ಮುಂದೆ ನಿಂತಿದ್ದ ರಘುವನ್ನು ಕಂಡು ಡಾಕ್ಟರ್ ಮಾಥ್ಯೂಸ್‌ಗೆ ವ್ಯಥೆಯಾಯಿತು. ಅವನ ಮನಸ್ಸಿನ ತುಮುಲದ ಆಳವನ್ನು ಗ್ರಹಿಸಿದ ಅವರು ಅಧೋವದನರಾಗಿ ಹೇಳಿದರು.

"ಬೆಸ್ಟ್ ಆಫ್ ಲಕ್....ರಘುನಂದನ್....ನೀವು ಡಾ|| ಕೃಷ್ಣರನ್ನು ಆದಷ್ಟು ಬೇಗ ನೋಡುವುದು ಒಳ್ಳೆಯದು...." ಅವರು ಅಲ್ಲಿಂದ ಹೊರಗೆ ಹೊರಟರು.

ರಘು ನಿಟ್ಟುಸಿರಿಟ್ಟು ಕಾಲೆಳೆದುಕೊಂಡು ಶುಭನ ರೂಮಿನತ್ತ ನಡೆದನು.

ಶುಭನಿಂದ ಇದು ಮುಚ್ಚಿಡುವ ವಿಷಯವೇ ? ಒಂದು ವೇಳೆ ರವಿಗೆ....ರಘುವಿನ ಮನಸ್ಸು ಮುಂದೆ ಯೋಚಿಸಲು ಹಿಂಜರಿಯಿತು.

ಶುಭ ಪಕ್ಕದಲ್ಲಿ ಮಲಗಿದ್ದ ಮಗುವನ್ನು ನಿಟ್ಟಿಸುತ್ತಿದ್ದಳು. ಒಲವು ಆಸೆಗಳು ಉಕ್ಕಿ ಬಂದು ಮಾತೃವಾತ್ಸಲ್ಯದ ಮಹಾಪೂರದಲ್ಲಿ ಮಿಂದು ಬಂದ ಯಾವುದೋ ಅಪರಿಚಿತ ಶೋಭೆಯಿಂದ ಆವಳ ಮುಖ ಮಿನುಗುತ್ತಿತ್ತು. ರಘು ಬಂದು ಬಾಗಿಲ ಬಳಿ ನಿಂತಿದ್ದನ್ನು ಆವಳು ಗಮನಿಸಲಿಲ್ಲ. ತನ್ನ ಕನಸು ನನಸಾದುದನ್ನು ಕಂಡು ಹಿಗ್ಗಿ ಮೈಮರೆತಿದ್ದ ಆವಳನ್ನು ಎಚ್ಚರಗೊಳಿಸಲು ರಘುವಿಗೆ ಮನಸ್ಸಾಗಲಿಲ್ಲ ಬೆರಗು ಕಣ್ಣುಗಳಿಂದ ಹೊಸದಾಗಿ ಅರಳಿದ ಅವಳ ಮುಖವನ್ನು ದಿಟ್ಟಿಸಿದ. ಶುಭ ಈಗಲೂ ಚೆಲುವೆ–ಇದು ಹೊಸ ಪರಿಯ ಚೆಲುವು–ಕಾಮಾರ್ಥಗಳ ಸೋಂಕಿಲ್ಲದ, ವಾತ್ಸಲ್ಯ, ತ್ಯಾಗಗಳ ಸಮ್ಮಿಲನದ ತಿಳಿಗಾಳಿಯಂತಹ ಮಿದುನಗೆ ತುಟಿಗಳಂಚಿನಲ್ಲಿ–ಆಸೆ, ಒಲವುಗಳ ಸಮ್ಮಿಲನದ ತಿಳಿಬೆಳಕು ಕಂಗಳಲ್ಲಿ–! ಇದು ತಮ್ಮಿಬ್ಬರ ಮಗುವಾಗಿದ್ದರೆ ತಾಯ್ತನದ ಸೊಬಗನ್ನು ಕಂಡು ಆನಂದಿಸುವ ಪತಿ ತಾನಾಗಿದ್ದರೆ....! ಅವಳ ತುಟಿಯಂಚಿನ ಕಿರುನಗೆ ಕದ್ದು, ಅವಳ ಪಕ್ಕದಲ್ಲಿ ಕಣ್ಮುಚ್ಚಿ ಮಲಗಿದ್ದ ಒಲವಿನ ಉಡುಗೊರೆಯನ್ನು ಅಪ್ಪಿ ಹಿಡಿದು ಬಾಹ್ಯ ಜಗತ್ತು ಮರೆತು ಮೈಮರೆಯುವಂತಿದ್ದರೆ ....! 'ಧಡಾರ್' ಎಂದು ಕಿಟಕಿಯ ಬಾಗಿಲು ಗಾಳಿಗೆ ಮುಚ್ಚಿಕೊಂಡಾಗ ರಘುವಿನ ಕನಸೊಡೆಯಿತು. ಮೈಮರೆತಿದ್ದ ಶುಭ ಬೆಚ್ಚಿದಳು. ರಘುವಿನ ಮುಂದೆ ರವಿಯ ನೋವು ತುಂಬಿದ ಮುಖ ನೂರ್ಮಡಿಯಷ್ಟು ಬೆಳೆದು ನಿಂತಿತು.

"ಎಲ್ಲಾ ರವಿಯ ಹಾಗೇ ಇದ್ದಾಳೆ ಅನ್ನಿಸುತ್ತೆ ನನಗೆ... ನೋಡಿ ಈ ಗಲ್ಲ, ಹುಬ್ಬು, ಕಿವಿಯೆಲ್ಲಾ ಹಾಗೇ–ಮಲಗಿ ನಿದ್ರಿಸುವಾಗ ಮುಖದ ಮೇಲಿನ ಎಕ್ಸ್‌ಪ್ರೆಶನ್ ಕೂಡ ಹೀಗೆ ಇರುತ್ತೆ ರವೀದೂ....!" ಶುಭ ಮಗುವಿನ ಮೇಲೆ ಕಣ್ಣಾಡಿಸುತ್ತಾ ಹೇಳಿದಳು. "ರವಿ ಇನ್ನೂ ಎದ್ದಿರಲಿಲ್ಲವಾ ? ....ಈಚೀಚೆಗೆ ಬಹಳ ಸೋಮಾರಿಯಾಗಿಬಿಟ್ಟಿದ್ದಾರೆ-ರಾತ್ರಿ ನನಗೆ ತಿಳಿಯಬಾರದೆಂದು ನಾನು ಮಲಗಿದ ಮೇಲೆ ಚೆನ್ನಾಗಿ ಕುಡಿದು ಮಲಗಿಬಿಡ್ತಾ ಇದ್ರು.... ಬೆಳಿಗ್ಗೆ ನಾನು ಅವರನ್ನು ಎಬ್ಬಿಸೋಕೆ ರಣಪ್ರಯತ್ನಪಡ್ತಾ ಇದ್ದೆ." ಶುಭ ಮುಗುಳ್ನಕ್ಕಳು. ಅವಳ ಪ್ರಪಂಚದಲ್ಲಿ ಇಂದು ಎಲ್ಲವೂ, ಎಲ್ಲರೂ ಸುಂದರ. ರವಿಯ ಬಗ್ಗೆ

ಅವಳಿಗೆ ತಿಳಿಸುವ ಬಗೆ ಹೇಗೆ ? ರಘು ಎದುರಿನಲ್ಲಿದ್ದ ಸ್ಟೂಲೊಂದರ ಮೇಲೆ ಕುಸಿದ.

"ಹೌದು, ರವಿಯಿನ್ನೂ ಎದ್ದಿರಲಿಲ್ಲ....ಅವನಿಗೆ ಕೊಂಚ ಕೋಲ್ಡ್ ಅಟ್ಯಾಕ್ ಆದಹಾಗಿತ್ತು. ನಾನೇ ಬರಬೇಡಾಂದೆ—ನೋಡಿ, ಇನ್ನೂ ಪುಟ್ಟ ಮಗು, ಯಾಕೆ ಇನ್‌ಫೆಕ್ಷನ್ ಅಂತ—ಡಾಕ್ಟರ್ ಮಗೂನ ಹುಷಾರಾಗಿ ನೋಡ್ಕೋಬೇಕೂಂತ ಹೇಳಿದ್ದಾರೆ. ರವಿನ್ನ ಮನೇಲೆ ಇರೂಂತ ಆರ್ಡರ್ ಮಾಡಿಬಿಟ್ಟೆ ಹೋಪ್ ಯೂ ಡೋಂಟ್ ಮೈಂಡ್." ರಘು ಅವಳತ್ತ ನೋಡದೇ ತನ್ನ ಕೈಲಿದ್ದ ಡಾ|| ಕೃಷ್ಣರವರ ವಿಳಾಸದ ಚೀಟಿಯತ್ತ ಕಣ್ಣಾಡಿಸಿದನು.

"ಪಾಪ, ನಿನ್ನೆ ಬೆಳಿಗ್ಗೆ ಅಷ್ಟೊತ್ತಿಗೇ ಎಬ್ಬಿಸಿ ತೊಂದರೆ ಮಾಡಿದೆ ನಾನು. ಎಲ್ಲೋ ಎಕ್ಸ್‌ಪೋಸ್ ಆಗಿರ್ಬೇಕೂ....ನೀವು ಇಲ್ಲಿಗೆ ಅವ್ರು ಬರ್ದೇ ಇರೋಹಾಗೆ ಹೇಳಿದ್ದು ಒಳ್ಳೇದಾಯ್ತು ಬಿಡಿ. ಇದಕ್ಕೆ ಕೋಲ್ಡ್ ಬಂದು ಹೇಗೆ ತಡೆದೀತು-ರವಿದು ಒಂದು ತರಹ ಹುಚ್ಚು ಮುದ್ದು—ಇದನ್ನ ನೋಡಿ ಖಂಡಿತ ಎತ್ತಿಕೊಂಡು ಹಿಸುಕಾಡಿ ಮುದ್ದು ಮಾಡುತ್ತಿದ್ದರು....ಅವ್ರಿಗೆ ಹೇಳಿ, ಡಾಕ್ಟರ್ ಹತ್ತಿರ ಒಂದ್ಸಲ ತೋರ್ಸ್ಸಂತ-ಈಚೀಚೆಗೆ ರವಿಯ ಹೆಲ್ತ್ ಅಷ್ಟು ಚೆನ್ನಾಗಿಲ್ಲ....!"

ರಘು ಮೆಲ್ಲನೇ ಕೆಮ್ಮಿದ. ರವಿಯ ಕಾಯಿಲೆಯ ಗಂಭೀರತೆ ಶುಭನಿಗೆ ತಿಳಿದಿತ್ತೇ ?

"ಅದ್ಸರಿ, ಅವನಿಗೆ ಅಷ್ಟೊಂದು ಕುಡ್ಯೋಕೆ ನೀವ್ಯಾಕೆ ಬಿಡ್ತೀರಿ ? ಡ್ರಿಂಕ್ಸ್ ಲಿವರ್‌ನ ಕಂಪ್ಲೀಟಾಗಿ ಡ್ಯಾಮೇಜ್ ಮಾಡಿಬಿಡುತ್ತೆ. ನೀವು ಅವನ್ನ ಮದ್ವೆ ಆದ್ಮೇಲೆ ಖಂಡಿತ ನಿಲ್ಲಿಸ್ಬಿಡ್ತೀರಿ ಅಂದ್ಕೊಂಡಿದ್ದೆ....!" ರಘು ಅವಳ ಮುಖದ ಮೇಲಾಗಬಹುದಾದ ಬದಲಾವಣೆ ಗಮನಿಸುತ್ತಾ ಹೇಳಿದ.

ಶುಭನ ಮುಖದಲ್ಲಿ ನೋವಿನ ಗೆರೆಗಳು ಮೂಡಿದವು. ಕಣ್ಣಂಚಿನಲ್ಲಿ ಕಂಡೂ ಕಾಣದಂತೆ ತೇವ ಮೂಡಿತು.

"ನಾನೂ ಎಷ್ಟೋ ಬೇಡಿದೆ, ಕಾಡಿದೆ—ಆದರೆ ಏನೂ ಪ್ರಯೋಜನವಾಗಲಿಲ್ಲ. ಮನೆಯಲ್ಲಿ ಕಟ್ಟುನಿಟ್ಟು ಮಾಡಿದರೆ ಹೊರಗೋಗಿ ಕುಡಿದು ಬರ್ತಾ ಇದ್ರು. ಕೊನೆಗೆ ಹೇಳುವುದನ್ನೇ ಬಿಟ್ಟುಬಿಟ್ಟೆ. ಆಗಾಗ ಹೊಟ್ಟೆ

ನೋವೆಂದು ಒದ್ದಾಡುತ್ತಾ ಇರ್ತಾರೆ-ಊಟ ಸರಿಯಾಗಿ ಮಾಡುವುದಿಲ್ಲ. ಡಾಕ್ಟರಿಗೆ ತೋರಿಸಿ ಅಂದರೆ-ಎಲ್ಲಾ ತೋರಿಸಿದೆ-ಏನೂ ಇಲ್ಲ, ಸ್ವಲ್ಪ ಲಿವರ್ ಅಪ್‌ಸೆಟ್ ಆಗಿದೆ ಎನ್ನುತ್ತಾರೆ....ರಘು....ನೀವು ಬಂದಿದ್ದೀರಲ್ಲ-ಇದೇ ಸಮಯ, ಅವರಿಗೆ ಬುದ್ಧಿ ಹೇಳಿ ಡಾಕ್ಟರ್ ಹತ್ತಿರ ತೋರಿಸುತ್ತೀರಾ ?" ಶುಭ ಅಂಗಲಾಚಿದಳು. "ನನ್ನ ಒಳ ಮನಸ್ಸು ಆಗಾಗ ಅಂದುಕೊಳ್ತಾ ಇತ್ತು-ರಘು ಬಂದರೆ ಎಲ್ಲಾ ಸರಿಹೋಗುತ್ತೆ ಅಂತ...."

ರಘು ಉಗುಳು ನುಂಗಿದನು. ಮಗುವನ್ನು ಬಳಸಿದ್ದ ಅವಳ ಬಲಗೈ ಅದುಮಿ ಹೇಳಿದನು.

"ಐ ವಿಲ್ ಡೂ ಮೈ ಬೆಸ್ಟ್."

ನಂದಿನಿ, ಭಾಸ್ಕರ ಬಂದಿದ್ದರಿಂದ ಮಾತು ಅಲ್ಲಿಗೇ ನಿಂತಿತು.

"ಓಹೋ ಹೋ. ನಮಗಿಂತ ಮುಂಚೆ ನೀನೇ ಬಂದ್ಬಿಟ್ಟಿದ್ದೀಯಾ ? ....ನೋಡು. ನಿನ್ನ ಮಗ್ಳು ಹುಟ್ಟಿದ ಹೊತ್ತು ! ರಘುಗೆ ನಾಲ್ಕು ಕಾಲು, ನಾಲ್ಕು ಕೈ ಬಂದ್ಬಿಟ್ಟಿದೆ." ನಂದಿನಿ ಶುಭನತ್ತ ನಡೆದಳು.

"ಹೌದು; ಅತ್ತಿಗೆ. ನನ್ನ ಹತ್ತಿರ ಅವರು ಮದುವೇಲಿ ಪ್ರಾಮಿಸ್ ತೊಗೊಂಡಿದ್ರು, ಒಂದು ಹೆಣ್ಣು ಮಗು ಪ್ರೆಸೆಂಟ್ ಮಾಡೀಂತ."

ರಘುವಿಗೆ ಅಲ್ಲಿ ನಿಲ್ಲಲಾಗಲಿಲ್ಲ. ರವಿಯ ನರಳುವಿಕೆಯಲ್ಲಿ ತನ್ನ ಹೊಂಗನಸಿನ ನೆನಪೇ ?....

"ಬರ್ತೀನಿ....ಇನ್ನೇನು ನಂದಿನಿ ಬಂದ್ಲಲ್ಲ. ನೋಡ್ಕೋತಾಳೆ-ನಂಗೆ ತುಂಬಾ ಕೆಲ್ಸ ಇವೆ. ಸಂಜೆಗೆ ಬರ್ತೀನಿ....ಏನಾದ್ರೂ ಬೇಕಾ ?" ರಘು ಬಾಗಿಲತ್ತ ಹೆಜ್ಜೆ ಹಾಕಿದ.

"ಸಾಕು ಸುಮ್ನಿರೋ ...ನಿನ್ನ ಕೆಲ್ಸ ನೀನು ನೋಡಿಕೋ....ನಾನಿದ್ದೀನಲ್ಲ, ಎಲ್ಲಾ ನೋಡ್ಕೋತೀನಿ .. ಪಾಪ, ರವಿ ಎಲ್ಲಕ್ಕೂ ಒಬ್ನೇ ನಿಂತು ತಲೆ ಕೆಡಿಸ್ಕೋತಾನೆ--!" ನಂದಿನಿ ಹೇಳಿದಳು.

"ಹೌದು, ರಘು. ಅತ್ತಿಗೆ ನೋಡ್ಕೋತಾರೆ-ನೀವು ಸ್ವಲ್ಪ ರವಿ ಕಡೆ ಗಮನ ಕೊಡಿ... !" ಶುಭ ಮೆಲ್ಲನುಸುರಿದಳು.

ರಘು ಹೊರಗೆ ಹೋಗುವಾಗ ಭಾಸ್ಕರನ ಕೈ ಮುಟ್ಟಿ ಪಿಸುಧ್ವನಿಯಲ್ಲಿ ಹೇಳಿದ.

"ಒನ್ ಮಿನಿಟ್...."

ಭಾಸ್ಕರ ರಘುವನ್ನು ಹಿಂಬಾಲಿಸಿದ. ರಘು ತನ್ನೊಬ್ಬನ ಹತ್ತಿರ ಮಾತಾಡುವುದೇನು ? ಅವನೂ ಕೊಂಚ ಗೊಂದಲದಲ್ಲಿ ತೊಳಲಾಡಿದನು. ರಘು ಹಿಂತಿರುಗಿ ನೋಡದೇ ಕಾರಿನತನಕ ನಡೆದನು. ಭಾಸ್ಕರ ಹಿಂಬಾಲಿಸಿದನು ಕಾರನ್ನು ಒರಗಿ ನಿಂತು ರಘು ಕರವಸ್ತ್ರ ತೆಗೆದು ಮುಖದ ಮೇಲಿನ ಬೆವರು ಒರೆಸಿಕೊಂಡಾಗ ಭಾಸ್ಕರ ತಡೆಯದೇ ಕೇಳಿದ—

"ಯೆಸ್-ವಾಟ್ ಈಸ್ ಇಟ್ ?"

"ರವಿಯ ಖಾಯಿಲೆಯ ಸಮಾಚಾರ ನಿಮಗೇನೂ ಗೊತ್ತಿಲ್ವೇ ?"

"ರವಿಗೆ ? ಖಾಯಿಲೆ ? ನಂಗೇನೂ ತಿಳಿಯದು ತಾಯಿ ಹೋದ್ಮೇಲೆ ತುಂಬಾ ಕುಡೀತಾನೆ, ಲಿವರ್ ಆಗಾಗ ಅಪ್ಸೆಟ್ ಆಗುತ್ತೇಂತ ಗೊತ್ತಿತ್ತು. ಯಾವಾಗ್ಲೋ ಶುಭ ಹೇಳಿದ ನೆನಪು ಅಷ್ಟೆ !" ಭಾಸ್ಕರನ ಕಣ್ಣುಗಳಲ್ಲಿ ಆತಂಕ ಚಿಮ್ಮಿತು.

"ಹೋಪ್ ನತ್ತಿಂಗ್, ಸೀರಿಯಸ್"

"ರವಿಗೆ ಸಿರೋಸಿಸ್ ಆಫ್ ದಿ ಲಿವರ್....ತುಂಬಾ ಅಕ್ಯೂಟ್....ನಿನ್ನೆಯಿಂದ ಮಲಗಿಬಿಟ್ಟಿದ್ದಾನೆ....ನಾನು ಡಾ|| ಕೃಷ್ಣ ಹತ್ತಿರ ಹೋಗ್ತಾ ಇದ್ದೀನಿ ....ದಯವಿಟ್ಟು ಈ ವಿಷಯವನ್ನ ಶುಭಾಸಿಗೆ ತಿಳಿಸಬೇಡಿ-ರವೀನ್ನ ಹಾಸ್ಪೆಟಲ್‌ಗೆ ಅಡ್ಮಿಟ್ ಮಾಡ್ಬೇಕಾಗುತ್ತೋ ಏನೋ. ನನಗೆ ಕೈಕಾಲೇ ಓಡ್ತಾ ಇಲ್ಲ. ಐ ನೀಡ್ ಯುವರ್ ಹೆಲ್ಪ್" ರಘುವಿನ ಕಣ್ಣುಗಳಲ್ಲಿ ಕಂಬನಿಯುಕ್ಕಿತು. ತಡೆದಿದ್ದ ದುಃಖ, ಆತಂಕ, ನಿರಾಶೆಗಳೆಲ್ಲಾ ಕಣ್ಣೀರಾಗಿ ಹರಿಯಿತು. ಭಾಸ್ಕರ ಕಲ್ಲಿನಂತೆ ನಿಂತನು. ರಘು ಅವನಿಂದ ಮುಖ ತಿರುಗಿಸಿ ಕರವಸ್ತ್ರದಿಂದ ಕಣ್ಣೊರೆಸಿಕೊಂಡನು. ಭಾಸ್ಕರನಿಗೆ ಎದೆ ಭಾರವಾಗಿ ಗಂಟಲಲ್ಲಿ ಎದೆಯಲ್ಲಿ ದುಃಖ ಉಕ್ಕಿ ಬಂತು. ಉಗುಳು ನುಂಗಿ ರಘುವಿನ ಬೆನ್ನು ತಟ್ಟಿದ.

"ಡೋಂಟ್ ವರಿ. ನಾನು ಏನು ಹೆಲ್ಪ್ ಬೇಕಾದ್ರೂ ಮಾಡ್ತೀನಿ. ನೀನು ತುಂಬಾ ಹೆದರಿದ್ದೀ-ನೀನು ಅಂದುಕೊಂಡಿರುವಷ್ಟು ರವಿಯ ಹೆಲ್ತ್ ಕೆಟ್ಟಿಲ್ಲ ಅನ್ನಿಸುತ್ತೆ... ಬಿ ಬ್ರೇವ್....!"

"ಐ ವಿಶ್ ಐ ಕುಡ್....!" ರಘು ಕಾರಿನ ಬಾಗಿಲು ತೆರೆದು ಸ್ಟೀರಿಂಗ್

ವ್ಹೀಲ್ ಮೇಲೆ ತಲೆಯಿಟ್ಟು ಒಂದು ಗಳಿಗೆ ಕಣ್ಮುಚ್ಚಿದ. ಭಾಸ್ಕರ ಕಾರಿನ ಬಾಗಿಲು ಮುಚ್ಚುತ್ತಾ ಹೇಳಿದ—

"ಶುಭನ ವಿಚಾರ ನಮಗೆ ಬಿಟ್ಬಿಡು-ಬೆಸ್ಟ್ ಆಫ್ ಲಕ್—"

"ನೀವು ರವೀಗೇನಾಗಬೇಕು ?" ಕನ್ನಡಕದ ಗಾಜಿನ ಹಿಂದಿದ್ದ ತೀಕ್ಷ್ಣ ನೋಟವನ್ನು ರಘುವಿನ ಮೇಲಾಡಿಸುತ್ತಾ ಡಾ|| ಕೃಷ್ಣ ಕೇಳಿದಾಗ ರಘು ತುಟಿ ಕಚ್ಚಿದನು.

"ನಾನು ಅವನ ತಮ್ಮ."

"ಐ ಸೀ. ನೀವೆಲ್ಲಿ ವರ್ಕ್ ಮಾಡ್ತಾ ಇದ್ದೀರಿ ?"

"ರಾಂಚೀಲಿ."

"ರವೀದು ತುಂಬಾ ಅಡ್ವಾನ್ಸ್ಡ್ ಸ್ಟೇಜ್....ನಾನು ಡಯಟ್ ತುಂಬಾ ಇಂಪಾರ್ಟೆಂಟ್ ಅಂತ ಹೇಳಿದ್ದೆ. ಡ್ರಿಂಕ್ಸ್, ಸ್ಮೋಕಿಂಗ್ ಎಲ್ಲಾ ನಿಲ್ಲಿಸ್ಬಿಡ್ಬೇಕೂಂತ ಹೇಳಿದ್ದೆ....ಎಷ್ಟು ಸ್ಟ್ರಿಕ್ಟ್ ಆಗಿ ಫಾಲೋ ಮಾಡ್ತಿದ್ರೋ ತಿಳೀದು." ಕೃಷ್ಣ ಕೈಲಿ ಹಿಡಿದಿದ್ದ ಸ್ಟೆತೋಸ್ಕೋಪಿನೊಡನೆ ಆಡುತ್ತಾ ಹೇಳಿದರು.

" ನಾನೂನಿನ್ನೆ ಬಂದೆ. ಅವನ ಮಿಸೆಸ್‌ಗೆ ಕೂಡ ಅವರ ಸೀರಿಯಸ್ ನೆಸ್ ಗೊತ್ತಿಲ್ಲಾಂತ ಕಾಣ್ಸತ್ತೆ. ಶೀ ಹಾಸ್ ಡೆಲಿವರ್ಡ್ ಎ ಗರ್ಲ್ ಬೇಬಿ. ಪಾಪ, ರವೀಗೆ ಮಗೂನ್ನ ಕೂಡ ಸರ್‍ಯಾಗಿ ನೋಡೋಕಾಗ್ಲಿಲ್ಲಾಂತ ಕಾಣ್ಸತ್ತೆ... ಹೌ ಸೀರಿಯಸ್ ಈಸ್ ಹಿಸ್ ಕಂಡೀಷನ್ ಡಾಕ್ಟರ್,....ಐ ವಾಂಟು ನೋ ದಿ ಟ್ರೂತ್ ..." ರಘುವಿನ ತುಟಿ ನಡುಗಿತು.

"ಇಟ್ ಮೇಬಿ ಎ ಮ್ಯಾಟರ್ ಆಫ್ ಟೈಂ...." ಕೃಷ್ಣ ಎದ್ದು ಕಿಟಕಿಯಿಂದ ಹೊರನೋಡಿದರು. "ಹಿ ಇಸ್ ಟೂ ಯಂಗ್ ಟು ಗೆಟ್ ದಿಸ್.... ಪಾಪ, ಅವರ ಮಿಸೆಸ್ ಗತಿಯೇನು-ಮಗೂ ಬೇರೆ ಈಗ....ಐ ಫೀಲ್ ವೆರಿ ಸಾರಿ" ಕೃಷ್ಣ ರಘುವಿನತ್ತ ತಿರುಗಿದರು. ಅವನು ಟೇಬಲ್ಲಿನ ಮೇಲೆ ತಲೆಯಿಟ್ಟು ಮುಖ ಮುಚ್ಚಿಕೊಂಡಿದ್ದನು. ಅವರು ಅವನ ಬೆನ್ನು ತಟ್ಟಿದರು. "ಟೇಕ್ ಇಟ್ ಈಸೀ. ನಂಗೊತ್ತು, ನಿಮಗೆ ಹೇಗಾಗುತ್ತೇಂತ. ಐ ವಿಲ್ ಡೂ ಮೈ ಅಟ್‌ಮೋಸ್ಟ್ ಟು ಪ್ರಿಸರ್ವ್ ಹಿಮ್ ಫಾರ್ ಯೂ... ಏಳಿ, ನೀವು ಅವ್ನ ತಕ್ಷಣ ನನ್ನ ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿಬಿಡಿ. ಸ್ಕ್ರೀ

ಮಾಡಿ ನೋಡ್ತೀನಿ...ಬ್ಲಡ್, ಯೂರಿನ್ ಟೆಸ್ಟ್ ಮಾಡ್ಬೇಕೂ....! ಕ್ವಿಕರ್ ದಿ ಬೆಟರ್—" ಡಾಕ್ಟರ್ ರಘುವಿನ ತಲೆ ತಡವಿ ಅಲ್ಲಿಂದ ಸರಿದರು.

ರಘು ಕಣ್ಣೊರಸಿಕೊಂಡು ಎದ್ದು ನಿಂತನು. ತಾನೆಂತಹ ಸ್ಥಿತಿಯಲ್ಲಿ ಸಿಲುಕಿಕೊಂಡಿದ್ದೇನೆ! ಸತೀಷ್ ಹೇಳಿದಂತೆ ತಾನು ಎಸ್ಕೇಪಿಸ್ಟ್....ಅದೇ ತನಗೆ ಸರಿಯಾಗಿತ್ತು. ಕಾಸಿಲ್ಲಿಗೆ ಬಂದಿರಬಾರದಾಗಿತ್ತು. ತನಗೆಲ್ಲ ವಿಷಯವೂ ಕಾಗದದ ಮೂಲಕ ತಿಳಿಯುತ್ತಿತ್ತು. ಕಣ್ಣಾರೆ ಇವುಗಳನ್ನು ಕಾಣುವುದೊಂದು ನರಕ ತನಗೆ. ವಯಸ್ಸಾದ ತಂದೆ, ಚಿಕ್ಕ ಹೆಂಡತಿ, ಪುಟ್ಟಮಗು-ತಾನು ಇವರೆಲ್ಲರೂ ಇರಬೇಕಾದರೆ—ರವಿ—ರವಿ ತಮ್ಮನ್ನಗಲಿ ಹೋಗಬಹುದೇ ?....ಶುಭ ಇದನ್ನು ತಡೆಯುವಳೇ ?...ವಯಸ್ಸಾದ ತಂದೆ ತಡೆಯಬಹುದೇ ? ತಾನೇ ದುಃಖದಿಂದ ಸಿಡಿದುಹೋದರೆ! ಎಲ್ಲರೂ ತನ್ನ ಮೇಲೆ ಭಾರಹಾಕಿದ್ದಾರೆ. ರವಿ ತನ್ನನ್ನೇ ನಂಬಿದ್ದಾನೆ! "ದೇವರೇ, ನನಗೆ ಇದೆಲ್ಲಾ ಸಹಿಸಲು ಶಕ್ತಿ ಕೊಡು, ಧೈರ್ಯ ಕೊಡು!" ಕಾಣದ ದೈವಕ್ಕೆ ಕೈಮುಗಿದು ಬೇಡಿದ.

ಕಾರಿನಲ್ಲಿ ಕುಳಿತು ಕಾರು 'ಸ್ಟಾರ್ಟ್' ಮಾಡಿದಾಗ ಶುಭನ ಮುಖ ಅವನ ಕಣ್ಮುಂದೆ ತೇಲಿ ಬಂತು "ನನ್ನ ಒಳಮನಸ್ಸು ಆಗಾಗ ಹೇಳ್ತಾ ಇತ್ತು. ರಘು ಬಂದರೆ ಎಲ್ಲಾ ಸರಿಹೋಗುತ್ತೇಂತ."

"ಶುಭ—ಶುಭ-ನಿನಗೆ ಎಂದಿಗೂ ನಿರಾಸೆ ಮಾಡುವುದಿಲ್ಲ" ರಘು ತನಗೆ ತಾನೇ ಹೇಳಿಕೊಂಡನು.

ರವಿಗೆ ಜಾಂಡೀಸ್ ಆಗಿದೆಯೆಂದು ಶಿವರಾಮಯ್ಯನವರಿಗೆ ರಘು ತಿಳಿಸಿದ್ದ. ನಂದಿನಿಗೆ ರವಿಗೆ ಫ್ಲೂ ಆಗಿದೆಯೆಂದು ಹೇಳಿದ್ದ. ಶುಭನಿಗೆ ರವಿಗೇನೂ ಆಗಿಲ್ಲ ರೆಸ್ಟ್ ಬೇಕೂ ಅಷ್ಟೆ ಎಂದು ಹೇಳಿದ್ದ. ನಿಜಾಂಶ ತಿಳಿದಿದ್ದು ಭಾಸ್ಕರ ನೊಬ್ಬನಿಗೇ ಮತ್ತು ರಘುವಿಗೆ ಡಾ|| ಕೃಷ್ಣ ರವಿಯನ್ನು ಪರೀಕ್ಷಿಸಿ ಹೇಳಿದ್ದರು

"ಓನ್ಲೀ ಎ ಮಿರಕಲ್ ಶುಡ್ ಹ್ಯಾಪೆನ್"

ನರ್ಸಿಂಗ್ ಹೋಂ ನಲ್ಲಿ ನಿಸ್ತೇಜನಾಗಿ ಮಲಗಿದ್ದ ರವಿಗೆ ಒಂದೇ ಯೋಚನೆ ಶುಭ. ತಾನು ಅವಳನ್ನು ಕೈಹಿಡಿದು ಅವಳಿಗಿತ್ತ ಸುಖವಾದರೂ ಏನು ? ಅವಳಿಗೆ ನಾನೆಂತಹ ಅಪರಾಧ ಮಾಡಿದೆ, ಅವಳೆಷ್ಟು ಹೇಳಿದರೂ ತಾನೂ ಕುಡಿ ಯುವುದನ್ನು ಬಿಟ್ಟಿರಲಿಲ್ಲ ತಾನು ಸಂಸಾರಿಯೆನ್ನುವುದನ್ನು ಮರೆತು ತನ್ನ ಸುಖ ತನ್ನ ತೃಪ್ತಿಗಾಗಿ ಏನೆಲ್ಲಾ ಮಾಡಿದೆ. ಶುಭ ಒಂದು ದಿನ ತನಗೆ ಹೇಳಿದ ನೆನಪು.

"ಸಂಸಾರ ಎಂದರೆ ಎಲ್ಲರೂ ಕೊಂಚ ತ್ಯಾಗ ಮಾಡ್ಬೇಕೂ ರವಿ. ಯಾವಾಗ್ಲೂ ನಂದೂ, ನಂದೂ, ನನ್ನ ಸುಖ, ನನ್ನ ಕಷ್ಟ ಅಂದರೆ ಸಂಸಾರ ಸರಿಯಾಗಿ ನಡೆಯೋಲ್ಲ...." ಹೌದು. ಆ ಮಾತಿನಲ್ಲೆಷ್ಟು ಸತ್ಯ ಅಡಗಿತ್ತು ? ಅವಳು ಎಂದೂ ತನಗಾಗಿ, ಏನನ್ನೂ ಕೇಳಿರಲಿಲ್ಲ. ಹೊಚ್ಚ ಹೊಸ ವಸಂತದ ಹೂವಿನಂತಿದ್ದ ಅವಳು ತನ್ನ ಕೈ ಹಿಡಿದ ಮೇಲೆ ಎಲ್ಲವನ್ನೂ ತ್ಯಾಗಮಾಡಿದ್ದಳು. ಅವಳಾಗಿ ಎಂದೂ ಏನನ್ನೂ ಬೇಡಿದವಳಲ್ಲ. ತಾನು ಕೇಳಿದರೆ, ಕೊಟ್ಟರೆ ಉಂಟು, ಇಲ್ಲದಿದ್ದಲ್ಲಿ ಇಲ್ಲ. ಅವಳು ಅವಳಾಗಿ ಕೇಳಿದ್ದು ಒಂದೇ- ಮಗು ! ತನಗೇನಾದರೂ ಆದರೆ ಆ ಮಗು ಅವಳಿಗೊಂದು ಹೊರೆ! ಯೌವನದ ಹೊಸಲಿನಲ್ಲಿರುವ ಅವಳ ಬಾಳಿನ ಗತಿಯೇನು ? ಸೂರು ನೋಡುತ್ತಾ ಮಲಗಿದ್ದ ಅವನನ್ನು ಕಂಡ ರಘು ಮುಖದ ಮೇಲೆ ನಗು ತಂದುಕೊಂಡನು.

"ಏನಪ್ಪಾ, ಅಷ್ಟು ಯೋಚಿಸ್ತಾ ಇದ್ದೀಯಾ ? ಮಗಳಿಗೆ ಏನು ಹೆಸರಿಡ್ಲೀಂತಾನಾ ?....ಅವ್ಳು ನನ್ನ ಪ್ರಾಪರ್ಟೀ. ನೀವಿಬ್ರೂ ನನಗೆ ಪ್ರೆಸೆಂಟ್ ಮಾಡ್ತೀನೀಂತ ಹೇಳಲಿಲ್ವಾ ?"

ರವಿ ಒಣನಗೆ ನಕ್ಕ-ಎಲ್ಲಾ ಕ್ಷಣಿಕ.

"ಶುಭ ಹೇಗಿದ್ದಾಳೆ ರಘು ? ಯಾವೊತ್ತು ಡಿಸ್ಚಾರ್ಜ್ ಮಾಡ್ತಾರೆ ?"

"ನಾಳೆ ನಾಡಿದ್ದು ಮಾಡ್ಬೋದೂ, ನಿನ್ನ ಮಗಳ ಹಾವಳಿ ಬಹಳ ಜಾಸ್ತಿ. ಸಂಜೆ ಅಳೋಕೆ ಶುರು ಮಾಡಿದ್ರೆ ಬೆಳಗಿನ ಜಾವದತನ್ಕ ನಿಲ್ಲಿಸೋಲ್ಲ.... ಅದೇನೋ ಕೋಲಿಕಿ ಬೇಬೀಂತೆ ಅವ್ಳು."

"ಶುಭ ಹೇಗಿದ್ದಾಳೇಂತ ಕೇಳಿದ್ದು ನಾನು !" ರವಿ ಮತ್ತೆ ಆ ಪ್ರಶ್ನೆ ಕೇಳಿದಾಗ ರಘುವಿನ ಮುಖದಿಂದ ಸೋಗಿನ ನಗೆ ಮಾಯವಾಯಿತು.

"ನನ್ನ ವಿಷಯ ಅವಳಿಗೆ ತಿಳಿಸಿಲ್ಲ ತಾನೇ ?"

ರಘು ಕಳೆಗುಂದಿದ ರವಿಯ ಮುಖದತ್ತ ಬಾಗಿ ಹೇಳಿದನು "ಶುಭ ಚೆನ್ನಾಗಿದ್ದಾಳೆ. ಅವಳಿಗೆ ನೀನಿಲ್ಲಿರುವುದು ತಿಳಿಸಿಲ್ಲ. ಮನೆಯಲ್ಲೇ ಇದ್ದೀಯೆಂದು ತಿಳಿಸಿದ್ದೀವಿ....ಅವಳ ಯೋಚನೆ ಬಿಡು. ನೀನು ತುಂಬಾ ಯೋಚನೆ ತಲೆಗೆ ಹಚ್ಚಿಕೊಳ್ತೀತ್ತೀ. ಸುಮ್ಮನೇ ಮಲಗಿ ರೆಸ್ಟ್ ತಗೋಬಾರ್ದಾ ?"

ರವಿ ಗೋಡೆಯತ್ತ ಮುಖ ಮಾಡಿ ಹೇಳಿದನು-"ರಘು, ನನಗೆ ಶುಭಂದೇ ಯೋಚನೆ. ಇದೆಲ್ಲಾ ಅನುಭವಿಸುವುದಕ್ಕೆ ಅವಳಿನ್ನೂ ತುಂಬಾ ಚಿಕ್ಕವಳು."

"ಛೇ, ಏನು ಮಾತಾಡ್ತೀ ರವಿ! ನಿನಗೇನಾಗಿದೇಂತ ಹೀಗಾಡ್ತೀ? ಜಾಂಡೀಸ್ ಎಲ್ಲಾ ಕಡೆ ಇವೆ. ಎಲ್ಲೋ ಇನ್‌ಫೆಕ್ಷನ್ ಆಗಿದೆ ಅಷ್ಟೆ. ನೀನು ಬೇಗ ಚೇತರಿಸಿಕೊಂಡು ಶುಭ ಮನೆಗೆ ಬರುವಷ್ಟರಲ್ಲಿ ಬಂದುಬಿಟ್ಟರೆ ಆಯಿತು." ರಘು ರವಿಗೆ ಸಲ್ಲದ ಆಶ್ವಾಸನೆಯಿತ್ತನು.

ರವಿ ನರ್ಸಿಂಗ್ ಹೋಂ ಸೇರಿ ಹತ್ತು ದಿನಗಳಾಗಿತ್ತು. ಅವನನ್ನು ಪರೀಕ್ಷಿಸಿದ ಡಾ|| ಕೃಷ್ಣ ಹೇಳಿದ್ದರು. "ಸೀ ಮಿಸ್ಟರ್ ರಘುನಂದನ್, ದೇರ್ ಈಸ ನತ್ತಿಂಗ್ ಟು ಹೈಡ್....ನಾವು ಹಾರ್ಟ್ ಟ್ರಾನ್ಸ್‌ಪ್ಲಾಂಟ್ ಮಾಡ್ತೀವಿ, ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡ್ಬೋದು-ಲಿವರ್‌ನ ಟ್ರಾನ್ಸ್‌ಪ್ಲಾಂಟ್ ಮಾಡೋಕಾಗುತ್ತಾ? ದೇರ್ ಈಸ್ ನೋ ಯೂಸ್. ಫೀವರ್ ಸಬ್ಸೈಡ್ ಆದ್ಮೇಲೆ ಸ್ವಲ್ಪ ರೆಸ್ಟ್ ತೊಗೊಳ್ಳಿ. ಆಮೇಲೆ ಬೇಕಾದ್ರೆ ಮನೇಲೇ ಟ್ರೀಟ್‌ಮೆಂಟ್ ಕೊಡಿ-ಲೆಟ್ ಹಿಮ್ ಬಿ ಹ್ಯಾಪಿ ಅಟ್ ಹೋಂ ಇನ್ ಹಿಸ್ ಲಾಸ್ಟ್ ಡೇಸ್.

ಜ್ವರವಿಳಿದು ನಾಲ್ಕು ದಿನಗಳಾಗಿತ್ತು. ಎಲ್ಲಕ್ಕೂ ರಘುವೊಬ್ಬನವೇ ಓಡಾಟ. ಅಲ್ಲಿ ಶುಭಳನ್ನು ನೋಡಲು ಹೋದರೆ ಹನಿಗಣ್ಣಿನ ಶುಭ ಕೇಳುತ್ತಿದ್ದಳು "ರಘೂ, ರವಿ ಹೇಗಿದ್ದಾರೆ? ನಾನೂ ನೋಡ್ಬೇಕು ಅನ್ನಿಸುತ್ತೆ. ಬೆಚ್ಚಗೆ ಹೊದೆಸಿಕೊಂಡು ಕಾರ್ನಲ್ಲಿ ಕರ್ಕೊಂಡು ಬರ್ತಾರಾ? ಇಲ್ದಿದ್ರೆ ಒಂದು ಸ್ವಲ್ಪ ಹೊತ್ತು ನೀವೇ ನನ್ನ ಮನೆಗೆ ಕರ್ಕೊಂಡ್ಹೋಗಿ ರವೀನ್ನ ತೋರಿಸ್ತಾರಾ? ಡಾಕ್ಟರ ಪರ್‌ಮಿಷನ್ ಕೇಳಿ....ರವಿ ಎಂದೂ ಹೀಗೆ ಇಷ್ಟು ದಿನ ಮಲಗಿರಲಿಲ್ಲ. ನನ್ನನ್ನು ನೋಡ್ದೇ, ಮಗೂನ ನೋಡ್ದೇ ಇರೋಲ್ಲ...ಇಲ್ದಿದ್ರೇ ನೀವೇ ಏನೋ ಮುಚ್ಚಿಡ್ತಾ ಇದ್ದೀರಿ..." ಅವಳ ಕಣ್ಣೀರು ಕೆನ್ನೆಯ ಮೇಲೆ ಹರಿಯುತ್ತಿತ್ತು. ಅವಳಿಗೆ ಸಮಾಧಾನ ಹೇಳಲು ನಂದಿನಿ, ರಘುವಿಗೆ ಸಾಕಾಗಿಹೋಗಿತ್ತು.

"ಸಾಕು ಸುಮ್ನಿರು ಶುಭ. ನಿನ್ನಿಂದ ಏನು ಮುಚ್ಚಿಡೋದೂ... ಫ್ಲೂ ಆಗಿದೇಂತ ಹೇಳ್ಲಿಲ್ವಾ! ಮಗು, ನೀನು ಮೊದಲೇ ವೀಕು. ನಿಮಗೆ ಬಂದರೆ ಏನು ಮಾಡೋದು? ಡಾಕ್ಟರ್ ಹೇಳಿದ್ದಾರೆ—ರವಿಗೆ ಪೂರ್ತಿ ವಾಸಿ ಆಗೋತನ್ಕ ನಿಮ್ಹತ್ರ ಸೇರಿಸ್ಬಾರ್ದೂಂತ...ಸುಮ್ಮನೇ ಯಾಕೆ ಇಲ್ಲದ್ದನ್ನ ತಲೆಗೆ ಹಚ್ಚಿಕೊಂಡು ಹೋಗ್ತೀ!" ನಂದಿನಿ ಕೊಂಚ ಗಡುಸಾಗಿ ಹೇಳುತ್ತಿದ್ದರೂ ಎದೆಯಲ್ಲಿ ಅವ್ಯಕ್ತ ಭಯ ಮೂಡಿತ್ತು.

"ಶುಭಾ ಇಲ್ನೋಡೀ, ನನ್ನಲ್ಲಿ ನಂಬಿಕೆ ಇಲ್ವಾ? ನಾನಿರ್ಬೇಕಾದ್ರೇ ನಿಮಗೆ ಯಾಕೆ ಯೋಚ್ನೆ! ಈಗ್ತಾನೆ ರವಿ ಜೊತೆ 'ಚೆಸ್' ಆಡಿ ಬಂದೆ. ನಿಮ ಗೋಸ್ಕರ ಮನೆಯೆಲ್ಲಾ ಕ್ಲೀನ್ ಮಾಡಿಸ್ತಾ ಇದ್ದಾನೆ ಮಗಳಿಗಾಗಿ ತೊಟ್ಟಿಲು ಸಿದ್ಧ ಮಾಡ್ತಾ ಇದ್ದಾನೆ. ನೀವು ಅತ್ತು ಕರೆದು ಜ್ವರಗಿರ ತಂದುಕೊಂಡರೆ ಬೇಗ ಡಿಸ್ಚಾರ್ಜ್ ಮಾಡೋಲ್ಲ. ಪಾಪ, ಅವ್ನು ಅಲ್ಲಿ ನಿಮಗಾಗಿ ಕಾಯ್ತಾ ಇರ್ತಾನೆ. ರಘು ಇಲ್ಲದ ನಗು ಬರೆಸಿಕೊಳ್ಳುತ್ತಿದ್ದ "ಒಳ್ಳೇ ಪೇರ್ ಆಯ್ತಲ್ಲ ನಿಮ್ದು. ಅಲ್ಹೋದ್ರೆ ಅವ್ನು ಶುಭ ಹೇಗಿದ್ದಾಳೇಂತ ನನ್ನ ಪ್ರಾಣ ತಿಂತಾನೆ. ಇಲ್ಲಿ ನೀವು....ರವಿ ಹೇಗಿದ್ದಾರೇಂತ ನನ್ನ ಪೀಡಿಸಿ-ನಂದಿನಿ ನೋಡೂ, ಈ ಮಿಡಲ್ ಮೆನ್ ಕೆಲ್ಸ ಬಹಳ ತಲೆನೋವು ಬರಿಸುತ್ತೆ."

ಒಮ್ಮೊಮ್ಮೆ ಶುಭ ಕಣ್ಣೀರು ಹಾಕಿದಾಗ ರಘು ಕನಲಿ ಹೇಳುತ್ತಿದ್ದ. "ನೀವು ಹೀಗೆ ಅಳುವುದಾದರೆ ನಾನು ನೋಡಲು ಬರುವುದೇ ಇಲ್ಲ."

ಭಾಸ್ಕರನೂ ನಾಟಕವಾಡಲು ಸಿದ್ಧನಾಗಿರುತ್ತಿದ್ದನು. "ಏನಮ್ಮಾ ಶುಭ, ರವಿ ನಿನ್ನ ತಪಸ್ಸು ಮಾಡ್ತಾ ಇದ್ದಾನೆ. ಯಾವಾಗ ಮನೇಗೆ ಬರೋಣಾ ಗುತ್ತೆ?"

ಶಿವರಾಮಯ್ಯನವರು ಯಾವ ಮಾತೂ ಆಡದೆ ಮೂಕರಾಗುತ್ತಿದ್ದರು. ಮಗುವಿನ ತೊಟ್ಟಿಲ ಬಳಿ ನಿಂತು ಮಗುವನ್ನೇ ದಿಟ್ಟಿಸುವರು. ಅದರ ಕೈ,ಕೆನ್ನೆ, ತಲೆ ಸವರುವರು. ಶುಭನೆದುರು ನಿಂತು ಮೆಲ್ಲನೆ ಕೆಮ್ಮುವರು. "ಹೇಗಿದ್ದೀಯಾ ತಾಯಿ? ನಿನ್ನ ಆರೋಗ್ಯ ಹುಷಾರಾಗಿ ನೋಡಿಕೊ..."

"ಅದ್ಯಾಕೆ ಅತ್ತಿಗೆ, ಮಾವನವರು ಹೆಚ್ಚು ಮಾತೇ ಆಡೋಲ್ಲ ಈಗ?" ಎಂದು ನಂದಿನಿಯನ್ನು ಶುಭ ಕೇಳಿದಾಗ ನಂದಿನಿ ನಗುವಳು. "ಪಾಪ, ಅವರಿಗೆ ವಯಸ್ಸಾಯಿತು. ಏನು ಮಾತಾಡ್ಬೇಕೂ ಹೇಳು!"

ಎಲ್ಲರಿಗೂ ಹತ್ತು ದಿನಗಳನ್ನು ಕಳೆಯುವುದು ಹತ್ತು ಯುಗಗಳನ್ನು ಕಳೆದಂತಾಗಿತ್ತು. ಶುಭ ಎದ್ದು ಓಡಾಡುವಂತಾಗಿದ್ದಳು. ಮಗುವನ್ನು ಆತ್ತಾಗ ಎತ್ತಿಕೊಳ್ಳಲು, ಸಂತೈಸಲು ನಂದಿನಿಯಿರುತ್ತಿದ್ದಳು. ರವಿಗಾಗಿ ಕಾತರಿಸುತ್ತಿದ್ದ ಶುಭನಿಗೆ ಮಗುವೂ ಬೇಕಾಗಿರಲಿಲ್ಲ. ಒಂದು ದಿನ ಸಂಜೆ ರಘು ಬಂದಾಗ ಶುಭ ತಡೆಯಲಾರದೇ ಅವನ ಎರಡು ಕೈ ಹಿಡಿದು ಅತ್ತುಬಿಟ್ಟಳು.

"ರಘು, ನಾನು ತಡೆಯಲಾರೆ....ಪ್ರತಿ ಸಲ ಬಾಗಿಲು ಸದ್ದಾದರೂ ರವಿ

ಬಂದರೇನೋ ಎಂದುಕೊಂಡು ನೋಡುತ್ತೇನೆ. ನನ್ನ ಈಗಲೇ ರವಿಯ ಹತ್ತಿರ ಕರ್ಕೊಂಡೋಗಿ...." ಅಷ್ಟರಲ್ಲಿ ಮಗು ಅಳಲು ಮೊದಲು ಮಾಡಿದಾಗ "ಥೂ, ಈ ಹಾಳು ಮಗು ಯಾಕಾದ್ರೂ ಹುಟ್ಟಿತೋ. ಅದ್ನ ಆ ಕಡೆ ಎಸಿರಿ ಅತ್ತಿಗೆ—!" ಶುಭ ಮಗುವಿನತ್ತ ಕೈ ಚಾಚಿದಾಗ ರಘು ಅವಳನ್ನು ತಡೆದು ನಿಲ್ಲಿಸಿದ.

"ಶುಭ, ಯಾಕೆ ಇಷ್ಟು ಎಕ್ಸೈಟ್ ಆಗ್ತೀರಿ? ನಾಳೆ ನಾಡಿದ್ದರಲ್ಲಿ ಡಿಸ್ಚಾರ್ಜ್ ಆಗ್ತೀರಿ. ಮನೇಲಿ ರವಿ ಜೊತೆ ಇಪ್ಪತ್ನಾಲ್ಕು ಗಂಟೇನೂ ಇರಿ. ನಾನು ಮಗೂನ ನೋಡ್ಕೋತೀನಿ. ನಿಮ್ಮಿಬ್ಬರಿಗೂ ತೊಂದರೆ ಕೊಡದ ಹಾಗೆ ನೋಡ್ಕೋತೀನಿ." ಅವನ ಕೈಯಲ್ಲಿದ್ದ ಭರವಸೆ, ಧ್ವನಿಯಲ್ಲಿದ್ದ ಗಾಂಭೀರ್ಯ ಶುಭನಿಗೆ ಸ್ವಾಂತನ ನೀಡಿತು. ಅವನೆದೆಗೆ ಒರಗಿ ಮನಸಾರೆ ಅತ್ತಳು "ರಘೂ, ನನಗಿರುವವರು ನೀವೊಬ್ಬರೇ. ಖಂಡಿತ ರವಿ ಹತ್ತಿರ ಕರ್ಕೊಂಡು ಹೋಗ್ತೀರಾ?" ರಘು ತನ್ನೆದೆಯ ಮೇಲಿದ್ದ ಅವಳ ತಲೆ ಸವರಿದನು. "ನಾನ್ಯಾವತ್ತಾದರೂ ಕೊಟ್ಟ ಮಾತಿಗೆ ತಪ್ಪಿದ್ದೀನಾ?" ಅವನ ಕಣ್ಣು ಮಂಜಾಗಿತ್ತು. ಅದನ್ನು ನೋಡಲಾಗದ ನಂದಿನಿ ಮುಖ ಸೆರಗಿನಲ್ಲಿ ಮರೆ ಮಾಡಿಕೊಂಡಿದ್ದಳು.

ರವಿಯ ಯೋಚನೆಯಲ್ಲಿದ್ದ ಶುಭನಿಗೆ ಮಗುವಿನ ಆರೈಕೆಯ ಬಗ್ಗೆ ಒಂದು ಬಗೆಯ ಬೇಸರ. ಮಗು ಹಸಿವಿನಿಂದ ಅಳುತ್ತಿದ್ದರೂ ಹಾಲೂಡಿಸುತ್ತಿರಲಿಲ್ಲ. ಯಾರಾದರೂ ಅದನ್ನೂ ಅವಳಿಗೆ ಜ್ಞಾಪಿಸಬೇಕಾಗಿತ್ತು. ಮನಸ್ಸಿದ್ದರೆ ಹಾಲು ಕೊಡುತ್ತಿದ್ದಳು. ಇಲ್ಲದಿದ್ದರೆ ಸುಮ್ಮನೇ ಏನೂ ಕೇಳಿಸದೇ ಹಾಗೆ ಮಲಗುತ್ತಿದ್ದಳು. ಮಗುವಿನ ಅಳು ಕೇಳಲಾರದೇ ನಂದಿನಿ ನರ್ಸ್‌ಗಳನ್ನು ಕೇಳಿ ಹಸುವಿನ ಹಾಲನ್ನು ಬಾಟಲಿಗೆ ತುಂಬಿ ಕುಡಿಸುತ್ತಿದ್ದಳು. ಡಾಕ್ಟರ್ ಮಾಥ್ಯೂಸ್ ಶುಭನ ಸ್ಥಿತಿ ಕಂಡು ಮರುಗುತ್ತಿದ್ದರು. ಅವಳಿಗೆ ಯಾವ ವಿಧವಾದ ಸಮಾಧಾನವನ್ನೂ ನೀಡಲಾರದಾಗಿದ್ದರು.

"ಶುಭ, ನೀವು ತುಂಬಾ ಟೆಂಪರ್ ಮೆಂಟಲ್.... ನೀವು ಕಾಯಿಲೆ ಬಿದ್ದರೆ ಹೇಗೆ? ನೀವು ಚೆನ್ನಾಗಿದ್ರೇ ರವಿನ್ನೂ ಮಗಳನ್ನೂ ನೋಡ್ಕೋಬೋದು. ಸ್ಟಾಪ್ ಫಸ್ಸಿಂಗ್....ಯೂ ಆರ್ ಅನ್ ಎಜುಕೇಟೆಡ್ ಉಮನ್.... ನಿಮ್ಗೆ ನಾನೇನೂ ಹೇಳ್ಬೇಕಾಗಿಲ್ಲ....ಫಿಫ್ಟೀನ್ ಡೇಸ್ ಆಗೋತ್ಲೂ ನಿಮ್ಮನ್ನ ಮನೆಗೆ ಕಳಿಸ್ತೀನಿ...."

ಅಂದು ಬೆಳಿಗ್ಗೆ ರಘು ಅವರಿಗೆ ರವಿಯ ವಿಷಯ ಹೇಳಿದಾಗ ಅವರು

ಬೇಸರಪಟ್ಟಿದ್ದರು. "ಕೃಷ್ಣ ಹೇಳಿದ ಹಾಗೆ ರವಿ ಮನೇಲೇ ಇರ್ಲಿ. ಅವ್ರು ಮನೆಗೆ ಬಂದಾದ ಮೇಲೆ ಶುಭನ್ನ ಡಿಸ್ಚಾರ್ಜ್ ಮಾಡ್ತೀನಿ....ಸರೀ ತಾನೇ ?"

ರವಿಗೆ ಎಂದೂ ಬೆಳಗಿನ ಹೊತ್ತು ಮಲಗಿ ಅಭ್ಯಾಸವಿಲ್ಲ. ರವಿ ಪೂರ ಬದಲಾಯಿಸಿದ್ದನು. ಮುಖ ಬಾಡಿತ್ತು. ಕಣ್ಣುಗಳಲ್ಲಿನ ಬೆಳಕು ಮಂಕಾಗಿತ್ತು. ಮುಖವೆಲ್ಲಾ ಬಿಳಿಚಿಕೊಂಡಿತ್ತು. ಮುಖದ ಮೇಲಿದ್ದ ಕೂದಲು, ತಲೆಯಲ್ಲಿ ಬೆಳೆದಿದ್ದ ಕೂದಲೂ ಅವನ ಸಾತ್ವಿಕ ಆಹಾರಗಳು, ಪಥ್ಯಗಳೂ ಅವನನ್ನು ಯಾವುದೋ ಅರಿಯದ ಅನುಭವಕ್ಕೆ ಕೊಂಡೊಯ್ಯುತಿತ್ತು. ಅವನಿಗೆ ಬೇಸರವಾಗದಿರಲೆಂದು ಬೇಕೆಂತಲೇ ರಘು ಅವನಿಗೆ ಎಸ್ಟೇಟಿನ ಲೆಕ್ಕ ಪತ್ರಗಳನ್ನು ತಂದುಕೊಡುತ್ತಿದ್ದನು. ಅದೂ ಬೇಸರವಾದರೆ ಅವನೊಡನೆ ಚೆಸ್ ಆಡುತ್ತಿದ್ದನು. ಆದಷ್ಟು ಅವನು ಶುಭನ ವಿಷಯ ಮರೆಯಬೇಕೆಂದು ರಘುವಿನ ಹಂಚಿಕೆ. ಆದರೆ ಕೈ ಕಾಲುಗಳನ್ನು ನಡೆಸುತ್ತಿದ್ದರೂ ಮಾತು ಮನವೆಲ್ಲಾ ಶುಭನದೇ.

"ರಘೂ, ಶುಭನ ಕೆಲವು ಮೂವ್ಸ್ ನೀನು ನೋಡ್ಬೇಕು. ಒಂದು ದಿನ ನಾನು ಅವಳ್ನ ಸೋಲಿಸಕ್ಕಾಗಲಿಲ್ಲ...."

"ಪಾಪ, ಶುಭ ನನ್ನ ತುಂಬಾ ಮಿಸ್ ಮಾಡ್ತಾ ಇರ್ಬೇಕಲ್ಲಾ ? ಅವಳಿಗೆ ಮಗೂ ಆಗ್ಬೇಕೂಂತ ಬಹಳ ಆಸೆಯಿತ್ತು...."

"ನಾನು ಮೈ ಚೆನ್ನಾಗಿಲ್ದೇ ಒಂದು ದಿನ ಸ್ವಲ್ಪ ಸಪ್ಪೆಯಾದರೂ ಸರಿ. ನನ್ನ ಒಂದು ಗಳಿಗೆ ಬಿಟ್ಟು ಆ ಕಡೆ ಈ ಕಡೆ ಹೋಗ್ತಾ ಇರ್ಲಿಲ್ಲ...." "ರವಿ, ಆರ್ ಯೂ ಫೀಲಿಂಗ್ ಆಲ್ ರೈಟ್ ?" ಎಂದು ನಿಮಿಷ ನಿಮಿಷಕ್ಕೆ ಹಣೆ ಮುಟ್ಟಿ ನೊಡೋಳೂ....ನಿದ್ದೆ ಮಾಡ್ತಾ ಇದ್ರೂ ರಾತ್ರಿ ಎದ್ದು ಕುಳಿತು ನನ್ನ ಕೈ ಮುಟ್ಟಿ ಹಣೆ ಮುಟ್ಟಿ ನೋಡೋಳೂ....ಈಗ ನಾನು ಹೀಗೆ ಬೆಡ್‌ರಿಡನ್ ಆಗಿರೋದು ನೋಡಿದ್ರೆ ಅವಳು ಒದ್ದಾಡಿಬಿಡ್ತಾಳೆ....ಷಿ ವಿಲ್ ಬಿ ಹಾರ್ಟ್ ಬ್ರೋಕನ್..."

"ಒಂದು ದಿನ ರಘೂ, ನೀನು ನೋಡ್ಬೇಕಿತ್ತು....ಟ್ವೈಟ್ ಸ್ಯಾರಿ ಎಲ್ಲಾ ವೈಟ್‌ನಲ್ಲೇ ಡ್ರೆಸ್ ಮಾಡಿಕೊಂಡಿದ್ಲು....ಷಿ ಲುಕ್ಡ್ ಮಾರ್ವೆಲಸ್...."

"ಶುಭಾ ತುಂಬಾ ಸೆನ್ಸಿಟಿವ್ ರಘೂ....ಒಂದು ದಿನ ಅಮ್ಮಾ ಇದ್ದಾಗ

ನೋಡೂ, ರಘು ಈ ಕಡೆ ತಲೇನೇ ಹಾಕ್ಲಿಲ್ಲ....ಆಗ್ಲೇ ಅವನ್ಗೂ ಒಂದು ಮದ್ವೆ ಆಗ್ಬೇಕಾಗಿತ್ತೂಂತ' ಶುಭನ ಕಣ್ಣಲ್ಲಿ ಬಂತು ನೋಡೂ ಗಂಗಾಪ್ರವಾಹ.... 'ರವೀ, ನಾನು ಈ ಮನೇಗೆ ಬರ್ಬಾರ್ದಿತ್ತು–ನಾನು ನಿಮ್ಮನ್ನ ಮದ್ವೆ ಮಾಡ್ಕೋ ಬಾರ್ದಿತ್ತು. ನಾನು ಬಂದಿದ್ದರಿಂದ ರಘು ಇಲ್ಲಿ ಬರೋಲ್ಲ...ಇದಕ್ಕೆ ನಾನೇ ಕಾರಣಾಂತ. ನನ್ನ ಬುದ್ಧಿಯೆಲ್ಲಾ ಖರ್ಚುಮಾಡಿದೆ ನೋಡೂ, ಅವಳ್ನ ಸುಮಾಧಾನ ಮಾಡೋಕೇ..."

ರವಿ ಮಾತಾಡುತ್ತಲೇ ಇರುತ್ತಿದ್ದನು. ರಘು ನಿರುತ್ತರನಾಗಿ ನಿರ್ವಿಕಾರ ನಾಗಿ ಕೇಳುತ್ತಲೇ ಇರುತ್ತಿದ್ದನು.

ರವಿಯನ್ನು ಮನೆಗೆ ಕರೆತರುವ ಮುನ್ನ ರಘು ಮನೆಯಲ್ಲಿ ಎಲ್ಲರಿಗೂ ಹೇಳಿದ್ದನು. ಶಿವರಾಮಯ್ಯ, ಬಾಬು ಒಂದು ವಾರದ ಹಿಂದೆ ಹಿಂತಿರು ಗಿದ್ದ ಸಣ್ಣಯ್ಯ, ಶುಭಳ ಮಗುವನ್ನು ನೋಡಿಕೊಳ್ಳಲೋಸುಗ ಗೊತ್ತು ಮಾಡಿದ್ದ ನಂದಿನಿಯ ಗುರುತಿನವರಾದ ರಾಜಮ್ಮ–ಎಲ್ಲರಿಗೂ ಹೇಳಿದ್ದನು. "ನಿಮ್ಮ ಕೆಲಸ ನೀವು ನೋಡಿಕೊಂಡು ಹೋಗಬೇಕು, ಯಾವ ವಿಧದಲ್ಲೂ ರವಿಗಾಗಲೀ ಶುಭಳಿಗಾಗಲೀ ತೊಂದರೆ, ಅಡ್ಡಿ ಮಾಡಬಾರದು."

ರವಿ ಬಹಳ ಇಳಿದುಹೋಗಿದ್ದರೂ ಅವನ ಉತ್ಸಾಹ ಒಂದಿನಿತೂ ತಗ್ಗಿರ ಲಿಲ್ಲ. ಕಾರಿನಿಂದ ಇಳಿದು ತನ್ನ ಮನೆಯನ್ನೂ ಎಸ್ಟೇಟನ್ನೂ ಕಣ್ತುಂಬಾ ನೋಡಿ ರಘುವಿನ ಕಿವಿಯಲ್ಲಿ ಉಸುರಿದ್ದನು.

"ಲುಕ್ ಅಟ್ ಮೈ ನೆಸ್ಟ್. ಹೌ ಬ್ಯೂಟಿಫುಲ್ ಇಟ್ ಲುಕ್ಸ್. ನೀನು ಬಂದುಬಿಟ್ಟೆಯಲ್ಲಾ ಅದಕ್ಕೇ! ಡೋಂಟ್ ಲೀವ್ ಮಿ ಅಲೋನ್ ಎನಿ ಮೋರ್....ಐ ನೀಡ್ ಯೂ ವೆರಿ ಮಚ್...." ಅವನ ಮಾತು ಕೇಳಿ ರಘುವಿನ ಕಣ್ಣು ಮಂಜಾಯಿತು. ರವಿಯನ್ನು ತಾನು ಬಿಟ್ಟು ಹೋಗುವುದೇ? ತನ್ನನಗಲಿ ಅವನು ಹೋಗದೇ ಉಳಿದರೆ ಸಾಕು. ತನ್ನ ಆಯುಸ್ಸಿನಲ್ಲಿ ಅರ್ಧ ಅವನಿಗೆ ತಾನು ಕೊಡುವ ಹಾಗಿದ್ದರೆ ಅದೇ ಘಳಿಗೆಯೇ ಕೊಟ್ಟುಬಿಡುತ್ತಿರ ಲಿಲ್ಲವೇ?

ಶಿವರಾಮಯ್ಯನವರು ನಗು ಲೇಪಿಸಿಕೊಂಡೇ ರವಿಯನ್ನು ಸ್ವಾಗತಿ ಸಿದರು.

"ಬಾಪ್ಪಾ, ಬಾ...ರಘು ಕೆಳಗಿನ ರೂಮನ್ನೇ ನಿನಗೆ ರೆಡಿ ಮಾಡಿಟ್ಟೆ

ದ್ದಾನೆ....ನಾಳೆ ಶುಭ ಬಂದರೆ ನಿನ್ನ ಜೊತೆ ಮಾತಾಡುವುದಕ್ಕೇಂತ ಹತ್ತಿ ಇಳಿದು ಮಾಡಿಯಾಳೂ ...ಅಂತ ರಘು ಎಲ್ಲಾ ನೋಡ್ಕೋತಾನೆ, ನೀನು ನಾಲ್ಕು ದಿನ ಸುಧಾರಿಸಿಕೊ ...!"

"ಮೆಲ್ಲಗೆ ಬನ್ನಿ ಸಾರ್. ನನ್ನ ಹಿಡ್ಕೊಳ್ಳಿ. ನಾನು ನಿಮ್ಮ ರೂಮಿಗೆ ಕರ್ಕೊಂಡ್ಹೋಗ್ತೇನೆ...." ಬಾಬು ನಗುತ್ತಾ ಮುಂದೆ ಬಂದು ನಿಂತನು.

ರವಿಗೆ ತನ್ನ ಮನೆಯಲ್ಲಿ ಮತ್ತೆ ನಗು ಆನಂದ ಹಿಂತಿರುಗಿ ಬಂದುದು ಕಂಡು ಎದೆ ತುಂಬಿ ಬಂತು. "ನನ್ನ ಮಗಳು ಬಂದ ಹೊತ್ತು ಚೆನ್ನಾಗಿದೆ. ಎಲ್ರೂ ಹೀಗೇ ನಗ್ತಾ ನಗ್ತಾ ಇರಿ."

ಮನೆಯ ಬಲಪಾರ್ಶ್ವದಲ್ಲಿದ್ದ ದೊಡ್ಡ ರೂಮನ್ನು ರವಿಗಾಗಿ ರಘು ತೆರವು ಮಾಡಿದ್ದನು. ಆವರೊಳಗೆ ರವಿಯ ಬಟ್ಟೆಗಳಿದ್ದ ಕಪಾಟು. ಅವನೋದು ತ್ತಿದ್ದ ಪುಸ್ತಕಗಳ ಕಪಾಟೂ ತಂದಿರಿಸಿದ್ದನು. ಅವನ ರೂಮಿನಲ್ಲಿದ್ದ ದೊಡ್ಡ ಮಂಚವನ್ನು ಅಲ್ಲೇ ಹಾಕಿಸಿದ್ದನು. ಶುಭ ಹೇಗೆ ಅದನ್ನು ಅಲಂಕರಿ ಸಿದ್ದಳೋ ಅದೇ ರೀತಿ ಆ ರೂಮನ್ನೂ ಅಲಂಕರಿಸಿದ್ದನು. ಮಹಡಿಯ ಮೇಲಿನ ಡ್ರಿಂಕ್ಸ್ ಕ್ಯಾಬಿನೆಟ್ಟನ್ನು ಮಾತ್ರ ಮುಚ್ಚಿ ಬೀಗ ಹಾಕಿದ್ದನು.

ರವಿ ರೂಮಿನಲ್ಲಿ ಕಾಲಿಡುತ್ತಲೂ ಸುತ್ತಲೂ ಕಣ್ಣು ಹಾಯಿಸಿದನು. ಕಿಟಕಿಯಿಂದ ಎಸ್ಟೇಟಿನ ಹೂವಿನ ತೋಟ ಕಣ್ಣಿಗಿಂಪಾಗಿ ಕಾಣುತಿತ್ತು. ಮಂಚದ ಇಕ್ಕೆಲದಲ್ಲಿದ್ದ ಶುಭ ಮತ್ತು ತಾನು ಮದುವೆಯಾದ ಹೊಸತರಲ್ಲಿ ತೆಗೆದ ಫೋಟೋ ಕಂಗೊಳಿಸುತಿತ್ತು. ಶುಭ ತನಗಾಗಿ ಯಾವಾಗಲೂ ಕುಂಡದ ಲ್ಲಿರಿಸುತ್ತಿದ್ದ ಹಳದಿ ಗುಲಾಬಿಗಳ ಗೊಂಚಲು ಹೊಸದಾಗಿ ಅರಳಿ ತನ್ನೆದುರಿಗೇ ಕುಂಡದಲ್ಲಿ ನಗುತ್ತಿದ್ದವು.

"ಗುಡ್....ಎಲ್ಲಾ ನನ್ನ ರೂಮಿನಂತೆಯೇ ಮಾಡಿದ್ದೀ ರಘು !" ರವಿ ಮಂಚದ ಮೇಲೆ ಕುಳಿತ. ಬಾಬು ರವಿಗೆ ಬಾಯಾರಿರಬಹುದೆಂದು ಕುಡಿ ಯಲು ಹಾಲು ತಂದಿತ್ತಾಗ ರವಿ ಮುಖ ಸೊಟ್ಟ ಮಾಡಿ ನಕ್ಕನು.

"ಬಾಬೂ, ನೀನು ಬಂದಾಗಿನಿಂದ ಯಾವತ್ತಾದರೂ ನನಗೆ ಹಾಲು ತುಂದು ಕೊಟ್ಟಿದ್ದೀಯಾ? ನೋಡೂ, ನಂಗೆ ಹಾಲು ಕುಡಿಯೋ ಗತಿ ಬಂತು !"

ಅಲ್ಲೇ ನಿಂತಿದ್ದ ರಘು ಬಾಬುವಿನ ಕೈಯಿಂದ ಹಾಲು ತೆಗೆದುಕೊಂಡು ಕಣ್ಸನ್ನೆಯಿಂದ ಅವನನ್ನು ಹೊರಗೆ ಕಳಿಸಿದನು.

"ರವಿ, ನೋಡೂ. ನೀನು ಇದನ್ನ ಕುಡಿದು ಕೊಂಚ ಮಲಗು. ನಾನು ಸ್ವಲ್ಪ ಶುಭನ್ನ ವಿಚಾರಿಸಿಕೊಂಡು ಬರಬೇಕೂ....!"

ಶುಭನ ಮಾತೆತ್ತುತ್ತಲೇ ರವಿ ಮರುಮಾತಾಡದೇ ಹಾಲನ್ನು ಒಂದೇ ಗುಟುಕಿಗೆ ಕುಡಿದನು. "ಶುಭ ಯಾವಾಗ್ಲೂ ನಂಜೊತೆ ಜಗ್ಳ ಆಡ್ತಾ ಇದ್ಲು-ಹಾಲು ಕುಡಿಯಿರಿ....ಅಂತ, ನೋಡು, ಷಿ ಹ್ಯಾಸ್ ಓನ್ ದಿ ವಾರ್"

"ಎಲ್ಲಿ ಮಲಗು, ನಾನು ಕಂಬಳಿ ಹೊದಿಸುತ್ತೇನೆ. ನಾನು ಬಂದು ಹೇಳುವವರೆಗೆ ಏಳಕೂಡದು...." ರಘು ಬೇಕೆಂತಲೇ ಗಡಸು ದನಿಯಲ್ಲಿ ಹೇಳಿದ.

ರವಿ ಹಾಸಿಗೆಯ ಮೇಲುರುಳಿದಾಗ ರಘು ಅವನ ಕತ್ತಿನತನಕ ಕಂಬಳಿ ಯನ್ನು ಹೊದಿಸಿದಾಗ ರವಿ ಮೆಲ್ಲನುಸುರಿದ.

"ಶುಭ ಎಲ್ಲಿರುತ್ತಾಳೆ ಮನೆಗೆ ಬಂದ ಮೇಲೆ....?" ಇಲ್ಲಿ ಅವಳ ಯಾವ ಸಾಮಾನೂ ಇಲ್ಲವಲ್ಲ!"

ರಘು ಅವನ ಹಣೆಯ ಮೇಲಿದ್ದ ಕೂದಲು ಹಿಂದೆ ಸರಿಸಿದ.

"ನಾನು ಇದ್ದೀನಲ್ಲ, ಆ ರೂಮು ಬಿಡುವು ಮಾಡುತ್ತಿದ್ದೇನೆ. ನಿನ್ನ ರೂಮಿಗೆದುರಾಗಿ ಇರುತ್ತೆ. ನಾನು ಮಹಡಿಯ ಮೇಲಿನ ನಿನ್ನ ರೂಮಿಗೆ ಹೋಗುತ್ತೇನೆ."

ರವಿ ಪಕ್ಕಕ್ಕೆ ತಿರುಗಿ ಎದುರಿಗೇ ಕಾಣುತ್ತಿದ್ದ ರೂಮಿನತ್ತ ಕಣ್ಣಾಡಿ ಸಿದನು. ಅದರ ಬಾಗಿಲು ಮುಂದು ಮಾಡಿತ್ತು.

"ರಘೂ, ನೀನು ಅವಳನ್ನು ನನ್ನಿಂದ ದೂರ ಮಾಡಿಬಿಟ್ಟೆ!" ಸಿಟ್ಟುಸಿ ರಿಟ್ಟನು.

ರಘುವಿಗೆ ಎಲ್ಲೋ ಏನೋ ಆಸ್ಫೋಟಿಸಿದಂತಾಯಿತು. ಎದೆಯಲ್ಲಿ ಕಿಚ್ಚೆದ್ದಿತು. ಕಾಲುಗಳು ಕುಸಿದವು. ನಿಂತಲ್ಲೇ ಮಂಚವನ್ನು ಎರಡು ಕೈಗಳಲ್ಲಿ ಬಿಗಿಯಾಗಿ ಹಿಡಿದನು.

"ನೋ ರವಿ ...ಐ ಹ್ಯಾವ್ ಬ್ರಾಟ್ ಹರ್ ಕ್ಲೋಸರ್ ಟು ಯೂ.... ಅವಳೂ ನಿನ್ನ ಮಗಳೂ ಯಾವಾಗಲೂ ನಿನ್ನ ಕಣ್ಣ ಮುಂದೇ ಇರುತ್ತಾರೆ." ಅಷ್ಟು ಹೇಳುವುದರಲ್ಲಿ ರಘುವಿಗೆ ಸಾಕಾಗಿಹೋಯಿತು.

"ಒಂದೇ ಒಂದು ನಿಮಿಷ ರವಿ...ಬಾಬುವಿಗೆ ಶುಭನಿಗೆ ಕ್ಯಾರಿಯರ್. ರೆಡಿ ಮಾಡಲು ಹೇಳಿ ಬರುತ್ತೇನೆ..." ಅಲ್ಲಿಂದ ಮೆಲ್ಲನೇ ಜಾರಿಕೊಂಡನು

ದಿಂಬಿನ ಮೆತುವಿನಲ್ಲಿ ಮುಖ ತಿರುಗಿಸಿ ಮಲಗಿದ ರವಿಯ ಕಣ್ಣಂಚಿನಲ್ಲಿ ಹನಿಯೊಂದು ಜಿನುಗಿತು. ಅವನ ಮೇಲುಸಿರಿನೊಂದಿಗೆ ಬಂದ ಒಂದೇ ಒಂದು ಶಬ್ದ "ಶುಭಾ."

ಮಗ ಒಬ್ಬನೇ ಮಲಗಿರುವುದನ್ನು ಕಂಡು ಶಿವರಾಮಯ್ಯ ರೂಮಿನೊಳಗೆ ಮೆಲ್ಲನಡಿಯಿಟ್ಟರು.

"ಏನಪ್ಪಾ, ಮಲಗಿದ್ದೀಯಾ ?" ತಂದೆಯ ದನಿ ಕೇಳಿ ರವಿ ತಿರುಗಿದನು.

"ಇಲ್ಲ–ಸುಮ್ಮನೆ ಹೀಗೆ ತಿರುಗ್ತಿದ್ದೆ ಅಷ್ಟೆ. ಕೂತ್ಕೋ ಬಾಪ್ಪಾ" ರವಿ ತಂದೆಯ ವಾತ್ಸಲ್ಯದ ಆಳವನ್ನರಿತು ಮುಗುಳ್ನಕ್ಕನು.

"ಈಗ ನಿನ್ನ ಆರೋಗ್ಯ ಹೇಗೆನಿಸುತ್ತೆ ನಿನಗೆ ? ನೋಡು, ಎಷ್ಟು ಗೆಲುವಾಗಿ ಕಾಣ್ತೀ ! ಮನೆಯಂತಹ ಜಾಗ ಇಲ್ಲ ನೋಡೂ."

"ಹೌದಪ್ಪಾ. ನಾನು ಈಗ ಹಾಯಂತ ಇದ್ದೀನಿ. ಆಸ್ಪತ್ರೇಲಿ ಒಬ್ಬನೇ ಬೇಜಾರು. ಸಿಗರೇಟಿಲ್ಲ-ಡ್ರಿಂಕ್ಸ್ ಇಲ್ಲ....ನೋಡಪ್ಪಾ, ಹೇಗೆ ಸನ್ಯಾಸಿಯ ಹಾಗಾಗಿದ್ದೇನೆ. ಇದೂ ಒಂದು ತರಹ ಚೆನ್ನ !" ರವಿ ಹುಲುಸಾಗಿ ಬೆಳೆದಿದ್ದ ತನ್ನ ಗಡ್ಡ ಮೀಸೆಗಳ ಮೇಲೆ ಕೈಯ್ಯಾಡಿಸಿಕೊಂಡನು.

"ನಾಲ್ಕು ದಿನ ಆಸೆ ಬಿಗಿ ಹಿಡಿ. ಪೂರ್ತಿ ಗುಣಹೊಂದಿದ ಮೇಲೆ ಏನಾದ್ರೂ ಮಾಡ್ಕೋ, ನೋಡು, ನೀನು ಶುಭ, ಮಗುವಿನ ಯೋಚನೇನೂ ಮಾಡ್ಬೇಕೂ....!" ಶಿವರಾಮಯ್ಯ ದಿಗಂತದತ್ತ ದೃಷ್ಟಿ ಹರಿಸಿದರು.

ರವಿ ಕೊಂಚ ಯೋಚಿಸಿ ಹೇಳಿದ-"ಅಪ್ಪಾ, ನನ್ನ ನರ್ಸಿಂಗ್ ಹೋಂ ಬಿಲ್ಲು, ಕಾರಿನ ಬಿಲ್ಲು–ಶುಭನಿಗಾಗಿ ಎಲ್ಲಾ ರಘೂನೇ ಖರ್ಚು ಮಾಡ್ತಾ ಇದ್ದಾನೆ–ನನಗದು ಇಷ್ಟವಿಲ್ಲ. ಬಾಬುವಿಗೆ ಹೇಳಿ ನನ್ನ ಚೆಕ್ ಬುಕ್ ತರಿಸಿಕೊಡಿ—ಒಂದೆರಡು ಚೆಕ್ ಬರೆದುಕೊಡ್ತೀನಿ—ದುಡ್ಡು ತರಿಸಿಕೊಡಿ, ನಾನು ಕೊಟ್ಟರೆ ರಘು ತೆಗೆದುಕೊಳ್ಳುವುದಿಲ್ಲ—ನೀವೇ ಕೊಟ್ಟುಬಿಡಿ. ಏನಾದರೂ ನೆವ ಹೇಳಿ."

ಶಿವರಾಮಯ್ಯ ಮಗನ ಮುಖವನ್ನು ತೀಕ್ಷ್ಣವಾಗಿ ನೋಡಿದರು. "ಯಾರು ಕೊಟ್ಟರೇನಪ್ಪಾ ! ಅವನು ಬೇರೆ, ನೀನು ಬೇರೆಯೇನು ? ಅವನ ಕೈಲಿ ಹಣ ಮುಗಿಯೋತ್ಲೂ ಅವನೇ ಇಸ್ಕೋತಾನೆ ಬಿಡು...."

ರವಿ ತಲೆಯುಲ್ಲಾಡಿಸಿದನು. "ಇಲ್ಲಪ್ಪಾ, ನಿನಗೆ ಗೊತ್ತಿಲ್ಲ. ರಘು

ಯಾವುದನ್ನೂ ಬಾಯಿ ಬಿಟ್ಟು ಹೇಳೋಲ್ಲ. ಅವನು ಕೇಳುವ ಮುಂಚೆ ಕೊಟ್ಟುಬಿಡಬೇಕೂ....!"

"ನಾನೂ ನೀನೂ, ಕೊಟ್ಟರೆ ಅವನು ತೆಗೆದುಕೊಳ್ಳೋಲ್ಲ. ಶುಭ ಬರ್ಲಿ, ಅವಳ ಕೈಲಿ ಕೊಡಿಸಿಬಿಡೋಣ." ಶಿವರಾಮಯ್ಯ ಹೇಳಿದಾಗ ರವಿಗೆ ಸಮಾಧಾನವಾಯಿತು.

ಭಾರವಾದ ಹೃದಯ ಹೊತ್ತು ಬಂದ ರಘುವಿಗೆ ತೊಡೆಯ ಮೇಲೆ ಮಗುವನ್ನೆತ್ತಿಕೊಂಡು ಕುಳಿತಿದ್ದ ಶುಭನನ್ನು ಕಂಡ ಕೂಡಲೇ ಕೊಂಚ ಹಗುರವಾಯಿತು. ರಘುವನ್ನು ಕಂಡ ಕೂಡಲೇ ಅವಳು ಮುಗುಳ್ನಕ್ಕಳು.

"ರವಿ ಹೇಗಿದ್ದಾರೆ ? ಮನೆಗೆ ಬಂದ್ರಾ ?"

"ಹೂಂ, ರವಿ ಈಗ ಚೆನ್ನಾಗಿದ್ದಾನೆ. ನಾಡಿದ್ದು ಮನೆಗೆ ಬರ್‍ತೀರಲ್ಲಾ, ನೀವೇ ನೋಡಿ." ರಘು ಬಗ್ಗಿ ಮಲಗಿದ್ದ ಮಗುವಿನ ಕೆನ್ನೆ ತಟ್ಟಿದನು.

"ಇವೊತ್ತು ನೀವು ಬರ್‍ತಾ ಕರ್‍ಕೊಂಡ್ಬರ್‍ಬೇಕಾಗಿತ್ತು. ನನಗೆ ಅವರನ್ನು ನೋಡುವವರೆಗೆ ಕೊಂಚಾನೂ ಸಮಾಧಾನವಿಲ್ಲ."

"ಇಷ್ಟೇ ದಿನ ಇದ್ರಿ, ಈಗೇನು ? ಅವನು ಗಾಳೀಲಿ ತಿರಗ ಬಂದರೆ ಎಕ್ಸ್‌ಪೋಸ್ ಆಗ್ಬೋದಲ್ಲ !"

ಮಗುವನ್ನು ಹಾಸಿಗೆಯ ಮೇಲೆ ಮಲಗಿಸುತ್ತಾ ಶುಭ ಉಸುರಿದಳು. "ಅಂತೂ ಇಂತೂ ಹದಿನೈದು ದಿನಗಳು ರವೀನ್ನ ನನ್ನಿಂದ ದೂರ ಮಾಡಿಬಿಟ್ರಿ."

ರಘು ಸೆಟೆದು ನಿಂತನು. ಚೆನ್ನಾಯ್ತು. ನಿಮಗೆ ಒಳ್ಳೇದಕ್ಕೆ ನಾನು ಮಾಡಿದ್ರೆ ನೀವು ಹಾಗಂತೀರ ರವಿ ಶುಭನ್ನ ನನ್ನಿಂದ ದೂರ ಮಾಡಿದೆ ಅಂತ ಅವನು ಹೇಳಲಿ. ನನ್ನ ಕರ್ತವ್ಯ ಮಾಡಿದ್ದೇನೆ. ನೀವು ಮನೆಗೆ ಬಂದ ಮೇಲೆ ನಾನು ಊರಿಗೆ ಹೊರಡ್ತೀನಿ. ನಾನ್ಯಾಕೆ ನಿಮ್ಮಿಬ್ಬರ ಮಧ್ಯೆ ಬರಲಿ !" ರಘು ರೂಮಿನಿಂದ ಹೊರಗೆ ಹೊರಟುಹೋದನು. ಶುಭ ಆಶ್ಚರಿಯಿಂದ ತಲೆಯೆತ್ತಿ "ರಘು, ಒಂದು ನಿಮಿಷ....!" ಅವಳ ಕೂಗು ಅವನ ಕಿವಿಗೆ ಬೀಳಲಿಲ್ಲ.

ಮನೆಯಿಂದ ಕೈಚೀಲ ಹಿಡಿದು ಬಂದ ನಂದಿನಿ ಆಸ್ಪತ್ರೆಯ ಆವರಣದಲ್ಲಿ ಸಿಗರೇಟು ಸೇದುತ್ತಿದ್ದ ರಘುವನ್ನು ಕಂಡು ಕೊಂಚ ಅಳುಕಿದರೂ ತೋರಗೊಡದೆ ಕೇಳಿದಳು.

"ಸಿಗರೇಟಿಗಾಗಿ ಹೊರಗೆ ಬಂದ್ಯಾ ? ಶುಭ ಏನು ಮಾಡ್ತಾ ಇದ್ದಾಳೆ ?" ರಘು ಸಿಗರೇಟಿನ ಹೊಗೆ ಗಾಳಿಗೆ ಬಿಟ್ಟನು "ಮಗೂನ್ನ ಎತ್ಕೊಂಡು ಕುಳಿತಿದ್ರು."

"ರವಿ ಮನೆಗೆ ಬಂದನಾ ? ನಾನು ಬಂದು ನೋಡ್ತೀನಿ. ಶುಭನದೇ ಓಡಾಟ ಜಾಸ್ತಿ ಆಯಿತು. ಅವನ್ನ ನೋಡೋಕೇ ಆಗಿಲ್ಲ !"

"ಈಗ ಚೆನ್ನಾಗಿದ್ದಾನೆ ...ನಿಧಾನವಾಗಿ ಬಂದು ನೋಡು." ರಘು ಸಿಗರೇಟನ್ನು ಎಸೆದ—

"ಬಾರೋ ಹೋಗೋಣ ಒಳ್ಗೆ....!" ಎಂದು ನಂದಿನಿ ಕರೆದಾಗ ರಘು ತಲೆಯಲ್ಲಾಡಿಸಿದ. "ಇಲ್ಲ ನಂದಿನಿ, ನಾನು ಡಾಕ್ಟರಿಗೋಸ್ಕರ ಕಾಯ್ತಾ ಇದ್ದೀನಿ, ನೋಡ್ಕೊಂಡು ಬರ್‍ತೀನಿ."

ನಂದಿನಿ ರೂಮಿನೊಳಗೆ ಬಂದಾಗ ಶುಭ ಹೊದ್ದಿದ್ದ ಮಗ್ಗಲು ಹಾಸಿಗೆ ಯಂಚಿನಿಂದ ಕಣ್ಣೊರಸಿಕೊಳ್ಳುತ್ತಿದ್ದಳು. ಅವಳ ಪಕ್ಕದಲ್ಲಿ ಮಲಗಿದ್ದ ಮಗು ಅಳುತ್ತಿತ್ತು.

"ಯಾಕೆ ಶುಭ, ಅಳ್ತಾ ಇದ್ದೀಯಾ ? ಹಾಗೆ ಯಾವಾಗ್ಲೂ ಕಣ್ಣೀರು ಹಾಕ್ಬಾರ್ದು, ಮೈ ನಂಜಾಗುತ್ತೆ. ಮಗು ಅಳ್ತಾ ಇದೆ. ಹಾಲು ಕುಡಿಸ ಬಾರ್ದಾ ? ರವಿ ಮನೆಗೆ ಬಂದನಂತೆ. ಇನ್ಯಾಕೆ ಅಳೋದೂ ?"

ನಂದಿನಿ ಶುಭನ ತಲೆ ತಡವಿದಳು. ಶುಭನ ಕಣ್ಣುಗಳಲ್ಲಿ ಮತ್ತೆ ಕಂಬನಿ ತುಂಬಿದಾಗ ನಂದಿನಿ ಕಣ್ಣೊರೆಸಿದಳು. "ನೀನು ಹೀಗೆ ನಾನು ಬಂದಾಗಲೆಲ್ಲಾ ಅತ್ತರೆ ನಾನು ಬರುವುದೇ ಇಲ್ಲ."

ಶುಭ ಅಳು ನುಂಗಿದಳು. "ನಿಮ್ಮ ಮುಂದೆ ಅಲ್ದೇ ನಾನ್ಯಾರ ಮುಂದೆ ಕಣ್ಣೀರು ಹಾಕಲಿ ಅತ್ತಿಗೆ ? ನನಗೆ ನೀವಲ್ದೆ ಯಾರಿದ್ದಾರೆ ?"

ನಂದಿನಿಯ ಕಣ್ಣಲ್ಲೂ ನೀರು ತುಂಬಿದಾಗ ಅಳುತ್ತಿದ್ದ ಮಗುವನ್ನು ಸಮಾಧಾನ ಪಡಿಸುವ ನೆವದಿಂದ ಮಗುವನ್ನೆತ್ತಿಕೊಂಡು ಕಿಟಕಿಯ ಬಳಿ ಶುಭ ನಿಗೆ ಬೆನ್ನು ಮಾಡಿ ನಿಂತಳು.

"ರಘೂ, ಎಲ್ಲಿ ಅತ್ತಿಗೆ ? ನಿಮಗೆ ಸಿಕ್ಕಿದ್ರಾ ?" ಶುಭ ಕೊಂಚ ಹೊತ್ತಾದ ನಂತರ ಕೇಳಿದಳು.

"ಹೊರಗೆ ಡಾಕ್ಟರನ್ನು ನೋಡಲು ಕಾಯ್ತಾ ಇದ್ದ. ನೀನೋ ಎಲ್ರ ಮುಂದೆ ಹಾಲು ಕೊಡೋಲ್ಲ. ಅವನು ಬರೋದ್ರೊಳಗೆ ಮಗೂನ್ನ

ಎತ್ತಿಕೊ, ಅದಕ್ಕೆ ಹಸಿವಿರಬೇಕು." ನಂದಿನಿ ಶುಭನಿಗರಿವಿಲ್ಲದಂತೆ ಮಗುವಿನ ಶಾಲಿನಿಂದಲೇ ಕಣ್ಣೀರು ತೊಡೆದು ಶುಭನ ತೊಡೆಯ ಮೇಲೆ ಮಗುವನ್ನು ಮಲಗಿಸಿದಳು.

ಶುಭ ಮಗುವಿಗೆ ಹಾಲು ಕುಡಿಸಿ ಮಲಗಿಸಲು ನಂದಿನಿಯ ಕೈಗೆ ಕೊಟ್ಟಾಗ ರಘು ಒಳಗೆ ಬಂದನು, ಅವನು ಶುಭನತ್ತ ನೋಡಲಿಲ್ಲ.

"ನಂದಿನಿ, ಡಾಕ್ಟರ್ ಸಿಕ್ಕಿದ್ರು. ನಾಡಿದ್ದು ಬೆಳಿಗ್ಗೆ ಡಿಸ್ಚಾರ್ಜ್ ಮಾಡ್ತಾರಂತೆ. ನೋಡು, ಕ್ಯಾರಿಯರ್‌ನಲ್ಲಿ ಊಟ, ಫ್ಲಾಸ್ಕಿನಲ್ಲಿ ಸ್ಟೀಲ್ ಹಿಡಿ ಪಾತ್ರೇಲಿ ಹಾಲು ತಂದಿಟ್ಟಿದ್ದೀನಿ. ನಾನು ಬರ್ತೀನಿ....ತುಂಬಾ ಕೆಲಸ ಇದೆ ನಂಗೆ." ನಂದಿನಿಯ ಕೈಲಿದ್ದ ಮಗುವಿನ ಮೂಗು ಕೆನ್ನೆ ಸವರಿ ಬಾಗಿಲು ಮುಂದು ಮಾಡಿಕೊಂಡು ಕಣ್ಮರೆಯಾದಾಗ ಉಕ್ಕಿ ಬಂದ ಅಳುವನ್ನು ತುಟಿ ಕಚ್ಚಿ ತಡೆದಳು ಶುಭ. ಮಗುವನ್ನು ತೊಟ್ಟಿಲಲ್ಲಿ ಮಲಗಿಸುವ ಸನ್ನಾಹದಲ್ಲಿದ್ದ ನಂದಿನಿ ಅದನ್ನು ಗಮನಿಸಲಿಲ್ಲ.

ರಘುವಿನ ಮನಸ್ಸು ಮುದುಡಿತ್ತು. ತಾನು ರವಿ-ಶುಭ ಇಬ್ಬರ ಶ್ರೇಯಸ್ಸಿಗಾಗಿ ಅಷ್ಟು ಪ್ರೀತಿಯಿಂದ ಏನೆಲ್ಲಾ ಮಾಡಿದ್ದರೂ ಇಬ್ಬರೂ ತನ್ನನ್ನು ತಪ್ಪಾಗಿ ತಿಳಿದಿರುವರೇ ? ಶುಭ ಮನೆಗೆ ಬಂದ ಮೇಲೆ ಎಲ್ಲಾ ಗುರುತರ ಜವಾಬ್ದಾರಿಯನ್ನೂ ಅವಳಿಗೊಪ್ಪಿಸಿ ತಾನು ಅಲ್ಲಿಂದ ಹೊರಟುಹೋಗಬೇಕು. ತನಗೆಲ್ಲೋ ಭ್ರಾಂತು. ಶಿವಪೂಜೆಯಲ್ಲಿ ಕರಡಿ ಬಿಟ್ಟಹಾಗೆ-ಶುಭ ರವಿಯರ ಪ್ರೇಮಪೂಜೆಯಲ್ಲಿ ತಾನೊಂದು ಅನಲಕ್ಷಣ ! ಶುಭ ತನ್ನ ಮಾತು ಕೇಳಿ ಕಣ್ಣೀರು ಹಾಕಿರಬೇಕು-ಕಣ್ಣುಗಳು ಕೆಂಪಗಿದ್ದವು. ಛೇ, ತಾನು ಅವಳಿಗೆ ಹಾಗೆ ಹೇಳಬಾರದಿತ್ತು. ಅವಳ ಮನಸ್ಸಿಗೆ ಬಹಳ ಬೇಸರವಾಗಿರಬೇಕು ! ರಘುವಿನ ಹೃದಯ ಕಲಕಿಹೋಯಿತು. ಓಡುತ್ತಿದ್ದ ಕಾರನ್ನು ತಿರುಗಿಸಿ ಮತ್ತೆ ಶುಭನ ಬಳಿಗೆ ಹೋಗಿ ಸಮಾಧಾನ ಮಾಡಿ ಬರಬೇಕು ಎನಿಸಿತಾದರೂ ದೃಢ ಮನಸ್ಸಿನಿಂದ ಕಾರನ್ನು ಮನೆಯತ್ತ ತಿರುಗಿಸಿದನು.

ರಘು ಮನೆಗೆ ಬಂದಾಗ ಶಿವರಾಮಯ್ಯನವರು ಪೋರ್ಟಿಕೋ ಎದುರಿಗಿದ್ದ ಹುಲ್ಲು ಹಾಸಿನ ಮೇಲೆ ಅತ್ತಿತ್ತ ಓಡಾಡುತ್ತಿದ್ದರು. ಬಾಯಿಯಲ್ಲಿ ಯಾವುದೋ ಮಂತ್ರವೊಂದು ನಿರರ್ಗಳವಾಗಿ ಬರುತ್ತಿತ್ತು. ರಘು ಕಾರು ನಿಲ್ಲಿಸಿದಾಗ ಶೆಡ್ಡಿನ ಬಾಗಿಲು ತೆರೆದು ಸಣ್ಣಯ್ಯ ಎದುರಿಗೆ ಬಂದ. "ಬಿಡಿ ಸಾರ್, ನಾನು

ಶೆಡ್ಡಿನಲ್ಲಿಡ್ತೀನಿ." ರಘು ಕಾರನ್ನು ಅವನಿಗೊಪ್ಪಿಸಿ ತಂದೆಯತ್ತ ನಡೆದನು. ತಂದೆಗೆ ಸೂಕ್ಷ್ಮವಾಗಿ ರವಿಯ ವಿಷಯ ನಿಜಾಂಶ ತಿಳಿಸಿಬಿಡಬೇಕು. ಇಲ್ಲದಿದ್ದರೆ ಅವರೂ ತನ್ನನ್ನು ತಪ್ಪಾಗಿ ತಿಳಿಯಬಹುದು.

"ಅಪ್ಪಾ. ಇದೇಕೆ ಹೀಗೆ ಒಬ್ಬರೇ ಅಲ್ಲಿಂದಿಲ್ಲಿ ತಿರುಗಾಡುತ್ತಾ ಇದ್ದೀರಿ ? ಒಳಗೆ ಬರಬಾರದೇ ?" ಶಿವರಾಮಯ್ಯ ರಘುವಿನ ಪ್ರಶ್ನೆಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ.

"ಶುಭನ್ನ ಯಾವಾಗ ಮನೆಗೆ ಕಳಿಸ್ತಾರಂತೆ ?"

"ನಾಡಿದ್ದು ಬೆಳಿಗ್ಗೆ ಕರ್ಕೊಂಡ್ಬರ್ತೀನಿ..." ರಘು ತಂದೆಗೆ ಮೊಟಕಾಗಿ ಉತ್ತರಿಸಿ ಅವರು ತನ್ನನ್ನು ಹಿಂಬಾಲಿಸಿ ಒಳಗೆ ಬಾರದಿದ್ದಾಗ ಅವನೇ ಅವರ ಬಳಿಗೆ ಮತ್ತೆ ಬಂದನು.

"ಇಲ್ಲಿಗೇ ಕುರ್ಚಿ ತರಿಸಿ ಹಾಕು ಹಾಯಾಗಿ ಕೂತ್ಕೊಳ್ಳೋಣ. ರವಿ ನಿದ್ದೆ ಮಾಡ್ತಾ ಇದ್ದಾನೆ." ಶಿವರಾಮಯ್ಯ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದಾಗ ಕಾರು ಒಳಗಿರಿಸಿ ಬಂದ ಸಣ್ಣಯ್ಯನಿಗೆ ಎರಡು ಕುರ್ಚಿಗಳನ್ನು ತರುವಂತೆ ಹೇಳಿದ ರಘು.

ಕುರ್ಚಿಯ ಮೇಲೆ ಕೂಡುತ್ತಾ ಶಿವರಾಮಯ್ಯನವರು ಲಘುವಾಗಿ ಕೆಮ್ಮಿದರು. "ರಘೂ, ನೀನು ಏನೂ ತಿಳ್ಕೊಳ್ದೇ ಇದ್ರೆ ಒಂದ್ಮಾತು....ರವಿ ಮೆಡಿಕಲ್ ಚಾರ್ಜೂ, ಶುಭ ಆಸ್ಪತ್ರೆ ಚಾರ್ಜೂ ಎಷ್ಟಾಗುತ್ತೆ ? ನಿನ್ಹತ್ರ ದುಡ್ಡಿದ್ಯೆ ?"

ರಘು ಅಚ್ಚರಿಯಿಂದ ಕಣ್ಣರಳಿಸಿದನು.

"ಯಾಕಪ್ಪಾ ಹಾಗೆ ಕೇಳ್ತೀ, ಯಾಕೆ ನಾನೂ ಸಂಪಾದಿಸುವ ಮಗನಲ್ಲವೇ ?"

"ತಪ್ಪು ತಿಳೀಬೇಡಾಪ್ಪಾ, ನಾನು ಹಾಗಂದೆನೇ ? ಸುಮ್ಮನೇ ಕೇಳಿದೆ ಅಷ್ಟೆ. ನೋಡೂ, ರವಿ ಬಹಳ ತೆಗೆದುಹೋಗಿದ್ದಾನೆ. ನನಗೆ ಯಾಕೋ ಅವನ್ನ ನೋಡಿದರೆ ಕರುಳು ಕಿತ್ತುಬರುತ್ತೆ. ನೀನು ಪುನಃ ರಾಂಚಿಗೆ ವಾಪಸ್ಸು ಹೋಗಕೂಡದು. ಅಲ್ಲಿಯ ಕೆಲಸಕ್ಕೆ ನಾಳೇನೇ ರಾಜಿನಾಮೆ ಕೊಟ್ಬಿಡು. ಈ ಎಸ್ಟೇಟಿನ ಜವಾಬ್ದಾರಿ ನೀನು ವಹಿಸಿಕೋ. ನೀನು ಹಠ ಮಾಡಬೇಡ. ನೀನು ಇಲ್ಲಿ ನೆಲೆಯಾದರೆ ರವಿಗೂ ಮನಸ್ಸಿಗೆ ಸಮಾಧಾನ." ಶಿವರಾಮಯ್ಯ ಸುಕ್ಕುಗಟ್ಟಿದ್ದ ಹಣೆಯ ಮೇಲೆ ಕೈಯಾಡಿಸಿಕೊಂಡರು. "ನನ್ನ ಕೊನೆಗಾಲ

ದಲ್ಲಿ ಮಕ್ಕಳ ಚಿಂತೆ ಹತ್ತಿಸಬೇಡೀಪ್ಪಾ" ಅವರ ಕಂಠ ಗದ್ಗದಿತವಾಗಿತ್ತು. "ಇವೆಲ್ಲಾ ನೋಡುವ ಮುಂಚೆ ನಾನೂ ಅವಳ ಹಾಗೆ ಕಣ್ಮುಚ್ಚಿದ್ದರೆ ಚೆನ್ನಾಗಿರ್ತಿತ್ತು."

ರಘು ನಿರುತ್ತರನಾದನು. ತಾನು ರವಿಯ ವಿಷಮಸ್ಥಿತಿ ತಿಳಿಸಿ ಊರಿಗೆ ಹಿಂತಿರುಗಲು ಹವಣಿಸುತ್ತಿದ್ದಾಗ ಅದಕ್ಕೆ ಪ್ರತಿಯಾಗಿ ತಂದೆಯಿಂದ ಕರುಣಾ-ಪೂರಿತವಾದ ಬೇಡಿಕೆ !

"ಯಾಕೆ ಸುಮ್ಮನಾದೆ ? ಅದೇನು ನಮ್ಮನ್ನು ಕಂಡರೆ ನಿನಗೆ ಅಷ್ಟು ಬೇಸರ ? ನೀನು ಮೊದಲು ಹೀಗಿರಲಿಲ್ಲ ! ಹೋಗೋದಾದ್ರೆ ನನ್ಗೂ ನಿನ್ಗೂ ಸಂಬಂಧ ಇಲ್ಲವೆಂದು ಹೇಳಿ ಹೊರಟುಹೋಗು" ಶಿವರಾಮಯ್ಯನವರ ದನಿ ಗಡುಸಾಗಿತ್ತು.

ರಘುವಿಗೆ ಮೈಯ್ಯಲ್ಲಿ ಚಿಲ್ಲನೆ ಹೊಮ್ಮಿ ಬಂದ ಬೆವರಿನ ಅರಿವಾಯಿತು. ಎಲ್ಲರೂ ಏಕೆ ತನ್ನ ವಿಚಾರದಲ್ಲಿ ಇಷ್ಟು ನಿಷ್ಠುರ !

"ಆಗಲಿ, ನೋಡೋಣಾಪ್ಪಾ. ನನಗೆ ಯಾವುದಕ್ಕೂ ಯೋಚಿಸಲು ಟೈಂ ಕೊಡಬೇಕು." ರಘು ಅಲ್ಲಿಂದ ಸರ್ರನೆದ್ದು ಒಳಗೆ ಹೊರಟುಹೋದನು.

ಅಭ್ಯಾಸಬಲದಿಂದ ತನ್ನ ರೂಮಿನೊಳಗೆ ಕಾಲಿಟ್ಟಾಗ ಅವನಿಗೆ ಕಣ್ಣಿದು ರಾದುದು ಶುಭನಿಗಾಗಿ ಸಿದ್ಧಪಡಿಸಿದ್ದ ಮಂಚ. ಅದರ ಪಕ್ಕದಲ್ಲಿದ್ದ ತೊಟ್ಟಿಲು ....ರಾಶಿರಾಶಿಯಾಗಿ ಬಿದ್ದಿದ್ದ ಅವಳ ಉಡಿಗೆ ತೊಡುಗೆಗಳು, ಬೆಚ್ಚಿ ಹಿಂದೆ ಸರಿದನು. ಅದರ ಎದುರಿಗಿದ್ದ ರೂಮಿನಲ್ಲಿ ರವಿ ಮಗ್ಗುಲು ತಿರುಗಿ ಮಲಗಿದ್ದನು. ನಿದ್ದೆಯಿಂದಲೋ ಆಯಾಸದಿಂದಲೋ ತಿಳಿಯಲಿಲ್ಲ.

ಮಹಡಿಯೇರುತ್ತಿರುವಾಗ ಬಾಬು ಎದುರಾದನು.

"ಸಾರ್, ರವಿಯಪ್ಪೋರು ಸಿಗರೇಟು ಕೇಳಿದ್ರು. ನಾನು ನಿಮ್ಮನ್ನ ಕೇಳ್ದೇ ಏನೂ ಕೊಡೋಲ್ಲ ಅಂದೆ... ಈಗ ಸ್ವಲ್ಪ ಹೊತ್ತಿಗ್ಮುಂಚೆ ಬಾರ್ಲಿಗಂಜಿ ಕುಡಿದು ಮಲಗಿದ್ರು....!"

"ಸರಿ ಬಾಬು. ನನ್ನ ಕೇಳದೇ ಆಹಾರ ಬಿಟ್ಟು ಏನೂ ಕೊಡಬೇಡಾ."

ರಘು ದಡದಡನೆ ಮಹಡಿಯೇರಿದನು. ಒಮ್ಮೆ ರವಿಯದಾಗಿದ್ದ ಆ ರೂಮು ವಿಶಾಲವಾಗಿದ್ದರೂ ನಿರ್ಜನತೆಯಿಂದ ನೀರವವಾಗಿತ್ತು.

ಹೊಸಿಲ ಬಳಿ ನಿಂತು ಅಲ್ಲಲ್ಲಿದ್ದ ತನ್ನ ಸಾಮಾನುಗಳನ್ನು ನೋಡಿದನು. ತಾನು ಈ ರೂಮಿಗೂ ಅತಿಕ್ರಮಿಸಬಾರದು. ಇದು ತನ್ನದಲ್ಲ. ಅವನ ಹೃದಯ

ಚೀರುತಿತ್ತು. ನಿಂತಲ್ಲಿಂದಲೇ ಬಾಬುವನ್ನು ಕೂಗಿದನು. ಬಾಬು ಏದುಸಿರು ಬಿಡುತ್ತಾ ಮೇಲೇರಿ ಬಂದಾಗ ಕಣ್ಣು ಕಿರಿದು ಮಾಡಿದ.

"ನೋಡೂ ಬಾಬೂ, ನನ್ನ ಸಾಮಾನೆಲ್ಲ ನಮ್ಮಮ್ಮ ಉಪಯೋಗಿಸ್ತಾ ಇದ್ದ ರೂಮಿಗೆ ಹಾಕು. ನಾನು ಇಲ್ಲಿ ಮೇಲೆ ಕುಳಿತರೆ ಆಗೋಲ್ಲ. ನಾಡಿದ್ದು ಚಿಕ್ಕಮ್ಮಾವ್ರು ಮನೆಗೆ ಬರ್‍ತಾರೆ." ಕೊನೆಯ ಮಾತು ಕೇಳಿ ಬಾಬು ಚಿಗುರೆ ಯಂತೆ ನೆಗೆಯುತ್ತಾ ಕೆಳಗಿಳಿದ. "ಆಗ್ಲಿ ಸಾರ್ ಒಂದೆರಡು ಗಂಟೆ ಟೈಂ ಕೊಡಿ. ಎಲ್ಲಾ ರೆಡಿ ಮಾಡ್ಕೊಡ್ತೀನಿ..."

ರಘು ನಿಂತಲ್ಲೇ ಯೋಚಿಸಿದ—ತನ್ನ ಬೆಂಬಲವಿಲ್ಲದಿದ್ದರೆ ಮನೆಯ ಗತಿ! ತನಗರಿಯದೇ ತಾನು ದೂರ ಹೋಗಿ ಮರೆಯಬೇಕೆಂದೆನಿಸಿದರೂ ತನ್ನೊಳಗೇ ಹಾಸುಹೊಕ್ಕಾಗಿ ಸೇರಿಬಿಟ್ಟಿದೆಯಲ್ಲಾ ಈ ಎಲ್ಲ ಜೀವಗಳೂ. ರಘು ಅಲ್ಲೇ ಮಹಡಿಯ ಮೆಟ್ಟಿಲ ಮೇಲೇ ಕುಸಿದು ಕುಳಿತನು. ಅವನ ಕೈ ಜೇಬಿನಲ್ಲಿದ್ದ ಸಿಗ ರೇಟಿನ ಪ್ಯಾಕಿಗಾಗಿ ತಡಕಾಡಿತು. ಸಿಗರೇಟನ್ನು ಹೊತ್ತಿಸಿಕೊಂಡು ಒಂದೇ ಒಂದು ದಂ ಎಳೆಯುವುದರಲ್ಲಿ ಕೆಳಗೆ ರೂಮು ಕಸ ಗುಡಿಸುತ್ತಿದ್ದ ಬಾಬು ಅಲ್ಲಿಂದಲೇ ಕೂಗಿದನು.

"ಸಾರ್, ರವಿಯಪ್ನೋರು ಕರೀತಾ ಇದ್ದಾರೆ."

ರಘು ಮೈ ಕೊಡವಿ ಎದ್ದನು. ಕೈಲಿದ್ದ ಸಿಗರೇಟನ್ನು ಅಲ್ಲೇ ಹೊಸಕಿ ಆರಿಸಿ ಕೆಳಗೆ ಇಳಿದು ಬಂದಾಗ ರವಿ ಹಾಸಿಗೆಯ ಮೇಲೆ ಕುಳಿತಿದ್ದನು.

"ಏನು ರವಿ, ಕರೆದ್ಯಾ ?" ರಘು ಬಾಗಿಲ ಬಳಿ ನಿಂತು ಕೇಳಿದಾಗ ರವಿ ನೀಳವಾಗಿ ಉಸಿರೆಳೆದು ಕಣ್ಣರಳಿಸಿದನು.

"ಸಿಗರೇಟ್ ಸೇದ್ತಾ ಇದ್ದೀಯಾ ? ಪೂರ್ತಿ ಸೇದ್ಬಿಟ್ಟು ಬಾ, ನಾನು ಕರ್‍ದೇ ಅಂತ ಅರ್ಧ ಆರಿಸಿ ಬಂದ್ಬಿಟ್ಯಾ ?" ಕಿರುನಗೆ ರವಿಯ ತುಟಿಯಂಚಿನಲ್ಲಿ ಮಿನುಗಿತು.

ತನ್ನ ರಹಸ್ಯ ಬಯಲಾಗಿದ್ದು ರಘುವಿನ ಮುಖ ಕೆಂಪಗಾಯಿತು.

"ಬೇಜಾರಾಯ್ತು. ಒಬ್ಬನೇ ಕುಳಿತು ಅದಕ್ಕೆ ಹತ್ತಿಸಿಕೊಂಡೆ, ಅಷ್ಟೆ." ಬೇಕೆಂತಲೇ ಮಾತು ಬದಲಾಯಿಸಲು ಮಾತು ತೆಗೆದನು,

"ನಾಡಿದ್ದು ಶುಭ ಮನೆಗೆ ಬರ್‍ತಾರೆ. ರೂಮು ಸಿದ್ಧ ಮಾಡ್ಕೋಬೇಕಪ್ಪಾ, [illegible]"

ತನ್ನ ಕುಡಿಯಾನ ಮಗಳ ನೆನಪಿನಿಂದ ರವಿಯ ಮುಖ ಮೃದುವಾಯಿತು. ತನ್ನ ಶುಭ ಬಂದರೆ, ತನ್ನ ಕಣ್ಣೆದುರಿಗಿದ್ದರೆ ಸಾಕು.

"ಔಷಧಿ ತೆಗೆದುಕೊಂಡೆಯಾ ?" ರಘು ಇನ್ನು ಬಾಗಿಲಲ್ಲೇ ನಿಂತು ಮಾತಾಡುತ್ತಿದ್ದುದು ಗಮನಿಸಿದನು ರವಿ.

"ಬಾರಯ್ಯ ಒಳಗೆ, ನಿನ್ನ ಸಿಗರೇಟು ನಾನೇನೂ ಕೇಳೋಲ್ಲ....ಆವ್ರೆ ಡಾಕ್ಟರ್ ನನ್ನ ವಿಷಯದಲ್ಲಿ ಇಷ್ಟು ಕಠಿಣ ಆಗ್ಬೇ, ದಿನಕ್ಕೆ ಎರಡು ಸಿಗರೇಟು, ಒಂದು ಪೆಗ್ ಡ್ರಿಂಕ್ಸ್ ತೊಗೋ ಅಂದಿದ್ರೆ ನಾನು ಸುಲಭವಾಗಿ ಕಂಟ್ರೋಲ್ ಮಾಡ್ತಾ ಇದ್ದೆ. ಏಕ್ದಂ ಎಲ್ಲಾ ನಿಂತುಹೋದ್ರೆ ಮನಸ್ಸು ಹೇಗೆ ಹೇಗೋ ಆಗುತ್ತೆ...."

ರವಿ ತಲೆ ಕೂದಲಿನಲ್ಲಿ ಕೈಯಾಡಿಸಿಕೊಂಡು ನೀಳುಸಿರುಬಿಟ್ಟನು.

"ಔಷಧಿ ತೆಗೆದುಕೊಂಡೆ...ಬಾಬುನನ್ನು ಕೇಳಿಕೊಂಡೆ. ನೀನು ಬಂದಾಗಿನಿಂದ ನಾನೊಂದು ಹೊರೆ, ಶುಭ ಒಂದು ಹೊರೆ ಆಗಿದ್ದೀವಿ...."

ರಘುವಿನ ಕದಡಿದ ಮನಸ್ಸೆಲ್ಲಾ ಹಗುರವಾಯಿತು. ಆಲಸಿಕೆಯಿಂದ ಇಬ್ಬರೂ ಏನೋ ಆಡಿದರೆ ತಾನು ಇಷ್ಟು ದೊಡ್ಡದು ಮಾಡಿಕೊಂಡು ಮನಸ್ಸು ಕೆಡಿಸಿಕೊಂಡೆನಲ್ಲಾ ಎಂದು ಬೇಸರವೂ ಆಯಿತು. "ಛೇ, ಹಾಗ್ಯಾಕೆ ಅನ್ಕೋತೀ ರವಿ....ನೀವು ನನಗೆ ಯಾವ ವಿಧವಾದ ಹೊರೆಯೂ ಆಗಿಲ್ಲ. ಇವೆಲ್ಲಾ ನಿನ್ನದು, ನಾನೂ ನಿನ್ನ ಒಡಹುಟ್ಟಿದವನಲ್ಲವೇ ? ಏನಾದ್ರೂ ಫಿಫ್ಟಿ ಫಿಫ್ಟಿ."

"ಗುಡ್....ಹಾಗಾದ್ರೇ ಇಲ್ಲಿ ಬಾ–ನನ್ನ ಹತ್ತಿರ ಕೂತ್ಕೋ. ಫಿಫ್ಟಿ–ಫಿಫ್ಟಿ ಅಂದೆಯಲ್ಲಾ ನಾನು ಹೇಳಿದ ಹಾಗೆ ಕೇಳು–ನಿನ್ನ ಕೆಲಸಕ್ಕೆ ರೆಸಿಗ್ನೇಷನ್ ಕೊಡು. ಹಾಳಾಗಿಹೋಗ್ತಾ ಇರೋ ಈ ಎಸ್ಟೇಟ್ ಉಳಿಸು–ನಾನು ಸರಿಹೋದ್ಮೇಲೆ ಇಬ್ಬರೂ ಸೇರಿ ಮಾಡೋಣಾ...ನೀನು ಇಲ್ಲಾ ಅನ್ನೂಡದು" ರವಿ ಹತ್ತಿರ ಬಂದ ರಘುವಿನ ಕೈ ಹಿಡಿದು ಹೇಳಿದ-ರಘು ಅವನನ್ನೇ ದಿಟ್ಟಿಸಿದ.

ರವಿ ಪುನಃ ಸರಿಹೋಗುವನೇ ? ಏನೋ ಅವನಿಗೇ ಆ ಅಭಿಲಾಷೆಯಿದ್ದಲ್ಲಿ ಸರಿಹೋಗಬಹುದು. ಡಾ|| ಕೃಷ್ಣ ಮಾತು ಸುಳ್ಳಾಗಬಹುದು-ಎಲ್ಲೋ ಒಂದು ಹೊಂಗಿರಣ ಮೂಡಿ ಬಂತು. ತಂದೆಯ ಮುಂದೆ ದುಡುಕಿ ಎದ್ದು ಬಂದಿದ್ದ ರಘು ರವಿಯ ಕೈ ಮೇಲೆ ಕೈಹಾಕಿ ಹೇಳಿದ. "ಅಗ್ರೀಡ್ ಆದ್ರೆ

ಡಯಟ್ ಕಂಟ್ರೋಲ್ ಮಾಡಿ ವಾಸಿ ಮಾಡ್ಕೋಬೇಕು ಬೇಗ. ನನ್ನೊಬ್ಬನ ತಲೇ ಮೇಲೆ ಎಲ್ಲಾ ಹಾಕಿ ನೀನು ಇಲ್ಲಿ ಮಲಗಿದ್ರೆ ನಾನು ಸುಮ್ಮನಿರೋಲ್ಲ."

ರವಿಯ ಹೃದಯ ಹಗುರವಾಗಿ ಹೂವಿನಂತೆ ಅರಳಿತು. ಅವನ ಮುಖದಲ್ಲಿ ಹೂನಗೆಯರಳಿತು. ತಮ್ಮನನ್ನು ಬಾಚಿ ತಬ್ಬಿಕೊಂಡನು.

ಶುಭನ ಬರುವಿಕೆಗಾಗಿ ಮನೆ ಮತ್ತೆ ಸಡಗರದಿಂದ ತುಂಬಿ ಮೆರೆಯುತ್ತಿತ್ತು. ಹೊಸ ಮಗು ಮನೆಗೆ ಬರುವ ಸಂಭ್ರಮದಲ್ಲಿ ಬಾಬೂ ಮಾಡಿದ ಕೆಲಸವನ್ನೇ ಮತ್ತೆ ಮತ್ತೆ ಮಾಡುತ್ತಿದ್ದ. ಪೂರ್ಣ ವಿಶ್ರಾಂತಿಯಲ್ಲಿರಬೇಕೆಂದು ಡಾಕ್ಟರು ಹೇಳಿದ್ದರೂ ರವಿಯೂ ಕೂಡ ಅತ್ತಿತ್ತ ಓಡಾಡುತ್ತಿದ್ದನು. ಶಿವರಾಮಯ್ಯನವರಿಗೆ ಮಗುವಿನ ತೊಟ್ಟಿಲನ್ನು ಯಾವ ಮೂಲೆಯಲ್ಲಿಟ್ಟರೂ ಗಾಳಿ ಜಾಸ್ತಿಯೆಂಬ ಆತಂಕ.. ಶುಭನಿಗೆ, ಮಗುವಿಗೆ ನೀರು ಹಾಕಿ, ಬಾಣಂತನದ ಹೊಣೆಯನ್ನು ಹೊತ್ತಿದ್ದ ರಾಜಮ್ಮನಿಗೆ, ಶುಂಠಿಪುಡಿ, ಬಾಣಂತಿ ಲೇಹ್ಯ, ಸಾಂಬ್ರಾಣಿ, ಸೀಗೆಪುಡಿ ಇವುಗಳ ಯೋಚನೆ.

ಎಲ್ಲವನ್ನೂ ನಿರ್ವಿಣ್ಣನಾಗಿ ನೋಡುತ್ತಿದ್ದವನು ರಘುವೊಬ್ಬನೇ. ಇದೆಲ್ಲಾ ಎಷ್ಟು ದಿನದ ಸಂಭ್ರಮ. ಈ ಸುಖ, ಸಂತೋಷ ಚಿರವಲ್ಲವೆಂದು ಅವನ ಒಳಮನಸ್ಸು ಹೇಳುತಿತ್ತು. ಕಾಯಿಲೆ ಬಿದ್ದ ಮೇಲೆ ಮೊದಲ ಬಾರಿಗೆ ಶುಭ ರವಿಯನ್ನು ನೋಡ ಬರುತ್ತಾಳೆ...ಅವಳ ಮನೋದ್ವೇಗ, ತುಮುಲ, ದುಃಖ ಹೇಗಿರಬಹುದು ? ಅವಳಿಗೆ ನಿಜಾಂಶ ತಿಳಿದರೆ ! ರಘುವಿನ ಮನಸ್ಸು ತುಂಬಾ ಮುಂಬರುವ ದಿನಗಳವೇ ದುಗುಡ. ಯಾವ ಕಾರ್ಯಭಾರದಲ್ಲೂ ಉತ್ಸಾಹ ತೋರದೇ ದೂರ ನಿಂತಿದ್ದ ಮಗನನ್ನು ಶಿವರಾಮಯ್ಯನವರು ಗದರಿಕೊಂಡರು.

"ಏನಯ್ಯಾ, ಸುಮ್ಮನೇ ನಿಂತುಬಿಟ್ಟೆ ? ಇಲ್ಲಿ ಬಾ. ಸ್ವಲ್ಪ ತೊಟ್ಟಿಲು ಈ ಕಡೆ ಜರುಗಿಸು ಬಾ. ನಾನೊಬ್ಬನೇ ಮಾಡಲಾರೆ."

ಕೊಂಚ ಓಡಾಡಿದರೂ ಆಯಾಸವಾಗುತ್ತಿದ್ದರಿಂದ ರವಿ ಕುರ್ಚಿಯನ್ನು ಒರಗಿ ಕುಳಿತೇ ತಿಳಿನಗೆ ನಕ್ಕನು.

ಇಲ್ಲಪ್ಪಾ, ಅವನಿಗೆ ಈಗ ಅನ್ನಿಸ್ತಾ ಇದೆ. ನಾನೂ ಮದ್ವೆ ಮಾಡಿಕೊಂಡಿದ್ರೇ ನನಗೂ ಈ ಸಂಭ್ರಮ....ಎಲ್ಲಾ ಇರ್ತಿತ್ತೂಂತ ಅಲ್ವಾ ?"

[illegible]

ಶುಭನನ್ನು ಕರೆತರಲು ಹೊರಟಾಗ ರವಿ ಕುಳಿತಲ್ಲೆ ಕೂಗಿ ಹೇಳಿದನು.

"ರಘೂ, ಏನಾದ್ರೂ ಬೇಕಾ ?! ಮರೆತುಬಿಟ್ಟೇಯಾ ! ಬಿಲ್ ನನ್ನ ಹೆಸರಿಗೆ ಕಳುಹಿಸೂನ್ನು. ನಾನು ಸೆಟಲ್ ಮಾಡ್ತೀನಿ...."

ರಘು ಅವನನ್ನು ತೀಕ್ಷ್ಣವಾಗಿ ನೋಡಿ ಉತ್ತರವೀಯದೇ ಹೊರಗೆ ಹೊರಟನು.

ಆಸ್ಪತ್ರೆಯ ಹೊರವಲಯದಲ್ಲೇ ನಿಂತಿದ್ದ ನಂದಿನಿಯನ್ನು ಕಂಡು ರಘು ಅಲ್ಲೇ ನಿಂತನು. ಅವಳಿಂದ ತಾನು ಏನನ್ನೂ ಇನ್ನು ಮುಚ್ಚಿಡಬಾರದು. ಶುಭನ ಭವಿಷ್ಯದ ಬಗ್ಗೆ ಅವಳಿಗೂ ತಿಳಿವಳಿಕೆಯಿದ್ದರೆ ಒಳಿತೆನಿಸಿತು.

"ಅಂತೂ ಬಂದ್ರ್ಯಾ ! ಶುಭಾ ಅಂತೂ ತುದಿಗಾಲಿನ ಮೇಲೆ ನಿಂತಿದ್ದಾಳೆ. ನಿನ್ನೆ ರಾತ್ರೀನೇ ಎಲ್ಲಾ ಪ್ಯಾಕ್ ಮಾಡಿಬಿಟ್ಟಳು, ನೋಡೂ.... !" ನಂದಿನಿ ರಘುವನ್ನು ಕಂಡು ನಕ್ಕಳು.

"ಪುನಃ ಇಲ್ಲೇನೂ ಬರೋಲ್ವಲ್ಲ. ಯಾಕೆ ಸುಮ್ನೇ ಆತಂಕ ! ಸ್ವಲ್ಪ ಇರೂನ್ನು...."

ರಘು ಅಂದು ಅವಳೊಡನೆ ಮಾತಾಡದೇ ಹೋದಾಗಿನಿಂದ ಮತ್ತೆ ಮಾತಾಡಿಸಿರಲಿಲ್ಲ. ಹಿಂದಿನ ದಿನ ಬಂದು ವ್ಯವಹಾರಿಕವಾಗಿ ನಂದಿನಿಯ ಜೊತೆ ಮಾತಾಡಿ, ಮಗುವನ್ನು ಮುದ್ದಿಸಿ ಹೊರಟುಹೋಗಿದ್ದನು. ಶುಭನಿಗೆ ತಾನಾಗಿ ಅವನನ್ನು ಮಾತಾಡಿಸಲು ಅಳುಕು.

"ಸರಿ, ನೀನೇ ಹೇಳು ನಾನು ಹೇಳಿದರೆ ಅವಳು ಕೇಳ್ತಾಳ್ಯೆ ?" ರಘು ಬೇಕೆಂತಲೇ ಮಾತು ಬದಲಾಯಿಸಿದನು.

"ನಂದಿನಿ, ತುಂಬಾ ಸಾರಿ. ನಿನಗೆ ಮಾತು ಕೊಟ್ಟೆ ಆವೊತ್ತು. ಶುಭ ನನ್ನು ನಿಮ್ಮನೇಲೇ ಬಿಡುವಂತೆ ರವಿನ್ನ ಒಪ್ಪಿಸ್ತೀನೀಂತ.. ಆದರೆ ಕ್ಷಮಿಸು. ನಂದಿನಿ, ನಾನು ರವಿಯನ್ನು ಕೇಳಲಾರೆ-ಅಲ್ಲದೇ ಅವರಿಬ್ಬರನ್ನೂ ಅಗಲಿ ಸಿಡಲು ನನಗೇಕೋ ಮನಸ್ಸು ಬಾರದು...." ರಘು ಎತ್ತಲೋ ನೋಡುತ್ತಾ ಹೇಳಿಗನು.

"ಸಾಕು ಸುಮ್ನಿರೋ, ಮದ್ವೆ ಆದಾಗ್ಲಿಂದ ಯಾವಾಗ್ಲೂ ಒಟ್ಗೇನೇ ಇದ್ದಾರೆ. ಒಂದೂ ಒಂದೂವರೆ ತಿಂಗ್ಳು ಬಿಟ್ಟಿದ್ರೆ ಏನಾಗುತ್ತೆ ? ಸಿಂಗೂ ಮನಸ್ಸಿಲ್ಲ ಅಷ್ಟೆ."

ನಂದಿನಿ ಕೊಂಚ ನೊಂದು ಹೇಳಿದಾಗ ರಘು ತಲೆಯಲ್ಲಾಡಿಸಿದನು. "ಇಲ್ಲ ನಂದಿನಿ, ದಯವಿಟ್ಟು ಅರ್ಥಮಾಡಿಕೋ. ಈಗ ಶುಭ, ರವಿಯನ್ನು ನಾನು ನೀನೂ ಅಗಲಿಸಿದರೆ ಆಜೀವಪರ್ಯಂತ ಬೇಸರಪಟ್ಟುಕೊಳ್ಳುತ್ತೇವೆ, ದುಃಖಪಡ್ತೀವಿ..."

"ಅದ್ಯಾಕೆ ಹಾಗೆ ಹೇಳ್ತೀ? ಇವ್ರು ಆವೊತ್ತೇ ಹೇಳಿದ್ರು: 'ನೀನು ಸುಮ್ನೇ ಶುಭನ್ನ ಕಳಿಸೂಂತ ರವಿ ಹತ್ರ, ರಘೂ ಹತ್ರ ಗಲಾಟೆ ಮಾಡ್ಬೇಡಾ ಅಂತ. ಅದೇನು ನಮ್ಮನೇ ಹುಡುಗೀಂಪ್ರೆ ಅಷ್ಟೂ ಸ್ವತಂತ್ರ ಬೇಡ್ವೆ ನಂಗೆ!" ನಂದಿನಿ ಕನಲಿದಳು.

ಗೇಟಿನ ಬಳಿ ಬರುತ್ತಿದ್ದ ಭಾಸ್ಕರನನ್ನು ಕಂಡು ರಘು ಜಾರಿದನು. "ನೋಡೂ ನಂದಿನಿ, ಭಾಸ್ಕರ ಯಾಕೆ ಬೇಡಾಂತ ಅಂದ್ರೂಂತ ಅವರ ಹತ್ತಿರ ಕೇಳು."

"ಏನಯ್ಯ, ಎಲ್ಲಾ ಸೆಟಲ್ ಮಾಡಿ ಆಯ್ತಾ? ಏನಾದ್ರೂ ಹೆಲ್ಪ್ ಬೇಕಾಗಿದ್ರೆ ನಾನೂ ಅಳಿಲು ಸೇವೆ ಮಾಡ್ತೀನಿ." ಭಾಸ್ಕರ ಎದುರಿಗೆ ನಿಂತಾಗ ರಘು ಹೇಳಿದ.

"ಡೆಫ್‌ನೆಟ್‌ಲೀ, ನನಗೆ ತುಂಬಾ ದೊಡ್ಡ ಸಹಾಯ ಬೇಕು. ನಂದಿನಿಗೆ ರವಿ ವಿಷಯ ದಯವಿಟ್ಟು ತಿಳಿಸಿದರೆ ನನಗೆ ದೊಡ್ಡ ಸಹಾಯಮಾಡಿದಂತಾಗುತ್ತೆ."

ಭಾಸ್ಕರನ ಉತ್ತರಕ್ಕೆ ಕಾಯದೇ ರಘು ಆಸ್ಪತ್ರೆಯೊಳಗೆ ಮಾಯವಾದನು. ಭಾಸ್ಕರ ಅವನು ಹೋದ ದಿಕ್ಕನ್ನೇ ನೋಡಿ ಒಣಗಿದ ತುಟಿಗಳ ಮೇಲೆ ನಾಲಿಗೆಯಾಡಿಸಿ ಉಗುಳು ನುಂಗಿದನು.

"ಏನ್ರೀ ಅದೂ, ಇಬ್ರೂ ಹೀಗೆ ನಾಟ್ಕ ಮಾಡ್ತೀರಿ!" ನಂದಿನಿ ಸಿಡುಕಿದಾಗ ಭಾಸ್ಕರ ಎಚ್ಚೆತ್ತ.

"ಬಾ ಇಲ್ಲಿ ನಂದಿನಿ. ನಿನಗೊಂದು ಮಾತು, ನೀನು ಬಹಳ ಧೈರ್ಯಶಾಲಿ. ನೀನಿಲ್ಲದೇ ಇದ್ದಿದ್ದರೆ, ನಿನ್ನ ಧೈರ್ಯದ ಬೆಂಬಲವಿಲ್ಲದಿದ್ದರೆ ನಾನೇನಾಗುತ್ತಿದ್ದೆನೊ....!" ಅವಳ ಕೈ ಹಿಡಿದಾಗ ನಂದಿನಿ ಅವನ ಕೈ ಕೊಸರಿದಳು. "ಸಾಕು, ಇದೇನು ಎಲ್ಲರ ಮುಂದೆ ನಾಚಿಕೆಗೇಡು!"

"ಇರಲಿ ಬಿಡು ನಂದಿನಿ, ಗಂಡ ಹೆಂಡತಿಯರ ಬಾಂಧವ್ಯ ತಿಳಿದವರೇನೂ ಅಂದುಕೊಳ್ಳುವುದಿಲ್ಲ." ಭಾಸ್ಕರ ನಂದಿನಿಯ ಕೈ ಹಿಡಿದು ಆಸ್ಪತ್ರೆಯ ಆವರಣದಲ್ಲಿದ್ದ ಮರದ ನೆರಳಿನತ್ತ ಕರೆದೊಯ್ದನು.

ರಘು ಡಾಕ್ಟರನ್ನು ಕಂಡು ಆಸ್ಪತ್ರೆ ವಾರ್ಡಿನ ಚಾರ್ಜಸ್, ಆಪರೇಷನ್ ಚಾರ್ಜಸ್ ಎಲ್ಲವನ್ನೂ ಕೊಟ್ಟು ಅವರೊಡನೆ ಮಾತಾಡುತ್ತಾ ನಿಂತಿದ್ದಾಗ ನಂದಿನಿ ಸೆರಗಿನಿಂದ ಕಣ್ಣೊರಸಿಕೊಂಡು ಶುಭನ ರೂಮಿನತ್ತ ಹೋದುದನ್ನು ಕಂಡನು. ಅವಳ ಹಿಂದೆ ತಲೆ ಬಾಗಿಸಿ ನಡೆದುಹೋದ ಭಾಸ್ಕರನನ್ನೂ ಗಮನಿಸಿದನು.

"ಆದೇ ಹದಿನೈದು ದಿನಗಳಾದ ಮೇಲೆ ಅವರು ಒಂದು ಚೆಕ್‌ಅಪ್‌ಗೆ ಬರಲಿ. ಸೂಚರಿಂಗ್ ಊಂಡ್ ಚೆನ್ನಾಗಿ ಹೀಲ್ ಆಗಿದೆ. ಬೇಬಿನೂ ಚೆನ್ನಾಗಾಗಿದೆ. ಹೀ ವಿಲ್ ಬಿ ಆಲ್‌ರೈಟ್....ಚೆನ್ನಾಗಿ ರೆಸ್ಟ್ ತೊಗೊಳ್ಳಿ ಸಾಕು...." ಡಾಕ್ಟರು ಹೇಳುತ್ತಿದ್ದುದು ರಘುವಿನ ಗಮನಕ್ಕೆ ಬರಲಿಲ್ಲ. ಅವನ ಗಮನವೆಲ್ಲ ನಂದಿನಿ, ಭಾಸ್ಕರನ ಮೇಲಿತ್ತು.

"ಗೊತ್ತಾಯ್ತು ತಾನೇ ನಾನು ಹೇಳಿದ್ದು, ಟೂಬ್ರಾಪ್ಲೆಕ್ಸ್ ಕಂಟಿನ್ಯೂ ಮಾಡ್ಲಿ. ಮಗೂಗೆ ವಿಟಮಿನ್ ಡ್ರಾಪ್ಸ್ ಹಾಕ್ಲಿ...."

ತಮಗೆ ಉತ್ತರಿಸದೇ ಎತ್ತಲೋ ನೋಡುತ್ತಿದ್ದ ರಘುವನ್ನು ಡಾಕ್ಟರ್ ಗಮನಿಸಿ ಅವನ ಕೈ ಮುಟ್ಟಿದ್ದರು.

"ಮಿಸ್ಟರ್ ರಘೂ.... ಈಸ್ ಎವೆರಿಥಿಂಗ್ ಆಲ್‌ರೈಟ್ ?"

ರಘು ಬೆಚ್ಚಿದನು. ತನ್ನ ವಿಮನಸ್ಕತೆಯ ಅರಿವಾಗಿ ಸಾವರಿಸಿಕೊಂಡು ನಕ್ಕನು.

"ಎವೆರಿಥಿಂಗ್ ಈಸ್ ಫೈನ್...ರವೀನ್ನ ನೋಡೋಕೆ ಬರ್ತೀನೀಂದ್ರಲ್ಲಾ, ಯಾವಾಗ್ಬರ್ತೀರಿ ?"

"ಮಗೂನ್ನ ನೋಡೋ ನೆಪದಲ್ಲಿ ಬರ್ತೀನಿ. ಇಲ್ಲಿದ್ರೆ ರವಿ ವಿಲ್‌ಗೆಸ್"

"ಪ್ಲೀಸ್....ಖಂಡಿತ ಬನ್ನಿ....ಇಫ್ ಎನಿಥಿಂಗ್ ಗೋಸ್ ರಾಂಗ್, ಐ ವಿಲ್ ಕಾಂಟ್ಯಾಕ್ಟ್ ಯೂ....ನೀವು ಮಾಡಿದ್ದಕ್ಕೆಲ್ಲಾ ನಾನು ಚಿರಋಣಿ... ತುಂಬಾ ಥ್ಯಾಂಕ್ಸ್ ಡಾಕ್ಟರ್-ನನಗೆ ಹೇಗೆ ನಿಮ್ಮ ಉಪಕಾರ ತೀರಿಸಲಿ ಎಂದು ತಿಳ್ಯೋಲ್ಲ...."

"ಹಾಗೆ ಹೇಳ಼್ಬೇಡಿ. ನನ್ನ ಡ್ಯೂಟಿ ನಾನು ಮಾಡಿದ್ದೇನೆ. ಮೇ ಗಾಡ್ ಬ್ಲೆಸ್ ಯೂ ಆಲ್...." ನರ್ಸೊಬ್ಬಳು ಬಂದು ಡಾಕ್ಟರನ್ನು ಕರೆದಿದ್ದರಿಂದ ಡಾಕ್ಟರ್ ಅವಳ ಹಿಂದೆ ಹೊರಟರು.

ರಘು ರೂಮಿನೊಳಗೆ ಕಾಲಿಟ್ಟಾಗ ಶುಭ ಮಗುವನ್ನೆತ್ತಿಕೊಂಡು ಕಾಲಿಗೆ ಚಪ್ಪಲಿ ಹಾಕಿಕೊಂಡು ನಿಂತಿದ್ದಳು. ತಲೆಯ ಮೇಲೆ ಹೊದ್ದಿದ್ದ ಸೀರೆಯ ಸೆರಗೂ, ಅವಳ ಮೈ ಮುಚ್ಚುವಂತೆ ಸುತ್ತಿದ್ದ ಶಾಲೂ ಅವಳ ಕೈಲಿದ್ದ ಮಗುವೂ ಅವಳು ರಘುವಿನ ಕಣ್ಣಿಗೆ ಅಪರೂಪದ ಅಪೂರ್ವ ವಸ್ತುವಿನಂತೆ ಕಂಡಳು. ಬಿಳಿಚಿಕೊಂಡಿದ್ದ ಮುಖದಲ್ಲಿ ಕಣ್ಣುಗಳೇ ಜೋಗಸೆಯಂತಿತ್ತು. ಕೃಶವಾಗಿದ್ದರಿಂದ ಮುಖ ಎಳೆಯ ಹುಡುಗಿಯದಂತಿದ್ದರೂ, ಮುಖದಲ್ಲಿ ಏನೋ ಒಂದು ಬಗೆಯ ಗಾಂಭೀರ್ಯ ನೆಲೆಸಿತ್ತು. ರಘು ಅವಳನ್ನು ಒಂದರೆಕ್ಷಣ ನೋಡಿದಾಗ ಅವಳೂ ಅವನನ್ನೇ ನೋಡುತ್ತಿದ್ದಳು. ನಾಲ್ಕು ಕಣ್ಣುಗಳೂ ಒಂದಾದಾಗ ಶುಭನ ಕಣ್ಣು ರೆಪ್ಪೆಗಳು ಅವಳ ಕೆನ್ನೆಗಳ ಮೇಲೆ ಮಲಗಿತು. ರಘು ಸಾಮಾನುಗಳನ್ನೆಲ್ಲಾ ಜೋಡಿಸಿಡುತ್ತಿದ್ದ ನಂದಿನಿ, ಭಾಸ್ಕರರತ್ತ ತಿರುಗಿದನು.

"ಎಲ್ಲಾ ರೆಡಿ ತಾನೇ ? ನರ್ಸ್‌ಗೆಲ್ಲಾ 'ಟಿಪ್' ಮಾಡಿಯಾಯ್ತಾ ?" ಅವನ ಪ್ರಶ್ನೆಗೆ ಉತ್ತರ ಕೊಟ್ಟವನು ಭಾಸ್ಕರ.

"ಎಲ್ಲಾ ಆಯ್ತು. ಹೊರಡೋಣವೇ ?"

"ಬನ್ನಿ ಹೋಗೋಣ." ರಘು ಮುಂದೆ ಹೊರಟನು. ಶುಭನನ್ನು ಕೈ ಹಿಡಿದುಕೊಂಡು, ಅವಳ ಮಗುವನ್ನು ತಾನೆತ್ತಿಕೊಂಡು ಹೋಗುವ ಬಯಕೆ ರಘುವಿನಲ್ಲಿ ಭಯಂಕರವಾಗಿ ಮೂಡಿತು. ಅದನ್ನು ಅದುಮಿಟ್ಟುಕೊಳ್ಳುತ್ತಾ ತಲೆಯೆತ್ತದೇ ಕಾರಿನತ್ತ ನಡೆದನು. ಅವನನ್ನು ಭಾಸ್ಕರ ಮಗುವನ್ನೆತ್ತಿಕೊಂಡಿದ್ದ ಶುಭ, ಸಾಮಾನುಗಳನ್ನೆತ್ತಿಕೊಂಡಿದ್ದ ನಂದಿನಿ ಹಿಂಬಾಲಿಸಿದರು.

ಕಾರಿನ ಬಾಗಿಲು ತೆಗೆದು ಶುಭ, ನಂದಿನಿ ಒಳಗೆ ಕೂಡುತ್ತಲೂ ರಘು ಸಾಮಾನುಗಳನ್ನು ಡಿಕ್ಕಿಯಲ್ಲಿರಿಸಿದನು. ಅವನೂ ಭಾಸ್ಕರನೂ ಮುಂದಿನ ಸೀಟಿನಲ್ಲಿ ಕುಳಿತಾಗ ಮಗು ಅಳುವುದಕ್ಕೆ ಮೊದಲು ಮಾಡಿತು. ರಘು ಕಾರು 'ಸ್ಟಾರ್ಟ್' ಮಾಡಿದಾಗ ಭಾಸ್ಕರ ಹೇಳಿದ.

"ನಮ್ಮನ್ನು ಮನೆಯ ಹತ್ತಿರ ಬಿಟ್ಬಿಬಿಡು, ನಾನೂ ನಂದಿನಿ ಇಳಿದು ಬಿಡ್ತೀವಿ." ರಘು ಸರಕ್ಕನೇ ಭಾಸ್ಕರನತ್ತ ತಿರುಗಿದಾಗ ಅವನ ಕಣ್ಣುಗಳು ಕಿಡಿ ಕಾರುತ್ತಿದ್ದವು.

"ಸಾಧ್ಯವಿಲ್ಲ, ನೀವಿಬ್ಬರೂ ನಮ್ಮ ಮನೆಗೆ ಬಂದು ಮಗೂ ತಾಯಿನ್ನ ರವಿ ಗೊಪ್ಪಿಸಿ ಆಮೇಲೆ ಹೋಗಬಹುದು. ನಾನೇ ಕರೆದುಕೊಂಡು ಬಂದುಬಿಡ್ತೀನಿ."

ನಂದಿನಿ ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ಅವಳು ಅಳುತ್ತಿದ್ದ ಮಗುವನ್ನು ಸಮಾಧಾನಪಡಿಸುತ್ತಿದ್ದಳು. ಶುಭನ ಕಣ್ಣುಗಳು ತನ್ನ ಬೆನ್ನ ಮೇಲಿರುವುದು ರಘುವಿಗೆ ಅರಿವಾಗಿತ್ತು. ಅರ್ಧ ದಾರಿ ಹೋಗುವವರೆಗೂ ಯಾರೂ ಒಂದು ಮಾತೂ ಆಡಲಿಲ್ಲ. ತಡೆಲಾಯರದೆ ಶುಭ ಕೇಳಿದಳು.

"ಇದೇನು, ಯಾರೂ ಮಾತಾಡ್ತಾ ಇಲ್ಲ? ಯಾಕೆ? ಏನಾಯ್ತು? ಹೀಗೇನಾ ನನ್ನ ಮನೆಗೆ ಕರ್ಕೊಂಡ್ಹೋಗೋದು? ಅತ್ತಿಗೆ ನಿಂಗೇನಾಗಿದೆ? ಭಾಸ್ಕರ ನೀ ಜೊತೆ ಜಗ್ಳ ಆಡಿದ್ನಾ? ಅಥ್ವಾ ರಘು ನಿಮ್ಮಿಬ್ಬರ ಹತ್ತಿರ ಜಗಳ ಆಡಿದ್ರಾ? ಹೀಗೆ ಎಲ್ಲಾರೂ ಅಪರಿಚಿತರಂತೆ ಹೋಗ್ತಾ ಇದ್ದೀವಲ್ಲಾ!"

ಶುಭಳ ಕಂಠದಲ್ಲಿ ಕಂಬನಿಯಿತ್ತು. ರಘು ಕಾರನ್ನು ನಡೆಸುತ್ತಾ ಎದುರಿಗಿದ್ದ ದಾರಿಯನ್ನೇ ನೋಡುತ್ತಾ ಉತ್ತರಿಸಿದ. "ನಂದಿನಿಗೆ, ಭಾಸ್ಕರನಿಗೆ ನೀವು ಅವರ ಮನೆಗೆ ಬಾಣಂತನಕ್ಕೆ ಹೋಗೋಲ್ಲಂತ ಕೋಪ!"

ಶುಭಳ ಕಣ್ಣುಗಳಲ್ಲಿ ನೀರಿದ್ದರೂ ನಗುತ್ತಿರುವುದು ಕಾರಿನ ಕನ್ನಡಿಯಲ್ಲಿ ರಘುವಿಗೆ ಕಂಡಿತು.

"ಸರಿ....ಇದಕ್ಕೆಲ್ಲಾ ಕೋಪಾನಾ? ಅಲ್ಲಿ ರವಿ ನೈ ಚೆನ್ನಾಗಿಲ್ದೇ ಮಲಗಿ ಎದ್ದು ಸುಧಾರಿಸಿಕೊಳ್ತಾ ಇರ್ಬೇಕಾದ್ರೇ ನಾನು ನಿಮ್ಮನೇಲಿದ್ದು ಹಾಯಾಗಿರ್ಲೇ ಅತ್ತಿಗೆ? ಭಾಸ್ಕರನಿಗೇನಾದ್ರೂ ಆಗಿದ್ರೇ ನೀವು ನಿಮ್ತಾಯಿ ಮನೇಗೇ ಹೋಗ್ತಾ ಇದ್ರಾ? ನಾನ್ಯಾಕೆ ನಿಮ್ಮನೇಗೆ ಬರ್ಬೇಕೂ? ನೀವೇ ನನ್ನ ಬಾಣಂತನಕ್ಕಾಗಿ ನಮ್ಮನೇಲಿದ್ರೇ ತಪ್ಪೇನು?" ಕಣ್ಣೀರು ಕೆನ್ನೆಗಿಳಿಯಿತು.

ಭಾಸ್ಕರ ಹಿಂತಿರುಗಿ ಶುಭನ ಕೈ ತೆಗೆದುಕೊಂಡನು. "ನೋಡು, ನೀನು ಸುಮ್ನೇ ಏನೇನೋ ತಲೆಗೆ ಹಚ್ಕೋಬೇಡಾ....ನಾನು ಮನೆಯ ಹತ್ತಿರ ಇಳಿಸೂಂದಿದ್ದು ಸಂಜಯನಿಗೋಸ್ಕರ ಅಷ್ಟೆ...."

"ಸಾಕು, ಎಲ್ಲಕ್ಕೂ ಕಣ್ಣೀರು ಹಾಕಿ ದೊಡ್ಡ ಕತೆ ಮಾಡ್ಬೇಡಾ....

ಮಹಾತಾಯಿ. ಮಾವ, ರವಿ ಎಲ್ಲಾ ನನ್ನ ಬೈಯ್ತಾರೆ.... ನಿನ್ನ ಮಗಳೂ ನನ್ನ ಬೈಯ್ಕೋತಾಳೆ. ನೋಡು, ಅದಕ್ಕೇ ಅಳ್ತಾ ಇದ್ದಾಳೆ." ನಂದಿನಿ ಹೇಳಿದಾಗ ಎಲ್ಲರೂ ನಕ್ಕರು.

"ಅವ್ಳು ಅಳ್ತಾ ಇರೋದೂ ಯಾಕೆ ಗೊತ್ತಾ ? ಅವಳ ತಂದೆ ಬರ್ಲಿಲ್ಲಾಂತಾ. ನೋಡ್ತಾ ಇರು, ರವಿನ್ನ ನೋಡೋತ್ಲೂ ಸುಮ್ಮನಾಗುತ್ತಾಳೆ" ಭಾಸ್ಕರ ಹೇಳಿದ.

"ಅವಳಪ್ಪನೇ ಆಗ್ಲಿ, ಅಮ್ಮನೇ ಆಗ್ಲಿ. ಅವ್ಳು ಫಸ್ಟ್ ಪ್ರಿಫರೆನ್ಸ್ ನನಗೆ ಕೊಡ್ಬೇಕೂ....ಗೊತ್ತಾ ? ಐ ಹ್ಯಾವ್ ಅಡಾಪ್ಟೆಡ್ ಹರ್..." ರಘು ಹೇಳಿದ. ಮತ್ತೆ ನಗು. ಕವಿದು ಬಂದಿದ್ದ ಕಾರ್ಮೋಡ ಮಗುವಿನಿಂದ ಚದರಿಹೋಗಿತ್ತು.

ಕಾರು ಮನೆಯ ಮುಂದೆ ನಿಲ್ಲುತ್ತಲೂ ಓಡಿ ಬಂದವನು ಬಾಬು. ಓಡಿ ಬಂದು ಕಾರಿನ ಬಾಗಿಲು ತೆರೆದು ಇಳಿಯುತ್ತಿದ್ದ ನಂದಿನಿಗೆ ಇಳಿಯಲು ಸಹಾಯ ಮಾಡಿದನು. ಅವನ ಕಣ್ಣೆಲ್ಲಾ ಸೀಟಿನ ಮೇಲೆ ಕೈ ಕಾಲು ಬಡಿಯುತ್ತಿದ್ದ ಮಗುವಿನ ಮೇಲಿತ್ತು. ಕಾರಿನ ಬಾಗಿಲು ರಘು ಇಳಿದು ತೆಗೆಯುವುದರಲ್ಲಿ ತಾನೇ ತೆಗೆದು ಮನೆಯ ಮುಂಬಾಗಿಲತ್ತ ದೃಷ್ಟಿಯನ್ನು ಆತಂಕದಿಂದ ಹರಿಸಿದ್ದಳು. ಭಾಸ್ಕರ ಇಳಿದು ಶುಭನ ಬಳಿಗೆ ಧಾವಿಸಿ ಬಂದನು.

"ಮೆಲ್ಲಗೆ ಇಳಿ ಶುಭ ...ಮೆಟ್ಟಲು ಹತ್ತಬೇಕಾದ್ರೆ ಹುಷಾರು ..." ಅವಳ ಕೈಹಿಡಿದು ಮನೆಯ ಮುಂದಿದ್ದ ಮೆಟ್ಟಲುಗಳತ್ತ ಕರೆದೊಯ್ದನು. ನಂದಿನಿ ಮಗುವನ್ನೆತ್ತಿಕೊಂಡು ಅವರನ್ನು ಹಿಂಬಾಲಿಸಿದಳು.

ಎದುರಿಗೆ ಬಂದ ಶಿವರಾಮಯ್ಯ ಸೊಸೆಯನ್ನು ಕಂಡು ಮುಗುಳ್ನಕ್ಕರು.

"ಚೆನ್ನಾಗಿದ್ಯಾ ತಾಯಿ ? ದೇವರು ಒಳ್ಳೇದು ಮಾಡ್ಲಿ....ಮಗಳೆಲ್ಲಿ ?" ಶುಭನ ಕಣ್ಣು ರವಿಯನ್ನು ಹುಡುಕುತ್ತಿತ್ತು.

"ಇವರೆಲ್ಲಿ ? ರವಿಯೆಲ್ಲಿ ?"

"ಬಾಮ್ಮಾ, ಒಳಗೆ ಇದ್ದಾನೆ...." ಶಿವರಾಮಯ್ಯನವರು ಹೇಳಿದರು. ಒಳಗಿನಿಂದ ರಾಜಮ್ಮ ಕೈಯ್ಯಲ್ಲಿ ಕೆಂಪಾರತಿ ಹಿಡಿದು ಬಂದು, ಶುಭನಿಗೂ ಮಗುವಿಗೂ ಆರತಿ ಮಾಡಿ ಮನೆಯ ಮುಂದೆ ಚೆಲ್ಲಿದರು. ಸಣ್ಣಯ್ಯ ತೆಂಗಿನ ಕಾಯೊಂದನ್ನು ತಂದು ನಿವಾಳಿಸಿ ಒಡೆದನು. ಶುಭನಿಗೆ ಅವುಗಳು

ಯಾವುವೂ ಬೇಕಾಗಿರಲಿಲ್ಲ. ಅವಳು ಹೊಸಿಲು ದಾಟಿ ಕಾಲೊಳಗಿಟ್ಟಳು. ನಂದಿನಿ, ಭಾಸ್ಕರ, ಶಿವರಾಮಯ್ಯನವರ ಜೊತೆ ಮಾತಾಡುತ್ತಿದ್ದರಿಂದ ಅವರ ದನ್ನು ಗಮನಿಸಲಿಲ್ಲ. ಶುಭ ಒಬ್ಬಳೇ ಒಳಗೆ ಹೋದುದು ಕಂಡ ರಘು ಕೈಲಿದ್ದ ಸಾಮಾನುಗಳನ್ನು ಅಲ್ಲೇ ಇಟ್ಟು ಅವಳ ಹಿಂದೆ ಓಡಿದನು. ಡ್ರಾಯಿಂಗ್ ರೂಮಿನಲ್ಲಿ ಕುರ್ಚಿಯ ಮೇಲೆ ಕುಳಿತಿದ್ದ ರವಿ ಶುಭ ಬಂದುದು ನೋಡಿ ಎದ್ದು ನಿಂತು ಅವಳತ್ತ ಕೈ ಚಾಚಿದನು. ಶುಭ ಸಜಲನೇತ್ರಳಾಗಿ ಅವನನ್ನು ನೋಡಿದಳು.

"ರವಿ....ಇದ್ಯಾಕೆ ಹೀಗೆ ಆಗೋಗಿದ್ದೀರಿ ?" ಅವನ ತೆರೆದ ಬಾಹುಗಳತ್ತ ಧಾವಿಸಿದಳು. ಅವಳೂ ಅವನೂ ತಮ್ಮ ಪರಿಸರವನ್ನು ಮರೆತಿದ್ದಂತೆ ಕಾಣಿಸಿತು.

"ಶುಭಾ, ನನ್ನ ಶುಭಾ ಎಷ್ಟು ದಿನಗಳಾಗಿಹೋಗಿತ್ತು ನಿನ್ನ ನೋಡಿ ! ನನ್ನ ಬಿಟ್ಟು ನೀನು ಹೇಗೆ ಇದ್ದೀ ?" ರವಿ ಅಪ್ಪಿದ್ದ ಶುಭಳ ಕಿವಿಯತ್ತ ಉಸುರಿದ.

"ರವಿ, ನಿಮ್ಗೆ ಇಷ್ಟು ಮೈ ಚೆನ್ನಾಗಿಲ್ಲಾಂತ ಯಾರೂ ನಂಗೆ ಹೇಳ್ಲಿಲ್ಲ... ನೀವು ಹೀಗಿರ್ಬೇಕಾದ್ರೆ ನಾನು ಅಲ್ಲಿ ಹಾಯಾಗಿ ಮಲಗಿದ್ದೆ...ನಿಮ್ಮನ್ನ ನೋಡ್ದೇ ನಾನು ಹುಚ್ಚಿ ಆಗ್ಹೋಗಿದ್ದೆ..." ಶುಭ ರವಿಯ ಮುಖವನ್ನು ತನ್ನ ಕೈಗಳಲ್ಲಿ ತೆಗೆದುಕೊಳ್ಳುತ್ತಾ ಹೇಳಿದಳು.

ರಘು ಅವಾಕ್ಕಾಗಿ ನೋಡಿದನು. ರವಿ ಶುಭ ಇವರ ಪ್ರೀತಿ ಅಗಾಧ ವಾದುದು. ಅಗಲಿಕೆಯಿಂದ ಇಬ್ಬರೂ ಎಷ್ಟು ಬೆಂದಿದ್ದರು. ಒಬ್ಬರ ಬಾಹುವಿ ನಲ್ಲಿ ಒಬ್ಬರು ಬಾಹ್ಯ ಪ್ರಪಂಚ ಮರೆತಿದ್ದುದು ಕಂಡು, ನಾನು ಅಲ್ಲಿ ಒಬ್ಬ ಆಗಂತುಕನೆಂದು ತಿಳಿದ ರಘು ಅವರಿಗೆ ಬೆನ್ನುಮಾಡಿ ನಿಂತನು. ಬರಿಯದಾದ ಆರತಿಯ ತಟ್ಟೆಯನ್ನು ಹಿಡಿದು ಒಳಗೆ ಬರಲು ಬಂದ ರಾಜಮ್ಮನನ್ನು ಬಾಗಿಲಲ್ಲೇ ತಡೆದನು. "ಹಿತ್ತಲ ಬಾಗಿಲಿಂದ ಹೋಗಿ...." ಹಲ್ಲು ಕಚ್ಚಿ ಹೇಳಿದನು.

ಭಾಸ್ಕರ, ನಂದಿನಿ, ಸಣ್ಣಯ್ಯ, ಶಿವರಾಮಯ್ಯ, ಬಾಬು ಎಲ್ಲರೂ ಮಗುವಿನ ಸುತ್ತ ಸೇರಿದ್ದರು.

"ನೋಡಮ್ಮಾ, ನಿಂದೇ ಈ ಮನೆ. ಚೆನ್ನಾಗಿ ನೋಡೂ....ಈ ಮನೆ

ರಾಜಕುಮಾರಿ ನೀನು...." ಶಿವರಾಮಯ್ಯ ಮೊಮ್ಮಗಳ ಕೈ ಮುತ್ತಿಟ್ಟು ಹೇಳುತ್ತಿದ್ದರು.

"ಗಂಟಲೂ ಜೋರಾಗಿದೆ, ಹೇಗೆ ಸೂರು ಹಾರಿಹೋಗೋ ಹಾಗೆ ಅಳ್ತಾಳೆ ಗೊತ್ತಾ ಮಾವ ? ಈ ಮನೇನ ಆಳ್ಬೇಕಾದ್ರೆ ಗಂಟಲು ಜೋರಾಗಿರ್ಬೇಕಲ್ವಾ ?" ನಂದಿನಿ ಹೇಳುತ್ತಿದ್ದಳು. ಭಾಸ್ಕರ ಮೂಕ ಪ್ರೇಕ್ಷಕನಾಗಿದ್ದನು.

ಅವರುಗಳು ಮೆಟ್ಟಲೇರಿ ಬರುತ್ತಿದ್ದುದು ಕಂಡು ರಘು ಬೇಕೆಂತಲೇ ಜೋರಾಗಿ ಕೆಮ್ಮಿದನು.

"ರವಿ, ಎಲ್ರೂ ಬರ್ತಾ ಇದ್ದಾರೆ " ರವಿ, ಶುಭ ಬೇರೆಯಾದಾಗ ರಘು ಸಮಾಧಾನವಾಗಿ ಉಸಿರೆಳೆದನು.

"ನೀವಿಬ್ರೂ ಪೇಶೆಂಟ್ಸ್, ಇಷ್ಟೊಂಡು ಎಕ್ಸೈಟ್ ಆದ್ರೆ ಒಳ್ಳೆದಲ್ಲ." ರಘು ಒಳಗೆ ಬರುತ್ತಾ ಹೇಳಿದನು. ರವಿಯ ಮುಖದ ಮೇಲಿದ್ದ ಬೆವರು ಹನಿ ಅವನಿಗೇಕೋ ಇಷ್ಟವಾಗಲಿಲ್ಲ ! ಶುಭ ಕೂಡ ಸಣ್ಣಗೆ ನಡುಗುತ್ತಿದ್ದಳು.

"ಕೂತ್ಕೋ ರವಿ....ನೀನು ಆಯಾಸ ಮಾಡ್ಕೋಬೇಡಾ ಶುಭ. ನೀವು ಕೂತ್ಕೊಳ್ಳಿ....ನಿಂತೇ ಇದ್ದೀರಲ್ಲ....ನೀವಿನ್ನೂ ವೀಕಾಗಿದ್ದೀರಾ !" ರಘು ಹೇಳಿದಾಗ ಶುಭನ ಕಣ್ಣುಗಳು ಕಿಡಿ ಕಾರಿದವು. ತಮ್ಮಿಬ್ಬರ ಏಕಾಂತಕ್ಕೆ ಅಡ್ಡಿ ಬಂದವನೆಂದು ರಘುವಿನ ಮೇಲೆ ಅವಳ ದೃಷ್ಟಿ ಕ್ರೂರವಾಗಿತ್ತು. ರಘು ಬೇಕೆಂತಲೇ ಅವಳತ್ತ ನೋಡಲಿಲ್ಲ. ಬೆವತಿದ್ದ ರವಿಯತ್ತ ಹೆಜ್ಜೆ ಹಾಕಿದನು.

"ಬಾ ರವಿ, ಹಾಸಿಗೆ ಮೇಲೆ ಮಲ್ಗಿರು. ಶುಭ, ಸುಗೂ ನೀರು ಹಾಕಿ ಕೊಂಡು ಬರೋವರ್ಗೂ ರೆಸ್ಟ್ ತೊಗೋ. ಆಯ್ತಲ್ಲಪ್ಪಾ, ನಿನ್ನ ಶುಭ ನಿಂಗೊಪ್ಪಿಸಿದ್ದೀನಲ್ಲಾ !" ಹಿಂದಿನ ದಿನ ರಾತ್ರಿಯೆಲ್ಲ ಶುಭನಿಗಾಗಿ ಕಾತರಿಸಿ ಕಣ್ಮುಚ್ಚದಿದ್ದಕ್ಕಾಗಿಯೋ, ಅಥವಾ ಹಿಂದಿನ ದಿನ ಬೆಳಗಿನಿಂದ ಸಣ್ಣಗೆ ಪುನಃ ಪ್ರಾರಂಭವಾದ ಹೊಟ್ಟೆನೋವಿನಿಂದಲೋ ರವಿಗೆ ಆಯಾಸವೇನೋ ವಿಪರೀತವಾಗಿತ್ತು. ಒಂದು ಗಳಿಗೆ ಶುಭನನ್ನು ತಾನು ಅಪ್ಪಿ ಹಿಡಿಯದಿದ್ದರೆ ಖಂಡಿತಾ ನೆಲಕ್ಕುರುಳುತ್ತಿದ್ದುದು ನಿಜ. ಅಷ್ಟು ಬಲವಾಗಿ ಅವಳನ್ನು ಹಿಡಿ ಹಿಡಿದು ಅವಳಿಗೆಷ್ಟು ನೊಂದಿತೋ....ರವಿ ಮರುಮಾತಾಡದೇ ರಘುವಿನ ಭುಜ ಹಿಡಿದು ನಿಧಾನಗೆ ನಡೆದು ತನ್ನ ರೂಮಿಗೆ ಬಂದು ಮಂಚದ ಮೇಲೊರಗಿದನು.

ಅವನ ತಲೆಯ ದಿಂಬು ಸರಿ ಮಾಡಲು ತನ್ನತ್ತ ಬಗ್ಗಿದ್ದ ರಘುವಿಗೆ ಮೆಲ್ಲನುಸು ರಿದನು. "ರಘು, ನನಗೇಕೋ ಬಹಳ ಸುಸ್ತು, ಮಲಗುತ್ತೇನೆ. ಹೊಟ್ಟೆ ಕೂಡ ನೋವು....ನೋವು ಗೊತ್ತಾಗ್ದೇ ಇರೋ ಹಾಗೆ ಡಾಕ್ಟರ್ ಕೊಟ್ಟಿದ್ದಾರಲ್ಲ. ಯಾವ್ದಾದ್ರೂ 'ಬಾರ್ಬಿಚೂರ್' ಟಾಬ್ಲೆಟ್ ಕೊಡೂ....ನಾನು ನರಳುವುದು ಶುಭ ನೋಡಕೂಡದು...."

ರಘು ದಿಂಬಿಗೊರಗಿದ್ದ ರವಿಯನ್ನು ಕಣ್ತುಂಬಾ ನೋಡಿದ. ಶುಭನ ಸ್ವಾಗತಕ್ಕಾಗಿ ನಯವಾಗಿ ಕ್ಷೌರಮಾಡಿದ ಮುಖದಲ್ಲಿ ರಕ್ತಹೀನತೆ ಎದ್ದು ಕಾಣುತ್ತಿತ್ತು. ಕಣ್ಣುಗಳು ಹೊಳೆಯುತ್ತಿದ್ದರೂ ಭಾರವಾಗಿದ್ದವು. ತುಟಿಯಂಚಿನಲ್ಲಿ, ಹಣೆಯ ಗೆರೆಗಳಲ್ಲಿ ನೋವೆದ್ದು ಕಾಣುತಿತ್ತು. ಪ್ಯಾಂಟಿನ ಜೇಬಿನಿಂದ ಕರವಸ್ತ್ರ ತೆಗೆದು ರಘು, ರವಿಯ ಹಣೆಯ ಮೇಲಿದ್ದ ಬೆವರನ್ನೊರೆಸಿದನು.

"ಆಗ಼್ಿ ರವಿ, ಕೊಡ್ತೀನಿ."

ಔಷಧಗಳಿದ್ದ ಕಪಾಟನ್ನು ತೆಗೆದು ಡಾಕ್ಟರು ನೋವು ಮರೆಯುವುದಕ್ಕಾಗಿ ಕೊಟ್ಟಿದ್ದ ಗುಳಿಗೆಯನ್ನು ತೆಗೆದನು. ಮೇಜಿನ ಮೇಲಿದ್ದ ಗಾಜಿನ ಹೂಜಿಯಲ್ಲಿದ್ದ ನೀರನ್ನು ಹತ್ತಿರದಲ್ಲಿದ್ದ ಗಾಜಿನ ಲೋಟಕ್ಕೆ ಬಗ್ಗಿಸಿ ರವಿಯತ್ತ ಬಂದನು. ರವಿಯು ಬಾಯಿಗೆ ಗುಳಿಗೆ ಹಾಕಿ ನೀರು ಕುಡಿಸಿದ ನಂತರ ಅವನ ಕಾಲ ಮೇಲೆ ಹೊದಿಕೆ ಹೊದಿಸಿ ಅವನ ತಲೆ ತಡವಿದನು.

"ಮಲಗು ರವಿ. ನಿಂಗೆಷ್ಟು ಹೊತ್ತು ಬೇಕೋ ಅಷ್ಟು ಮಲಗು. ಎಲ್ಲಾ ನಾನು ನೋಡ್ಕೋತೀನಿ."

ಅವನು ಕಣ್ಣು ಮುಚ್ಚುತ್ತಲೇ ಬಾಗಿಲು ಮುಂದು ಮಾಡಿ ಹೊರಗೆ ಬಂದಾಗ ಸೋಫಾದ ಮೇಲೆ ಮಲಗಿದ್ದ ಮಗುವಿನ ಸುತ್ತ ಎಲ್ಲರೂ ತುಂಬಿದ್ದರು. ಶುಭ ಒಬ್ಬಳೇ ಕುರ್ಚಿಯ ಮೇಲೆ ಗಲ್ಲಕ್ಕೆ ಕೈ ಕೊಟ್ಟು ಕುಳಿತಿದ್ದಳು. ಅವಳ ದೃಷ್ಟಿ ದಿಗಂತದತ್ತಿತ್ತು.

ರಘು ಬಂದುದು ನೋಡಿದ ಕೂಡಲೇ ಎದ್ದು ನಿಂತಳು.

"ಯಾಕೆ, ಅವರನ್ನ ಹಾಗೆ ಕರೆದುಕೊಂಡು ಹೊರಟುಹೋದಿರಿ? ಅವರಿಗೇನಾಗಿದೆ ?"

ಅವಳ ಕಣ್ಣುಗಳಲ್ಲಿ ಆತಂಕದ ಗೊಂದಲವಿತ್ತು.

"ಡಾಕ್ಟರ್ ಹೇಳಿದ್ದಾರೆ....ಅವನಿಗೆ ಯಾವ ವಿಧವಾದ ಆಯಾಸಾನೂ ಮಾಡ್ಬಾರ್ದೂಂತ."

ರಘು ಮೊಟಕಾಗಿ ಉತ್ತರಿಸಿ ಮಗುವಿನತ್ತ ನಡೆದನು.

ಶುಭ ಅವನ ಹಿಂದೆಯೇ ಬಂದಳು.

"ರವಿ ಏನ್ಮಾಡ್ತಾ ಇದ್ದಾರೆ ? ಬಾಗಿಲು ಯಾಕೆ ಹಾಕಿದ್ದೀರಿ ?"

"ಅವನು ನಿದ್ದೆ ಮಾಡ್ತಾ ಇದ್ದಾನೆ. ಗಲಾಟೆ ಆಗ್ದೇ ಇರಲೀಂತ ಬಾಗಿಲು ಹಾಕಿದ್ದೀನಿ ಅಷ್ಟೆ...." ರಘು ಮೆಲ್ಲನೆ ಅವಳತ್ತ ತಿರುಗಿದನು. ಅವಳ ಮನದಳಲು ಅವನಿಗರಿವಾಗಿತ್ತು. ತುಂಬಿದ್ದ ಅವಳ ಕಣ್ಣುಗಳತ್ತ ನೋಡಿ ತಲೆ ತಗ್ಗಿಸಿದನು.

"ಸುಮ್ನೇ ಇಲ್ಲದ ವರಿ ಯಾಕೆ ಮಾಡ್ಕೋತೀರಿ ? ಮಲಗಿ, ಎದ್ಮೇಲೆ ಸರಿ ಹೋಗ್ತಾನೆ. ಅಷ್ಟ್ರಲ್ಲಿ ನೀವೂ ಮಗೂ ರೆಡಿ ಆಗಿ...."

"ಆವ್ರು ಮಗಳನ್ನ ನೋಡಲೇ ಇಲ್ವಲ್ಲ" ಶುಭಳ ಕೆನ್ನೆಯ ಮೇಲೆ ಹನಿಗಳುದುರಿದವು, "ಅದೂ ಇದರ ಹಣೇಲಿ ಬರ್ದಿಲ್ಲ."

"ಛೇ, ಏನ್ಮಾತಾಡ್ತೀರಿ ಶುಭ. ಮಗಳೊಂದ್ರೆ ಪ್ರಾಣ ಬಿಡ್ತಾನೆ... ನೀವೇ ಹೇಳಿದ್ರಿ ರವಿದು ಹುಚ್ಚು ಮುದ್ದೂಂತ. ಇನ್‌ಫೆಕ್ಷನ್ ಆಗ್ಬಾರ್ದೂಂತ ಪಾಪ, ಗಟ್ಟಿ ಮನಸ್ಸು ಮಾಡಿ ಮಲಗಿದ್ದಾನೆ...."

"ಹೋಯ್ತಲ್ಲಪ್ಪಾ ಸೋಫಾ !"

ನಂದಿನಿಯೆಂದಾಗ ಎಲ್ಲರೂ ನಕ್ಕು ದೂರ ಸರಿದಾಗ ರಘು ಸಮಯ ಸಾಧಿಸಿ ಶುಭನಿಂದ ದೂರ ಸರಿದನು.

"ಅವಳ್ದೇ ಆಸ್ತಿ. ಏನಾದ್ರೂ ಮಾಡ್ಕೊಳ್ಳಿ ಬಿಡು, ಸೋಫಾ ಪಾವನ ವಾಯ್ತು" ಶಿವರಾಮಯ್ಯನವರ ಮುಖದಲ್ಲಿನ ಸುಕ್ಕುಗಳ ನಡುವೆ ನಗೆಯೊಂದು ಮೂಡಿ ಬಂತು.

"ಬಾಬೂ, ನೀನು ಇಲ್ಲೇ ನಿಂತ್ರೆ ಹೇಗೆ ? ಹೋಗು ಚಿಕ್ಕಮ್ಮಾವ್ರಿಗೆ, ಇವರ್ಗೆಲ್ಲಾ ಕಾಫಿ ತಿಂಡಿ ತಂದ್ಕೊಡು....ನಂದಿನಿ....ಅದೇನು ಮಾಡ್ಬೇಕೋ ರಾಜಮ್ಮಂಗೆ ಹೇಳು ನೀನೆ." ರಘು ಸಮಯ ಸಾಧಿಸಿ ಎಲ್ಲರನ್ನೂ ಎಚ್ಚರಿಸಿದನು.

"ನನ್ನ ಮರೆವಿಗಿಷ್ಟು ! ಬಾಣಂತೀನ ಗಾಳೀಲಿ ನಿಲ್ಸಿದ್ದೀನಲ್ಲ..." ನಂದಿನಿ

ಎಚ್ಚರಿತ್ತಳು. "ಶುಭ, ಪ್ಲೈ ತುಂಬಾ ಶಾಲು ಹೊದ್ದುಕೋ....ನಿನ್ನ ಮಗಳನ್ನ ಕರ್ಕೊ. ನಾನು ಒಳಗೋಗಿ ಎಲ್ಲಾ ಸಿದ್ಧ ಮಾಡ್ತೀನಿ...."

ಬಾಬು ಆಗಲೇ ಒಳಗೋಡಿದ್ದನು.

ನಂದಿನಿ ಮಗುವನ್ನು ಶುಭನತ್ತ ನೀಡಿದಾಗ ಎತ್ತಲೋ ನೋಡುತ್ತಿದ್ದ ಅವಳು ಮಗುವಿನತ್ತ ಗಮನ ಹರಿಸದಿದ್ದಾಗ ರಘು ಮಗುವಿನತ್ತ ಕೈಯೊಡ್ಡಿದ್ದನು.

"ಬೇಡ್ಕೋ, ನಿಂಗೆ ಬರೋಲ್ಲ. ಬೀಳಿಸಿಗೀಳಿಸಿಬಿಟ್ಟೀಯಾ!" ನಂದಿನಿ ಅವನ ಕೈಗೆ ಕೊಡಲು ಅನುಮಾನಿಸಿದಾಗ ರಘು ಅವಳ ಕೈಯ್ಯಿಂದ ನಯವಾಗಿ ಮಗುವನ್ನೆತ್ತಿಕೊಂಡು ಸೋಫಾದ ಮೇಲೆ ಕುಳಿತನು.

"ನಾನೇ ನೋಡ್ಕೊಳೋದೂ ಗೊತ್ತಾ....? ಈಗ್ನಿಂದ ಅಭ್ಯಾಸ ಮಾಡ್ಕೊಂಡ್ರೇ ವಾಸಿ. ಪಾಪ, ನನ್ನ ಚಿನ್ನ ಮರಿ, ಇದು" ಎಂದು ಮಗುವಿನ ಕೆನ್ನೆ ತಡವಿದನು.

ಬಾಬು ಎಲ್ಲರಿಗೂ ಉಪ್ಪಿಟ್ಟು, ಸಜ್ಜಿಗೆ, ಕಾಫಿ ಹಿಡಿದು ಬಂದಾಗ ಶುಭ ಮುಖ ತಿರುಗಿಸಿದಳು.

"ನಂಗೇನೂ ಬೇಡಾ ಬಾಬೂ, ಬರೀ ಕಾಫಿ ಸಾಕು "

"ಅದ್ಯಾಕೆ ಬೇಡ ! ತಿಂದು ಕಾಫಿ ಕುಡಿ, ಪ್ಲೈ ಒಣಗಿಹೋಗುತ್ತೆ. ನೀನು ಹೊಟ್ಟೆ ತುಂಬಾ ತಿನ್ನದೇ ಇದ್ರೆ ಮಗಳ ಗತಿ ಏನು !" ನಂದಿನಿ ಕೊಂಚ ಗದರಿದಳು.

"ನಿಮಗಾಗಿ ರವಿ ಹೇಳಿ ಮಾಡಿಸಿದ್ದಾನೆ. ತಿನ್ನಬಾರದೇ ?" ರಘು ಅವಳತ್ತ ನೋಡದೇ ಹೇಳಿದನು. ಅವಳ ಒಂದೊಂದು ನಿಟ್ಟುಸಿರೂ, ಅವಳ ಒಂದೊಂದು ನೋವೂ, ಅವಳ ಮನಸ್ಸಿನಲ್ಲಾಗುತ್ತಿದ್ದ ಅವಳ ಒಂದೊಂದು ಮೂಕ ಬವಣೆಯೂ ರಘುವಿನ ಪ್ಲೈಯಲ್ಲಿ ದಳ್ಳುರಿಯೆಬ್ಬಿಸುತಿತ್ತು. ಅವಳಲ್ಲಾಗುತ್ತಿದ್ದ ಸಂಕಟವನ್ನು ತಡೆಯಲು ಅವನೇನು ಮಾಡಲೂ ಸಿದ್ಧ. ಆದರೆ ಅವನು ಮಾಡುವುದಾದರೂ ಏನು ?

ಶುಭ ಅನುಮಾನಿಸುತ್ತಾ ಕೈಗೆ ತಿಂಡಿ ತೆಗೆದುಕೊಂಡಾಗ ತನ್ನ ಹಂಚಿಕೆ ಫಲಿಸಿತೆಂದು ರಘುವಿಗೆ ಮನಸ್ಸು ಹಗುರವಾಯಿತು.

ಎಲ್ಲರೂ ತಿಂಡಿ ತಿಂದು ಕಾಫಿ ಕುಡಿದು ಮುಗಿಸುವುದರಲ್ಲಿ ರಾಜಮ್ಮ ನಂದಿನಿಯ ಬಳಿಗೆ ಬಂದರು.

"ನಂದಮ್ಮಾ, ನೀವು ಸ್ನಾನ ಮಾಡಿ ಮೈಲಿಗೆ ಕಳೆದುಕೊಂಡುಬಿಡಿ, ಮೊದಲು. ಆಮೇಲೆ ಬಾಣಂತಿ ಮಗೂಗೆ ನೀರು ಹಾಕೋಣ."

"ಹಾಗೆ ಬೇಡ ರಾಜಮ್ಮ, ಮೊದಲು ಬಾಣಂತಿಗೆ ನೀರು ಹಾಕಿ ತಲೆ ಕಾಯಿಸಿಬಿಡಿ, ಅವಳಿಗೆ ಅಷ್ಟೊತ್ತು ಕುಳಿತುಕೊಳ್ಳಲಾಗುವುದಿಲ್ಲ. ಆಮೇಲೆ ಮಗೂ, ನಾನೂ....!" ನಂದಿನಿ ಶುಭನ ಕೈಯಿಂದ ತಿಂದ ತಿಂಡಿ ತಟ್ಟೆಯನ್ನು ಕೆಳಗಿಟ್ಟು ಶುಭನನ್ನು ಕೈ ಹಿಡಿದೆಬ್ಬಿಸಿದಳು.

"ಬಾಮ್ಮ....ಬಿಸಿಲೇರಿದರೆ ಆಯಾಸವಾಗುತ್ತೆ "

ಶುಭ ಎದ್ದು ನಿಂತರೂ ಕಣ್ಣು ರವಿ ಮಲಗಿದ್ದ ರೂಮಿನತ್ತ ಹಾಯಿಸಿದಾಗ ರಘು ನಸುನಕ್ಕನು.

"ನಾನಿದ್ದೇನೆ. ನೀವು ಸ್ನಾನಮಾಡಿ ಬನ್ನಿ."

ಶುಭ ಮನಸ್ಸಿಲ್ಲದ ಮನಸ್ಸಿನಿಂದ ಸ್ನಾನದ ಮನೆಯತ್ತ ಮೆಲ್ಲನೆ ಹೆಜ್ಜೆಯಿಟ್ಟಳು.

ಅವಳತ್ತ ಹೋಗುತ್ತಲೂ ರಘು, ಶಿವರಾಮಯ್ಯನವರೊಂದಿಗೆ ಹರಟುತ್ತಿದ್ದ ಭಾಸ್ಕರನತ್ತ ನೋಡಿದ.

"ನೀವು ಬೇಕಾದ್ರೆ ಮನೆಗೆ ಹೋಗಿ, ಸಂಜಯನನ್ನು ಕರೆದುಕೊಂಡು ಬನ್ನಿ....ಸಣ್ಣಯ್ಯ ಕಾರಿನಲ್ಲಿ ಕರೆದುಕೊಂಡು ಹೋಗ್ತಾನೆ....ಇವೊತ್ತು ಸಾಯಂಕಾಲ ಮಗೂಗೆ ತೊಟ್ಟಿಲು ಹಾಕಿಸಿ, ಹೆಸರಿಟ್ಟುಬಿಟ್ಟರೆ ಆಯಿತು."

ಭಾಸ್ಕರ ರಘುವಿನತ್ತ ದೀರ್ಘವಾಗಿ ನೋಡಿದನು. "ಅಯ್ಯೋ ಅದಕ್ಕೇನು ಅವಸರ ರಘು ? ಶುಭ ಸುಧಾರಿಸಿಕೊಂಡ ಮೇಲಾಗಲಿ."

"ಶುಭಸ್ಯ ಶೀಘ್ರಂ. ಮಾಡಬೇಕಾದ್ದೆಲ್ಲ ಬೇಗ ಮಾಡಿದರೆ ವಾಸಿ" ರಘುವಿನ ಮುಖದಲ್ಲಿದ್ದ ಅರ್ಥಗರ್ಭಿತ ಸತ್ಯದ ಮನವರಿಕೆಯಾಯ್ತು ಭಾಸ್ಕರನಿಗೆ.

"ಅಲ್ವೇನಪ್ಪಾ-ಇವೊತ್ತೇ ಎಲ್ಲಾ ಶಾಸ್ತ್ರ ಮಾಡಿದ್ರೆ ಚೆನ್ನ. ರವಿಗೂ ಸಂತೋಷ. ತನ್ನ ಕಾಯಿಲೆಯಿಂದ ಎಲ್ಲಾ ನಿಂತೋಯ್ತು ಅನ್ಕೊಳ್ಳೋಲ್ಲ"

ಶಿವರಾಮಯ್ಯನವರು-ಹಣ್ಣಾದ ತಲೆಯನ್ನು ಹೌದೆನ್ನುವಂತೆ ತಲೆಯಲ್ಲಾಡಿಸಿದರು.

"ರೈಟ್. ಹಾಗಾದ್ರೇ ನಂದಿನಿಗೆ ಹೇಳಿ, ನಾನು ಸಂಜಯನನ್ನು ಕರ್‍ಕೊಂಡು ಬಂದ್ಬಿಡ್ತೀನಿ" ಭಾಸ್ಕರ ಎದ್ದು ನಿಂತನು.

"ಬಾಪ್ಪಾ, ಮೊಮ್ಮಗಳ ಹತ್ತಿರ ಕೂತ್ಕೋ. ನಾನು ಸಣ್ಣಯ್ಯನ ಕರೆದು ಹೇಳ್ತೀನಿ" ರಘು ಮೆಲ್ಲನೆದ್ದು ಕಣ್ಸನ್ನೆಯಿಂದ ಭಾಸ್ಕರನನ್ನು ಕರೆದುಕೊಂಡು ಹೊರಗೆ ಹೋದನು.

ಭಾಸ್ಕರ ನಂದಿನಿಗೆ ಹೇಳಿ ಬಂದಾಗ ರಘು ಅಲ್ಲೇ ಹೊರಬಾಗಿಲಲ್ಲೇ ನಿಂತಿದ್ದನು. ರಘುವನ್ನು ನೋಡುತ್ತಲೇ ಭಾಸ್ಕರ ಅವನ ಬೆನ್ನ ಮೇಲೆ ಕೈ ಹಾಕಿದನು.

"ನೀನು ಹೇಳಿದ್ದು ಸರಿ ರಘು, ರವಿ ಈಸ್ ಸಿಂಕಿಂಗ್....ಇವೊತ್ತು ಶಾಸ್ತ್ರ ಮುಗಿಸಿದರೆ ಅವನಿಗೂ ಗೆಲುವಾಗುತ್ತೆ, ಅವನ ಮನಸ್ಸಿಗೂ ಸಮಾಧಾನ."

ರಘು ಅವನಿಗುತ್ತರಿಸಲಿಲ್ಲ. ಮಂಜಾದ ಕಣ್ಣುಗಳಿಂದ ಅವನತ್ತ ನೋಡಿದನಷ್ಟೇ. ಎಷ್ಟು ಹೊತ್ತು ಅಲ್ಲೇ ನಿಂತಿದ್ದನೋ ಅವನಿಗೇ ತಿಳಿಯದು.

ಶುಭ ನೀರು ಹಾಕಿಕೊಂಡು ಬಂದನಂತರ ಸಾಂಬ್ರಾಣಿ ಹಾಕಿ ತಲೆ ಒಣಗಿಸಿ ಮಂಚದ ಮೇಲೆ ಅವಳನ್ನು ಬಲವಂತದಿಂದ ಮಲಗಿಸಿ ಮಗುವಿಗೆ ನೀರು ಹಾಕಲು ಮಗುವನ್ನು ಕರೆದೊಯ್ದಾಗ ರಘು ಒಳಗೆ ಬಂದನು.

ಶುಭ ಮಲಗಿದ್ದಲ್ಲಿಂದಲೇ ರಘುವನ್ನು ಕೂಗಿದಳು. "ರಘೂ ...ರವಿ ಎದ್ದರಾ ?" ರಘು ತಕ್ಷಣ ಉತ್ತರವೀಯಲಿಲ್ಲ-ಅವಳ ರೂಮಿನ ಬಾಗಿಲತ್ತ ಹಾಕಿದನು.

"ಇಲ್ಲ, ಇನ್ನೂ ಎದ್ದಿಲ್ಲ"

"ನಾನು ಅವರ ಹತ್ತಿರಾನೇ ಇರ್‍ತೀನಿ ರಘು ...ಅವರು ಎಂದೂ ಹೀಗೆ ಮಲಗೋಲ್ಲ..." ಶುಭ ಎದ್ದು ಕುಳಿತಳು.

"ನೀವು ಇಷ್ಟು 'ಫಸ್ಸೀ' ಅಂತ ನಂಗೆ ಗೊತ್ತಿರ್‍ಲಿಲ್ಲ. ರವಿ ಮಲಗೋಲ್ಲಾಂ ತಾನೇ ಅವನಿಗೆ ಸ್ಲೀಪಿಂಗ್ ಡ್ರಗ್ ಕೊಟ್ಟಿರೋದು. ಅವನು ಹಾಯಾಗಿ ಮಲಗಿದ್ರೂ ನಿಮ್ಗೆ ಕಷ್ಟನಾ ? ಅಂಪ್ರೆ-ಮಪ್ಪೆ ಆದಾಗಿಂದ ನೀವು ಅವನ್ನ ಹಾಯಾಗಿ ಮಲ್ಗೋಕೆ ಬಿಟ್ಟೇ ಇಲ್ಲ ಅಂತ ಕಾಣ್ಸುತ್ತೆ."

ರಘು ಕೀಟಲೆ ದನಿಯಿಂದ ಹೇಳಿದ. ತುಂಟ ನಗುವೊಂದು ಮುಖದಲ್ಲಿ

ಮಿಂಚಿತು. "ಮ್ಯಾನ್ ವಾಂಟ್ಸ್ ಹಿಸ್ ಫ್ರೀಡಂ ಮ್ಯಾಡಮ್, ಅಟ್....
ಲೀಸ್ಟ್ ಇನ್ ಹಿಸ್ ಸ್ಲೀಪ್."

ಶುಭನ ಮುಖದಲ್ಲಿ ಕಿರುನಗೆಯ ಸೋಂಕೊಂದು ಕಂಡಾಗ ರಘು ಮತ್ತೆ ನಕ್ಕನು "ಯಾಕ್ರಿ ನಗ್ದೇ ತಡ್ಕೋತೀರಿ–ನಕ್ಬಿಡಿ" ಶುಭ ನಕ್ಕಳು.

"ನೋಡಿ, ಈ ಮನೇಲಿ ನಿಮ್ಮ ಹಾಗೆ ಗೇಲಿ ಮಾಡಿಕೊಂಡು ನಗೋರು ಯಾರೂ ಇರ್ಲಿಲ್ಲ ಇಷ್ಟು ದಿನ....ಈಗೊಂದು ತರಹಾ ಮನೆಯಲ್ಲಿ ಜೀವ ಬಂದಿದೆ ರಘು. ನಾನು ಬಂದ ತಕ್ಷಣ ಗಮನಿಸಿದೆ...."

ಬಚ್ಚಲ ಮನೆಯಿಂದ ಮಗು ಅಳುತ್ತಿದ್ದ ಸದ್ದು ತೂರಿಬಂದಾಗ....ಶುಭ ಮತ್ತೂ ನಕ್ಕಳು.

"ನನ್ನ ಮಗಳ ಗಲಾಟೆ, ನಿಮ್ಮ ಗಲಾಟೆ ಎರ್ಡೂ ಸೇರ್ಬಿಟ್ರೆ ಆಯ್ತು."

ಅವಳ ನಗು ಕಂಡು ರಘುವೊಂದು ಹುಚ್ಚು ಭ್ರಮರ. ಸಂತಸದ ಪೂರ ದಲ್ಲಿ ತೇಲಿಹೋಗುವ, ಕುಣಿಯುವ ಅಲೆ. ಅರಸಿನ ಹಚ್ಚಿದ್ದ ಕೆನ್ನೆ, ಕಾಡಿಗೆ ಹಚ್ಚಿದ್ದ ಕಣ್ಣು ಸಾಂಬ್ರಾಣಿ ಸುಗಂಧ ತುಂಬಿದ್ದ, ಹರಡಿದ್ದ ಅವಳ ಅಲೆಗೂದಲು–ಅವನಿಗೆ ಅವಳ ನಗುವನ್ನು ತನ್ನೆದೆಯಲ್ಲಿ ಸೆರೆ ಹಿಡಿಯುವ ಬಯಕೆ.

ಅಷ್ಟರಲ್ಲಿ ನೀರು ಹಾಕಿದ್ದ ಮಗುವನ್ನು ಎತ್ತಿಕೊಂಡು ರಾಜಮ್ಮ ಬಂದಿದ್ದರಿಂದ ರಘು ಅಲ್ಲಿಂದ ಸರಿದನು.

ಹಿತ್ತಲಲ್ಲಿ ನಂದಿನಿಯೊಬ್ಬಳೇ ನಿಂತು ಏನನ್ನೋ ದೀರ್ಘವಾಗಿ ಯೋಚಿಸು ತ್ತಿದ್ದುದನ್ನು ಕಂಡು ಅವಳತ್ತ ಹೆಜ್ಜೆ ಹಾಕಿದನು.

"ಏನು ನಂದಿನಿ, ಏನಾದ್ರೂ ಬೇಕಾಗಿತ್ತಾ ? ಒಬ್ಬಳೇ ಯಾಕೆ ನಿಂತಿದ್ದಿಯಾ ?"

ನಂದಿನಿ ರಘುವನ್ನೇ ದಿಟ್ಟಿಸಿದಳು. ಅವಳ ಕಂಬನಿ ತುಂಬಿದ್ದ ಕಣ್ಣು ಗಳನ್ನು ರಘು ನೋಡಲಾರದಾದನು.

"ರಘು, ನಾನೇ ಶುಭನನ್ನು ಇಲ್ಲಿಗೆ ಈ ಸಂಕಟಕ್ಕೆ ತಳ್ಳಿದ್ದು. ನಿಮ್ಮ ಮನೆ ಅವಳು ಸೇರಲೆಂದೇ ನೀವು ಬರುವ ಹೊತ್ತಿಗೆ ಕರೆಸಿದೆ. ಅವಳು ರವಿ ಯನ್ನು ಮದುವೆಯಾಗಿ ಸುಖವಾಗಿರುತ್ತಾಳೆಂದು ಹೊಂಗನಸನು ಕಟ್ಟಿದೆ ನೋಡೂ ರಘು, ಕೈಯ್ಯಾರೆ ನಾನೇ ಶುಭನ ಬಾಳು ಹಾಳು ಮಾಡಿದಂತಾ

ಯಿತು....ನಾನೆಂತಹ ಕೆಲಸ ಮಾಡಿಬಿಟ್ಟೆ....! ನಾಳೆ ಏನಾದರೂ ಆದರೆ ಶುಭನಿಗೆ ನಾನೇನು ಹೇಳಲಿ ? ಅವಳು ನನ್ನನ್ನೇ ಕೇಳುತ್ತಾಳೆ 'ಅತ್ತಿಗೆ, ನೀವೇ ಅಲ್ಲವೇ ಗಲಾಟೆ ಮಾಡಿ ನನ್ನ ಕರೆಸಿ, ಮದುವೆ ಮಾಡಿ ಈ ಸಂಕಟಕ್ಕೆ ನನ್ನ ತಳ್ಳಿದ್ದೂ' ಎಂದು ರಘೂ....ನಾನು ಅವಳ ಮುಖಾನೇ ನೋಡಲಾರೆ. ಇವರು ರವಿಯ ವಿಷಯ ಹೇಳಿದಾಗ ನಾನು ಕಿವೀನ್ನೇ ನಂಬಲಿಲ್ಲ. ಆದರೆ ರವಿಯನ್ನು ನೋಡಿದಾಗ ನನಗೆ ನಿಜಾಂಶ ತಿಳಿಯಿತು. ರಘೂ, ರಘೂ, ನನ್ನ ಶುಭ ಇದನ್ನ ತಡೆಯಕೊಳ್ಳೊ ಸ್ಥಿತೀಲಿದ್ದಾಳಾ ?" ನಂದಿನಿ ಬಿಕ್ಕಿ ಬಿಕ್ಕಿ ಅಳಲು ಮೊದಲು ಮಾಡಿದಳು. "ನನ್ನ ಶುಭನಿಗೆ ಯಾರು ಗತಿ ರಘು ?"

ರಘು ಅವಳ ಕೈಗಳನ್ನು ಹಿಡಿದು ಹೇಳಿದನು.

"ನಂದೂ, ನೀನು ಅವಳಿಗೆ ಧೈರ್ಯ ಕೊಡಬೇಕು–ನೀನು ಹೀಗೆ ಅತ್ತರೆ ಅವಳಿಗೆ ಖಂಡಿತ ಕಷ್ಟವಾಗಬಹುದು. ನೋಡು, ನೀನು ಏನನ್ನೋ ಕಲ್ಪಿಸಿಕೊಳ್ಳಬೇಡ–ನೀನೇ ಹೇಳಿದ್ದೆ, ಜ್ಞಾಪಕ ಇದೆಯಾ ? 'ರಘೂ, ಅವಳು ನಿಮ್ಮ ಮನೆಗೆ ಕೊಟ್ಟಾಗಿನಿಂದ ನಿಮ್ಮವಳು' ಅಂತ. ಏನಾದರೂ ಆಗಲಿ ಅವಳು ನಮ್ಮವಳು, ನಂದಿನಿ. ಅವಳ ಮುಂದಿನ ಜೀವನ, ಬದುಕು ನೀನು ಯೋಚಿಸಿ ತಲೆ ಕೆಡಿಸಿಕೊಳ್ಳಬೇಡ. ನಾನು ಬದುಕಿರುವವರೆಗೂ ಶುಭನ ಬದುಕು ಹಾಳಾಗಲು ಬಿಡುವುದಿಲ್ಲ ನಂದಿನಿ. ನನ್ನ ಮಾತು ನಂಬು !"

ಆಕಸ್ಮಿಕವಾಗಿ ಅತ್ತ ಬಂದಿದ್ದ ಬಾಬು ನಂದಿನಿ ಅಳುತ್ತಿದ್ದುದು ಗಮನಿಸಿದನು. ಅವನಿಗೂ ಏನೋ ಅಳುಕು. ಎಲ್ಲರ ನಗು ಸಂಭ್ರಮವೆಲ್ಲ ಏನೋ ನಾಟಕವೆಂದು ಅವನ ಭಾವನೆ. ಅವನನ್ನಲ್ಲಿ ನೋಡುತ್ತಲೇ ರಘು ತಲೆ ತಗ್ಗಿಸಿ ಅಲ್ಲಿಂದ ರವಿಯ ರೂಮಿನತ್ತ ಬಂದನು.

ರವಿ ಗಾಢ ನಿದ್ರೆಯಲ್ಲಿದ್ದನು. ನೋವಿನ ಸೋಂಕಿಲ್ಲದೆ ಮುಖ ಸೌಮ್ಯವಾಗಿತ್ತು. "ರವಿ, ನೀನೇ ಕೈಯ್ಯಾರೆ ನಿನ್ನ ಬಾಳು ಹಾಳು ಮಾಡಿಕೊಂಡೆಯಲ್ಲಾ ! ಚಿನ್ನದಂತಹ ಹೆಂಡತಿ, ಮುದ್ದು ಮಗಳು ಇವನ್ನು ಬಿಟ್ಟು ನೀನು ಹೋಗಬಹುದೇ ?" ರಘುವಿನ ಮನಸ್ಸು ಚೀರಿತು. ರವಿಯ ನಿರ್ವಿಕಾರವಾದ ಮುಖವನ್ನು ನೋಡಲಾರದೆ ಮುಖ ಮುಚ್ಚಿಕೊಂಡನು.

ರವಿಯ ಕೊನೆಯ ದಿನಗಳನ್ನು ಸಂತಸದಿಂದಿರುವಂತೆ ಮಾಡಬೇಕು. ಅವನಿಗೆ ಬೇಕಾದುದು ಶುಭ. ಅವಳೇ ಅವನನ್ನು ನೋಡಿಕೊಳ್ಳಲು ಬಿಡ

ಬೇಕು-ಅವಳ ಸಾನಿಧ್ಯ ಅವನಿಗೆ ಆದಷ್ಟು ಸಿಗುವಂತೆ ಮಾಡಬೇಕು....ಅವನಿಗೆ ಬಲು ಪ್ರಿಯವಾದ ಸಿಗರೇಟನ್ನೂ ಡ್ರಿಂಕ್ಸನ್ನೂ ಅವನು ಕೇಳಿದರೆ ಕೊಟ್ಟು ಬಿಡಬೇಕು.

"ರಘೂ, ....ರಘೂ...." ತಂದೆಯ ಕೂಗು ಕೇಳಿ ರಘು ಗಡಬಡಿಸಿ ಎದ್ದನು. ಆ ಹಣ್ಣು ಜೀವವನ್ನು ತಾವೆಲ್ಲಾ ಮರೆತುಬಿಟ್ಟಿಲ್ಲವೇ ? ರವಿಯ ವಿಷಯ. ಅವರಿಗೆ ತಿಳಿದರೆ ಅವರು ಸಹಿಸುವರೇ ? ಅವರ ಕೊನೆಗಾಲದಲ್ಲಿ ಎಂತಹ ವಿಪರ್ಯಾಸ. ಹಣ್ಣೆಲೆ ನಿಂತು ಬಿರುಗಾಳಿಯಲ್ಲಿ ಚಿಗುರು ತೂರಿಹೋದ ಹಾಗೆ !

"ಏನಪ್ಪಾ, ಕರೆದೆಯಾ ?" ರಘು ತಂದೆಯ ಮುಂದೆ ಬಂದು ನಿಂತನು.

"ನೋಡು, ಸಣ್ಣಯ್ಯ ಹೇಳಿದ, ಅದೇನೋ ಜೋಳದ ಹೊಲದ ಕಡೆ ಪೈಪ್ ಕೆಟ್ಟುಹೋಗಿದೇಂತ....ನೋಡ್ಕೊಂಡು ಬಾರಪ್ಪಾ. ಇನ್ನು ರವಿಗೆ ಇದೆಲ್ಲಾ ತಲೆಗೆ ಹಚ್ಚಿಸಬೇಡ....ಅವನ ಎಲ್ಲಾ ಜವಾಬ್ದಾರೀನೂ ನೀನು ವಹಿಸಿಕೊಳ್ಳುವುದು ವಾಸಿ. ಅವನು ಕಣ್ಮುಚ್ಚುವ ಮೊದಲು ಅವನಿಗೆ ಎಲ್ಲಕ್ಕೂ ನೀನಿರುವೆಯೆಂದು ಧೈರ್ಯ ಕೊಡಬೇಕು-ಅದು ಬಿಟ್ಟು ನೀನು ಅಲ್ಲಿ ಇಲ್ಲಿ ಸುಮ್ಮನೇ ವ್ಯಥೆಪಡುತ್ತೀಯಲ್ಲಾ !

ತಂದೆಯ ಮಾತು ಕೇಳಿ ರಘು ತತ್ತರಿಸಿಹೋದನು. ತಂದೆಯಿಂದ ಯಾವುದನ್ನು ಮುಚ್ಚಿಡಲು ಪ್ರಯತ್ನಿಸುತ್ತಿದ್ದನೋ ಅದನ್ನೇ ತಂದೆಯೇ ಹೇಳುವ ಹಾಗಾಯಿತಲ್ಲ. ಇದು ತಂದೆಗೆ ತಿಳಿದುದಾದರೂ ಹೇಗೆ... !"

"ಅಪ್ಪಾ,-ನೀವೇನು ಹೇಳ್ತಾ ಇರೋದು....?" ರಘು ಉಸಿರು ಬಿಗಿ ಹಿಡಿದು ಕೇಳಿದನು. ಶಿವರಾಮಯ್ಯನವರ ಮುಖದಲ್ಲಿ ವಿಲಕ್ಷಣವಾದ ನಗು ವೊಂದು ಹಾದುಹೋಯಿತು.

"ಕರುಳು ಹೇಳುತ್ತಪ್ಪಾ ! ಈಗೊಂದೆರಡು ತಿಂಗಳಿಂದಲೇ ನನಗೇಕೋ ಅವನ ಕಾಯಿಲೆಯ ವಿಷಯದಲ್ಲಿ ಅನುಮಾನವಿತ್ತು. ಅವನ ಮುಖದಲ್ಲಿ ರುವ ಕಳೆ ಸಾವಿಗೆ ಮುನ್ನ ಬರುವ ಕಳೆಯಪ್ಪಾ. ನನಗೆ ತಿಳಿದಿದೆ, ನಾನೊಂದು ಮುದಿ ಕೊರಡು-ಭಗವಂತ ನನಗೆ ಆಯಸ್ಸು ತುಂಬುತ್ತಾನೆ. ಪಾಪ, ರವಿಗೆ ಬದುಕೆಂದರೆ ಆಸೆ-ಅವನ ಆಯಸ್ಸು ಕಿತ್ತುಕೊಳ್ಳುತ್ತಾನೆ...." ಅವರ ಸುಕ್ಕು

"ವ್ಯಾಮೋಹ ಎನ್ನುವುದು ಬಹಳ ಕೆಟ್ಟದ್ದು ರಘೂ" ರಘುವಿನ ಕಣ್ಣಲ್ಲೂ ನೀರುಕ್ಕಿತು. ಅವನು ತಂದೆಗೆ ಯಾವ ವಿಧವಾದ ಸಾಂತ್ವನವನ್ನೀಯಲೂ ಅಸಮರ್ಥನಾಗಿದ್ದನು. ಅವರೆದುರಿಗಿದ್ದ ಟೇಬಲ್ಲಿನ ಮೇಲೆ ಭಗವದ್ಗೀತೆ ಹಾಳೆ ತೆರೆದು ಬಿದ್ದಿತ್ತು. ರಘುವಿನ ಕಣ್ಣಿಗೆ ಬಿದ್ದುದು ಆ ಶ್ಲೋಕಗಳು! ತಂದೆಯವರು ಪೆನ್ನಿನಿಂದ ಗುರುತು ಮಾಡಿದ್ದವು!

"ವಾಸಾಂಸಿ ಜೀರ್ಣಾನಿ ಯಥಾ ವಿಹಾಯ । ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾ ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।
ನಚೈನಂ ಕ್ಲೇದಯಾಂತ್ಯಾಪೋನ ಶೋಷಯತಿ ಮಾರುತಃ ॥
ಅಚ್ಛೇದ್ಯೋಽಯ ಮದಾಹ್ಯೋಽಯಮ ಕ್ಲೇದ್ಯೋಽಶೋಷ್ಯ ಏವ ಚ ।
ನಿತ್ಯಃ ಸರ್ವಗತಃ ಸ್ಥಾಣುರ ಚಲೋಽಯಂ ಸನಾತನಃ ॥
ಅವ್ಯಕ್ತೋಽಯ ಮಚಿಂತ್ಯೋಽಯ ವಿಕಾರ್ಯೋಽಯ ಮುಚ್ಯತೇ ।
ತಸ್ಮಾದೇವಂ ವಿದಿತ್ವೈನಂ ನಾನು ಶೋಚಿತುಮರ್ಹಸಿ ॥
ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಂ ।
ತಥಾಪಿ ತ್ವಂ ಮಹಾಬಾಹೋ ನೈವಂ ಶೋಚಿತುಮರ್ಹಸಿ ॥
ಜಾತಸ್ಯ ಹಿ ಧ್ರುವೋ ಮೃತ್ಯು ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದ ಪರಿ ಹಾರ್ಯೇಽರ್ಥೇ ನತ್ವಂ ಶೋಚಿತುಮರ್ಹಸಿ ॥

ಅವುಗಳ ಮೇಲೆ ಕಣ್ಣು ಹಾಯಿಸುತ್ತಲೇ ರಘುವಿಗೆ ದುಃಖವುಕ್ಕಿ ಬಂತು. ತಂದೆಯತ್ತ ಒಮ್ಮೆ ನೋಡಿ ಉಗುಳು ನುಂಗುತ್ತಾ ಮನೆಯಿಂದ ಹೊರಬಿದ್ದನು. "ದೇವರೇ, ನನಗೆ ಎಲ್ಲವನ್ನೂ ಎದುರಿಸಲು ಶಕ್ತಿ ಕೊಡು" ಅವನ ಹೃದಯದ ನಿರಂತರ ಪ್ರಾರ್ಥನೆಯದಾಗಿತ್ತು.

ಆಳುಗಳ ಕೈಲಿ ಕೆಲಸಮಾಡಿಸುತ್ತಿದ್ದ ಸಣ್ಣಯ್ಯ ರಘುವನ್ನು ನೋಡುತ್ತಲೇ ಆಳುಗಳನ್ನು ಅಲ್ಲೇ ಬಿಟ್ಟು ಬಂದನು.

"ಏನು ಸಣ್ಣಯ್ಯ, ಯಾವುದೋ ಪೈಪ್ ಒಡೆದುಹೋಗಿದೆಯಂತಲ್ಲಾ" ರಘು ಕೇಳಿದಾಗ ಸಣ್ಣಯ್ಯ ತಲೆ ಕೆರೆದುಕೊಂಡನು.

ಒಂದು ದಿನವಾದರೂ ಹೊಲದ ಕಡೆ ಗಮನ ಕೊಡದವರು ಹೀಗೆ ಕೇಳಿದರೆ

"ಹೌದು ಸ್ವಾಮಿ, ಪೈಪ್ ಒಡೆದುಹೋಗಿ ನೀರು ಹೊಲಕ್ಕೆ ಹೋಗದೇ ಎಲ್ಲಾ ಮಧ್ಯದಲ್ಲೇ ಸುರಿದು ಹೋಗಿ ಅಲ್ಲಿ ಬರೀ ಕೆಸರಾಗಿಬಿಟ್ಟಿದೆ. ರಂಗ ಅದಕ್ಕೆ ಸಿಮೆಂಟು ಮೆತ್ತಿದ್ದ. ಅದೂ ಕೊಚ್ಕೊಂಡು ಹೊರಟುಹೋಯ್ತು, ಸ್ವಾಮಿಯೋರಿಗೆ ಹೇಳೋಣಾಂತ ಬಂದೆ. ಮಲಗಿದ್ರು...."

"ನಡಿ, ನಂಗೆ ಸ್ವಲ್ಪ ತೋರಿಸು....ನಾನು ಸರಿ ಮಾಡ್ತೀನಿ." ರಘು ಹೇಳಿದಾಗ ಸಣ್ಣಯ್ಯ ಅವನನ್ನು ಪೈಪಿದ್ದೆಡೆಗೆ ಕರೆದೊಯ್ದನು. ಎರಡು ಪೈಪು ಗಳನ್ನು ಸೇರಿಸಿದ್ದ ಕಡೆ ಬೆಸುಗೆ ಬಿಟ್ಟು ನೀರು ಸುರಿಯುತಿತ್ತು. ರಘು ಕಾಲಿ ನಿಂದ ಆ ಜಾಗವನ್ನು ಮೆಲ್ಲಗೆ ಒದ್ದು ನೋಡಿದನು ಇಷ್ಟು ಚಿಕ್ಕ ವಿಷಯಕ್ಕೆ ರವಿಯನ್ನು ಕೇಳಬೇಕೇ ?

"ಸಣ್ಣಯ್ಯ ಶೆಡ್‌ನಲ್ಲಿ ಹಳೆಯ ಪೈಪ್‌ಗಳಿವೆ, ಅದನ್ನೂ ಸ್ಪಾನರ್ ಸೆಟ್ಟೂ ತೊಗೊಂಡ್ಬಾ. ನಾನೇ ಸರಿಮಾಡ್ತೀನಿ...."

ಸಣ್ಣಯ್ಯ, ಅನುಮಾನಿಸುತ್ತಾ ಶೆಡ್ಡಿನತ್ತ ನಡೆದನು. ಆಳುಗಳೆಲ್ಲ ಕೆಲಸ ಮಾಡುತ್ತಿದ್ದರೂ ಅಪರೂಪವಾಗಿ ತಮ್ಮ ಕೆಲಸ ನೋಡಲು ಬಂದ ರಘು ವಿನತ್ತ ಆಗಾಗ್ಗೆ ನೋಡುತ್ತಿದ್ದರು. ಹತ್ತಿರದಲ್ಲೆ ಹೋದ ಕಳೆ ಕೀಳುತ್ತಿದ್ದ ಆಳನ್ನು ರಘು ಕರೆದನು.

"ಏನಯ್ಯಾ ನಿನ್ನ ಹೆಸರು ?"

"ಕಾಳ ಬುದ್ದೀ."

"ಈ ಪೈಪ್ ಒಡೆದು ಎಷ್ಟು ದಿನ ಆಯ್ತು ?"

"ಒಂದ್ವಾರ ಆಯ್ತು ಬುದ್ದೀ"

"ಯಾಕೆ ಮುಂಚೆ ತಿಳಿಸಲಿಲ್ಲ ?" ರಘು ಪ್ಯಾಂಟಿನ ಜೇಬಿನೊಳಗೆ ಕೈ ತೂರಿಸಿ ಕೇಳಿದ.

"ಸಣ್ಣಯ್ಯನೋರು ಬ್ಯಾಡಾ, ಮನ್ಯಾಗೆ ತೊಂದ್ರೆ ಆಯ್ತದೇಂದ್ರು. ಅದಕ್ಕೆ ತಿಳಿಸ್ಲಿಲ್ಲ."

"ಈ ಪೈಪ್, ಸ್ಪ್ರೇ ಎಲ್ಲಾ ಯಾರು ಮುಂಚೆ ರಿಪೇರಿ ಮಾಡೋರು ?"

"ಸಾಮೇರು ಊರಾಗ್ನಿಂದ ಯಾವ್ದೋ ಸಾಯೇಬ್ರನ್ನ ಕಾರ್‍ನಾಗೆ ಕರ್‍ಕೊಂಡು ಬರ್‍ತಾ ಇದ್ರು."

ರಘುವಿಗೆ ನಗು ಬಂತು. ರವಿ ಇದನ್ನೆಲ್ಲಾ ರಿಪೇರಿ ಮಾಡಲು ಬೆಂಗಳೂರಿನಿಂದ ಜನರನ್ನು ಕರೆತರುತ್ತಿದ್ದನೇ ? ತಾನು ಓದಿರುವುದೂ ಇಂಜನಿಯರಿಂಗ್, ತನಗೆ ಬಾರದ ಕೆಲಸವಿಲ್ಲ ಇದರಲ್ಲಿ. ತನ್ನೊಂದು ಬಾರಿಯೂ ಇಂತಹವುಗಳಿಗಾಗಿ ಕರೆದಿರಲಿಲ್ಲ.

ಸಣ್ಣಯ್ಯ ಪೈಪು ಸ್ಪಾನರ್ ಹಿಡಿದು ಬಂದಾಗ ರಘು ಬಟ್ಟೆ ಕೆಸರಾದೀತೆಂದು ಪ್ಯಾಂಟನ್ನು ಮೇಲೆ ಮಾಡಿಕೊಂಡನು. ಶರಟಿನ ಕೈತೋಳು ಮಡಿಸಿ ಮೇಲೆ ಮಾಡಿಕೊಂಡನು. ಅವನು ಕೊಚ್ಚೆಯಲ್ಲಿ ಕುಕ್ಕರುಗಾಲಿನಲ್ಲಿ ಕುಳಿತು ಮುರಿದುಹೋದ ಪೈಪನ್ನು ಬಿಚ್ಚಿದಾಗ ನೀರು ರಭಸವಾಗಿ ಉಕ್ಕಿ ಬಂತು. ಮುರಿದಿದ್ದ ಪೈಪನ್ನು ಅತ್ತ ಎಸೆದು ಸಣ್ಣಯ್ಯ ತಂದ ಪೈಪನ್ನು ಅಳವಡಿಸಿ, ಸರಿಮಾಡತೊಡಗಿದಾಗ ಕೆಲಸದಲ್ಲಿ ತೊಡಗಿದ್ದ ಆಳುಗಳೆಲ್ಲಾ ಅವನನ್ನು ಸುತ್ತುವರಿದು ಅವನು ಮಾಡುತ್ತಿದ್ದ ಕೆಲಸವನ್ನೇ ಬೆರಗುಗಣ್ಣುಗಳಿಂದ ನೋಡುತ್ತಾ ನಿಂತರು.

"ಸಣ್ಣಯ್ಯ, ಇಲ್ಲಿ ಬಿಗಿಯಾಗಿ ಹಿಡ್ಕೊಪ್ಪ, ಸ್ವಲ್ಪ, ಫಿಟ್ ಮಾಡ್ತೀನಿ."

ರಘು ಹೇಳಿದಾಗ ಭಯ, ಭಕ್ತಿಯಿಂದ ಅವನು ಹೇಳಿದಂತೆ ಮಾಡಿದನು.

ರಘು ಪೈಪನ್ನು ಅಳವಡಿಸಿ, ಸರಿಪಡಿಸಿ ಎದ್ದುನಿಂತಾಗ ಅವನ ಸುತ್ತಲೂ ನೆರೆದಿದ್ದ ಆಳುಗಳು ಅಚ್ಚರಿಯಿಂದ ಅವನತ್ತ ನೋಡಿದರು. ಅವನ ಕಣ್ಣಿಗೆ ಅವನು ಬಹಳ ಹಿರಿಯ, ಬುದ್ಧಿವಂತನಂತೆ ಕಂಡನು.

"ನೋಡ್ದ್ರ್ಯ ಕೆಂಚಪ್ಪ, ಒಂದು ನಿಮಿಸ್ದಾಗೆ ಮಾಡಿಬುಟ್ರು, ಸಾಮೇರು ಎಲ್ಲಾ ತಿಳ್ಕೊಂಡವ್ರೆ...." ರಘುವಿನ ಕಿವಿಗೆ ಆ ಮಾತು ಬಿದ್ದರೂ ಅದನ್ನು ಗಮನಿಸದೇ ಪ್ಯಾಂಟು ಷರಟುಗಳನ್ನು ಸರಿಮಾಡಿಕೊಳ್ಳುತ್ತಿದ್ದನು. ಕೈಲಿದ್ದ ಸ್ಪಾನರನ್ನು ಸಣ್ಣಯ್ಯನ ಕೈಗಿತ್ತು ತಾನು ಮಾಡಿದ್ದ ಕೆಲಸವನ್ನು ಪರೀಕ್ಷಿಸಿ ನೋಡುತ್ತಾ ಹೇಳಿದ. "ಸಧ್ಯಕ್ಕೆ ಇದು ಸರಿಹೋಗುತ್ತೆ. ಬೆಂಗಳೂರಿಗೆ ಹೋದಾಗ ಬೇರೆ ಹೊಸದು ತಂದು ಹಾಕ್ಬೇಕೂ ..."

ಅವನು ಕೆಸರು ದಾಟಿ ಬಂದಾಗ ರಂಗಪ್ಪ ರಘು ಕಳಚಿದ್ದ ಚಪ್ಪಲಿಯನ್ನು ಕೈಯ್ಯಲ್ಲಿ ತಂದು ಅವನ ಕಾಲ ಬಳಿ ಇಟ್ಟನು.

ಯಾವ ಮಾತೂ ಆಡದೆ ತಲೆ ತಗ್ಗಿಸಿ ಮನೆಯತ್ತ ನಡೆದ ರಘುವನ್ನು ಕಂಡು ಸಣ್ಣಯ್ಯ ಆಳುಗಳಿಗೆ ಹೇಳುತ್ತಿದ್ದನು.

"ಅವ್ರು ಭಾರಿ ಕೆಲಸದಲ್ಲಿದ್ದಾರೆ. ಇಂತ ಜುಜುಬಿ ಕೆಲಸ ಅವರಿಗೆ ಸಾವಿರ. ದೊಡ್ಡ ದೊಡ್ಡ ಅಣೆಕಟ್ಟುಗಳನ್ನೇ ಕಟ್ತಾರೆ. ಇದೇನು ಮಹಾ ಅವರಿಗೆ!"

ರಘು ಮನೆಯಲ್ಲಿ ಕಾಲಿಟ್ಟಾಗ ನಂದಿನಿ ತಲೆಗೆ ಸ್ನಾನಮಾಡಿ ತಲೆ ಯೊರೆಸಿಕೊಳ್ಳುತ್ತಿದ್ದಳು. ತನ್ನ ಸೀರೆ ಬಟ್ಟೆ ತರದಿದ್ದ ಕಾರಣ ಶುಭನ ಸೀರೆ ಯನ್ನೇ ಉಟ್ಟಿದ್ದ ಅವಳನ್ನು ಕಂಡು ರಘುವಿಗೆ ಅಕ್ಕರೆಯುಕ್ಕಿತು.

"ಸ್ನಾನ ಆಯ್ತಾ ನಂದೂ ? ಭಾಸ್ಕರ, ಸಂಜಯ ಬರ್ಲಿಲ್ವಾ ?"

"ಬರ್ತಾರೆ ಬಿಡು, ನಿಧಾನವಾಗಿ. ಈಗೇನು ಅವಸರ ?"

"ನೋಡು ನಂದಿನಿ, ಸಾಯಂಕಾಲ ತೊಟ್ಟಿಲಿಗೆ ಹಾಕ್ಬೇಕಂತೆ. ರವಿ ನೆನ್ನೇನೇ ಹೇಳಿದೆ. ಅದಕ್ಕೇನು ಸಿದ್ಧ ಮಾಡಿಕೋಬೇಕೋ ಮಾಡು. ಆಳು ಗಳಿಗೆಲ್ಲಾ ಸಾಯಂಕಾಲ ಒಂದು ದಿನದ ಕೂಲಿ ದಾನವಾಗಿ ಕೊಟ್ಟೆಡೋಣಾಂತಿ ದ್ದೇನೆ...."

"ಅವನಿಷ್ಟ ಇದ್ಹಾಗೆ ಮಾಡೂ...." ನಂದಿನಿ ಕೂದಲು ಗಂಟುಹಾಕಿ ಕೊಂಡಳು.

"ನೋಡ್ಹೋಗು, ಶುಭ ಮಗೂನ್ನ ಮಲಗಿಸಿ ರವಿಯ ರೂಮಿನಲ್ಲಿ ಕೂತಿದ್ದಾಳೆ. ಯಾವ ಬಾಯೀಲಿ ಅವಳಿಗೆ ಅಲ್ಲಿ ಹೋಗ್ಬೇಡಾ ಅನ್ನಲಿ ರಘೂ ?"

"ರವಿ ಎದ್ದಿದ್ದಾನಾ ?" ರಘು ಆತಂಕದಿಂದ ಕೇಳಿದ.

"ಇಲ್ಲಾಂತ ಕಾಣ್ಸುತ್ತೆ."

ರಘು ರವಿಯ ರೂಮಿಗೆ ಬಂದಾಗ ಶುಭ ಮಲಗಿ ನಿದ್ರಿಸುತ್ತಿದ್ದ ರವಿಯ ತಲೆಯ ಹತ್ತಿರ ಕುಳಿತು ಅವನ ಕೂದಲಲ್ಲಿ ಕೈಯಾಡಿಸುತ್ತಾ ಅವನ ಮುಖ ವನ್ನೇ ನೋಡುತ್ತಿದ್ದಳು. ರಘುವಿನ ಹೆಜ್ಜೆ ಸದ್ದು ಕೇಳಿ ಅವನತ್ತ ತಿರುಗಿದಳು. ಕಣ್ಣು ಅಂಚಿನಲ್ಲಿ ಕೆಂಪಗಿದ್ದರಿಂದ ಅವಳು ಅತ್ತಿರಬೇಕೆಂದು ರಘು ತಿಳಿದನು.

"ಇಲ್ಲಿ ಯಾಕೆ ಬಂದು ಕುಳಿತಿದ್ದೀರಿ ? ಮಲಗಿಕೊಳ್ಳಿ ಹೋಗಿ ಶುಭಾ. ನಾವೆಲ್ಲಾ ಇಲ್ಲವಾ ರವಿನ್ನ ನೋಡಿಕೊಳ್ಳಲು ? ನೀವೊಂದು ಸ್ವಲ್ಪ ದಿನ ರೆಸ್ಟ್ ತೊಗೊಂಡು ಸುಧಾರಿಸಿಕೊಂಡುಬಿಟ್ಟರೆ ನೀವೇ ನೋಡಿಕೋಬಹುದು!" ರಘು ರವಿಗೆ ಎಚ್ಚರವಾಗದಿರಲೆಂದು ಪಿಸುದನಿಯಲ್ಲಿ ಹೇಳಿದನು.

"ರಘೂ, ನಂಗೆ ಅಷ್ಟು ದೂರ ಆ ರೂಮಿನಲ್ಲಿ ಇರೋಕ್ಕೆ ಆಗೋಲ್ಲ.

ಅಲ್ಲಿಂದ ಮಲಗಿದ್ದ ರವಿಯನ್ನು ನೋಡಿದಾಗ ನನಗೇಕೋ ತುಂಬಾ ಭಯ ವಾಯಿತು. ಅಲ್ಲಾಡದೇ ಮಲಗಿದ್ದ ಅವರನ್ನು ನೋಡಿದಾಗ ನಂಗೆ ತಡೆಯ ಲಾಗಲಿಲ್ಲ. ಇಲ್ಲಿಗೆ ಬಂದು ಬಿಟ್ಟೆ. ಉಸಿರಾಡ್ತಾ ಇರೋದು ನೋಡಿ ಧೈರ್ಯ ಬಂತು....ರಘೂ-ರಘೂ, ರವಿಗೆ ಏನೂ ಆಗೋಲ್ವಾ? ನನ್ನ ಬಿಟ್ಟು ಹೋಗೋಲ್ಲಾ ತಾನೆ?"

ಶುಭಳ ತುಟಿಗಳು ನಡುಗಿದವು, ಕಣ್ಣು ಕಂಬನಿಯ ಕೆರೆಯಾಯಿತು. ಪಿಸುದನಿಯಲ್ಲಿ ಅವಳು ಹೇಳಿದರೂ ರಘುವಿಗೆ ಅದು ಮನೆಯಲ್ಲೆಲ್ಲಾ ಪ್ರತಿಧ್ವನಿಸುವಷ್ಟು ಗಟ್ಟಿಯಾಗಿ ಹೇಳಿದಂತಾಗಿತ್ತು.

"ಬನ್ನಿ ಶುಭ ...ಅವನು ಮಲಗಿ ನಿದ್ರೆ ಮಾಡಿದಷ್ಟೂ ಸುಸ್ತು ಕಡಿಮೆ ಆಗುತ್ತೇಂತ ಡಾಕ್ಟರ್ ಹೇಳಿದ್ದಾರೆ. ನೀವು ರೂಮಿಗೆ ಹೋಗಿ ಮಲಗಿ ಕೊಳ್ಳಿ. ನೀವೂ ಕಾಯಿಲೆ ಬಿದ್ದರೆ ಏನು ಗತಿ? ಆ ಕೊರಗಿನಲ್ಲಿ ರವಿ ಮತ್ತೂ ಕುಸಿಯುತ್ತಾನೆ. ಅವನ ಮುಂದೆ ನೀವು ನಗುನಗುತ್ತಿರಬೇಕು. ಹೀಗೆ ಸಪ್ಪೆ ಮುಖ ಹಾಕಿಕೊಂಡು ಕುಳಿತರೆ ಹೇಗೆ?" ರಘು ಬಲವಂತದಿಂದ ಅವಳನ್ನು ಎಬ್ಬಿಸಿದನು. ಅವಳ ಭುಜದ ಸುತ್ತ ಕೈಹಾಕಿ ತನಗೊರಗಿಸಿಕೊಂಡು ಅವಳ ರೂಮಿಗೆ ಕರೆದೊಯ್ದು ಅವಳನ್ನು ಮಂಚದ ಮೇಲೆ ಕೂಡಿಸಿದಾಗ ರಘುವಿಗೆ ಅವಳು ತನ್ನ ಶುಭನೆಂಬ ಭಾವನೆ ಪೂರ ಅಳಿಸಿಹೋಗಿತ್ತು. ಅವಳೊಬ್ಬ ಎಲ್ಲಾ ಕಳೆದುಕೊಂಡು ಅಳುತಿದ್ದ ಸಣ್ಣ ಹುಡುಗಿಯಂತೆ ಕಂಡಿದ್ದಳು.

ಮಂಚದ ಮೇಲೆ ಮಲಗಿ ಹೊದಿಕೆ ಕಾಲಿನ ಮೇಲೆ ಎಳೆದುಕೊಂಡು ಶುಭ ಹತ್ತಿರದಲ್ಲಿದ್ದ ರಘುವಿನ ಕೈಯನ್ನು ಹಿಡಿದು ದೈನ್ಯಳಾಗಿ ಕೇಳಿದಳು-

"ರಘೂ, ರವಿ ನನ್ನವರಾಗಿ ಉಳೀತಾರಾ? ತುಂಬಾ ದಿನದಿಂದ ಅವರು ನನ್ನಿಂದ ದೂರ ಸರಿಯುತ್ತಿದ್ದಾರೆ ಅನ್ನೋ ಭಾವನೆ ಬರುತಿತ್ತು ನನಗೆ. ಬೇಕೆಂತಲೇ ಇರಬೇಕು. ಆದರೆ ನನ್ನನ್ನಗಲಿ ಹೋಗುವರೆಂಬ ಭಯವಿರಲಿಲ್ಲ. ಆದರೆ....ಬೆಳಿಗ್ಗೆ ನೋಡಿದಾಗಿನಿಂದ ನನ್ನ ಅಂತರಾಳ ಅಳುತ್ತಿದೆ ರಘು. ರವಿ ನನ್ನನ್ನು ಬಿಟ್ಟು ಹೋಗುತ್ತಾರೆಂದು ಅಳುತ್ತಿದೆ. ನಿಜವಾಗಿ ನನ್ನವ ರಾಗಿ ಉಳಿಯುತ್ತಾರಾ?" ಅವನೆರಡು ಬೊಗಸೆಗಳಲ್ಲಿ ಮುಖವಿಟ್ಟು ಶುಭ ಅತ್ತಾಗ ರಘುವಿಗೂ ಕಣ್ಣಲ್ಲಿ ನೀರು ಬಂತು. ಒಲವಿಗೆ ತಿಳಿಯದ ವಿಲ್ಲ. ಹೃದಯ ಅರಿಯದ ಗುಟ್ಟಿಲ್ಲ. ಶುಭಳ ತಲೆ ಸವರಿದನು.

"ಅಳಬೇಡಿ ಶುಭಾ, ಲೆಟ್‌ಅಸ್ ಹೋಪ್ ಫಾರ್‌ದಿ ಬೆಸ್ಟ್ !"

ಅವನನ್ನು ಸಂತಸವಾಗಿಡುವುದೊಂದೇ ಸಧ್ಯಕೆ ಮುಖ್ಯ !

"ತೊಟ್ಟಿಲಲ್ಲಿ ಮಲಗಿದ್ದ ಮಗು ಮುಲುಗುಟ್ಟಿದಾಗ, ರಘು ತನ್ನ ಕೈಗಳನ್ನು ಬಿಡಿಸಿಕೊಂಡನು.

"ನೋಡಿ, ಮಗು ಎದ್ಬಿಡ್ತು. ರವಿಯ ಪ್ರೀತಿಯ ಕುರುಹಾಗಿದೆ ನೋಡಿ ಇದು....ಇಟ್ ಈಸ್ ದಿ ಇನ್‌ಕಾರ್ನೇಷನ್ ಆಫ್ ರವೀಸ್ ಲವ್ ಫಾರ್ ಯೂ ...ಲುಕ್ ಆಫ್ಟರ್ ಹರ್ ವೆಲ್...."

ರಘು ಮೆಲ್ಲನಡಿಯಿಟ್ಟು ಬಂದಾಗ ಶಾಲೆಯಿಂದ ಸಂಜಯ, ಭಾಸ್ಕರ ಇಳಿಯುತ್ತಿದ್ದರು.

"ಹಲೋ ರಘೂ, ಎನಿ ಹೆಲ್ಪ್ ನೀಡೆಡ್ ?" ಸಂಜಯ ಸಣ್ಣಗೆ ಸಿಳ್ಳಿ ಹಾಕುತ್ತಾ ಬಂದಾಗ ನಂದಿನಿ ಗದರಿದಳು.

"ಶ್, ಗಲಾಟೆ ಮಾಡ್ಬೇಡಾ, ಮಗೂ ಎದ್ಬಿಡುತ್ತೆ, ರವಿ ಮಲಗಿದ್ದಾನೆ. ಏನು ಹಾಳು ಗಂಟಲೋ ನಿಂದು !"

ಭಾಸ್ಕರ ಕೈಯ್ಯಲ್ಲಿ ಕೆಲವು ಪ್ಯಾಕೆಟ್ಟುಗಳನ್ನು ಹಿಡಿದು ಬಂದನು.

"ತೊಗೋ ನಂದಿನಿ. ನೀನು ಹೇಳಿದ್ದೆಲ್ಲಾ ತಂದಿದ್ದೀನಿ."

ಭಾಸ್ಕರ, ಸಂಜಯನ ದನಿ ಕೇಳಿ ಶಿವರಾಮಯ್ಯನವರು ಕೈಯಲ್ಲಿ ಭಗವದ್ಗೀತೆ ಹಿಡಿದೇ ರೂಮಿನಿಂದ ಹೊರಬಂದರು.

"ಓಹೋಹೋ, ಈ ಧಾಂಡಿಗ ಬಂದನಾ ? ಅದಕ್ಕೇ ಮನೆಯೆಲ್ಲಾ ನಡಗ್ತಾ ಇದೆ" ವಾತ್ಸಲ್ಯದಿಂದ ಸಂಜಯನತ್ತ ತುಂಬುದೃಷ್ಟಿ ಹರಿಸಿದರು.

"ಯಾಕೆ ಕರ್ಕೊಂಡು ಬಂದ್ರೋ, ಎಲ್ಲಿ ಬಂದ್ರೂನೂ ಗಲಾಟೇನೇ ಇವನ್ದೂ...." ನಂದಿನಿ ಗೊಣಗಿದಾಗ ರಘು ಸಂಜಯನ ತಲೆಕೂದಲು ಕೆದರಿ ಬೆನ್ನಿನ ಮೇಲೆ ಗುದ್ದಿದ.

"ಏನು, ನಿನ್ಮೇಲೆ ಬಹಳ ಕಂಪ್ಲೇಂಟ್ಸ್; ಬಾರೋ, ನಾನಿದ್ದೀನಿ ನಿನಗೆ. ಸುಮ್ನಿರು ನಂದಿನಿ. ಸಂಜಯನ್ನ ಕಂಡರೆ ನಿನಗೆ ಅಷ್ಟಕಷ್ಟೆ ! ಬಾರೋ ಶುಭ ನಿನ್ನ ನೋಡ್ಬೇಕೂಂತ ಇದ್ಳು" ಕೈ ಹಿಡಿದು ಶುಭನ ರೂಮಿಗೆ ಕರೆದೊಯ್ದನು.

"ಭಲೇ ಘಟಿಂಗ ಕಣೇ ನಂದಿನಿ, ನಿನ್ಮಗ....ಅಂಥಾದೊಂದಿದ್ದರೆ ಹೊತ್ತು ಹೋಗೋದೇ ಗೊತ್ತಾಗೋಲ್ಲ, ಅಲ್ವೇನಯ್ಯಾ ಭಾಸ್ಕರ ?"

ಶಿವರಾಮಯ್ಯನವರು ಭಗವದ್ಗೀತೆ ಮುಚ್ಚಿಟ್ಟರು. ಭಾಸ್ಕರ ಬಂದರೆ ಶಿವರಾಮಯ್ಯನವರಿಗೆ ಬಹಳ ಖುಷಿ. ಅವನೊಡನೆ ಮಾತಾಡುತ್ತಾ ಕುಳಿತರೆ ಸಾಕು, ಅವರಿಗೆ ಎಲ್ಲಿಲ್ಲದ ಆನಂದ.

ನಂದಿನಿ, ಭಾಸ್ಕರ ತಂದಿತ್ತ ಪ್ಯಾಕೆಟ್ಟುಗಳನ್ನು ಒಳಗಿಟ್ಟು ಶುಭನಿಗಾಗಿ ಮಾಡಬೇಕಿದ್ದ ಪಥ್ಯದ ಅಡಿಗೆಯನ್ನು ವಿಚಾರಿಸಲು ಒಳಗೆ ಹೋದಳು.

ಮಗು ಶುಭನ ಪಕ್ಕದಲ್ಲಿ ಕೈಕಾಲು ಬಡಿಯುತ್ತಾ ಮಲಗಿದುದು ಕಂಡು ಸಂಜಯನಿಗೆ ಎಲ್ಲಿಲ್ಲದ ಅಚ್ಚರಿ.

"ಯಾಕೆ ಆಂಟಿ, ಕೈಕಾಲು ಬಡಿದೇ ಇವ್ರೇ ಅದಕ್ಕೇ ಅಳೂನೇ ಬರೋಲ್ವಾ ? ನೋಡು, ಹೇಗೆ ಕಾಲು ಒದರಿ, ಕೈ ಕೊಸರಿ ಆಮೇಲೆ ಬಾಯಿ ಬಿಟ್ಟು ಅಳುತ್ತೆ !"

ಮೊದಲಿನಿಂದಲೂ ಪ್ರಿಯವಾದ ಸಂಜಯನನ್ನು ಕಂಡು ಶುಭನ ಮನಸ್ಸಿಗೆ ಕೊಂಚ ಹರ್ಷ.

"ತಾಳು, ಒಂದು ತಮಾಷೆ ಆಂಟೀ. ಕೈ ಕಾಲು ಹಿಡ್ಕೋತೀನಿ, ಅಲ್ಲಾಡ್ದೇ ಇರೋ ಹಾಗೆ, ಅಳುತ್ತೋ ಇಲ್ವೋ ನೋಡೋಣಾ !" ಸಂಜಯ ಮಗುವಿನ ಕಾಲು ಕೈ ಹಿಡಿಯಲು ಹೋದಾಗ ರಘು ಅವನ ಕಿವಿ ಹಿಂಡಿದ.

"ಬಹಳ ದೊಡ್ಡ ಇನ್‌ವೆಂಟರ್ ಇವ್ನು. ನಿನ್ನ ಎಕ್ಸ್‌ಪರಿಮೆಂಟ್‌ಗೆ ಅಲ್ಲ ಮಗೂ ಇರೋದು. ಬಾ ನಮ್ಮ ಎಸ್ಟೇಟಿನ ಚಿಕ್ಕಣ್ಣನ ಮನೇಲಿ ನಾಲ್ಕು ನಾಯಿಮರಿ ಇದೆ, ಕೊಡಿಸ್ತೀನಿ ಬೇಕಾದ್ರೆ !"

ಸಂಜಯ ತಲೆ ಕೆರೆದುಕೊಂಡನು. "ಅಯ್ಯೋ, ಮರ್ತೇಬಿಟ್ಟೆ. ಅಪ್ಪಾ ನಾನು ಅಂಗಡಿಗೆ ಹೋದಾಗ ಮಗೂಗೇಂತ ಇದನ್ನ ತೊಗೊಂಡೆ-ಕೊಡ್ಲಾ ?" ಜೇಬಿನಿಂದ ಕ್ಯಾಡ್‌ಬರೀಸ್ ಚಾಕಲೇಟನ್ನು ತೆಗೆದು ಅದರ ಹೊರಗಿನ ಕಾಗದವನ್ನು ತೆಗೆದನು. "ಚೀಪುತ್ತಾ ಇದ್ರೆ ಎಲ್ಲಾ ಕರಗಿಹೋಗುತ್ತೆ ಅಲ್ವಾ ?" ಮಗುವಿನ ಬಾಯಿಗಿಡಲು ಬಗ್ಗಿದಾಗ ಶುಭ ಅವನ ಕೈ ತಡೆದಳು.

"ಮಹಾರಾಯ ಸುಮ್ನಿರು. ಯಾರಾದ್ರೂ ಮಗೂಗೆ ಚಾಕಲೇಟು ಕೊಡ್ತಾರಾ ?"

"ಇಲ್ರೀ, ಅವ್ನು ತಾನು ತಿನ್ನೋಕೆ ತೊಗೊಂಡ, ಭಾಸ್ಕರ ಅವನು ತಿಂದ್ರೆ ಎಳೆಮಗೂನೇನೋ ಸೀನು ಅಂತ ಬೈಯ್ತಾರೇಂತ ಈ ಮಗು ನೆಪ

ಮಾಡಿ ತಂದಿದ್ದಾನೆ....ಪಾಪ, ತಿನ್ನು ಮರಿ, ನಿಮ್ಮಪ್ಪಂಗೆ ಹೇಳೋಲ್ಲ. ಮಗೂನೇ ತಿಂದ್ಬಿಡ್ತೂಂತ ಹೇಳ್ತೀನಿ." ರಘು ಹೇಳಿದಾಗ ಸಂಜಯನ ಮುಖ ಕೆಂಪಾಯಿತು. ಶುಭ ನಕ್ಕಳು.

"ಯಾಕೆ, ನಿಂಗೂ ಬೇಕಾ ? ಬೇಕಾದ್ರೇ ಕೇಳಿ ಇಸ್ಕೊಳ್ಳೋ !" ಸಂಜಯ ಚಾಕಲೇಟು ಮುರಿದು ರಘುವಿಗೊಂದು ಚೂರು ಶುಭನಿಗೊಂದು ಚೂರು, ಕೊಟ್ಟು ಮಿಕ್ಕದ್ದನ್ನು ತನ್ನ ಬಾಯಿಗಿಟ್ಟುಕೊಂಡನು.

"ಅಂಗಡಿಗೆ ಯಾಕೆ ಹೋಗಿದ್ರೋ ?" ಶುಭ ಸಂಜಯನನ್ನು ಕೇಳಿದಾಗ

"ಅದೇನೋ ನಿನ್ನ ಮಗೂಗೆ ಚಿನ್ನದ ಬಳೆ ಸರ ತೊಗೋಬೇಕಂತೆ, ನಿಂಗೆ ಸೀರೆ ತೊಗೋಬೇಕಾಗಿತ್ತಂತೆ, ಅದಕ್ಕೇ !"

ರಘು ತಟಕ್ಕನೇ ಅಲ್ಲಿಂದ ಎದ್ದು ಹೊರಟನು. ಹೌದು. ತಾನು ಅದನ್ನು ಮರೆತೆನಲ್ಲಾ ! ಮಗುವಿಗಾಗಿ ತಾನೇನೂ ತರಲಿಲ್ಲವಲ್ಲ ! ತನಗೇನೂ ತಿಳಿಯುವುದಿಲ್ಲ. ನಂದಿನಿಯನ್ನೇ ಕೇಳಬೇಕು. ನಂದಿನಿ ರಾಜಮ್ಮನೊಂದಿಗೆ ಮಾತಾಡುತ್ತಾ ಇದ್ದಳು.

"ನಂದಿನಿ, ಇಲ್ಲಿ ಬಾ ಸ್ವಲ್ಪ ! ಮಗೂಗೆ ಏನು ತರ್ಬೇಕೂ ನಾನು ?" ರಘು ಕೇಳಿದಾಗ ನಂದಿನಿ ನಸುನಕ್ಕಳು.

"ಚೆನ್ನಾಗಿ ಕೇಳ್ತಿ.... ಏನು ಬೇಕಾದ್ರೂ ತಂದ್ಕೊಡು–ನಿನ್ನ ಮಗಳಲ್ಲವೇ ಅವಳು ! ನೀನು ಚಿಕ್ಕಪ್ಪನಲ್ಲವೇ ?" ರಘು ತಲೆ ಕೆರೆದುಕೊಂಡನು. ಅಲ್ಲಿಂದ ತಂದೆಯ ಬಳಿಗೆ ಬಂದನು. ಭಾಸ್ಕರ, ಅವರು ಏನೋ ಗಹನವಾದುದನ್ನು ಮಾತಾಡುತ್ತಿದ್ದರು.

"ಅಪ್ಪಾ, ಮಗೂಗೆ ಸಾಯಂಕಾಲ ಏನಾದ್ರೂ ಕೊಡ್ಬೇಕಲ್ಲ-ಏನಾದ್ರೂ ತೊಗೊಂಡು ಬಂದ್ಬಿಡ್ತೀನಿ. ರವಿ-ಶುಭನ ಕಡೆ ಗಮನ ಇರಲಿ !"

"ಸರಿಯಪ್ಪಾ... ! ಶುಭನಿಗೊಂದು ಮಾತು ಹೇಳಿ ಹೋಗು....! ಶಿವರಾಮಯ್ಯನವರು ಎದೆಯ ಮೇಲೆ ಕೈಯಾಡಿಸಿಕೊಂಡರು.

"ಅವಳು ಮನೆ ಯಜಮಾನಿ !"

ಸಂಜಯ ಏನೋ ಹೇಳುತ್ತಿದ್ದುದ್ದನ್ನು ಕೇಳಿ ಶುಭ ನಗುತ್ತಿದ್ದಳು. ಅವಳು ಹಾಗೇ ನಗುತ್ತಿರಲಿ, ಎನಿಸಿತು ರಘುವಿಗೆ.

"ಶುಭಾ, ನಾನು ಸ್ವಲ್ಪ ಹೊರಗೆ ಹೋಗಿಬರ್ತೀನೆ. ರವಿಯ ಕಡೆ

ಗಮನ ಇರಲಿ. ಅವನು ಇನ್ನೊಂದೆರಡು ಗಂಟೆ ಕಾಲ ಏಳೋಲ್ಲ; ಎದ್ದರೆ ಅವನಿಗೆ ಒಂದು ಲೋಟ ಹಾಲು ಕೊಡಿ. ಅದು ಬೇಡದಿದ್ದರೆ ಬಾರ್ಲಿ ಗಂಜಿಗೆ ಮಜ್ಜಿಗೆ ಬೆರಸಿ ಕೊಡಿ. ಬಾಬುಗೆ ಗೊತ್ತು....!"

ರವಿಯು ಆರೈಕೆ ತನಗೆ ಒಪ್ಪಿಸಿದುದು ಕಂಡು ಶುಭ ಕೊಂಚ ಗೆಲುವಾದಳು.

"ಆಗ್ಲಿ....ರಘೂ....ನಾನು ನೋಡ್ಕೋತೀನಿ...." ಶುಭ ಭರವಸೆ ನೀಡಿದಳು.

"ನಾನೂ ಬರ್ತೀನೋ ರಘು" ಸಂಜಯ ಎದ್ದು ನಿಂತನು.

"ಹೌದು, ಹೌದು. ನಿನ್ನ ಇಲ್ಲಿ ಬಿಟ್ರೆ ಸ್ವಲ್ಪ ಕಷ್ಟಾನೇ ಬಾ.... ನೀನು ಸುಗ್ರೀವನ ವಂಶದವನು. ಈ ನಮ್ಮ ಅಶೋಕವನಾನೆಲ್ಲಾ ಹಾಳು ಮಾಡಿಬಿಟ್ಟೇಯಾ!"

ರಘು ಸಂಜಯನನ್ನು ಕರೆದೊಯ್ದನು.

ರಘು ತನಗೆ ತೋರಿದುದನ್ನೆಲ್ಲಾ ಕೊಂಡು ಬಂದಾಗ, ಶುಭ ರವಿಯ ರೂಮಿನಲ್ಲಿ ಕುಳಿತಿದ್ದಳು. ರವಿ ನಿದ್ದೆಯ ಮಂಪರಿನಲ್ಲಿದ್ದರೂ ಎಚ್ಚರವಿತ್ತು. ಅವನ ಪಕ್ಕದಲ್ಲೇ ಕುಳಿತಿದ್ದ ಶುಭನ ಕೈ ತನ್ನೆದೆಯ ಮೇಲಿಟ್ಟುಕೊಂಡು ಕಣ್ಮುಚ್ಚಿದ್ದನು.

"ಎದ್ದಿದ್ನಾ?" ರಘೂ ಆತಂಕದಿಂದ ಕೇಳಿದಾಗ, ರವಿಯೇ ಕ್ಷೀಣವಾಗಿ ನಕ್ಕು ಕಣ್ತೆರೆದನು.

"ಹೂಂ....ಎದ್ದಿದ್ದೀನಪ್ಪಾ!"

"ಹಾಲು ಕುಡಿದ್ರು....ಇಷ್ಟೊತ್ತೂ ಮಾತಾಡ್ತಾ ಇದ್ರು."

ಶುಭ ಸಂತಸದಿಂದ ಹೇಳಿದಳು.

"ಹೌದು. ನೀವು ಕೊಟ್ರೆ ಕುಡ್ದ. ದಿನಾ ನಾನು ಅವನಿಗೆ ಉಪಚಾರ ಮಾಡಿ ಮಾಡಿ ಸಾಕಾಗಿಹೋಗೋದೂ....! ಇನ್ಮೇಲೆ ಅವನ ಊಟ ತಿಂಡಿ, ನಿದ್ದೆ ನಿಮ್ಮ ಜವಾಬ್ದಾರಿ!"

ರಘು ಕೈ ಮುಗಿದ.

"ನೀವುಂಟು, ಅವನುಂಟು. ನನ್ನ ಬಿಡುಗಡೆ ಮಾಡಿ!"

ಸಂಜಯ ರಘು ತಂದಿದ್ದೆಲ್ಲಾ ಕೈಯಲ್ಲಿ ಹೊತ್ತು ತಂದು ಶುಭನ ಕಾಲ ಬಳಿ ಇಟ್ಟ.

"ಅಮ್ಮಾವ್ರು ಒಪ್ಪಿಸ್ಕೊಳ್ಳಿ, ಇದು ಎಲ್ಲಾ ನಿಮ್ಮ ಮಗಳಿಗೆ. ಅವಳಿಗೆ ಇನ್ನೆರಡು ವರ್ಷ, ಬಟ್ಟೆ, ಆಟದ ಸಾಮಾನುಗಳು ಬೇಕಾಗೋಲ್ಲ! ಕಾರಿನಲ್ಲಿ ಇನ್ನೂ ಇದೆ. ಬೈಸಿಕಲ್ಲು, ಒಂದು ಪುಟ್ಟ ಕಾರೂ !" ಸಂಜಯ ಕೈ ಕಟ್ಟಿ ನಿಂತನು.

ರಘು ಮಾರ್ಕೆಟ್ನಲ್ಲಿ ಅಂಗಡೀನೆ ಕೊಂಡ್ಕೊತಾನೇ ಅಂದ್ಕೊಂಡಿದ್ದೆ."

ಶುಭ ತನ್ನ ಮುಂದೆ ಬಿದ್ದಿದ್ದ ಪ್ಯಾಕೆಟ್ಟಿನ ರಾಶಿಗಳನ್ನು ನೋಡಿದಳು.

"ಇದೇನು ರಘು....ನಿಮಗೆ ಹುಚ್ಚು ಹಿಡಿದಿಲ್ಲ ತಾನೇ ?"

ರಘೂ ಮಗುವಿನ ಬಟ್ಟೆಗಳಿದ್ದ ಪ್ಯಾಕೆಟ್ಟು ಬಿಚ್ಚುತ್ತಾ ಹೇಳಿದ-

"ನನ್ನ ಮಗಳು ಅವಳು. ನನಗಿಷ್ಟವಾದದ್ದು ಅವಳಿಗೆ ಮಾಡ್ತೀನಿ— ನೀವ್ಯಾರೂ-ಕೇಳೋಕೆ ಅದೆಲ್ಲಾ....?"

ಪ್ಯಾಕೆಟ್ಟಿನಲ್ಲಿದ್ದ ತರಹ ತರಹದ ಫ್ರಾಕುಗಳನ್ನು ಶುಭನ ಮುಂದೆ ಹಿಡಿದ.

"ಹೇಗಿದೆ ನನ್ನ ಸೆಲೆಕ್ಷನ್ ?"

ಶುಭ ಉತ್ತರಿಸಲಿಲ್ಲ. ಉತ್ಕಂಠಿತಳಾಗಿ ರಘುವನ್ನು ನೋಡುತ್ತಿದ್ದಳು. ರವಿ ಮೆಲ್ಲನೆದ್ದು ಕುಳಿತು ರಘು ತಂದಿದ್ದ ಸಮಾನೆಲ್ಲವನ್ನೂ ನೋಡಿದ.

"ಫೈನ್, ಫೈನ್. ತುಂಬಾ ಚೆನ್ನಾಗಿವೆ ರಘೂ....ತುಂಬಾ ಥ್ಯಾಂಕ್ಸ್ ನಾನು ತರಬೇಕಾಗಿದ್ದೆಲ್ಲಾ ನೀನೇ ತಂದಿದ್ದೀಯ !"

ರವಿ ಶುಭಳನ್ನು ಅಲುಗಿಸಿ ಹೇಳಿದ.

"ಹೋಗು, ನನ್ನ ಮಗಳನ್ನ ಕರ್ಕೊಂಡು ಬಾ. ಈ ವೈಟ್ ಫ್ರಾಕ್ ಹಾಕು. ಹೇಗೆ ಕಾಣ್ತಾಳೇ ನಾನು ನೋಡ್ಬೇಕೂ."

ಸಂಜಯ, "ತಾಳು, ನಾನು ಎತ್ಕೊಂಡು ಬರ್ತೀನಿ" ಎಂದು ಹೊರಟಾಗ ರಘು ಅವನನ್ನು ತಡೆದ.

"ಬೇಡಯ್ಯಾ. ಶುಭಾನೇ ಎತ್ಕೊಂಡು ಬರ್ಲಿ. ಈ ಮನೇಲಿ ಎಲ್ಲಾ ಸಾಮಾನುಗಳ ಮೇಲೂ ಬರೀಬೇಕು ನೀನಿರೋತನ್ಕ 'ಫ್ರಜೈಲ್- ಹಾಂಡಲ್ ವಿತ್ ಕೇರ್' ಅಂತ."

ಶುಭ ಒಲ್ಲದ ಮನಸ್ಸಿನಿಂದ ಮಲಗಿದ್ದ ಮಗುವನ್ನು ಎತ್ತಿಕೊಂಡು ಬಂದಳು. ಬಿಳಿಯ ನೆರಿಗೆ ನೆರಿಗೆಯಾಗಿದ್ದ, ಕೊಂಚ ದೊಡ್ಡದಾಗಿದ್ದ ಫ್ರಾಕನ್ನು ಅದಕ್ಕೆ ಹಾಕಿದಾಗ ಮಗು ಕೊಸರಾಡಿ ಅಳುವುದಕ್ಕೇ ಮೊದಲು ಮಾಡಿತು. ರಘೂ, ಸಂಜಯ, ರವಿ ಬಿರುಗಣ್ಣಿನಿಂದ ಮಗುವನ್ನೇ ನೋಡುತ್ತಿದ್ದರು. ಫ್ರಾಕ್ ಹಾಕಿಯಾದ ಮೇಲೆ ರವಿಯ ಮುಂದೆ ಶುಭ ಮಗುವನ್ನು ಹಿಡಿದಾಗ ರವಿ ಅದನ್ನು ತಬ್ಬಿ ಕೆನ್ನೆ, ಹಣೆ, ತಲೆಗೆ ಮುತ್ತಿಟ್ಟ.

"ಮೈ ಸ್ವೀಟ್, ಮೈ ಶುಗರ್, ಮೈ ಲವ್" ಮಗುವನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಅದರ ಮೈ ತಡವಿದನು.

"ನನ್ನ ಮಗಳಷ್ಟು ಚೆನ್ನಾಗಿ ಪ್ರಪಂಚದಲ್ಲಿ ಯಾರೂ ಇಲ್ಲ, ಅಲ್ವೇನೋ ರಘು ?"

ಅದನ್ನು ನೋಡುತ್ತಿದ್ದ ರಘುವಿನ ಕಣ್ಣು ಮಂಜಾಯಿತು.

"ಹೌದು ರವಿ, ನಿನ್ನ ಮಗಳು ಅಪ್ರತಿಮ ಸುಂದರಿಯಾಗ್ತಾಳೆ !" ಶುಭ ಮಗುವಿಗೆ ಮುತ್ತಿಡುವ ನೆವದಲ್ಲಿ ತುಂಬಿದ್ದ ಕಣ್ಣೊರಸಿಕೊಂಡಳು.

"ಎಲ್ರೂ ಕೊಟ್ರು–ನಾನೇನು ಕೊಡಲಿ....ನನ್ನ ಬಂಗಾರಕ್ಕೆ ?"

ರವಿ ಮತ್ತೆ ಮಗಳನ್ನು ಮುತ್ತಿಟ್ಟ. ಕೈಕಟ್ಟಿ ಅವನನ್ನೇ ನೋಡುತ್ತಿದ್ದ ರಘುವನ್ನು ನೋಡಿದ ರವಿ. ಅವನ ಕಣ್ಣು ಮಿಂಚಿತು.

"ನೋಡೂ–ಬಂಗಾರ....ನಿಂಗೆ ಫೈನ್ ಪ್ರೆಸೆಂಟ್–ನಿಂಗೆ ರಘೂನೇ ನಾನು ಪ್ರೆಸೆಂಟ್ ಮಾಡ್ತೀನಿ. ಅವನಂತಹವನು ನಿನ್ನ ಬಳಿಯಿದ್ದರೆ ನಿನಗೆ ಯಾವ ಪ್ರೆಸೆಂಟೂ ಬೇಡ....ಬಾರಯ್ಯ, ಮುದ್ದು ಮಾಡು ನನ್ನ ಮಗಳಿಗೆ. ಇನ್ಮೇಲೆ ಏನಿದ್ರೂ ನೀನು ಅವಳಿಗೆ ಸೇರಿದೋನು ?" ರಘುವಿಗೆ ಅರಿವಿಲ್ಲದೆಯೇ ಕಣ್ಣಲ್ಲಿ ನೀರುಕ್ಕಿ ಬಂತು.

"ಥ್ಯಾಂಕ್ಸ್ ರವಿ....ನಾನೂ, ನಿನ್ನ ಮಗಳೂ, ಒಬ್ಬರಿಗೊಬ್ಬರ ಪ್ರೆಸೆಂಟ್....ನೀನು ಮುಂಚೆ ಅವಳ್ನ ನನಗೆ ಪ್ರಾಮಿಸ್ ಮಾಡಿದ್ದೀ–ಈಗ ನಗ್ಗೆ ಪ್ರೆಸೆಂಟ್ ಮಾಡ್ದೀ."

ರಘು ಬಗ್ಗಿ ಮಗುವಿಗೆ ಮುತ್ತಿಟ್ಟು ಹೊರಗೆ ಹೊರಟುಹೋದನು.

"ಫೂಲಿಶ್–ಫೆಲೋ....ಅವನನ್ನು ಪ್ರೀತಿಸುವ, ಅವನದಾಗುವ ನನ್ನ ಮಗಳು ತುಂಬಾ ಲಕ್ಕೀ ಶುಭ....!"

ರವಿ ಹೇಳಿದಾಗ ಅವನ ಕಣ್ಣೂ ಮಂಜಾಗಿತ್ತು. ಶುಭ ನಿಟ್ಟುಸಿರ ಬಿಟ್ಟು ಕಣ್ಣುಮುಚ್ಚಿದಾಗ ರವಿ ಮಗುವನ್ನು ಅವಳ ಕೈಗಿತ್ತ.

"ಸಾರಿ, ಶುಭ. ನಿನಗೆ ಆಯಾಸವಾಗಿರ್ಬೇಕೂ...ನೀನು ಮಲ್ಕೊ ಹೋಗು" ಸಂಜಯನತ್ತ ತಿರುಗಿ ಹೇಳಿದ.

"ನಿಮ್ಮಮ್ಮ, ನಿಮ್ಮಪ್ಪನ ಕರೆಯಪ್ಪಾ. ನಾನು ಅವರೊಡನೆ ಮಾತಾಡ ಬೇಕೂ–!"

ಶುಭ ಅಳು ನುಂಗುತ್ತಾ ಮಗುವನ್ನೆತ್ತಿಕೊಂಡು ತನ್ನ ರೂಮಿಗೆ ಹೊರಟಳು. ಅಳುತ್ತಿದ್ದ ಮಗುವಿಗೆ ಹಾಲೂಡಿಸಲು ತೊಡೆಯ ಮೇಲೆ ಮಲಗಿಸಿಕೊಂಡಾಗ ಭಾಸ್ಕರ, ನಂದಿನಿ ರವಿಯ ರೂಮಿಗೆ ಹೋದುದ ಕಂಡಳು. ರಘು ಅವಳ ಕಣ್ಣಿಗೆ ಬೀಳಲಿಲ್ಲ.

ರಘುವನ್ನು ಅರಸುತ್ತಾ ಬಂದ ಸಂಜಯನಿಗೆ ರಘು ತೋಟದ ಮೂಲೆಯಲ್ಲಿದ್ದ ಮರದಡಿ ಒಬ್ಬನೇ ನಿಂತಿರುವುದು ಕಂಡಿತು. ಅವನತ್ತ ಹೆಜ್ಜೆ ಹಾಕಿದ.

"ಏನಪ್ಪಾ, ಒಬ್ನೇ ಯೋಚಿಸ್ತಾ ನಿಂತುಬಿಟ್ಟೆ. ಟೈಂ ವೇಸ್ಟ್ ಮಾಡೋನೂ ಅಂದ್ರೆ ನೀನು!" ಹಿಂದಿನಿಂದ ಬಂದು ತನ್ನನ್ನು ಎಚ್ಚರಿಸಿದ ಸಂಜಯನನ್ನು ಎದುರಿಸಿ, ಮುಖ ಕೊಟ್ಟು ಮಾತಾಡಲಾಗಲಿಲ್ಲ ರಘುವಿಗೆ. ಅವನ ಕಡೆ ತಿರುಗಿ ನೋಡದೆಯೇ ಹೇಳಿದನು.

"ಬಾಬೂಗೆ ಹೇಳಿ ಸ್ಟೋರ್ ರೂಮಿನಿಂದ ತೆಂಗಿನಕಾಯಿ ತೆಗೆದು ಎಷ್ಟಿದೇಂತ ಎಣಿಸಿಕೊಂಡು ಬರ್ತೀಯಾ?"

"ಓ. ಕೇ." ಸಂಜಯ ಓಡಿಹೋಗುತ್ತಲೇ ರಘು ಹಿಂತಿರುಗಿ ನೋಡಿದನು. ನೆಗೆಯುತ್ತಾ, ಕೈಗೆ ಸಿಕ್ಕ ಗಿಡಗಳ ಎಲೆ ಕೀಳುತ್ತಾ ಮನೆಯೊಳಗೆ ನಿರ್ಗಮಿಸುತ್ತಿದ್ದ ಸಂಜಯ ಅವನ ಬಹಳ ಹಿಂದಿನ ನೆನಪಿನಾಳವನ್ನು ಕೆದರಿಸಿದ–ರವಿ ಯಾವಾಗಲೂ ಚಿಕ್ಕವನಾಗಿದ್ದಾಗ ನೆಗೆಯುತ್ತಾ, ಗಿಡಗಳನ್ನು ಕೀಳುತ್ತಾ ಓಡುತ್ತಿದ್ದಾಗ ತಂದೆ ಎಷ್ಟೋ ಬಾರಿ ಗದರಿಕೊಂಡದ್ದುಂಟು–

"ಕೈ ಕಾಲು ಸುಮ್ಮನೆ ಇರೋಲ್ಲ ರವೀಗೆ--ಸುಮ್ನೇ ಹೋಗ್ತಾರೇ?"

ಆಗ ಇದ್ದುದು ಸಣ್ಣ ಚೊಕ್ಕ ಮನೆ--ಪುಟ್ಟ ತೋಟ-ಈಗ ಇಷ್ಟು ಭಾರಿ ತೋಟ, ದೊಡ್ಡ ಬಂಗಲೆ. ಎಷ್ಟು ಅಕರೆಯಿಂದ ಪ್ರತಿಯೊಂದು ಗಿಡ,

ಮರವನ್ನೂ ಬೆಳೆಸಿದ್ದ ರವಿ! ದಿನಗಳು ಹೇಗೆ ನಿಮಿಷಗಳಂತೆ ಉರುಳಿ ಹೋಗಿದ್ದವು. ಕಾಲ ಗರ್ಭದಲ್ಲಿ ಅಂದಿನ ಸಂತಸ, ಸುಖಗಳನ್ನು ಅಡಗಿಸಿ ಕೊಂಡಿತ್ತು! ಮುಂದಿರುವುದೆಲ್ಲಾ ಒಂದು ದುಃಖಮಯ ಕೂಪ, ಬಗೆ ಹರಿಯದ ಸಮಸ್ಯೆ, ರವಿ ಭಾಸ್ಕರ ನಂದಿನಿಯೊಂದಿಗೆ ಏನು ಮಾತಾಡುತ್ತಿರಬಹುದು? ರವಿಗೆ ತನ್ನ ಅಂತ್ಯ ಸಮೀಪಿಸುತ್ತಿರುವುದು ತಿಳಿದಿರಬಹುದೇ? ಅವನು ಮಾತಾಡುವ ವೈಖರಿ ಇದ್ದಕ್ಕಿದ್ದ ಹಾಗೆ ಬದಲಾಯಿಸಲು ಕಾರಣ! ಬೆಳಿಗ್ಗೆ ಅವನು ನಿದ್ದೆ ಮಾಡುತ್ತಿದ್ದಾಗಲೂ ತಾನು ಗಮನಿಸಿದಂತೆ ಮುಖದಲ್ಲಿ ಎಂದೂ ಕಾಣದ ಶಾಂತಿ ನೆಲೆಸಿತ್ತು. ಡಾ|| ಕೃಷ್ಣಗೆ ಫೋನು ಮಾಡಿದರೆ! ಅದು ಪ್ರಯೋಜನವಾಗಲಾರದು. ಅವರೇ ಹೇಳಿದ್ದರು. "ಇಟ್ ಈಸ್ ಎ ಮ್ಯಾಟರ್ ಆಫ್ ಟೈಂ" ಎಂದು. ತನ್ನ ಆಪ್ತರೊಡನೆ ಇಲ್ಲಿರುವುದೇ ಅವನಿಗೆ ಮೋಕ್ಷ!

ರಘು ನೋಡುತ್ತಿದ್ದಂತೆಯೇ ಭಾಸ್ಕರ ಒಳಗಿನಿಂದ ರಘುವನ್ನರಸುತ್ತಾ ಬಂದನು. ಅವನ ಮುಖ ಗಂಭೀರವಾಗಿತ್ತು.

"ರಘೂ...ಇಲ್ಲಿ ಬಾ...ರವಿ ಬಹಳ ಗಲಾಟೆ ಮಾಡ್ತಾ ಇದ್ದಾನಲ್ಲ..! ನಾನೂ ಸ್ವಲ್ಪ ನನ್ನ ಆಫೀಸಿಗೆ ಹೋಗಿ ಬರ್ಬೇಕೂ. ಬರ್ತೀಯಾ ಇಲ್ಲ ಸಣ್ಣಯ್ಯನನ್ನು ಕರೆದುಕೊಂಡು ಹೋಗಲೋ?"

ರಘು ಪ್ರಶ್ನಾರ್ಥಕವಾಗಿ ಅವನನ್ನು ನೋಡಿದ.

"ರವಿ ವಿಲ್ ಮಾಡ್ಬೇಕಂತೆ!" ಭಾಸ್ಕರ ನೆಲ ನೋಡುತ್ತಾ ಉಸುರಿದಾಗ ರಘುವಿಗೆ ಎಲ್ಲೋ ಅಗ್ನಿ ಸ್ಫೋಟವಾದಂತಾಯಿತು. ಅದರ ಧಗೆ ತಡೆಯಲಾರದೇ ಒಂದು ಕ್ಷಣ ಕಣ್ಮುಚ್ಚಿದ. ಭಾಸ್ಕರ ಮರುಮಾತಾಡದೇ ಅವನ ಎರಡು ಕೈಗಳನ್ನೂ ಹಿಡಿದು ಅದುಮಿ ಅವನನ್ನು ಆಲಂಗಿಸಿದನು. ರಘುವಿಗೆ ಕಣ್ಣೀರಿಗೂ ಮೀರಿದ ಶೋಕ ಹೃದಯದಲ್ಲಿ ಹೆಪ್ಪುಗಟ್ಟಿತ್ತು. ಕಾರಿನತ್ತ ಹೆಜ್ಜೆ ಹಾಕಿದನು.

ದಾರಿಯುದ್ದಕ್ಕೂ ಭಾಸ್ಕರ, ರಘು ಇಬ್ಬರೂ ಮೌನ, ಭಾಸ್ಕರನ ಆಫೀಸಿನ ಮುಂದೆ ಕಾರು ನಿಂತಾಗ ಭಾಸ್ಕರ ಇಳಿದು ರಘುವೂ ಇಳಿಯುವನೆಂದು ತಿಳಿದು ಬಾಗಿಲು ತೆಗೆದಾಗ ರಘು ತಲೆಯಲ್ಲಾಡಿಸಿದ. "ನನಗೆ ಇಳಿಯಲೂ ವ್ಯವಧಾನವಿಲ್ಲ."

ಭಾಸ್ಕರ, ರಘು ಮನೆಗೆ ಹಿಂತಿರುಗಿದಾಗ ಮನೆಯಲ್ಲಿ ಎಲ್ಲರಿಗೂ ಊಟಕ್ಕಾಗಿ ಎಲೆ ಹಾಕಿದ್ದರು.

"ನಿಮ್ಮಿಬ್ಬರಿಗೋಸ್ಕರ ಕಾಯ್ತಾ ಇದ್ದೆವು. ಹೊಟ್ಟೆ ತಾಳಾ ಹಾಕ್ತಾ ಇದೆ."

ಸಂಜಯ ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡನು. ಶುಭ ಮತ್ತೆ ರವಿಯ ರೂಮಿನಲ್ಲಿ ಕುಳಿತಿದ್ದಳು. ಅವನು ಅವಳ ಕೈ ಹಿಡಿದು ಅವಳ ಮುಖವನ್ನೇ ನೋಡುತ್ತ ಏನೋ ಹೇಳುತ್ತಿದ್ದನು. ಅವಳ ಮುಖದಲ್ಲಿ ವಿಲಕ್ಷಣವಾದ ಮಂದಹಾಸವಿತ್ತು. ರಘು ನೋಡಿಯೂ ನೋಡದಂತೆ ಊಟದ ಮನೆಯತ್ತ ಕಾಲು ಹಾಕಿದ. ಬಾಬು ಹಾಕಿದ್ದ ಎಲೆಗಳಿಗೆ ಬಡಿಸುತ್ತಿದ್ದನು. ನಂದಿನಿ ಎಲೆಗಳ ಮುಂದೆ ರಂಗೋಲಿ ಹಾಕುತ್ತಿದ್ದಳು.

"ಬಾಬೂ, ರವಿಗೂ ಒಂದು ಎಲೆ ಹಾಕು. ಇವೊತ್ತು ಅವನೂ ಸ್ವಲ್ಪ ಊಟ ಮಾಡಲಿ. ಮಗು ಬಂದ ದಿನ ಪಾಪ, ಅವನೇಕೆ ಬರಿಯ ಮಜ್ಜಿಗೆ, ಗಂಜಿ, ಹಾಲೂ ಕುಡೀಬೇಕು." ರಘು ಹೇಳಿದಾಗ ನಂದಿನಿ ರಘುವನ್ನು ತಲೆಯೆತ್ತಿ ನೋಡಿದಳು.

"ರಘೂ, ಬೇಡಾ, ಅವನಿಗೆ ಅಪ್‌ಸೆಟ್ ಆದ್ರೆ !"

"ಅವನಿಗೆ ಯಾವುದೂ, ಏನೂ ಮಾಡಲು ಆಗೋಲ್ಲ, ನಂದಿನಿ... ಹಿ ಈಸ್ ಬಿಯಾಂಡ್ ಎವೆರಿಥಿಂಗ್. ಇರೋಷ್ಟು ದಿನ ಚೆನ್ನಾಗಿ ತಿಂದು ಉಂಡು ಹಾಯಾಗಿರಲಿ....ಡಾಕ್ಟರು ಹೇಳಿದ್ದಾರೆ." ರಘು ಹೇಳಿದಾಗ ಬಾಬುವಿನ ಕೈಲಿದ್ದ ಕೋಸಂಬರಿಯ ಪಾತ್ರೆ ಕೆಳಗೆ ಬಿತ್ತು.

"ಸರಿಯಾಗಿ ಗಮನವಿಟ್ಟು ಕೆಲಸಮಾಡ್ಬಾರ್ದೇ ?" ರಘು ಗದರಿದ. ಬಾಬು ತಲೆ ತಗ್ಗಿಸಿ ಕೆಳಗೆ ಚೆಲ್ಲಿದ್ದ ಕೋಸಂಬರಿಯನ್ನು ಸಣ್ಣ ತಟ್ಟೆಯಲ್ಲಿ ಆಯ್ದು ಹೊರಗೆ ಹಾಕಲು ತೆಗೆದುಕೊಂಡು ಹೋದನು.

"ರಘೂ, ನನಗೇಕೋ ಬಹಳ ಭಯವಾಗ್ತಾ ಇದೆ" ನಂದಿನಿ ಮೆಲ್ಲನುಸುರಿದಳು. ರಘು ನೋವಿನ ನಗೆ ನಕ್ಕನು.

"ಗಾಳಿ, ಮಳೆ, ಜೋರಾಗಿದ್ದಷ್ಟೂ ಅದನ್ನೆದುರಿಸಲು ಕೆಲವು ಮರಗಳು ತಮ್ಮ ಕಾಂಡದ ಸಿಪ್ಪೆಯನ್ನು ಬಹಳ ದಪ್ಪವಾಗಿ ಮಾಡಿಕೊಳ್ಳುತ್ತವೆಯಂತೆ.... ಹಾಗೇ ನೋಡು ನಂದಿನಿ, ನನ್ನೆದೆ ಕಲ್ಲಾಗುತ್ತಿದೆ. ರಕ್ತ ಹೆಪ್ಪಾಗ್ತಾ ಇದೆ."

ರಘು ತನ್ನೆದೆಯನ್ನು ತಟ್ಟಿಕೊಂಡನು.

ತಾನೂ ಎಲ್ಲರೊಡನೆ ಕುಳಿತು ಮಾಡಿದ ರುಚಿರುಚಿಯಾದ ಅಡಿಗೆಯನ್ನು ಊಟ ಮಾಡುವೆನೆಂದು ತಿಳಿದಾಗ ರವಿ ಸಂತಸಪಟ್ಟ. "ನಾಲಿಗೆ ಎಲ್ಲ ಮರಗಟ್ಟಿ ಹೋಗಿತ್ತು. ಸಧ್ಯ ರಘು ನನಗೆ ವಿಮೋಚನೆ ತೋರಿಸಿದೆ." ರಘುವನ್ನು ನೋಡಿ ನಕ್ಕನು.

"ಉಪ್ಪಿನಕಾಯಿ, ಆಂಬೊಡೆ ಸ್ವಲ್ಪ ಜಾಸ್ತಿ ಹಾಕೊಂತ ಹೇಳು ಬಾಬೂಗೆ."

ಶುಭನನ್ನೂ ಅವನನ್ನೂ ಒಟ್ಟಿಗೇ ಊಟಕ್ಕೆ ಕೂಡಿಸಿದಾಗ ರವಿ ಕಿರುನಗೆ ನಕ್ಕನು. "ಏನು ಹೊಸ್ದಾಗಿ ಮದ್ವೆ ಆದೋರ ಹಾಗೆ ಒಟ್ಟಿಗೇ ಕೂಡ್ಸಿದ್ರಿ ?" ಅವನು ಆನಂದವಾಗಿ ಎಲ್ಲವನ್ನೂ ರುಚಿಸಿ ಹೊಟ್ಟೆ ತುಂಬಾ ಉಂಡಾಗ ಅವನ ಸುತ್ತಲೂ ಕುಳಿತಿದ್ದ, ಶಿವರಾಮಯ್ಯ, ಭಾಸ್ಕರ, ನಂದಿನಿ, ರಘುವಿಗೆ ಗಂಟಲಲ್ಲಿ ತುತ್ತು ಇಳಿಯಲಿಲ್ಲ.

"ಶುಭ ಕರಿದಿದ್ದು ಖಾರದ್ದು ತಿನ್ಬೇಡಾ, ಮಗೂಗೆ ಅಫೆಕ್ಟ್ ಆಗುತ್ತೆ". ಎಂದು ಶುಭನಿಗೆ ರವಿ ಹೇಳಿದಾಗ ಶುಭ ಊಟವನ್ನು ಅರ್ಧದಲ್ಲೇ ಬಿಟ್ಟು ಎದ್ದುಬಿಟ್ಟಳು.

"ನನಗೆ ಸಾಕು. ಒಂದು ತರಹ ಸಂಕಟ ಆಗುತ್ತೆ ಇನ್ನು ತಿಂದ್ರೆ !"

ರವಿ ಊಟಮಾಡಿ ತೇಗಿ ಎದ್ದುನಿಂತಾಗ ರಘುವೂ ಎದ್ದು ಅವನಿಗೆ ಕೈ ತೊಳೆಯಲು ಸಹಾಯಮಾಡಿ, ಅನಂತರ ಅವನನ್ನು ಡ್ರಾಯಿಂಗ್ ರೂಮಿಗೆ ನಡೆಸಿಕೊಂಡು ಬಂದಾಗ ರವಿ ಅವನ ಕೈ ಕೊಡವಿದ. "ಬಿಡೋ ಲೋ, ನಂಗೇ ನಡ್ಯೋಕೆ ಆಗುತ್ತೆ" ಡ್ರಾಯಿಂಗ್ ರೂಮಿನಲ್ಲಿ ಕೂಡದೇ ಶುಭನ ರೂಮಿನತ್ತ ಹೆಜ್ಜೆ ಹಾಕಿದಾಗ ರಘು ಕಣ್ಣರಳಿಸಿ ನೋಡಿದ. ಅವನಿಗೆ ಸುಸ್ತಾಗಲೀ ಬಳಲಿಕೆಯಾಗಲೀ ಇದ್ದಂತೆ ತೋರಲಿಲ್ಲ. ಅವನು ಮೊದಲಿನ ಹಾಗೆ ಉತ್ಸಾಹ ಉಕ್ಕಿ ಹರಿಯುತ್ತಿದ್ದ ರವಿಯ ಹಾಗೆ ಕಂಡನು. ಅವನು ಹೋಗಿ ಶುಭನ ರೂಮಿನ ಬಾಗಿಲು ಮುಂದೆ ಮಾಡಿದಾಗ ರಘುವನ್ನು ಹಿಂಬಾಲಿಸಿ ಬಂದ ನಂದಿನಿಯೂ ಅಲ್ಲೇ ನಿಂತಳು. ಇಬ್ಬರೂ ಒಬ್ಬರ ಮುಖವನ್ನು ಒಬ್ಬರು ನೋಡಿದರು. ಮೌನವೇ ಅರ್ಥಗರ್ಭಿತವಾಗಿತ್ತು. ಶಿವರಾಮಯ್ಯನವರೂ, ಭಾಸ್ಕರನ ಕಣ್ಣುಗಳೂ ರವಿಯನ್ನರಸಿದಾಗ ಅವಳ ದೃಷ್ಟಿ ಮುಚ್ಚಿದ ಬಾಗಿಲ ಮೇಲೆ ಬಿದ್ದಿತು.

ಯಾರೂ, ಯಾರನ್ನೂ ಏನೂ ಪ್ರಶ್ನಿಸುವ ಸ್ಥಿತಿಯಲ್ಲಿರಲಿಲ್ಲ. ಸಂಜಯ ನೊಬ್ಬನೇ ಹಾಯಾಗಿ ಸೋಫಾದ ಮೇಲೆ ಮೈಚಾಚಿ ಮಲಗಿದ್ದನು.

ರಘು ಸಂಜೆಯ ಕಾರ್ಯಕ್ರಮಕ್ಕಾಗಿ ಸಿದ್ಧಗೊಳಿಸಲು ನಂದಿನಿಯನ್ನೂ ತನ್ನ ಜೊತೆ ಕರೆದೊಯ್ದನು. ತೆಂಗಿನಕಾಯಿ, ಬಾಳೇಹಣ್ಣು, ಎಲೆಯಡಿಕೆ, ಹೂವು, ಇವುಗಳ ರಾಶಿ ಉಗ್ರಾಣದಲ್ಲಿ ತುಂಬಿತ್ತು. ಹೊರಗಿನಿಂದ ಯಾರೂ ಬರುವವರಿರಲಿಲ್ಲ. ಎಲ್ಲಾ ಎಸ್ಟೇಟಿನಲ್ಲಿ ವಾಸವಾಗಿದ್ದ ಕುಳಗಳೇ. ಬಂದವರಿ ಗೆಲ್ಲಾ ಕಾಯಿ, ಹಣ್ಣು, ಹೂವು, ಕೊಡುವುದೆಂದು ರಘು ನಂದಿನಿಗೆ ಹೇಳಿದ್ದ. ಬಾಳೆಹಣ್ಣುಗಳನ್ನು ಗೊನೆಯಿಂದ ಬಿಡಿಸಿ, ಎಲೆ ಅಡಿಕೆಗಳ ಪಟ್ಟಿ ಸಿದ್ಧಪಡಿಸಿ, ತೆಂಗಿನಕಾಯಿಯ ಜುಂಗು ಬಿಡಿಸಿಯಾದ ಮೇಲೆ ರಘೂ ಕೈಲಿದ್ದ ವಾಚು ನೋಡಿಕೊಂಡಾಗ ನಾಲ್ಕು ಗಂಟೆ ತೋರಿಸುತ್ತಿತ್ತು. ನಂದಿನಿ ರಘುವಿನ ಗಮನ ಸೆಳೆದಳು.

"ರಘೂ, ರವಿ ಅಷ್ಟೊತ್ತು ಶುಭನ ರೂಮಿನಲ್ಲಿರುವುದು ಸರಿಯಲ್ಲ. ಅವಳಿನ್ನೂ ಹಸೀ ಬಾಣಂತಿ, ಏನಾದರೂ ಹೆಚ್ಚುಕಡಿಮೆಯಾದರೆ!" ರಘು ಅದಕುತ್ತರವಾಗಿ ನಕ್ಕನು. "ಇಬ್ರೂ ಎಳೇ ಮಕ್ಕಳಲ್ಲ ನಂದಿನಿ. ಯಾಕೆ ಸುಮ್ಮನೇ ಹೆದರುತ್ತೀ ? ನಾನಂತೂ ಏನೂ ಹೇಳೋಲ್ಲ. ನೀನು ಬೇಕಾದ್ರೆ ನೋಡು ಹೋಗು....! ನಾನು ಬಾಬೂಗೆ ಹೇಳಿ ಕಾಫಿ ಮಾಡಿಸ್ತೀನಿ." ರಘು ಅಲ್ಲಿಂದ ಸರಿದ.

ನಂದಿನಿಯ ಮನಸ್ಸು ತಡೆಯಲಿಲ್ಲ. ಯಾವುದೋ ಪುಸ್ತಕವನ್ನು ನೆಪ ಮಾತ್ರ ಹಿಡಿದಿದ್ದ ಭಾಸ್ಕರನ ಹತ್ತಿರ ಬಂದಳು.

"ನೋಡಿ, ರವಿ ಶುಭನೊಂದಿಗೆ ಒಬ್ಬನೇ ಇಷ್ಟೊತ್ತು ಇರೋದು ಸರಿಯಲ್ಲ. ಏನ್ಮಾಡೋಣ ? ಮಾವಂಗಾದ್ರೂ ಹೇಳಿ. ಅವರು ದೊಡ್ಡವರು. ಅವರು ಹೇಳಿದರೆ ಸರಿಯಾಗಿರುತ್ತೆ." ಭಾಸ್ಕರ ಪುಸ್ತಕ ಕೆಳಗಿಟ್ಟನು.

"ಗಂಡ ಹೆಂಡತಿ ಒಟ್ಗಿರಲಿ ಬಿಡು, ಏನಾಗುತ್ತೆ ? ಮಾವನವರಿಗೆ ಯಾಕೆ ಇದೆಲ್ಲಾ ಹೇಳ್ಬೇಕೂ ? ಕಾಫಿ ಕೊಡೋಕೆ ಹೋಗುವ ನೆವದಿಂದ ನೀನೇ ಹೇಳು."

ನಂದಿನಿಗೆ ಭಾಸ್ಕರನ ಸಲಹೆ ಸರಿದೋರಿತು, ಕಾಫಿ ಮಾಡಿಕೊಂಡು ಬಂದು ಬಾಬುವಿಗೆ ಎರಡು ಲೋಟ ಕಾಫಿ ತರುವಂತೆ ಹೇಳಿದಳು. ಅವನು

ತಟ್ಟೆಯಲ್ಲಿ ಎರಡು ಲೋಟ ಕಾಫಿ ತಂದಿತ್ತಾಗ ಅವನ್ನು ಹಿಡಿದು ಶುಭನ ರೂಮಿನ ಬಾಗಿಲು ಮೆಲ್ಲನೇ ತಟ್ಟಿದಾಗ ಒಳಗಿನಿಂದಲೇ ಶುಭ ಕೇಳಿದಳು.

"ಯಾರು ?"

"ನಾನು, ನಂದಿನಿ."

"ಒಳಗೆ ಬನ್ನಿ ಅತ್ತಿಗೆ....ಬಾಗಿಲು ಹಾಕಿಲ್ಲ." ನಂದಿನಿ ಕಾಲಿನಿಂದ ಬಾಗಿಲು ತಳ್ಳಿದಳು. ಅಲ್ಲಿ ಕಂಡ ದೃಶ್ಯ ನಂದಿನಿಯ ಕಣ್ಣಲ್ಲಿ ನೀರು ತಂದಿತು. ಶುಭನ ತೊಡೆಯ ಮೇಲೆ ತಲೆಯಿಟ್ಟು ಹಾಯಾಗಿ ಕಣ್ಮುಚ್ಚಿ ನಿದ್ದೆ ಮಾಡುತ್ತಿದ್ದ ರವಿ. ಅವನ ಪಕ್ಕದಲ್ಲಿ ಮಗು ಮಲಗಿ ನಿದ್ರಿಸುತ್ತಿತ್ತು. ಅವನ ಕೈಯೊಂದು ಮಗುವನ್ನು ಬಳಸಿತ್ತು. ಶುಭ ನಂದಿನಿಗೆ ಸದ್ದು ಮಾಡಬೇಡವೆಂದು ತುಟಿಯ ಮೇಲೆ ಬೆರಳಿಟ್ಟು ಸಂಜ್ಞೆ ಮಾಡಿದಳು. ನಂದಿನಿ ಅವಳಿಗೆ ಕಾಫಿಯ ಲೋಟವಿತ್ತು ಅವಳ ತಲೆ ತಡವಿದಳು.

"ದೇವರು ನಿನಗೆ ಈ ಸುಖವನ್ನು ನಿರಂತರವಾಗಿ ಕೊಡಲಿ."

ಅವಳ ಒಳಮನಸ್ಸು ಶುಭನನ್ನು ಹರಸಿತ್ತು. ಹೊರಗೆ ಬರುವಾಗ ತಾನೇ ಬಾಗಿಲು ಮುಂದೆ ಮಾಡಿ ಬಂದಾಗ ಭಾಸ್ಕರ ಪ್ರಶ್ನಾರ್ಥಕವಾಗಿ ಅವಳತ್ತ ನೋಡಿದ.

"ನಾನೇ ಬಾಗಿಲು ಮುಂದೆ ಮಾಡಿದೆ. ಅವರನ್ನ ನೋಡಿದ್ರೇ ದೃಷ್ಟಿ ತಾಕೀತೂಂತ ಹೆದರಿ, ಯಾರೂ, ನೋಡ್ದೇ ಇರಲಿ ಅಂತ ಬಾಗಿಲು ಮುಂದೆ ಮಾಡಿದೆ."

ರಘು ಮಗುವಿಗಾಗಿ ತಂದಿದ್ದ ಸಾಮಾನುಗಳನ್ನೆಲ್ಲ ಜೋಡಿಸಿ ತೆಗೆದಿಡುತ್ತಿದ್ದನು. ನಂದಿನಿ ಅವನ ಕಿವಿಯಲ್ಲಿ ಉಸುರಿದಳು.

"ರಘೂ, ರವಿ, ಶುಭನ್ನ ಈಗ ನೋಡ್ಬೇಕೂ ನೀನು, ಎರಡು ಕಣ್ಣು ಸಾಲದು. ರವಿ ಅವಳ ತೊಡೆಯ ಮೇಲೆ ತಲೆಯಿಟ್ಟು ಹಾಯಾಗಿ ಮಲಗಿದ್ದಾನೆ. ನನಗೆ ಸಾವಿತ್ರಿ ಸತ್ಯವಾನನ ಕತೆ ಜ್ಞಾಪಕ ಬರುತ್ತೆ. ನನ್ನ ಶುಭ ಸಾವಿತ್ರಿಯಂತೆ ತನ್ನ ಗಂಡವನ್ನು ಉಳಿಸಿಕೊಳ್ಳುತ್ತಾಳೆಂಬ ನಂಬಿಕೆ ನನಗೆ ಬರುತ್ತಿದೆ."

ರಘು ಉತ್ತರ ಕೊಡಲಿಲ್ಲ. ಡಾಕ್ಟರ ಮಾತು ಅವನಿಗೆ ನೆನಪಿಗೆ ಬಂತು "ಓನ್ಲೀ ಮಿರಕಲ್ ಷುಡ್ ಹ್ಯಾಪೆನ್."

ಎಷ್ಟೋ ಹೊತ್ತಿನ ಮೇಲೆ ಮೈ ಮುರಿದು ಆಕಳಿಸಿ ಹೊರಬಂದ ರವಿ ಹತ್ತು ವರ್ಷ ಚಿಕ್ಕವನಾಗಿ ಕಂಡನು. ಬಿಳಚಿಕೊಂಡಿದ್ದ ಮುಖದಲ್ಲಿ ಈಗ ಹೊಸ ರಕ್ತ ಹರಿಯುತ್ತಿದ್ದಂತೆ ಕಾಣಿಸುತ್ತಿತ್ತು. ಅವನನ್ನು ನೋಡಿದ ರಘು ಇಲ್ಲಿಯವರೆಗೆ ಆದುದೆಲ್ಲ ಕೆಟ್ಟ ಕನಸಾಗಿದ್ದರೆ, ಎಂದುಕೊಂಡನು.

ಸಂಜೆಯ ಹೊತ್ತಿಗೆ ಮನೆಯಲ್ಲಿ ದೀಪಗಳು ಬೆಳಗಿದವು. ನಂದಿನಿ ತಾನು ತಂದಿದ್ದ ಹಸಿರು ಬಣ್ಣದ ಹೊಸ ರೇಷಿಮೆಯ ಸೀರೆಯನ್ನುಡುವಂತೆ ಶುಭನಿಗೆ ಹೇಳಿದಳು. ಶುಭನಿಗೆ ತಾನೇ ಸ್ವತಃ ಅಲಂಕಾರ ಮಾಡಿದಳು. ರಘು ತಂದಿದ್ದ ಹೊಸ ಫ್ರಾಕೊಂದನ್ನು ಮಗುವಿಗೆ ಹಾಕಿ, ಅದರ ಕೈಗೆ ಪುಟ್ಟ ಚಿನ್ನದ ಬಳೆ, ಕತ್ತಿಗೆ ಒಂದೆಳೆಯ ಚಿನ್ನದ ಸರ ಹಾಕಿದಾಗ ಶುಭಳ ಗಂಟಲು ಕಟ್ಟಿತು. "ಅತ್ತಿಗೆ, ಇದೆಲ್ಲಾ ಯಾಕೆ ತಂದಿರಿ ?"

"ಸಾಕು, ಸುಮ್ಮನಿರು. ನಿಮ್ಮತ್ತೆ, ನಿಮ್ಮಮ್ಮ ಇದ್ದಿದ್ದರೆ ಇನ್ನೂ ಏನೇನು ಮಾಡುತ್ತಿದ್ದರೋ. ಇದೆಲ್ಲಾ ಲಕ್ಷಣ, ಸಂಪ್ರದಾಯ. ಗೊತ್ತಾ ?"

ರವಿ ಭಾಸ್ಕರ ರೂಮಿನಲ್ಲಿ ಸೇರಿದ್ದರು. ರಘು ಆಳುಗಳಿಗೆಲ್ಲ ಒಂದು ದಿನದ ಕೂಲಿ ಉಚಿತವಾಗಿ ಕೊಡುತ್ತಿದ್ದನು

ಶಿವರಾಮಯ್ಯನವರು ಗಡಿಯಾರದ ಮುಳ್ಳಿನತ್ತ ನೋಡುತ್ತಾ ಆತುರ ಪಡಿಸಿದರು.

"ಆರೂವರೆ ಆಗೋಗ್ಲಿ ಇರು. ರಾಹುಕಾಲ ಮುಗಿದುಹೋಗುತ್ತೆ. ಆಮೇಲೆ ಅರ್ಧ ಗಂಟೇಲಿ ಎಲ್ಲಾ ಮುಗಿಸಿಬಿಡಿ. ಅವಳಿಗೆ ಆಯಾಸ ಮಾಡ್ಬೇಡಿ."

ತೊಟ್ಟಿಲನ್ನು ಡ್ರಾಯಿಂಗ್ ರೂಮಿಗೆ ತರಿಸಿ ಶುಭನ ಮದುವೆಯ ಧಾರೆ ಸೀರೆಯೊಂದನ್ನು ಅದಕ್ಕೆ ಹಾಸಿ ಅಲಂಕರಿಸಿಯಾಗಿತ್ತು. ಅಲ್ಲಲ್ಲಿ ಹೂವಿನ ಗೊಂಚಲು ಸಿಕ್ಕಿಸಿಯಾಗಿತ್ತು. ಆಳುಗಳೆಲ್ಲರಿಗೂ ತಾಂಬೂಲ ತೆಗೆದುಕೊಂಡು ಹೋಗುವಂತೆ ಹೇಳಿದ್ದರಿಂದ ಅವರು ಮಗುವನ್ನು ನೋಡಿ ಹೋಗಲೂ ಸಮಯ ಸರಿಯಾಗಿತ್ತು.

ಕೆಳಗೆ ಹಸೆಮಣೆಯ ಮೇಲೆ ಹೆಚ್ಚು ಸಮಯ ಕೂರಲು ಆಗುವುದಿಲ್ಲ ವೆಂದು ಶುಭನಿಗೆ ಸಣ್ಣ ಕುರ್ಚಿಯೊಂದನ್ನು ಹಾಕಾಗಿತ್ತು.

ರವಿ, ಭಾಸ್ಕರ ಇಬ್ಬರೂ ಮಾತಾಡುತ್ತಾ ರೂಮಿನ ಹೊರಗೆ ಬಂದಾಗ

ಶುಭ ಮಗುವನ್ನು ತೊಡೆಯ ಮೇಲಿರಿಸಿಕೊಂಡು ಅವರಿಗಾಗಿ ಕಾಯುತ್ತಾ ಕುಳಿತಿದ್ದಳು. ಅವಳೆದುರು ಸಂಜಯ ಕುಳಿತು ಹರಟುತ್ತಿದ್ದನು.

"ಏನ್ಹೆಸರು ಇಡ್ತೀ ಅಂಟಿ ? ನಿನ್ನ ಮಗಳು ಏನಾಗ್ಬೇಕೂ ಹೇಳು. ನಾನು ಹೆಸರು ಸಜೆಸ್ಟ್ ಮಾಡ್ತೀನಿ."

ಶುಭ ನಿರುತ್ಸಾಹದಿಂದ-"ಹೋಗೋ ಏನಾದ್ರೂ ಆಗ್ಲಿ. ಅದೆಲ್ಲಾ ಈಗ್ಯಾಕೆ ?" ಎಂದಳು.

ನಿನ್ನ ಮಗಳು ಫಿಲ್ಮ್ ಆಕ್ಟ್ರೆಸ್ ಆಗೋದಾದ್ರೆ ಎರಡೇ ಅಕ್ಷರದ ಸ್ವೀಟಾಗಿರೋ ಹೆಸರಿಡು. ಡಾಕ್ಟರಾಗೋದಾದ್ರೆ ಇಂಟೆಲಿಜೆನ್ಸ್‌ಗಿಂತ ಹೆಸರೇ ಹೈ ಸೌಂಡಿಂಗಾಗಿ ಇರೋ ಹೆಸರಿಡು—ಸಂಗೀತಗಾರಳಾಗೋಹಾಗಿದ್ರೇ ಯಾವ್ದಾದ್ರೂ ರಾಗದ ಹೆಸರಿಡು-ಲೆಕ್ಚರರ್—ಪ್ರೊಫೆಸರ್ ಆಗೋ ಹಾಗಿದ್ರೇ ಅವಳ ಹೆಸರು ಚಿಕ್ಕದಾಗಿರ್ಬೇಕೂ ...ಅವಳ ಕ್ವಾಲಿಫಿಕೇಷನ್ಸ್ ಅವಳ ಹೆಸರಿನ ಡಬ್ಬಲ್ ಇರ್ಬೇಕೂ....! ಗೊತ್ತಾ ?" ರಘು ಅವನ ಮಾತು ಕೇಳುತ್ತಾ ಕೈಕಟ್ಟಿ ನಿಂತಿದ್ದನು.

"ಸ್ವೀಟೀ-ಫಿಲ್ಮ್ ಸ್ಟಾರ್ ಆದ್ರೆ—'ವಜ್ರಾಯುಧ ಪಾಣಿ' ಡಾಕ್ಟರಾದ್ರೆ, 'ಗಾನವಾಹಿನಿ' ಮ್ಯೂಸಿಷಿಯನ್ -ಆದ್ರೆ--ಪ್ರೊಫೆಸರ್ ಆಗೋಹಾಗಿದ್ರೆ ವಿದ್ಯಾ!"

ರವಿ, ಭಾಸ್ಕರ ಇಬ್ಬರೂ ಬಂದಿದ್ದರಿಂದ ಮಾತು ಅಲ್ಲಿಗೇ ನಿಂತಿತು.

"ಏನು ಪೋಕರಿ ಅಷ್ಟೊಂದು ಹರಟ್ತಾ ಇದ್ದಾನೆ ?" ಭಾಸ್ಕರ ಕೇಳಿದಾಗ ಮಗೂಗೆ ಹೆಸರು ಸಜೆಸ್ಟ್ ಮಾಡ್ತಾ ಇದ್ದಾನೆ" ಎಂದು ರಘು ಉತ್ತರಿಸಿದ. ಕನ್ನಡಕವನ್ನು ಮೂಗಿನ ಮೇಲೇರಿಸಿಕೊಂಡು ಪಂಚಾಗ ಹಿಡಿದು ಬಂದ ಶಿವರಾಮಯ್ಯನವರು ರವಿಯತ್ತ ನೋಡುತ್ತಾ ಹೇಳಿದರು. "ಯಾವ ಹೆಸರಾದ ರೇನು ? ದೀರ್ಘಾಯುಷ್ಯ ಹಾಕಿಕೊಂಡು ಗಟ್ಟಿಮುಟ್ಟಾಗಿ ಬಾಳಿದರೆ ಸಾಕು" ಆ ಮಾತಿನ ಹಿಂದಿನ ನೋವು ಎಲ್ಲರಿಗೂ ಅರಿವಾಯಿತು.

"ಹಾಗಾದರೆ ಹವಿಾದಾಭಾನೂಂತ ಇಡು ಅಂಟಿ—ಫಸ್ಟ್ ಕ್ಲಾಸ್ ಫೈಲ್ವಾನ್ ಆಗ್ತಾಳೆ !" ಸಂಜಯ ಹೇಳಿದಾಗ ನೋವಿನಲ್ಲೂ ಎಲ್ಲರಿಗೂ ನಗು ಬಂತು.

"ಹೇಳಯ್ಯ ಯಾವ್ದಾದ್ರೂ ಒಳ್ಳೆಯ ಹೆಸರು, ರಘೂ" ರವಿ ಶುಭನ ಪಕ್ಕ ದಲ್ಲಿ ಕೂಡುತ್ತಾ ಹೇಳಿದ.

"ಚೆನ್ನಾಯ್ತು. ನೀನು ಅದರ ತಂದೆ, ಶುಭ ತಾಯಿ-ಅಪ್ಪ ತಾತ, ನೀವು ಮೂರು ಜನ ಯಾವ್ದಾದ್ರೂ ಇಟ್ಕೊಳ್ಳಿ, ನಂದೇನು ಹೆಚ್ಚುಗಾರಿಕೆ ? ನಾನೂ ಸಂಜಯ ಒಂದೇ !" ರಘು ಪ್ಯಾಂಟಿನ ಜೇಬಿನೊಳಗೆ ಕೈ ತುರುಕಿದನು.

"ಯಾಕೆ ಎಲ್ರೂ ಹಾಗಾಡ್ತೀರಾ-ಹೆಸರೇನು ಕಷ್ಟ. ಅದರಜ್ಜಿಯ ಹೆಸರೇ ಇಟ್ಬಿರಾಯಿತು. 'ಅಂಬುಜ' ಎಂದು. ಮೊದಲು ಅದೇ ಇಡಿ. ಆಮೇಲೆ ನಿಮಗಿಷ್ಟವಾದ ಯಾವ್ದಾದ್ರೂ ಪೆಟ್‌ನೇಮ್ ಇಟ್ಕೊಳ್ಳಿ" ನಂದಿನಿ ಆರತಿ ಸಿದ್ಧಪಡಿಸುತ್ತಾ ಹೇಳಿದಳು.

"ಅದು ಸರಿಯಾದ ಮಾತು" ಶಿವರಾಮಯ್ಯನವರಿಗೆ ಸಂತಸವುಕ್ಕಿ ಬಂತು.

ಯಾವ ಮಾತೂ ಆಡದೆ ಕುಳಿತಿದ್ದ ಶುಭ ತಕ್ಷಣ ಹೇಳಿದಳು.

"ಅಂಬುಜ ಎಂದು ಇಡೋಣ. ಆದರೆ ಅದರ ಪೆಟ್ ನೇಮ್ ರಘೂನೇ ಹೇಳಲಿ-ಯಾವಾಗ್ಲೂ 'ಶಿಲಾಬಾಲಿಕೆ' ಮದನಿಕೆ ಅನ್ತಾ ಇದ್ರು" ಎಂದಾಗ ರವಿ ಶುಭನ ಹತ್ತಿರ ಸರಿದು ಹೇಳಿದ.

"ಯೂ ಆರ್ ರೈಟ್--"

ರಘೂವಿನ ಕಣ್ಣುಗಳಲ್ಲಿ ಹಳೆಯ ನೆನಪಿನ ಜಾಲವೊಂದು ಸುಳಿಯಿತು. ಅವನಿಗರಿವಿಲ್ಲದೆಯೇ ಅವನ ಬಾಯಿಂದ ಹೆಸರೊಂದು ಹೊರಬಿತ್ತು. ತನ್ನ ಕೈಗಳನ್ನೇ ನೋಡಿಕೊಳ್ಳುತ್ತಾ ಉಸುರಿದ.

"ಶಿಲ್ಪ"

"ಅದ್ಭೂ ಮರಿ-ಫಸ್ಟ್‌ಕ್ಲಾಸ್ ನೇಮ್" ಸಂಜಯ ರಘುವಿನ ಬೆನ್ನಿನ ಮೇಲೆ ಗುದ್ದಿದ. ಶುಭ, ರವಿಯರ ಮುಖದಲ್ಲಿ ತೃಪ್ತಿಯ ನಗೆಯಿತ್ತು.

ನಂದಿನಿ ತನಗೆ ತಿಳಿದಿದ್ದ ರೀತಿಯಲ್ಲಿ ತಾಯಿ, ಮಗುವನ್ನು ಹಸೆ ಮಣೆಯ ಮೇಲೆ ಕೂಡಿಸಿ, ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನೂ, ಹೆಸರಿಡುವು ದನ್ನೂ ಮುಗಿಸಿದಳು. ಶುಭನೆದುರೇ ಅಕ್ಕ ಪಕ್ಕದಲ್ಲಿ ಕುಳಿತಿದ್ದ ರವಿ, ರಘು ಇಬ್ಬರ ದೃಷ್ಟಿಯೂ ಮಗುವಿಗಿಂತ ಶುಭನ ಮೇಲಿತ್ತು. ಹಸಿರು ಸೀರೆಯಲ್ಲಿ, ತಾಯ್ತನದ ಗಂಭೀರ ಭಾವದಲ್ಲಿ ಕುಳಿತಿದ್ದ ಶುಭ ಅನುಪಮ ಸುಂದರಿ- ಬಹಳ ತೆಗೆದುಹೋಗಿ ಕೃಶವಾಗಿದ್ದರೂ ಮುಖದಲ್ಲಿದ್ದ ಶಾಂತತೆ, ರವಿಗೆ ಅವಳು

ಷೋಡಷ ಕಿಶೋರಿಯಂತೆ ಕಂಡಳು. ಅವಳ ಗಾಂಭೀರ್ಯ, ಶಾಂತತೆ ರಘು ವಿಗೆ ಬಿರುಗಾಳಿಗೆ ಮುನ್ನ ಬರುವ ರುದ್ರ, ಭೀಕರ ಮೌನದಂತೆ ಕಂಡಿತು.

ಮಗುವನ್ನು ತೊಟ್ಟಿಲಲ್ಲಿಟ್ಟಾಗ ಶಿವರಾಮಯ್ಯನವರು ಬೊಗಸೆ ತುಂಬಾ ಸವರನ್‌ಗಳನ್ನು ತಂದು ಮೊಮ್ಮಗಳ ತಲೆಯತ್ತ ಇಟ್ಟರು. "ಅಜ್ಜಿಯ ಪೆಟ್ಟಿಗೆಯಲ್ಲಿತ್ತು. ಇವಳಿಗಾಗೇ ಇಟ್ಟಿದ್ದಳೇನೋ !" ತಾಯಿ ಮಗಳಿಗೆ ಆರತಿಯೆತ್ತುವ ಮೊದಲು ಶಿವರಾಮಯ್ಯನವರು ತಮ್ಮ ಪತ್ನಿಯ ಸಮಸ್ತ ಒಡವೆಗಳನ್ನೂ ಸೀರೆಗಳನ್ನೂ ತಂದು ಶುಭನ ಮುಂದಿಟ್ಟರು.

"ಇದೆಲ್ಲಾ ನಿಂದೇ ತಾಯಿ. ನೂರು ವರ್ಷ ಮುತ್ತೈದೆಯಾಗಿ ಬಾಳು" ಎಂದಾಗ ಶುಭ ತುಟಿ ಕಚ್ಚಿಕೊಂಡಳು.

"ಇದೆಲ್ಲಾ ಯಾಕೆ ನಂಗೆ ?" ಎಂದು ಹೇಳಿದಾಗ ಹತ್ತಿರದಲ್ಲಿದ್ದ ನಂದಿನಿ ಗದರಿದಳು.

"ಅದ್ಯಾಕೇ ಹಾಗಂತಿ ಶುಭ ? ಎಲ್ಲಾ ನಿಂದೂ, ನಿನ್ನ ಮಗಳದೂ ಅಲ್ಲವೇ ?" ಅವಳಿಗೆ ಶುಭನ ಅಂತರಾಳದ ಅರಿವಾದರೂ ತೋರ್ಪಡಿಸದೇ ತೋರಿಕೆಗೆ ಗದರಿದಳು.

"ಅಂಬುಜ, ಲಕ್ಷ್ಮಿ, ಗೌರಿ, ಪಾರ್ವತಿ, ಸರಸ್ವತಿ" ಐದು ದೇವರ ಹೆಸರಿಟ್ಟಾದ ಮೇಲೆ "ಶಿಲ್ಪ" ಎಂದು ನಂದಿನಿ ಮಗುವಿನ ಕಿವಿಯಲ್ಲಿ ಹೇಳಿದಳು.

ಬಂದ ಕೆಲಸದ ಹೆಣ್ಣಾಳುಗಳೆಲ್ಲಾ ಮಗುವನ್ನು ದೂರದಿಂದಲೇ ನೋಡಿ ದೃಷ್ಟಿ ತೆಗೆದು ನೆಟಿಕೆ ಮುರಿದು "ಬೊಂಬೆ ಅಂಗೈತೆ, ಬಣ್ಣ ನೋಡಪ್ಪ ಎಂತ ಚೆಂದಾಗೈತೆ" "ಪುಟ್ಟ ಊವಿದ್ದಂಗೈತೆ," ಎಂದು ಹೊಗಳಿ ತಾಂಬೂಲವನ್ನು ತೆಗೆದುಕೊಂಡು ಹೋದಾಗ ರವಿ ಅತ್ಯಂತ ಸುಖಿ.

"ನೋಡ್ತಾ ಇರು ಕರಿಯಮ್ಮ, ಇನ್ನು ಸ್ವಲ್ಪ ದಿನ. ಅವಳೇ ನಮ್ಮನ್ನೆಲ್ಲಾ ಆಳ್ತಾಳೆ" ಎಂದು ಹೇಳಿದಾಗ,

"ಅಲ್ಲ ಬಿಡಿ ನನ್ನೊಡ್ಯಾ. ಆಯಮ್ಮನ್ಕೈಲಿ ಆಳಿಸ್ಕೊಳ್ಳೋಕೂ ಕೇಳ್ಕೊಂಡ್ಬರ್ಬೇಕಲ್ಲವ್ರಾ ?" ಎಂದಾಗ ರವಿ ಹಾರ್ದಿಕವಾಗಿ ನಕ್ಕನು.

"ನೋಡ್ದ್ಯಾ ರಘೂ, ನನ್ಮಗಳು ಹುಟ್ತಾನೇ ಎಷ್ಟು ಫೇಮಸ್ ?"

ಎಲ್ಲಾ ಆಳುಗಳೂ ಹೊರಟಾಗ ಗುಂಪಿನಲ್ಲಿ ಹಿರಿಯಳೆನಿಸಿಕೊಂಡಿದ್ದ ನಂಜಮ್ಮ ರವಿಯತ್ತ ತಿರುಗಿ ಹೇಳಿದಳು.

"ಬಾಳ ತೆಗ್ದು ಓಗಿದ್ದೀರಿ. ಚಂದಾಗಿ ಆರೈಕೆ ಮಾಡ್ಕೊಳ್ಳಿ ಸೋಮಿ. ಏಗಿದ್ರೂ ಚಿಕ್ಕ ಸಾಮೇರು ಬಂದವ್ರೆ- ಎಲ್ಲಾ ನೋಡ್ಕೊಂತಾರೆ."

"ಇವರೆಲ್ಲಾ ನನ್ನ ಬದುಕಿನ ವಿವಿಧ ಭಾಗಗಳು!" ಅವರೆಲ್ಲಾ ಹೊರಟಾಗ ರವಿಯು ಕಿವಿಯಲ್ಲುಸುರಿದನು. ಹಸೆಮಣೆ ಬಿಟ್ಟೇಳುವುದರಲ್ಲಿದ್ದ ಶುಭನನ್ನು ರವಿ ಕಣ್ಸನ್ನೆಯಿಂದ ತಡೆದನು.

"ಎಲ್ರೂ ಏನೇನೋ ಕೊಟ್ರೆ. ನನ್ನ ಮಗಳಿಗೆ ನಾನು ಕೊಡೋದು ಬೇಡ್ವಾ....? ಎಲ್ಲಿ ಭಾಸ್ಕರ....ನನ್ನ ಮಗಳ ಪ್ರೆಸೆಂಟ್ ಕೊಡಿ" ಎಂದಾಗ ಭಾಸ್ಕರ ಕೈಯ್ಯಲ್ಲಿ ಹಿಡಿದಿದ್ದ ಲಕೋಟೆಯೊಂದನ್ನು ರವಿಯ ಕೈಗಿತ್ತ. ರವಿ ಅದನ್ನು ಮುಷ್ಟಿ ಬಿಗಿದು ಮಲಗಿ ನಿದ್ರಿಸುತ್ತಿದ್ದ ಮಗಳ ಕೈ ಬಿಡಿಸಿ ಅದರಲ್ಲಿತ್ತು ಆದರ ತಲೆಗೆ ಮುತ್ತಿಟ್ಟನು.

"ಏನು ಕೊಟ್ಯೋ ಮಗಳಿಗೆ? ನೋಡೋಣಾ-ನಮ್ಗೆ ತೋರಿಸ್ತಾಳ್ದೇ?" ಶಿವರಾಮಯ್ಯನವರು ಮೊಮ್ಮಗಳ ಒಲವಿನ ಸಿರಿಯನ್ನು ಕಂಡು ಹಿಗ್ಗುತ್ತಾ ಕೇಳಿದರು. ರವಿ ತನ್ನ ಸ್ವಸ್ಥಾನಕ್ಕೆ ಬಂದು ಕುಳಿತು ರಘುವಿನತ್ತ ತಿರುಗಿ ಹೇಳಿದನು.

"ಹೋಗಯ್ಯ, ತೆಗೆದು ತೋರಿಸು ಹೋಗು. ನನ್ನ ಮಗಳು ಕೋಟ್ಯಾಧೀಶ್ವರಿ....ಷಿ ಈಸ್ ಎ ಬಾರ್ನ್ ಪ್ರಿನ್ಸೆಸ್" ಎಂದನು. ರಘು ಅನುಮಾನಿಸಿದಾಗ,

"ಎದ್ದು ಹೋಗಯ್ಯ. ಎಲ್ಲಾ ಕಾಯ್ತಾ ಇದ್ದಾರೆ" ಎಂದು ಎಬ್ಬಿಸಿದನು. ರಘು ಎದ್ದು ಭಾಸ್ಕರನತ್ತ ನೋಡಿದನು. ಅವನ ದೃಷ್ಟಿ ಸಂಧಿಸಿದ ಭಾಸ್ಕರ, ತಲೆ ಕೆಳಗೆ ಮಾಡಿದನು.

ರಘು ತೊಟ್ಟಿಲಿನ ಬಳಿ ಬಂದು ಮಗುವಿನ ಕೈಲಿದ್ದ ಕವರನ್ನು ಕೈಗೆ ತೆಗೆದುಕೊಂಡನು. ಅದನ್ನು ತೆಗೆದು ಅದರೊಳಗಿದ್ದ ಕಾಗದವನ್ನು ಕೈಲಿ ಹಿಡಿದಾಗ ಅವನ ತುಟಿಗಳು ನಡುಗುತ್ತಿದ್ದವು. ಅದರೊಳಗಿದ್ದುದ್ದರ ಮೇಲೆ ಕಣ್ಣಾಡಿಸಿದಾಗ ಆವನ ತುಟಿಗಳು ನಡುಗುತ್ತಿತ್ತು, ಕಣ್ಣು ಮಂಜಾಗಿತ್ತು.

ಸಂಜಯ ಕೇಳಿದಾಗ ರಘು ಉತ್ತರಿಸದೇ ಕವರನ್ನೂ ಅದರೊಳಗಿದ್ದ ಕಾಗದವನ್ನೂ ತಂದೆಯ ಕೈಗಿತ್ತನು. ಶಿವರಾಮಯ್ಯನವರು ಪ್ರಶ್ನಾರ್ಥಕವಾಗಿ ರಘುವಿನತ್ತ ನೋಡಿದಾಗ–

"ನೀವೇ ಓದಿ ನೋಡಿ, ಅಪ್ಪಾ"

ಎಂದು ಹೇಳಿ ಅಲ್ಲಿ ನಿಲ್ಲದೇ ರವಿ ಕೂಗುತ್ತಿದ್ದರೂ ಉತ್ತರಿಸದೇ ಹೊರ ಬಾಗಿಲಿನತ್ತ ಹೊರಟುಹೋದನು. ಅವನ ಮುಖದಲ್ಲಿದ್ದ ದುಗುಡ, ಕಣ್ಣಿನಲ್ಲಿದ್ದ ನೀರನ್ನು ಗಮನಿಸಿದ ಸಂಜಯ ಅವನ ಹಿಂದೆ ಹೊರಟರೂ, ಅವನು ತೋಟದ ಕತ್ತಲೆಯಲ್ಲಿ ಮರೆಯಾದಾಗ ಸಂಜಯ ಬಾಗಿಲಲ್ಲಿ ನಿಂತನು. ಶುಭ ಹಸೆಮಣೆಯ ಮೇಲಿಂದೆದ್ದು ರವಿಯ ಪಕ್ಕದಲ್ಲಿ ಬಂದು ಕುಳಿತಳು.

"ಯಾಕೆ ರವಿ, ರಘು ಕೋಪಮಾಡಿಕೊಂಡು ಹೊರಟುಹೋದ ?"

ಶುಭನ ಪ್ರಶ್ನೆಗೆ ರವಿ ಉತ್ತರಿಸದೇ ಅವಳ ಕೈಗಳನ್ನು ತನ್ನ ಕೈಗಳಲ್ಲಿ ಸೆರೆ ಹಿಡಿದನು.

ಶಿವರಾಮಯ್ಯನವರು ಮೂಗಿನ ಮೇಲೆ ಕನ್ನಡಕವನ್ನೇರಿಸಿ ಕಾಗದವನ್ನೋದಿ ರವಿಯತ್ತ ತಿರುಗಿದರು. ಅವರ ಮುಖದಲ್ಲಿ ಅವ್ಯಕ್ತ ನೋವೊಂದು ಹುದುಗಿತ್ತು. ಹಣೆಯ ಮೇಲೆ ನಾಲ್ಕೈದು ಸುಕ್ಕುಗಳು ಎತ್ತಿ ಕಾಣುತ್ತಿತ್ತು.

"ಏನಯ್ಯಾ ರವಿ, ಹೀಗೇಕೆ ಮಾಡಿದೆ ? ಎಲ್ಲರನ್ನೂ ಒಂದು ಮಾತು ಕೇಳುವುದು ಬೇಡವೇ ?"

"ಇದು ಸ್ವಯಾರ್ಜಿತ ಅಪ್ಪಾ. ನನ್ನ ಮಗಳಿಗೆ ಕೊಡೋಕೆ ಯಾರನ್ನು ಯಾಕೆ ಕೇಳಬೇಕು ?" ರವಿಯ ಗಂಟಲು ಗಂಭೀರವಾಗಿತ್ತು.

"ನೋಡಮ್ಮ ಶುಭಾ, ಎಲ್ಲಾ ಆಸ್ತೀನೂ ಮಗಳ ಹೆಸರಿಗೆ ಬರೆದು ಬಿಟ್ಟು ಪವರ್ ಆಫ್ ಅಟೋರ್ನಿಯನ್ನು ರಘುವಿಗೆ ಒಪ್ಪಿಸಿ ಬಿಟ್ಟಿದ್ದಾನೆ.... ಎಸ್ಟೇಟನ್ನು ರಘುವಿನ ಹೆಸರಿಗೆ ಮಾಡಿದ್ದಾನೆ."

ಶುಭ ಬೆಚ್ಚಿದಳು. ರವಿಯ ಹಿಡಿತದಲ್ಲಿದ್ದ ಅವಳ ಕೈಗಳು ತಣ್ಣಗೆ ಬೆವೆತಿತು.

"ಹೌದು ಶುಭ--ನೋಡು, ಪವರ್ ಆಫ್ ಆಟೋರ್ನಿಯನ್ನು ರಘುವಿಗೆ ಒಪ್ಪಿಸದಿದ್ದರೆ ಅವನು ಈ ಮನೆಯಲ್ಲಿ ಖಂಡಿತ ಇರುವುದಿಲ್ಲ. ಅದಕ್ಕೆ ಹಾಗೆ

ಮಾಡಿದೆ. ಅವನಿಗೆ ಇಲ್ಲಿಯ ದೊಡ್ಡ ಜವಾಬ್ದಾರಿ ಬೇಕೆಂತಲೇ ವಹಿಸಿದ್ದೇನೆ. ನನ್ನ ಮಗಳ ಆಸ್ತಿಯನ್ನು ಅವನೇ ಕಾಪಾಡಬೇಕು--ನೋಡೋಣ--ಮನೆಯ ಹೊರಗೆ ಈಗ ಹೋದನಲ್ಲ-ಈ ಮನೆ ಬಿಟ್ಟು, ನನ್ನ ಮಗಳನ್ನು ಬಿಟ್ಟು ಹೇಗೆ ಹೋಗ್ತಾನೇಂತ!" ರವಿಯು ಮಾತಾಡಿದಾಗ ಅವನ ಕಣ್ಣುಗಳು ಪ್ರಜ್ವಲಿಸಿತು-ಉದ್ವೇಗದಿಂದ ಅವನೆದೆ ಏರಿಳಿಯುತ್ತಿತ್ತು.

"ನನಗೆ ಸಾಕಾಗಿಹೋಗಿದೆ ಶುಭಾ....ನನಗೆ ರೆಸ್ಟ್ ಬೇಕು. ಇದೆಲ್ಲಾ ಜವಾಬ್ದಾರಿಯಿಂದ ವಿಶ್ರಾಂತಿ ಬೇಕು." ರವಿ ಎದ್ದು ನಿಂತನು. ಎಲ್ಲರನ್ನೂ ಒಮ್ಮೆ ನೋಡಿ, ತಂದೆಯ ಬಳಿ ಬಂದು ಮೆಲ್ಲನುಸುರಿದ.

"ಅಪ್ಪಾ, ನಾನು ಮಾಡಿದ್ದು ಸರಿಯಲ್ಲವೇ ?" ಶಿವರಾಮಯ್ಯನವರು ಮಾತಾಡಲಿಲ್ಲ. ಮಗನ ತಲೆ ತಡವಿದರು. ರವಿ ತನ್ನ ರೂಮಿನತ್ತ ಹೆಜ್ಜೆ ಹಾಕುತ್ತಾ ಹಿಂತಿರುಗಿ ನೋಡದೆ ಹೇಳಿದ.

"ಶುಭಾ, ನಂಗೆ ಬಾಯಾರಿಕೆ ಒಂದು ಲೋಟ ಮಜ್ಜಿಗೆ ತರುತ್ತೀಯಾ?" ಶುಭ ಸೆರಗಿನಿಂದ ಕಣ್ಣೊರೆಸಿಕೊಂಡು ಮಜ್ಜಿಗೆ ತರಲು ಹೊರಟಳು. ಶಿವರಾಮಯ್ಯನವರು ಮೆಲ್ಲನಡಿಯಿಡುತ್ತಾ ತಮ್ಮ ರೂಮಿನೊಳಗೆ ಕಾಲಿಟ್ಟರು. ತಾವು ಶೇಖರಿಸಿಟ್ಟಿದ್ದ ಪುಸ್ತಕಗಳನ್ನು ತಡಕಿ, ಮೃತ್ಯುಂಜಯ ಜಪವಿದ್ದ ಪುಸ್ತಕವನ್ನು ಕೈಗೆ ತೆಗೆದುಕೊಂಡರು.

ಮಲಗಿದ್ದ ಮಗುವಿನ ಬಳಿ ನಿಂತಿದ್ದ ನಂದಿನಿ ಭಾಸ್ಕರನತ್ತ ನೋಡಿದಳು.

"ಇದು ಬಹಳ ಅನ್ಯಾಯ ರೀ....ಶುಭನಿಗೆ ಏನೂ ಇಲ್ಲವಾ ? ಅವಳ ಗತಿ ?" ಭಾಸ್ಕರ ನಿಟ್ಟುಸಿರಿಟ್ಟನು.

"ರವಿ ತುಂಬಾ ಮುಂದಾಲೋಚನೆಯುಳ್ಳವನು. ಅವನು ಮಾಡಿದ್ದು ಸರಿ. ನಂದಿನಿ-ರವಿಗೇನಾದರೂ ಆದರೆ, ಶುಭನ ಕೈಗೆ ಇದೆಲ್ಲಾ ಬಂದರೆ, ಒಂದು ನಿಮಿಷದಲ್ಲಿ ಮಾರಿ, ತನ್ನ ಪಾಡಿಗೆ ತಾನು ಎಲ್ಲರಿಂದ ದೂರವಾಗಿ ಬಿಡುತ್ತಾಳೆ-ನಿನ್ನ ನಾದಿನಿ ಎಷ್ಟು ಸ್ವತಂತ್ರಪ್ರಿಯಳು--ಸ್ವಾಭಿಮಾನಿ ನಿನಗೆ ಗೊತ್ತಿಲ್ಲವೇ ? ರವಿ ಏನು ಹೇಳಿದ ಗೊತ್ತಾ ? ಶುಭ ಈ ಮನೆಯ ಬೆಳಕಾಗಿರಬೇಕು. ರಘು ಈ ಮನೆಯ ಸಮಸ್ತ ಜವಾಬ್ದಾರಿಯನ್ನು ಹೊರಬೇಕು.-ಹಾಗಾದರೆ ನನ್ನ ಮಗಳ ಬಾಳು ಸುಗಮ" ಎಂದು.

ಶುಭ ಕೈಯ್ಯಲ್ಲಿ ಮಜ್ಜಿಗೆಯ ಲೋಟ ಹಿಡಿದು ಬಂದಿದ್ದರಿಂದ ಇಬ್ಬರೂ ಮಾತು ನಿಲ್ಲಿಸಿದರು.

ರಘು ಮನೆಯಿಂದ ಹೊರಹೊರಟವನು ಈಶಾನ್ಯದ ಮೂಲೆಯಲ್ಲಿದ್ದ ಕೊಳದತ್ತ ಹೆಜ್ಜೆ ಹಾಕಿದನು. ಅವನ ಮನಸ್ಸು ಕ್ಷೋಭೆಗೊಂಡಿತ್ತು. ಆ ಕೊಳದ ಬಳಿಯಲ್ಲಿ ನಿಂತು ತಾನು ಶುಭನಿಗೆ ಮೊಟ್ಟಮೊದಲ ಬಾರಿಗೆ ತನ್ನೊಲ ವಿನರಿಕೆ ಮಾಡಿಕೊಡಲು ಹಂಬಲಿಸಿದ್ದ ಸ್ಥಳ--ಆದರೆ ಆದುದು ರವಿಯೊಲವಿನ ನಿವೇದನೆ-ಶುಭನನ್ನು ಗೆದ್ದವನು ರವಿ-ತನಗಾದ ನಷ್ಟವನ್ನು ಮರೆತು ಹೊಸ ಬದುಕನ್ನು ರೂಪಿಸಿಕೊಳ್ಳಲಾರದೇ ತೊಳಲಾಡುತ್ತಿರುವಾಗ ಮತ್ತೊಂದು ನಷ್ಟ. ರವಿ--ಶುಭ ಇಬ್ಬರೂ ತನ್ನೊಲವಿನ ಅಧಿದೇವತೆಗಳು ತನ್ನ ದೇಹದ ಕಣಕಣ ಗಳಲ್ಲಿ ರವಿ ! ರವಿಗಾಗಿ ಶುಭನನ್ನು ಬಿಟ್ಟು ತಾನು ದೂರ ಸರಿದಿರಲಿಲ್ಲವೇ ? ದೂರ ಸರಿದು ಹೋದರೂ ತನ್ನ ಹೃದಯದ ಬಡಿತವಾಗಿ ತನ್ನನ್ನು ಹಿಂಬಾಲಿ ಸಿದ ಶುಭ ! ಅವಳ ನೆನಪು ! ರಘು ಕೊಳದ ಬಳಿ ಬಂದು ನಿಂತನು. ಇರುಳ ಕಪ್ಪಿನಲ್ಲಿ ಮುಸುಕು ಹಿಡಿದಿದ್ದ ಗಾಜಿನಂತೆ ಕರಾಳವಾಗಿ ಕಂಡಿತು. ಅಲ್ಲೇ ಬಂಡೆಯೊಂದರ ಮೇಲೆ ಕುಳಿತನು. ರವಿ ಎಂತಹ ತಪ್ಪು ಮಾಡುತ್ತಿದ್ದಾನೆ ಮಗಳಿಗೆ ಎಲ್ಲಾ ಆಸ್ತಿಯನ್ನೂ ಬರೆದು—ತನಗೆಲ್ಲಾ ಹೊಣೆಯನ್ನೂ ಹೇರಿಸಿ ಶುಭನನ್ನು ಮರೆತಿರಲು ಕಾರಣ ! ಅವಳ ಭವಿಷ್ಯದ ಗತಿಯೇನು ?—ಅವಳು ತನ್ನ ಕಾಲಿನ ಮೇಲೆ ತಾನು ನಿಲ್ಲಬೇಕೆ ? ಭಾಸ್ಕರನಾದರೂ ಇದಕ್ಕೆ ಸಮ್ಮತಿಸಿದುದೇಕೆ ? ಎಂತಹ ಅನ್ಯಾಯ ಮಾಡಿದ್ದಾನೆ ? ಶುಭನಿಗೆ ತನ್ನನ್ನು ಕಂಡರೆ ಎಷ್ಟು ತಾತ್ಸಾರವಾಗಬಹುದು ? ಹೊಣೆಯ ಹೊರೆಯನ್ನು ಹತ್ತಿಸಿ ತನ್ನ ಕೈಕಾಲು ಕಟ್ಟಿಹಾಕಿದನಲ್ಲ ! ಮಂಡಿಯಲ್ಲಿ ಮುಖವಿಟ್ಟು ಅಶಾಂತಿ, ಕ್ಷೋಭೆಗಳು ಹರಿದುಹೋಗಲೆಂದು ಕಂಬನಿಯಿಟ್ಟನು. ಯೋಚನೆಗಳ ನಾಗಾಲೋಟ ತಲೆಯಲ್ಲಿ ನುಗ್ಗಿ ಬಂತು. ತನ್ನ ತಲೆಯನ್ನು ತಾನೇ ಚಚ್ಚಿ ಕೊಂಡನು. ಅವನ ಬೇಗುದಿಯ ಬಿಸಿಯುಸಿರು ಸಂಜೆಯ ಕುಳಿರಲ್ಲಿ ಲೀನ ವಾಯಿತು.

ರಘು ಮನೆಯ ಕಡೆ ಹೆಜ್ಜೆ ಹಾಕಿದಾಗ ಇರುಳು ಕಪ್ಪಾಗಿತ್ತು. ಭಾರ ವಾದ ಹೆಜ್ಜೆಯಿಟ್ಟು ಮನೆಯ ಬಾಗಿಲಿಗೆ ಬಂದಾಗ ಕೇಳಿದುದು ಮಗುವಿನ ಅಳು. ರಘು ಕೊಂಚ ಸ್ತಂಭಿತನಾದನು. ತನ್ನ ಯೋಚನೆಯಲ್ಲಿ ತಾನು

ಮುಳುಗಿರುವಾಗ ಮಗುವಿಗೇನಾದರೂ ಆಯಿತೋ ಹೇಗೆ! ಮಗು ರಚ್ಚೆ ಹಿಡಿದು ಅಳಲು ಕಾರಣ? ನಂದಿನಿ ಮಗುವನ್ನು ಎತ್ತಿ ಕೈಯ್ಯಲ್ಲಿ ಆಡಿಸುತ್ತಾ ಲಾಲಿ ಹಾಡುತ್ತಿದ್ದಳು. ಅದು ಮಗುವಿಗೆ ಕೇಳಿಸಬೇಕಲ್ಲ. ನಂದಿನಿಯ ದನಿಯನ್ನು ಮುಚ್ಚಿ ಮಗುವಿನ ದನಿ ತಾರಕಕ್ಕೇರುತ್ತಿತ್ತು. ರಾಜಮ್ಮ ಕೈಯಲ್ಲಿ ಪೊರಕೆಕಡ್ಡಿ ಹಿಡಿದು ನಿಂತಿದ್ದರು.

"ತಾಳಿ....ಮಗೂಗೆ ದೃಷ್ಟಿ ಆಗಿರ್ಬೇಕೂ—ಇವೊತ್ತಂತೂ ಆ ಹಾಳು ಅಳು ಕಾಳುಗಳು ಬಂದು ನೋಡಿದ್ರೂ...."

ರಘು ನಿಂತಿದ್ದನ್ನು ಕಂಡ ನಂದಿನಿ ಮಗುವಿನ ಅಳುವನ್ನು ಗಮನಿಸದೇ ಅವನ ಹತ್ತಿರ ಬಂದಳು.

"ಎಲ್ಲಿ ಹೋಗಿದ್ದೀ ಇಷ್ಟು ಹೊತ್ತೂ? ರವಿಗೆ ತಲೆನೋವಂತೆ. ಈ ಮಗೂ ಬೇರೆ ಒಂದೇ ಸಮ ಅಳ್ತಾ ಇದೆ. ಶುಭ ಏನು ಮಾಡ್ತಾಳೆ! ಅವನ ಔಷಧಿ ಎಲ್ಲಿಟ್ಟಿದ್ದೀ? ಸಂಜಯ ನಿನ್ನ ಹುಡುಕಿಕೊಂಡು ತೋಟವೆಲ್ಲಾ ಅಲೆದಾಡಿದ. ಒಂದು ಗಂಟೆಯಿಂದ ಮಗು ಅಳ್ತಾನೇ ಇದೆ. ರವಿ 'ಅಳಿಸ್ಬೇಡಾ ನಾನು ಕೇಳಲಾರೆ,' ಅಂತ ಒದ್ದಾಡ್ತಾ ಇದ್ದಾನೆ. ಹಾಲು, ನೀರು ಏನು ಕೊಡಿಸಿದ್ರೂ ಇಲ್ಲ ಇದಕ್ಕೆ."

ರಘು ತುಟಿ ಕಚ್ಚಿದನು.

"ನಾನು ಕೊಳದ ಹತ್ತಿರಾನೇ ಇದ್ನಲ್ಲಾ?"

"ಕತ್ಲಲ್ಲಿ ಅಲ್ಲಿ ನೀನು ಹೇಗೆ ಕಣ್ಣಿಗೆ ಬೀಳ್ತೀ? ಈ ಮಗೂನೇನು ಮಾಡೋಣಾ?"

ನಂದಿನಿ ಅತ್ತೂ ಅತ್ತೂ ಕೆಂಪಾಗಿದ್ದ ಮಗುವನ್ನು ಅವನೆದುರು ಹಿಡಿದಳು.

"ಅದಕ್ಕೇನು ಆಗುತ್ತೋ ಏನೋ ಪಾಪ-ಹೊಟ್ಟೆ ನೋವಿರ್ಬೋದೂಂತ ಗ್ರೈಪ್ ವಾಟರ್ ಹಾಕಿಯಾಯ್ತು. ಹಸಿವಿರಬಹುದೂಂತ ಹಾಲು ಕುಡಿಸಿಯಾಯ್ತು. ಯಾವ್ದಕ್ಕೂ ಅಳು ನಿಲ್ಲಿಸೋಲ್ಲ—ಶುಭ ಎಷ್ಟು ಸುಧಾರಿಸ್ತಾಳೆ! ಅವಳು ರವಿ ತಲೆಯೊತ್ತುತ್ತಾ ಕುಳಿತಿದ್ದಾಳೆ!"

"ತಡೀರಿ, ಸುನಂದಮ್ಮ, ದೃಷ್ಟಿ ನಿವಾಳಿಸಿಬಿಡ್ತೀನಿ.

ರಾಜಮ್ಮ ಅವರಿಬ್ಬರ ಮಾತು ತಡೆದು ಮಗುವಿನ ಮುಖದ ಸುತ್ತ ಪೊರಕೆ ಕಡ್ಡಿ ನಿವಾಳಿಸಿದರು.

"ಆದಷ್ಟೂ ಈ ದೃಷ್ಟಿ, ಪಾಪಿದೃಷ್ಟಿ, ಕುನ್ನಿದೃಷ್ಟಿ, ತಾಯಿ ದೃಷ್ಟಿ, ತಂದೆ ದೃಷ್ಟಿ"

ಬೆಂಕಿತಗಲಿಸಿ ಮೂಲೆಯಲ್ಲಿಟ್ಟು ಸುಟ್ಟಾಗ ಚಿಟಿಚಿಟಿರೆಂದು ಕಡ್ಡಿ ಸಿಡಿಯಿತು. ಅಂದವಾಗಿದ್ದ ರೂಮಿನ ಗೋಡೆಯ ಮೂಲೆಯಲ್ಲಿ ಮಸಿಯಾಯಿತು. ಬೂದಿಯನ್ನು ಎಡಗಾಲಿನಿಂದ ತುಳಿದು, ಅದನ್ನು ಮಗುವಿನ ಹಣೆಗೆ, ಎಡಗೈ, ಎಡಗಾಲಿಗೆ ಬಳಿದರು. ಮಗು ಅಳು ನಿಲ್ಲಿಸಲಿಲ್ಲ.

"ನಂದಿನಿ, ಅಪ್ಪಾ, ಭಾಸ್ಕರ ಎಲ್ಲಿ ?"

ರಘು ಕೇಳಿದಾಗ ನಂದಿನಿ ಕೊಂಚ ಗಡುಸಾಗೇ ಹೇಳಿದಳು.

"ನಿನ್ನ, ದೊರೆ ಮಗನ್ನ, ಹುಡುಕಿಕೊಂಡು ಹೋಗಿದ್ದಾರೆ !"

ಮಗುವಿನ ಅಳು ರಘುವಿನ ಅಂತಃಕರಣ ಕದಡಿತು.

"ಇಲ್ಲಿ ಕೊಡು ನಂದಿನಿ, ಮಗೂನ್ನ !"

ರಘು ಅವಳ ಕೈಯ್ಯಿಂದ ಮಗುವನ್ನು ಎತ್ತಿಕೊಂಡನು.

"ನಾನು ಅಳು ನಿಲ್ಲಿಸ್ತೀನಿ .. ತಾಳು !"

"ಬೇಡ್ವೋ, ಎತ್ತಿಹಾಕ್ಬಿಟ್ಟೀಯೋ !" ನಂದಿನಿ ಹೇಳಿದಾಗ ರಘು ಉಸುರಿದ. "ನನ್ನ ಕೈಗೆ ಕೊಟ್ಟಿದ್ದನ್ನು ನಾನು ಯಾವಾಗಲೂ, ಎಂದೂ, ಕೆಳಗೆ ಎತ್ತಿಹಾಕೋಲ್ಲ !"

ಅವನ ಮುಖದ ಭಾವ ತಿಳಿಯುವ ಮೊದಲು ನಂದಿನಿಗೆ ಬೆನ್ನು ಮಾಡಿ ತನಗೆ ತಿಳಿದಷ್ಟು ನಾಜೂಕಾಗಿ ಮಗುವನ್ನೆತ್ತಿಕೊಂಡು ಮನೆಯ ಬಾಗಿಲಿಂದ ಹೊರಗೆ ಕಾಲಿಟ್ಟನು. ಬೀಸಿ ಬಂದ ತಂಪುಗಾಳಿಯಿಂದಲೋ, ಇದ್ದಕ್ಕಿದ್ದ ಹಾಗೆ ಕತ್ತಲಿನತ್ತ ಕಣ್ತೆರದ ಭಯದಿಂದಲೋ ಏನೋ ಮಗು ತಟಕ್ಕನೇ ಬೆಚ್ಚಿ ಅಳು ನಿಲ್ಲಿಸಿತು. ರಘು ಅದನ್ನು ಮೆಲ್ಲಗೆ ಅಪ್ಪಿಹಿಡಿದು ತಲೆ ಸವರಿದನು.

"ಲೋ, ಹೊರಗೆ ಚಳಿ. ಮಗೂಗೆ ಏನಾದ್ರು ಆದೀತೂ. ಒಂದು ತಿಂಗಳ ವರ್ಗೂ ಹೊರಗೆ ಕರ್ಕೊಂಡು ಹೋಗ್ಬಾರ್ದು !"

ನಂದಿನಿ ಒಳಗಿನಿಂದಲೇ ಕೂಗಿದಳು. ತಟಕ್ಕನೇ ಮಗು ಅಳು ನಿಲ್ಲಿಸಿದ್ದು ಅವಳಿಗೂ ಆಶ್ಚರ್ಯ ! ರಘುವಿನ ಬಾಹುಗಳಲ್ಲಿ ಬೆಚ್ಚಗೆ ಮುದುಡಿ ಮಲಗಿತ್ತು

ಮಗು–ಸವರುತ್ತಿದ್ದ ಅವನ ಕೈಗಳ ಸ್ಪರ್ಶ ಅದಕ್ಕೆ ಹಿತವೆನಿಸಿರಬೇಕು, ಕಣ್ಣು ಮುಚ್ಚಿತ್ತು. ಆದರೂ ಅಷ್ಟೊಂದು ಅತ್ತಿದ್ದರಿಂದ ಆಗಾಗ ಬಿಕ್ಕುತ್ತಿತ್ತು. ಹಿಂದಿನಿಂದ ನಂದಿನಿ ಬಂದು ಅಚ್ಚರಿಯಿಂದ ನೋಡಿದಾಗ ಮಗು ಶಾಂತವಾಗಿ ನಿದ್ರಿಸುತಿತ್ತು.

"ಇದೇನೋ ರಘು, ನೀನು ಎತ್ಕೊಳ್ಳೋತ್ಲೂ ಮಲಗಿಬಿಡ್ತು ! ನೋಡಿದ್ಯಾ ಅದ್ನಾ ! ತಾಳು ಶುಭಂಗೆ, ರವಿಗೆ ಹೇಳ್ತೀನಿ...."

ನಂದಿನಿ ಹೇಳಿದಾಗ ರಘು ಮಗುವನ್ನು ಎದೆಗಪ್ಪಿಕೊಂಡನು.

"ನಂದೂ, ಇವಳು ರವಿಯ ಮಗಳು. ಅವಳಿಗೆ ತೋಟದ ಗಾಳೀನೇ ಬೇಕು, ತೋಟದ ಪರಿಸರವೇ ಬೇಕು–ಷೀ ವಾಂಟ್ಸ್ ಟು ಬಿ ನಿಯರರ್ ಟು ನೇಚರ್."

ಆ ಮಾತು ಅವಳಿಗೆ ಕೇಳಿಸಲಿಲ್ಲ. ಅವಳಾಗಲೇ ಶುಭನಿಗೆ ಮಗು ಅಳುವುದು ನಿಲ್ಲಿಸಿರುವುದನ್ನು ಹೇಳಲು ಹೋಗಿದ್ದಳು.

ಮಲಗಿದ್ದ ಮಗುವನ್ನು ಒಳಗೆ ತೊಟ್ಟಿಲಲ್ಲಿ ಮಲಗಿಸಲು ರಘು ಮತ್ತೆ ಮುಂಬಾಗಿಲಿಗೆ ಬಂದಾಗ ಎದುರಿಗೆ ಶುಭ ನಿಂತಿದ್ದಳು. ಅವಳ ಮುಖದಲ್ಲೂ ಅಚ್ಚರಿ ! ಸಂತಸದಿಂದಲೋ ಸಮಾಧಾನದಿಂದಲೋ ಅವಳ ಎದೆ ಏರಿಳಿಯುತ್ತಿತ್ತು.

"ತುಂಬಾ ಥ್ಯಾಂಕ್ಸ್, ಎಷ್ಟು ಬೇಗ ಸಮಾಧಾನ ಮಾಡಿದಿರಿ. ನಿಮಗಾಗಿಯೇ ಅಳ್ತಾ ಇದ್ಲೇನೋ !"

ಶುಭ ಮಗುವಿನತ್ತ ಕೈ ನೀಡಿದಳು. ಅವಳ ಮಡಿಲಿಗೆ ಮಗುವನ್ನು ಕೊಡುತ್ತಾ ರಘು ಗಂಭೀರವಾಗಿ ಹೇಳಿದ.

"ಅವಳಿಗೆ ಗೊತ್ತು, ತಾನು ನನ್ನವಳೆಂದು. ರವಿ ನನಗಲ್ಲವೇ ಅವಳನ್ನು ಕೊಟ್ಟಿರುವುದು. ಆದರೆ ಅವಳು ಇದನ್ನ ಹ್ಯಾಬಿಟ್ ಮಾಡಿಕೋಬಾರ್ದು–ಆತ್ಮಾಗ ನಾನು–ಇಲ್ಲದಿದ್ದಾಗ ನೀವೂಂತ !"

ಶುಭ ಸರಕ್ಕನೇ ಅವನತ್ತ ನೋಡಿದಳು. ಅವನ ಮಾತಿನ ಗೂಢಾರ್ಥ ಅವಳಿಗೆಟುಕದ ವಸ್ತುವಾಗಿತ್ತು- ಅವನ ಗಂಭೀರ ನೋಟವನ್ನು ಎದುರಿಸಲಾರದೇ ಮಲಗಿದ್ದ ಮಗುವನ್ನೆತ್ತಿಕೊಂಡು ಒಳಗೆ ನಡೆಯುತ್ತಾ ಹಿಂದಿರುಗಿ ನೋಡದೇ ಹೇಳಿದಳು.

"ರವಿ ನಿಮ್ಮನ್ನ ಕರೀತಾ ಇದ್ದಾರೆ."

ರವಿ ಹಾಸಿಗೆಯ ಮೇಲೊರಗಿ ಮಲಗಿದ್ದನು. ಅವನ ಹಣೆಗೊಂದು ಕರವಸ್ತ್ರವನ್ನು ಬಿಗಿಯಾಗಿ ಕಟ್ಟಲ್ಪಟ್ಟಿತ್ತು. ರಘುವಿನ ಹೆಜ್ಜೆಯ ಸದ್ದು ಕೇಳಿ ಕಣ್ತೆರೆದನು.

"ಎಲ್ಲಿ ಹೊರಟುಹೋಗಿದ್ದೀ ರಘು ? ಎಷ್ಟು ಹೊತ್ತಪ್ಪಾ ಬರೋದೂ ? ನೀನು ಬರೋತನ್ಕ ನಾನಿರ್‍ತೀನೋ ಇಲ್ವೋ ಅಂದ್ಕೊಂಡೆ, ನೋಡೂ !"

ರಘು ರವಿಯ ಪಕ್ಕ ಕುಳಿತನು. "ಛೀ, ಹಾಗೆಲ್ಲಾ ಮಾತಾಡ್ಬೇಡ್ವೋ ರವಿ-ನಿನ್ನ ಬಿಟ್ಟು ನಾನೆಲ್ಲಿ ಹೋಗಲಿ ! ನಿನ್ನ ತೋಟಾನೆಲ್ಲಾ ನೋಡ್ಕೊಂಡು ಬಂದೆ ಅಷ್ಟೆ ! ಯಾಕೆ ತಲೆನೋವಾ ?"

"ಹೂಂ ರಘು, ನಂಗೆ ತಡ್ಕೊಳ್ಳೋಕೇ ಆಗ್ತಾ ಇಲ್ಲ ! ನಿನಗೇ ನನ್ನ ಔಷಧಿಗಳು ಗೊತ್ತಿರೋದೂ...ಅವರ‍್ಯಾರೂ ಕೊಡಲಿಲ್ಲ !"

ರವಿ ನೋವಿನಿಂದ ಮುಖ ಹಿಂಡಿದ.

"ನೀನು ಇವೊತ್ತು ಬಹಳ ಆಯಾಸ ಮಾಡಿಕೊಂಡಿದ್ದೀ, ಅದಕ್ಕೇ ಆಯಾಸಕ್ಕೆ ತಲೆ ನೋಯಿರಬೇಕು ! ಮಲಗಿ ನಿದ್ರೆ ಮಾಡಿ ರೆಸ್ಟ್ ತೊಗೋ, ಸರಿ ಹೋಗುತ್ತೆ ! ನಿದ್ದೆಗೆ ಮಾತ್ರ ಔಷಧಿ ಕೊಟ್ಟಿರೋದು ಡಾಕ್ಟರ್. ಅದರಿಂದ ನೋವೂ ಕಡಿಮೆ ಆಗುತ್ತೇಂತ ಹೇಳಿದ್ದಾರೆ."

"ಹೋಗಲಿ, ಅದನ್ನೇ ಕೊಡು ಸಾಕು."

ರವಿ ಮತ್ತೆ ನೋವಿನಿಂದ ನರಳಿದನು. ರಘು ಎದ್ದು ಬಾಟಲಿನಿಂದ ಎರಡು ಗುಳಿಗೆಗಳನ್ನು ರವಿಯ ಕೈಗಿತ್ತು ಲೋಟದಲ್ಲಿ ನೀರು ಕುಡಿಯಲು ಕೊಟ್ಟನು. ರವಿ ಗುಳಿಗೆ ನುಂಗಿ ನೀರು ಕುಡಿದು ಮತ್ತೆ ದಿಂಬಿನ ಮೇಲೊರಗಿ ಮಲಗಿದನು.

"ರಘೂ, ನಿನಗೆ ಕೋಪವಿಲ್ಲ ತಾನೇ ? ಎಲ್ಲಾ ಜವಾಬ್ದಾರಿ ನಿನ್ನ ತಲೆಯ ಮೇಲೆ ಹಾಕಿವೇಂತಾ ?"

ರವಿ ರಘುವಿನ ಕೈಯನ್ನು ತನ್ನೆದೆಯ ಮೇಲಿರಿಸಿಕೊಂಡನು.

"ನೀನು ಕೋಪದಿಂದ ಎದ್ದು ಹೊರಟುಹೋದೆ."

ರಘು ಅವನೆದೆಯ ಬಡಿತವನ್ನು ಸ್ಪಂದಿಸಿ ಹೇಳಿದ.

"ಛೀ, ಹಾಗೇನೂ ಇಲ್ಲ ರವಿ—ನನಗೆ ಬೇಸರವಾದದ್ದು ಅದಕ್ಕಲ್ಲ-ನಿನಗೆ ವಿಲ್ ಮಾಡಲು ಅವಸರವೇನಿತ್ತೂಂತ ಅಷ್ಟೆ !"

"ಇವತ್ತಿನ ದಿನಕ್ಕಿಂತ ಏನಯ್ಯಾ ! ಹೆಂಡತಿ ಮಕ್ಕಳು ಮನೆಗೆ ಬಂದ ದಿನ-ನೀವೆಲ್ಲಾ ಸೇರಿರುವ ದಿನ, ಅದಕ್ಕೇ ಮಾಡಿದೆ-ಆದರೆ ಒಂದು ಮಾತು ರಘು-ಶುಭನಿಗೆ ಏನೂ ಕೊಟ್ಟಿಲ್ಲ-ಕೊಡುವುದೂ ಇಲ್ಲ-ಅವಳು ಈ ಮನೆಯ ಲ್ಲಿದ್ದು ಸುಖವಾಗಿರಬೇಕಾದರೆ ಅವಳನ್ನು ನೋಡಿಕೊಳ್ಳುವ ಹೊಣೆ ನಿನ್ನದೂ ರಘೂ. ನಾನು ಅವಳನ್ನು ನಿನಗೆ ಒಪ್ಪಿಸುತ್ತಿದ್ದೇನೆ...!"

ರವಿ ನಿದ್ದೆಯ ಮಂಪರಿಗೆ ಜಾರುತ್ತಾ ಹೇಳಿದ.

"ನನ್ನ ಮಾತು ನಡೆಸಿಕೊಡು."

ಅವನ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಹೇಳಿದ. ರಘುವಿನ ಎದೆ ಬಡಿದುಕೊಳ್ಳಲಾರಂಭಿಸಿತು-ಮೈ ರಕ್ತ ಬಿಸಿಯಾಯಿತು. ಇದೇನು ರವಿ ಹೇಳುತ್ತಿರುವುದು ! ನಿದ್ದೆಯ ಮೋಡಿಯಲ್ಲಿ ನೋವು ಮರೆಯುತ್ತಿದ್ದ ರವಿಯತ್ತ ನೋಡಿದ. ನಿರ್ಲಿಪ್ತನಾಗಿ ಅವನು ಬಾಹ್ಯವನ್ನು ಮರೆಯುತ್ತಿದ್ದನು. ರಘು ವಿನ ಕಣ್ಣಲ್ಲಿ ತೇವದ ಅನುಭವವಾಯಿತು. ಮಲಗಿದ್ದ ರವಿಯ ಹಣೆ ಮೇಲಿದ್ದ ಕರವಸ್ತ್ರ ಬಿಚ್ಚಿದನು. ಅವನ ಹಣೆಯ ಮೇಲಿನ ಮುಂಗುರುಳು ಹಿಂದೆ ಸರಿಸಿ ತಲೆ ಸವರಿದನು.

ಮಗುವನ್ನು ಮಲಗಿಸಿ ಬಂದ ಶುಭ ರವಿ ಕಣ್ಮುಚ್ಚಿ ಮಲಗಿರುವುದನ್ನು ನೋಡಿ ಬಾಗಿಲಲ್ಲೇ ನಿಂತಳು. ಅವಳು ರಘು ರವಿಯ ತಲೆ ತಡವಿದುದನ್ನು ಕಂಡು ನಿಟ್ಟುಸಿರಿಟ್ಟಳು. ಅಣ್ಣತಮ್ಮಂದಿರ ಬಾಂಧವ್ಯ ಎಷ್ಟು ನಿಕಟ ! ತಾನು ಇವರಿಬ್ಬರ ನಡುವೆ ಬರಬಾರದಿತ್ತು ! ಅವಳ ನಿಟ್ಟುಸಿರು ಕೇಳಿ ಹಿಂತಿರುಗಿ ನೋಡಿದ ರಘು ಅವಳನ್ನು ನೋಡುತ್ತಲೇ ಎದ್ದು ನಿಂತನು.

"ತಲೆ ನೋವಿಗೆ ಮೆಡಿಸನ್ ಕೊಟ್ಟಿದ್ದೇನೆ. ಮಲಗಿ ನಿದ್ದೆ ಮಾಡಿದ್ರೆ ಸರಿ ಹೋಗುತ್ತೆ. ಅವನಿಗೆ ಪೂರ ನಿದ್ದೆ ಬರೋವರ್ಗೂ ಕೂತಿರ್ತೀರಾ ? ನಾನು ಒಂದು ಸಿಗರೇಟು ಸೇದಿ ಬರುತ್ತೇನೆ."

ರಘು ಅವಳ ಉತ್ತರಕ್ಕಾಗಿ ಕಾಯದೇ ಹೊರಹೊರಟನು. ಹೋಗು ವಾಗ ಬಾಗಿಲು ಮುಂದೆ ಮಾಡಿಕೊಂಡು ಹೋಗುವುದನ್ನು ಮರೆಯಲಿಲ್ಲ.

ರಘು ಹೊರಗೆ ಬಂದು ಸಿಗರೇಟೊಂದನ್ನು ಹಚ್ಚಿಕೊಂಡಾಗ ಭಾಸ್ಕರ, ಶಿವರಾಮಯ್ಯನವರು ಒಳಗೆ ಬಂದರು.

"ಎಲ್ಲಿಗೆ ಹೊರಟುಹೋಗಿದ್ದೆಯ್ಯಾ ? ಹುಡುಕೀ ಹುಡುಕೀ ಸಾಕಾಗಿ ಹೋಯ್ತು. ಈಗ ಬಂದೆಯೇನು ? ಮಗು ಮಲಗಿತೇನು ?"

ಶಿವರಾಮಯ್ಯನವರು ಏದುಸಿರು ಬಿಡುತ್ತಾ ಕೇಳಿದರು.

"ನಾನೆಲ್ಲಿಗೆ ಹೋಗ್ತೀನಪ್ಪಾ ? ಸುಮ್ಮ ಸುಮ್ಮನೇ ಏನೇನೋ ಅಂದ್ಕೋತೀರಿ. ಮಗೂನೂ ಮಲ್ಗಿದೆ, ರವೀನೂ ಮಲಗಿದ್ದಾನೆ".

ರಘು ತಂದೆಯೆದುರಿಗೆ ಸಿಗರೇಟು ಸೇದಲಿಚ್ಛಿಸದೇ ಹಾಗೇ ಆರಿಸಿದನು.

"ಹಾಗಾದ್ರೇ ಬಾ. ಎಲ್ಲಾ ರಾತ್ರಿ ಊಟದ ಶಾಸ್ತ್ರ ಮಾಡಿ ಮಲಗೋಣ, ಬೆಳಗಿನಿಂದ ಎಲ್ಲರಿಗೂ ಆಯಾಸವಾಗಿದೆ."

ಶಿವರಾಮಯ್ಯನವರು ಒಳಗೆ ಕಾಲಿಟ್ಟರು. ಭಾಸ್ಕರ ಕೈ ಹಿಡಿದು ಆದುಮಿ ಹೇಳಿದನು.

"ಬಾರಪ್ಪಾ ಒಳಗೆ. ಇಷ್ಟೊತ್ತು ಹೊರಗಿದ್ದುದು ಸಾಲದೇ ?"

ಊಟದ ಸಮಯದಲ್ಲಿ ನಂದಿನಿ, ರಘು ಮಗುವನ್ನು ಸಮಾಧಾನ ಮಾಡಿದ ವೈಖರಿಯನ್ನು ವರ್ಣಿಸಿದ್ದೂ ವರ್ಣಿಸಿದ್ದೇ. ರವಿಯ ಜೊತೆಗಿರಲು ಶುಭ ಬೇಗ ಊಟ ಮಾಡಿದ್ದಳು.

"ಅವನೇನಪ್ಪಾ ಎಲ್ಲದರಲ್ಲೂ ಜಾಣ....!"

ಭಾಸ್ಕರ ಹೇಳಿದ.

"ಮಗೂ ಬಾಯಿಗೆ ಸ್ಲೀಪಿಂಗ್ ಡೋಸ್ ಸುರಿದನೇನೋ ನೋಡ್ಬೇಕಿತ್ತಮ್ಮಾ."

ಸಂಜಯ ಕಿರುನಕ್ಕ.

"ಮಗು ದೇವರ ಸಮಾನ, ಅವುಗಳಿಗೆ ಎಲ್ಲಾ ತಿಳಿಯುತ್ತೆ ನೋಡು."

ಶಿವರಾಮಯ್ಯನವರು ಬಾಯಿಗೆ ತುತ್ತಿಟ್ಟುಕೊಂಡರೂ. ರಘು ಮಾತಾಡಲಿಲ್ಲ ಊಟವೆಲ್ಲಾ ಮಾಡಿಯಾದ ನೇಲೆ ತಟ್ಟೆಯಲ್ಲೇ ಕೈತೊಳೆದು ರಘು ಎದ್ದು ನಿಂತು ತನ್ನ ತಲೆ ಮುಟ್ಟಿ ನೋಡಿಕೊಂಡನು.

"ಯಾಕೋ, ಏನು ಹುಡುಕ್ತಾ ಇದ್ದೀ ?"

ನಂದಿನಿ ಕೇಳಿದಳು.

"ಕೊಂಬು, ಗಿಂಬು ಬಂದಿದ್ಯೋಂತ ನೋಡ್ಕೊಂಡೆ."

ರಘು ಹೇಳಿದಾಗ ಎಲ್ಲರೂ ನಗೆಯಾಡಿದರು.

ಮಲಗಿದ್ದ ರವಿಯ ರೂಮಿನಲ್ಲಿ ಬಾಬು ಕೆಲಸ ಮುಗಿಸಿ ಮಲಗಲು ಬರುತ್ತಲೂ ಶುಭ ಎದ್ದು ತನ್ನ ರೂಮಿನಲ್ಲಿ ಹೋಗಿ ಮಲಗಿದ್ದ ಮಗುವನ್ನು ದಿಟ್ಟಿಸಿ ನೋಡಿ ಮಂಚದ ಮೇಲೊರಗಿದಳು. ರವಿಯ ನೋವು ಪರಿಹಾರವಾಗಿ ಹಾಯಾಗಿ ಮಲಗಿದ್ದುದು ಅವಳಿಗೆ ಸಮಾಧಾನವಾಗಿತ್ತು. ಮನಸ್ಸಿನಲ್ಲೇ ರಘುವನ್ನು ವಂದಿಸಿದಳು.

ಸಂಜಯ, ಭಾಸ್ಕರ ತಮಗೆ ಬಿಟ್ಟುಕೊಟ್ಟಿದ್ದ ರೂಮಿನಲ್ಲಿ ಮಲಗಲು ಹವಣಿಸಿದ್ದರು. ಶಿವರಾಮಯ್ಯನವರು ರವಿಯ ರೂಮಿನಲ್ಲಿ ಇಣುಕಿ ನೋಡಿ ಮಲಗಿರುವುದು ಕಂಡು ಸಮಾಧಾನದ ನಿಟ್ಟುಸಿರು ಬಿಡುತ್ತಾ ತಮ್ಮ ರೂಮಿನತ್ತ ನಡೆದರು. ಮನೆಯ ಬಾಗಿಲುಗಳನ್ನು ಭದ್ರಪಡಿಸಿ ಬಂದ ರಘುವನ್ನು ನೋಡಿ ನಂದಿನಿ ನಿಂತಳು.

"ರಘೂ, ನಾಳೆ ಬೆಳಿಗ್ಗೆ ಇವರು ಆಫೀಸಿಗೆ ಹೊರಡುವ ಹೊತ್ತಿಗೆ ನಮ್ಮನ್ನು ಮನೆ ಸೇರಿಸು, ಗೊತ್ತಾಯ್ತಾ ?"

ಎಂದಾಗ ರಘು ಮೈ ಮುರಿದ.

"ನನ್ನ ಮೂಳೆ ಮೂಳೆ, ನರ ನರ ನೋಯ್ತಾ ಇದೆ. ನಂಗೆ ತುಂಬಾ ಸಾಕಾಗಿಹೋಗಿದೆ. ಈಗ ಯಾವ ಮಾತೂ ಬೇಡ ಮಲಗಿ. ಬೆಳಿಗ್ಗೆ ಎದ್ದಾಗ ಮಾತನಾಡೋಣ" ರಘು ಹೇಳಿದಾಗ ನಂದಿನಿಗೆ ನಿಜವೆನಿಸಿತು.

"ಪಾಪ, ನಿಂಗಂತೂ ಸಾಕಾಗಿಹೋಗಿರ್ಬೇಕೂ-ಮಲ್ಕೋ ಹೋಗಪ್ಪಾ-ನನ್ನ ಬುದ್ಧಿಗಿಷ್ಟು !" ನಂದಿನಿ ತಮ್ಮ ರೂಮಿನತ್ತ ಹೆಜ್ಜೆ ಹಾಕಿದಳು.

ಬಾಬು ತನಗಾಗಿ ಸಿದ್ಧಪಡಿಸಿದ್ದ ಹಾಸಿಗೆಯ ಮೇಲೆ ಕುಳಿತ ರಘುವಿಗೆ ವಿಪರೀತ ಆಯಾಸವೆನಿಸಿತು. ತನಗೆ ಬಿಡುವಿಲ್ಲದ ದುಡಿಮೆಯಾಗಿತು . ಇಂದಾದರೂ ಕೊಂಚ ನಿದ್ದೆ ಮಾಡಬೇಕೆನಿಸಿತು. ಬಂದ ಆಕಳಿಕೆಯನ್ನು ಅಡಗಿಸುತ್ತಾ ದಿಂಬಿನ ಮೇಲೊರಗಿ ಹತ್ತಿರದಲ್ಲಿದ್ದ ದೀಪ ಆರಿಸಿದನು.

'ನಾಳೆ ರವಿಯನ್ನು ಮತ್ತೆ ಡಾಕ್ಟರ ಬಳಿಗೆ ಕರೆದೊಯ್ಯಬೇಕು !' ಎಂದುಕೊಂಡನು. ಆಯಾಸದಿಂದ ಅವನ ಕಣ್ಣುಗಳು ಮುಚ್ಚಿದವು.

ಇದ್ದಕ್ಕಿದ್ದಹಾಗೆ ಯಾರೋ ತನ್ನನ್ನು ಎಚ್ಚರಗೊಳಿಸುತ್ತಿದ್ದುದರ ಅರಿವು ರಘುವಿಗೆ.

"ಸಾರ್ ಸಾರ್, ಏಳಿ ಸಾರ್....

ರಘು ಬಲವಂತದಿಂದ ಕಣ್ತೆರೆದನು. ಯಾರು ತನ್ನ ನಿದ್ರೆ ಕೆಡಿಸುತ್ತಿರುವುದು !

"ಸಾರ್, ರವಿಯವ್ರೋರು ವಾಂತಿ ಮಾಡ್ಕೊಂಡಿದ್ದಾರೆ....ರಕ್ತ ವಾಂತಿ ಮಾಡ್ಕೊಂಡಿದ್ದಾರೆ."

ಬಾಬುವಿನ ಅಸ್ಪುಟ ಆಕಾರ ಭೀಮಾಕಾರವಾಗಿ ಕಂಡಿತು.

"ಏನು ?"

ರಘು ತಟಕ್ಕನೆದ್ದು ಕುಳಿತು ಕಣ್ಣು ಹೊಸಕಿಕೊಂಡನು. ಎದುರಿಗೆ ಬಾಬು ಭಯದಿಂದ ವಿಹ್ವಲನಾಗಿ ನಿಂತಿದ್ದಾನೆ. ರಘು ಹೊದಿಕೆಯನ್ನು ತಳ್ಳಿ ಎದ್ದು ನಿಂತನು. ಬಾಬು ಮೆಲ್ಲನುಸುರಿದನು.

"ಸಾರ್, ಎಲ್ರನ್ನೂ ಎಬ್ಬಿಸಲಾ ?"

ರಘು ತಲೆಯಲ್ಲಾಡಿಸಿದನು. ರವಿಯ ರೂಮಿಗೆ ಧಾವಿಸಿ ಬಂದ ರಘು ದೃಶ್ಯ ನೋಡಲಾರದೇ ಒಂದು ಗಳಿಗೆ ಕಣ್ಮುಚ್ಚಿ ನಿಂತನು. ರವಿಯ ಮೂಗಿನಲ್ಲೂ ರಕ್ತ.

"ರವಿ, ರವಿ....ಇಲ್ನೋಡೂ...."

ರಘು ಬಾಗಿ ರವಿಯ ಹಣೆ ಸವರಿದಾಗ ಅವನ ಕೈ ಹಿಂತೆಗೆಯಿತು. ಅವನಿಗೆ ಒಮ್ಮೆಗೇ ಅರ್ಥವಾಯಿತು, ರವಿ ಇನ್ನಿಲ್ಲವೆಂದು. ಮೈಯಲ್ಲಿನ ರಕ್ತವೆಲ್ಲಾ ಒಮ್ಮೆಗೇ ತಣ್ಣಗಾದ ಹಾಗಾಯಿತು. ವಿಗ್ರಹದಂತೆ ರವಿಯ ಮುಖವನ್ನೇ ನೋಡುತ್ತಾ ನಿಂತಿದ್ದ ರಘುವಿನತ್ತ ಒಮ್ಮೆ ನೋಡಿ ಬಾಬು ಭಾಸ್ಕರನ ರೂಮಿನತ್ತ ಓಡಿದನು. ಭಾಸ್ಕರ ಬಂದಾಗಲೂ ರಘು ಹಾಗೇ ನಿಂತಿದ್ದನು. ಅವನ ಹಿಂದೆಯೇ ಬಂದ ನಂದಿನಿ ರವಿಯನ್ನು ನೋಡುತ್ತಲೇ ಒಮ್ಮೆಗೇ ಚೀರಿದಳು. ಅವಳ ಕೂಗು ಕೇಳಿ ಶುಭ, ಶಿವರಾಮಯ್ಯನವರೂ ಬಂದರು. ಶುಭ ರವಿಯನ್ನು ನೋಡುತ್ತಲೇ ಅವನ ಮಂಚದತ್ತ ಧಾವಿಸಿ ಅವನ ನಿರ್ಜೀವ ದೇಹದ ಮೇಲೆ ತಲೆಯಿಟ್ಟು ಬಿಕ್ಕಿದಳು. ರಘು ಹಾಗೆಯೇ ನಿಂತಿದ್ದನು.

"ರಘೂ, ರಘೂ, ನೀವು ಹೇಳಿದ್ದರಲ್ಲ. ರವಿಯನ್ನು ನೋಡಿಕೊಳ್ಳುತ್ತೀನಿ, ಧೈರ್ಯವಾಗಿರಿ, ನನ್ನ ಮೇಲೆ ನಂಬಿಕೆಯಿಲ್ಲವೇ ಎಂದು ? ಈಗ ನನ್ನ ರವಿಯನ್ನು ನನಗೆ ಕೊಡಿಸಿ"

ಎಂದು ಶುಭ ಅವನನ್ನು ಹಿಡಿದಲುಗಿಸಿ ಅಳುತ್ತಾ, ಕೇಳಿಕೊಂಡಾಗ ರಘು ಅವಳನ್ನು ತೆನ್ನೆದೆಗೆ ಒರಗಿಸಿಕೊಂಡು ಅವಳ ತಲೆ ಸವರಿದನು.

"ಶುಭಾ, ನನ್ನ ಆಯುಸ್ಸಿನಲ್ಲಿ ಅರ್ಧ ಅವನಿಗೆ ಕೊಡುವುದಾದರೆ ಈಗಲೇ ಕೊಡುತ್ತೇನೆ, ತೆಗೆದುಕೊಳ್ಳಿ."

ಶಿವರಾಮಯ್ಯನವರು ಪಂಚೆಯ ತುದಿಯಿಂದ ಕಣ್ಣೀರು ತೊಡೆದು ಕೊಂಡು ಧೀರ್ಘನಿದ್ರೆಯಲ್ಲಿದ್ದ ಮಗನ ಮೈ ಸವರಿದರು. ಅವರ ಮೂಕ ರೋದನದಲ್ಲಿ ಎಷ್ಟು ನೋವು ಅಡಗಿತ್ತೋ! ನಂದಿನಿ ಮುಖ ಮುಚ್ಚಿ ಅಳುತ್ತಿದ್ದಳು. ಬಾಬು ರವಿಯ ಕಾಲ ಬಳಿ ತಲೆ ಇಟ್ಟು ಅಳುತ್ತಿದ್ದ. ಭಾಸ್ಕರನ ಕಣ್ಣಲ್ಲಿ ನೀರು ತುಂಬಿ ಕೆನ್ನೆಯ ಮೇಲುರುಳಿತು. ರಘು, ಶುಭ ಇಬ್ಬರನ್ನೂ ತನ್ನೆದೆಗೆ ಒರಗಿಸಿಕೊಂಡನು. ಸಂಜಯ ಹನಿಗಣ್ಣಾಗಿ ನೋಡಿ ಇದ್ದಕ್ಕಿದ್ದಹಾಗೆ ಸಿಳ್ಳೆ ಮಾಡುತ್ತಿದ್ದ ಮಗು ಎಚ್ಚೆತ್ತು ಅಳುತ್ತಿದ್ದುದು ಕೇಳಿ ಮಗುವಿನತ್ತ ಧಾವಿಸಿದನು.

○ ○ ○ ○

ರಘು ಮನೆಯ ಮುಂದಿನ ತೋಟದಲ್ಲಿನ ಕುರ್ಚಿಯ ಮೇಲೊರಗಿ ಶುಭ್ರವಾದ ಆಗಸವನ್ನು ದಿಟ್ಟಿಸುತ್ತಿದ್ದನು. ಅವನ ಕೈಲಿದ್ದ ಸಿಗರೇಟು ಹಾಗೇ ತನ್ನಷ್ಟಕ್ಕೆ ತಾನು ಉರಿದು ಬೂದಿಯಾಗುತ್ತಿತ್ತು. ಕಾಲಚಕ್ರ ವೇಗದಿಂದ ಉರುಳುತಿತ್ತು. ಕೈಗೆ ಉರಿದುಹೋದ ಸಿಗರೇಟಿನ ಬಿಸಿ ತಗಲಿ ದಾಗ ರಘು ಎಚ್ಚೆತ್ತು ಅದನ್ನು ಕೆಳಗೆಸೆದನು.

"ಸಾರ್, ನಿಮಗೆ ಫೋನು ಬಂದಿದೆ!"

ಬಾಬು ಹೇಳಿದಾಗ ರಘು ಎದ್ದನು. ತನಗೆ ಹೇಳಿ ಮನೆಯೊಳಗೆ ಹೋಗುತ್ತಿದ್ದ ಬಾಬುವಿನತ್ತ ನೋಡಿ ನಿಟ್ಟುಸಿರಿಟ್ಟನು. ಬಾಬು ರವಿಯ ಸಾವಿನಿಂದ ಅರ್ಧ ಕುಗ್ಗಿಹೋಗಿದ್ದನು. ಕೆಲಸದಲ್ಲಿ ಮೊದಲಿನ ಚುರುಕಿಲ್ಲ, ಆಸಕ್ತಿಯಿಲ್ಲ ಕೆಲಸ ಮಾಡುತ್ತಾ ಮಾಡುತ್ತಾ ಇದ್ದಕ್ಕಿದ್ದಹಾಗೆ ಏನನ್ನೋ ನೆನೆದು ಕಣ್ಣೀರಿಡುವನು.

"ಯಾರದು ಫೋನು ಬಾಬೂ ?"

ರಘು ಕೇಳಿದಾಗ, ಬಾಬು ಹಿಂತಿರುಗಿ ನೋಡದೇ ಉತ್ತರಿಸಿದನು.

"ಅಮ್ಮಾವ್ರದು."

ರಘು ಫೋನು ಕೈಗೆ ತೆಗೆದುಕೊಂಡನು.

"ಹಲೋ"

"ಹಲೋ, ರಘು. ಶುಭ ಮಾತಾಡ್ತಾ ಇರೋದೂ....ಇವೊತ್ತು ಸಂಜೆ ಮನೆಗೆ ಬರ್ತೀರಾ ?"

ಅವಳ ಧ್ವನಿಯಲ್ಲಿ ಆರ್ತತೆಯಿತ್ತು.

"ಏನು ವಿಶೇಷ ? ಹೇಳಿದರೆ ಟ್ರೈ ಮಾಡ್ತೀನಿ."

"ಏನಿಲ್ಲ, ನನ್ನ ಕಲೀಗ್ಸ್‌ನ ಟೀಗೆ ಕರ್ದಿದೀನಿ. ನಾನೊಬ್ಬಳೇ ಎಷ್ಟು ಎಂಟರ್‌ಟೈನ್ ಮಾಡೋದೂ....ಶಿಲ್ಪ ಸುಮ್ನೆ ಹಠಟ್ತಾಳೆ–ಬೋರ್ ಹೊಡಿಸ್ತಾಳೆ–ನೀವು ಬಂದ್ರೆ ನಂಗೆ ಸಂತೋಷ."

ರಘು ಯೋಚಿಸಿದ.

"ಆಲ್‌ರೈಟ್, ಬರ್ತೀನಿ. ಎಷ್ಟೊತ್ತಿಗೆ ?"

"ಆರು ಗಂಟೆಯ ಹೊತ್ತಿಗೆ ಬನ್ನಿ...ನೋಡಿ ಶಿಲ್ಪ ನಿಂತಿದ್ದಾಳೆ. ನಿಮ್ಮ ಹತ್ರ ಮಾತಾಡ್ಬೇಕಂತೆ"

ಶುಭನ ಮಾತು ನಿಂತಿತು.

"ಹಲೋ ಅಂಕಲ್"

ಶಿಲ್ಪನ ಮುದ್ದು ಧ್ವನಿ.

"ಹಲೋ ಸ್ವೀಟ್....ಏನ್ಸಮಾಚಾರ ?"

ರಘುವಿನ ಮುಖದಲ್ಲಿ ಮಂದಹಾಸ ಮಿನುಗಿತು.

"ಅಂಕಲ್, ಸ್ಯಾಟಲ್ ಓ ಸಂಡೇ ಮೂಲ್ದಿನ ನಾನು ನಿಂಜೊತೆ ಇಲ್ತೀನಿ. ಕಲ್ಕೊಂಡು ಓಗ್ತೀಯಾ ?"

ಮುದ್ದು ಮುದ್ದಾಗಿ ಹೇಳಿತು.

ರಘು ನಕ್ಕನು.

"ಓ. ಕೆ. ಡಾರ್ಲಿಂಗ್....ಅಮ್ಮನ್ನ ಕೇಳಿ ನಿನ್ನ ಡ್ರೆಸ್ ಪ್ಯಾಕ್ ಮಾಡಿಟ್ಕೊಕೋ....ಸಾಯಂಕಾಲ ಬರ್ತೀನಿ...."

"ನಾನೂ, ನೀನೂ ಮೂಲ್ಜನಾನೂ, ಕಾಲ್ನಲ್ಲಿ ದೂಲ ಓಗೋಣಾ ?"

ರಘು ಮತ್ತೆ ನಕ್ಕನು.

"ನಾನೂ, ನೀನೂ ಇಬ್ರೇ ಮರಿ-ಒಂದು ಒಂದು ಎರಡು-ಮೂರಲ್ಲ-ಕಾರಲ್ಲಿ ಎಲ್ಲಿಗ್ಬೇಕಾದ್ರೂ ಕರ್ಕೊಂಡು ಹೋಗ್ತೀನಿ."

"ಸರಿ, ಇದ್ದಾ ಫೋನು-?"

"ಅಂಕಲ್ ಐ ಲವ್ ಯೂ ಅಂತ ಹೇಳ್ಲೇ ಇಲ್ಲ...."

"ಅಯ್ಯೋ ಮರ್ತೇ ಹೋಯ್ತು. ಅಂಕಲ್ ಐ ಲವ್ ಯೂ...."

"ಸೋ ಡೂ ಐ, ಬರ್ಲಾ ಚಿನ್ನಾ ಮರಿ. ಸಾಯಂಕಾಲ ಬರ್ತೀನಿ."

ರಘು ರಿಸೀವರ್‌ಗೆ ಮುತ್ತಿಟ್ಟು ಕೆಳಗಿಟ್ಟನು. ಅವನ ಮುಖದಲ್ಲಿ ಮಿನುಗುತ್ತಿದ್ದ ನಗುವಿನ್ನೂ ಮಾಸಿರಲಿಲ್ಲ. ಆಗತಾನೆ ಸ್ನಾನ ಮುಗಿಸಿ, ದೇವರ ಪೂಜೆಗಾಗಿ ಮಗುಟ ಉಡುತ್ತಿದ್ದ ಶಿವರಾಮಯ್ಯನವರು ಮಗನ ಮುಖದಲ್ಲಿನ ಮಂದಹಾಸ ಕಂಡು ಕೊಂಚ ಅಚ್ಚರಿಗೊಂಡರು. ಅವನು ನಗುತ್ತಿದ್ದುದು ಬಹಳ ಅಪರೂಪವೇ.

"ಏನಪ್ಪಾ ರಘು, ನಗ್ತಾ ಇದ್ದೀಯಾ ?"

ಆಗುತ್ತಿದ್ದ ವಯಸ್ಸಿನ ಜೊತೆಗೆ ರವಿಯ ಅಗಲಿಕೆಯ ಕೊರಗಿನಿಂದ ಕ್ಷೀಣವಾಗುತ್ತಿದ್ದ ಧ್ವನಿಯಲ್ಲಿ ಕೇಳಿದರು.

"ಏನೂ ಇಲ್ಲಪ್ಪಾ ಶಿಲ್ಪ--ಫೋನು ಮಾಡಿತ್ತು. ಶನಿವಾರ, ಭಾನುವಾರ ಇಲ್ಲೇ ಇರುತ್ತಂತೆ !"

ರಘು ಶಿಲ್ಪನ ಮುದ್ದು ನೆನಪಿನಿಂದ ಮತ್ತೆ ನಕ್ಕನು. ಶಿವರಾಮಯ್ಯನವರ ಮುಖದಲ್ಲೂ ಮಂದಹಾಸ ಮೂಡಿತು.

"ಅದು ಬಿಡು. ಮನೆಯವರ ಮಾತೆಲ್ಲಾ ತಾನೊಂದೇ ಆಡುತ್ತೆ. ಆ ಮಗು ಈ ಮನೇಲೇ ಇದ್ದಿದ್ರೆ ಎಷ್ಟು ಚೆನ್ನಾಗಿರೋದೂ-ಅದು ಈ ಮನೇ ಅಂದ್ರೆ ಪ್ರಾಣ ಬಿಡುತ್ತೆ. ಅದ್ಯಾಕೆ ಅವರಮ್ಮ ಹಟ ಮಾಡ್ತಾಳೋ !" ನಿಟ್ಟುಸಿರು ಬಿಟ್ಟರು.

"ಅವರಿಗೆ ಹೇಗೆ ಬೇಕೋ ಹಾಗಿರಲಿ ಬಿಡಪ್ಪಾ. ಆ ಮಾತೇಕೆ ?"

ರಘುವಿನ ನಗೆ ಮಾಯವಾಗಿ ಮೋಡ ಮುಸುಕಿತು. ಮತ್ತೆ ತೋಟದಲ್ಲಿದ್ದ ಕುರ್ಚಿಯತ್ತ ಹೆಜ್ಜೆ ಹಾಕಿದನು. ತನಗೆ ಬೆನ್ನು ಮಾಡಿ ಹೋಗುತ್ತಿದ್ದ ಮಗನನ್ನು ಕಂಡು ಶಿವರಾಮಯ್ಯ ಮೇಲುಸಿರಿಟ್ಟರು. "ತಲೆಯ ಕೂದಲೆಲ್ಲ ಅರ್ಧ ನೆರೆದುಹೋಯಿತು."

"ಆ ಮಗೂ, ಈ ತೋಟ ಇಲ್ದಿದ್ರೆ ಇವನು ಸನ್ಯಾಸಿ ಆಗೋಗ್ತಾ ಇದ್ನೋ ಏನೋ !" ತಮಗೆ ತಾವೇ ಅಂದುಕೊಂಡರು.

"ಆ ಮಾತೇಕೆ" ಎಂದು ತಂದೆಗೆ ಹೇಳಿ ಬಂದರೂ ರಘುವಿಗೆ ಆ ಮಾತಿನ ನೆನಪು ಮತ್ತೆ ಕಾಡಿತು. ಕುರ್ಚಿಗೊರಗಿ ಕಣ್ಮುಚ್ಚಿದ. ರವಿಯ ಅಂತ್ಯ ಸಂಸ್ಕಾರ ಮುಗಿಸಿ ಬಂದಾಗ, ತಾನು ಶುಭನನ್ನು ನೋಡಿದವನು--ಅನಂತರ ಅವಳು ರೂಮು ಬಿಟ್ಟೇ ಬಂದಿರಲಿಲ್ಲ. ನಂದಿನಿ ಅವಳಿಗೆ ಸಮಾಧಾನ ಮಾಡಿ ಮಾಡಿ ಸಾಕಾಗಿಹೋಗಿದ್ದಳು. ಮಗುವಿನ ವ್ಯಾಮೋಹದಿಂದಲಾದರೂ ರವಿಯನ್ನು ಮರೆಯಲೆಂದು ನಂದಿನಿ ಮಗುವನ್ನು ಬಲವಂತದಿಂದ ಅವಳ ಕೈಗಿತ್ತರೂ ಶುಭಳ ಕಣ್ಣೀರು, ಉದ್ರೇಕ ಇಳಿದಿರಲಿಲ್ಲ.

"ಈ ಹಾಳು ಮಗು ಹುಟ್ಟಿ ಅವರನ್ನು ನುಂಗಿತು....!"

ಎಂದು ಅದನ್ನು ಅತ್ತ ಸರಿಸುತ್ತಿದ್ದಳು. ರಾಜಮ್ಮ ನೀರು ಹಾಲು ಬೆರೆಸಿ ಫೀಡಿಂಗ್ ಬಾಟಲಲ್ಲಿ ತುಂಬಿ ಕೊಡುತ್ತಿದ್ದ ಹಾಲೇ ಮಗುವಿನ ಹೊಟ್ಟೆ ತುಂಬುತ್ತಿತ್ತು. ತಾಯಿಯ ಮಮತೆ, ಪ್ರೀತಿಯ ಬದಲು, ಎತ್ತಿಕೊಂಡವರ, ಮುದ್ದು ಮಾಡಿದವರ ಮಮತೆಯಲ್ಲಿ ಬೆಳೆಯತೊಡಗಿತ್ತು. ಆದರೂ ಒಮ್ಮೊಮ್ಮೆ ತಾಯಿಯ ನೆನಪಿನಿಂದಲೋ ಏನೋ ರಚ್ಚೆ ಹಿಡಿದಾಗ....ರಘು ಅದನ್ನೆತ್ತಿಕೊಂಡು ಸಮಾಧಾನ ಮಾಡುತ್ತಿದ್ದುದುಂಟು.

ಮಾಡಬೇಕಾಗಿದ್ದ ಶ್ರಾದ್ಧ ಕರ್ಮಗಳನ್ನು ಮಾಡಿ ಮುಗಿಸಾದ ಮೇಲೆ ರಘು ಅಳುತ್ತಿದ್ದ ಮಗುವನ್ನು ಸಾಂತ್ವನಗೊಳಿಸುತ್ತಾ ಇದ್ದಾಗ....ಜೋರಾಗಿ ಅಳುತ್ತಿದ್ದ ಶುಭನನ್ನು ನಂದಿನಿ ಸಮಾಧಾನ ಮಾಡುತ್ತಿದ್ದಳು.

"ಅತ್ತಿಗೆ--ನಾನು ಮೋಸ ಮಾಡಿದೆ-ರವಿಗೆ, ಅದಕ್ಕೆ ನನಗೆ ತಕ್ಕ ಪ್ರಾಯಶ್ಚಿತ್ತವಾಯಿತು--ಕರೀಮಣಿ, ತಾಳಿ, ಎಲ್ಲ ಕಿತ್ತೆಸೆದುಬಿಡಿ ಅತ್ತಿಗೆ. ನನಗೆ ಇದ್ಯಾವುದೂ ಬೇಡಾ...."

ಶುಭನ ಅಳುದನಿ ತಾರಕಕ್ಕೇರಿತು. ರಘು ತಕ್ಷಣ ಬೆಚ್ಚಿದ, ಬೆವರಿದ. ಎಚ್ಚೆತ್ತ-ಶುಭ ವಿಧವೆ! ಛೆ, ಆದಾಗದು ತಾನವಳನ್ನು ಹಾಗೆ ನೋಡುವುದಾದರೂ ಹೇಗೆ ? ಅದು ಕೂಡದು, ಸಕಲ ಸೌಭಾಗ್ಯವೂ ಅವಳದಾಗಿರಬೇಕು. ಅಳುತ್ತಿದ್ದ ಮಗುವನ್ನು ರಾಜಮ್ಮನವರ ಕೈಗಿತ್ತು ರಘು ರೂಮಿನೊಳಗೆ ಧಾವಿಸಿದ.

"ನಂದಿನಿ, ನನ್ನಾಣೆ ನೀನು ಅವರ ಮಾತು ಕೇಳಿದರೆ, ಅವರು ಯಾವು

ದನ್ನೂ ತೆಗೆಯಬಾರದು ಹಣೆಯ ಕುಂಕುಮ ಅಳಿಸಬಾರದೂ. ಹಾಗೇ ಇರುವಂತೆ ಹೇಳಿ !"

ಶುಭ ಕಣ್ಣೀರಲ್ಲಿ ತೊಯ್ದ ಮುಖವನ್ನು ರಘುವಿನತ್ತ ತಿರುಗಿಸಿದಳು.

"ನಿಮಗೆ ನನ್ನ ಮೇಲೆ ಯಾವ ಅಧಿಕಾರಾನೂ ಇಲ್ಲ... ನನಗಿಷ್ಟ ಬಂದ ಹಾಗೆ ನಾನಿರ್ತೀನಿ. ಯಾರೂ ಅದಕ್ಕೆ ಎದುರಾಡುವ ಹಾಗಿಲ್ಲ !"

ದುಃಖದಲ್ಲಿ ಕ್ರೋಧ ಕುದಿದೆದ್ದಿತು

"ನನಗೆ ಪ್ರತಿಯೊಂದು ಅಧಿಕಾರವೂ ಇದೆ--ರವಿ ಸಾಯುವ ಮುನ್ನ ನನ್ನ ಕೈಗೆ ನಿಮ್ಮನ್ನ ಒಪ್ಪಿಸಿರುವುದಾಗಿ ಹೇಳಿ ನಿಮ್ಮ ಸುಖ ದುಃಖಗಳೆಲ್ಲಾ, ನನ್ನ ಹೊಣೆಯೆಂದು ನನ್ನ ಕೈಲೇ ಪ್ರಾಮಿಸ್ ತೊಗೊಂಡಿದ್ದಾನೆ....ಅದಕ್ಕೂ ಮೀರಿ ನಿಮಗೆ ನಿಮ್ಮ ದಾರಿ ಇಷ್ಟವಾದರೆ....ನಾನೇನೂ ಹೇಳಲಾರೆ."

ರಘು ಅವಳ ದುಃಖತಪ್ತವಾದ ಮುಖ ನೋಡಲಾರದೇ ಗೋಡೆಯತ್ತ ನೋಡುತ್ತಾ ಹೇಳಿದಾಗ, ಶುಭ ಮುಖ ಮರೆಸಿ ಮತ್ತೂ ಅತ್ತಳು.

"ಎಲ್ಲರೂ ಯಾಕೆ ನನ್ನ ಹೀಗೆ ಹಿಂಸೆ ಮಾಡ್ತೀರಿ ?"

ರಘು ತಾನು ಹೇಳಬೇಕೆಂದಿದ್ದು ಹೇಳಿ ಹೊರಗೆ ಬಂದಾಗ ಶಿವರಾಮಯ್ಯನವರು, ಮಗನತ್ತ ನೋಡಿ ಬಿಸಿಯುಸಿರಿಟ್ಟರು. ಬಾಣಂತಿಯನ್ನು ಕರೆದು ತಂದ ನಂದಿನಿ, ಭಾಸ್ಕರ ಎಲ್ಲ ಕಾರ್ಯಗಳು ಮುಗಿಯುವವರೆಗೆ ಇರಬೇಕಾಗಿತ್ತು. ಊಟ ತಿಂಡಿ ಸರಿಯಾಗಿ ಮಾಡದೇ ಕೊರಗುತ್ತಿದ್ದ ಶುಭನನ್ನು ಕಂಡು ಭಾಸ್ಕರ ನಂದಿನಿ ಅವಳಿಗೆ ಕಾಣದಂತೆ ಮುಮ್ಮುಲ ಮರುಗುತ್ತಿದ್ದರು. ಅವಳು ಹಾಗೆ ಕೊರಗಿ ಸೊರಗುತ್ತಿದ್ದುದು ರಘುವಿಗೆ ಆತಂಕ. ತಾನೇ ಖುದ್ದಾಗಿ ಡಾಕ್ಟರ್, ಮ್ಯಾಥ್ಯೂಸ್ ಬಳಿ ಹೋಗಿ ಕೇಳಿದ್ದ.

"ಡಾಕ್ಟರ್, ಆವೊತ್ತು ರವಿ ಹೋದ ದಿನ ಬಂದವರು ನೀವು; ಈಗ ನೀವು ಶುಭನನ್ನು ನೋಡಬೇಕು ಹೇಗಾಗಿದ್ದಾಳೇಂತಾ....ಇಷ್ಟು ಕೊರಗಿದರೆ ಹೇಗೆ ? ಊಟ ತಿಂಡಿ ಸರಿಯಾಗಿ ಮಾಡೋಲ್ಲ ಯಾವ ಆರೈಕೇನೂ ಇಲ್ದಿದ್ರೆ ಹೇಗೆ ?"

ಡಾಕ್ಟರ್ ಗಂಭೀರವಾಗಿ ನುಡಿದಿದ್ದರು.

"ಷೀ ಮಸ್ಟ್ ಬಿ ಮಿಸ್ಸಿಂಗ್ ಹಿಮ್ ಟೂ ಮಚ್....ಅವನ್ನ ಮರೆಸೋಕೆ ಟ್ರೈ ಮಾಡಿ. ಎಲ್ಲಾದ್ರೂ ಸ್ವಲ್ಪ ದಿನ ಕಳಿಸಿಕೊಡಿ, ಹೀಗೇ ಬಿಟ್ರೆ ಕಷ್ಟ."

ಶುಭನನ್ನು ಎಲ್ಲಿಗೆ ಕಳಿಸುವುದು ? ರವಿಯನ್ನು ಅವಳು ಮರೆಯಲು ಮಾಡುವುದಾದರೂ ಏನು ?

ಎಲ್ಲಾ ಕಾರ್ಯ ಮುಗಿಸಿ ಹೊರಟು ನಿಂತ ಭಾಸ್ಕರ, ನಂದಿನಿ, ಸಂಜಯ ರನ್ನು ಕಂಡು ರಘು ಬೇಸರಪಟ್ಟನು. ಎಲ್ಲರೂ ಹೊರಟುಹೋದರೆ ತಾನೊಬ್ಬನೇ, ತಂದೆ, ಶುಭ, ಮಗು, ತೋಟ ಎಲ್ಲವನ್ನೂ ನೋಡಿಕೊಳ್ಳುವ ಹೊಣೆ ಹೊತ್ತರೆ ಸಾಧ್ಯವೇ ?

ನಂದಿನಿ ಬೇಸರದಿಂದ ನಿಂತಿದ್ದ ರಘುವಿನ ಬಳಿ ಬಂದಳು.

"ರಘೂ, ನಿನ್ನೊಂದು ಮಾತು ಕೇಳ್ತೀನಿ, ನಡೆಸಿಕೊಡ್ತೀಯಾ ?"

"ಆಗದಿರುವುದನ್ನು ಕೇಳಿ ನನ್ನ ನೋಯಿಸಬೇಡಾ..."

"ರಘು, ಬೇಸರದಿಂದಲೇ ನುಡಿದನು.

"ಏನಿಲ್ಲಾ....ಶುಭನನ್ನು ನಮ್ಮ ಮನೆಗೆ ಕಳಿಸಿಕೊಡು. ಅವಳ ಮನಸ್ಸು ತಹಬಂದಿಗೆ ಬರುವವರೆಗೆ ಅಲ್ಲಿರಲಿ. ಆಮೇಲೆ ಅವಳಿಷ್ಟ !"

ಮುಳುಗಿದವನಿಗೆ ಹುಲ್ಲಿನ ಆಸರೆ--ಹೌದು-ನಂದಿನಿಯ ಜೊತೆ, ಶುಭ ಇದ್ದರೆ—ಆ ಹೊಸ ವಾತಾವರಣ-ಅವಳಿಗೆ ಬೇಸರ ನೀಗಬಹುದು--ಆದರೆ-ತಾನು ಈ ಮನೆಯಲ್ಲಿ ಒಬ್ಬನೇ !

"ಯಾಕೆ ಸುಮ್ಮನಾದೆ ರಘೂ ? ನಿನಗಿಷ್ಟವಿಲ್ಲದಿದ್ದರೆ ಬೇಡಾ ಬಿಡು."

ನಂದಿನಿ ಸೋತು ಹೇಳಿದಾಗ ರಘು ತಲೆಯಲ್ಲಾಡಿಸಿದನು.

"ಹಾಗಲ್ಲ ನಂದಿನಿ ; ಎಲ್ಲರೂ ಹೊರಟುಹೋದರೆ ನಾನೊಬ್ಬನೇ ಏನು ಮಾಡಲಿ ? ಅಪ್ಪನಿಗೆ ಕೊರಗು ಹಚ್ಚಿಹೋಗಿದೆ. ಅವರನ್ನು ಹೇಗೆ ನೋಡಿ ಕೊಳ್ಳಲಿ....ಆದರೆ ನಂದಿನಿ, ಡಾಕ್ಟರ್ ಹೇಳಿದ್ದಾರೆ—ಶುಭನಿಗೆ 'ಚೇಂಜ್' ಇರಲೀಂತ, ಧಾರಾಳವಾಗಿ ಅವರು ಬಂದರೆ ಕರೆದುಕೊಂಡು ಹೋಗು."

ರಘು ಮುಖ ತಿರುಗಿಸಿದನು.

"ಆವಳು ಬರ್ತಾಳೆ ರಘೂ, ಆವಳನ್ನು ಒಪ್ಪಿಸುವ ಭಾರ ನನ್ನದೂ !"

ನಂದಿನಿ ಆಶ್ವಾಸನೆಯಿತ್ತಿದ್ದಳು.

ಅವರೆಲ್ಲರನ್ನೂ ಮನೆಯ ಬಾಗಿಲಿಗೆ ಕಾರಿನಲ್ಲಿ ಬಿಟ್ಟು ಬರಲು ರಘುವೇ ಹೊರಟನು. ಶುಭನ ಸಾಮಾನುಗಳನ್ನು ನಂದಿನಿಯೇ ಜೋಡಿಸಿಕೊಂಡಿದ್ದಳು. ಸಂಜಯ ಮುಂಚೆಯೇ ಮನೆಗೆ ಹೊರಟುಹೋಗಿದ್ದ.

ಮನೆಯ ಮುಂದೆ ಕಾರು ನಿಲ್ಲಿಸಿದಾಗ ನಂದಿನಿ, ಭಾಸ್ಕರ ಇಬ್ಬರೂ ಇಳಿದು ಶುಭನನ್ನು ಇಳಿಸಿಕೊಂಡರು. ಸೀಟಿನ ಮೇಲೆ ಮಲಗಿ ಬೆರಳು ಚೀಪುತ್ತಿದ್ದ ಮಗುವನ್ನು ರಘು ಎತ್ತಿ ಶುಭನ ಕೈಗಿತ್ತನು.

"ಇದು ನಿಮ್ಮ ಆಸ್ತಿ....ನನ್ನ ಹೊಣೆ."

ಅದಕ್ಕುತ್ತರವಾಗಿ ಶುಭನ ಕಣ್ಣುಗಳಿಂದುದುರಿದ ಎರಡು ಹನಿ ರಘುವಿನ ಕೈ ಮೇಲೆ ಬಿತ್ತು.

ಅಂದಿನಿಂದ ರಘುವಿನ ಬದುಕಿನಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ತೋಟದ ಕೆಲಸಕ್ಕಾಗಿ ಹೊತ್ತು ಹುಟ್ಟುವ ಮುನ್ನವೇ ಎದ್ದು ಸಣ್ಣಯ್ಯನನ್ನು ಮುಂದಿಟ್ಟು ಹೊರಟರೆ ಹೊತ್ತು ಮುಳುಗುವ ಹೊತ್ತಿಗೇ ಹಿಂತಿರುಗುತ್ತಿದ್ದುದು. ಬಾಬು ಬಲವಂತವಾಗಿ ಕ್ಯಾರಿಯರ್‌ನಲ್ಲಿ ತಂದುಕೊಡುತ್ತಿದ್ದ ಊಟವನ್ನು ಮನಸ್ಸಿದ್ದರೆ ಮಾಡುತ್ತಿದ್ದ. ಇಲ್ಲದಿದ್ದರೆ ಇಲ್ಲ. ಯೋಚನೆಗೆ, ವ್ಯಥೆಗೆ ಸಮಯ ಸಿಗದಷ್ಟು ಕೆಲಸ ಹಚ್ಚಿಕೊಳ್ಳುತ್ತಿದ್ದನು. ಆದರೆ ಸಂಜೆ ಮನೆಗೆ ಬಂದ ಮೇಲೆ ಜೀರ್ಣ ಶೀರ್ಣವಾಗಿದ್ದ ತಂದೆಯವರನ್ನು ನೋಡಿ ಮರುಗುತ್ತಿದ್ದನು. ಅವರ ಒಂಟಿಬಾಳು-ಅವರ ವ್ಯಥೆ ಯಾರ ಕೈಗೂ ಎಟುಕದ ವಸ್ತುವಾಗಿತ್ತು. ಅವರು ಗಂಟೆಗಟ್ಟಲೆ ದೇವರ ಮನೆ ಸೇರುತ್ತಿದ್ದರು. ಇಲ್ಲವೇ ವೇದ, ಉಪನಿಷತ್ತುಗಳನ್ನು ಹಿಡಿದು ಕುಳಿತುಕೊಳ್ಳುತ್ತಿದ್ದರು. ಹಾಗೂ ಬೇಸರವಾದರೆ, ಸಣ್ಣಯ್ಯನನ್ನು ಕರೆದು ಕಾರಿನಲ್ಲಿ ಹೋಗಿ ಊರಿನ ದೇವಸ್ಥಾನಗಳನ್ನೆಲ್ಲ ಸುತ್ತಿ ಬರುತ್ತಿದ್ದರು. ಡ್ರಾಯಿಂಗ್ ರೂಮಿನಲ್ಲಿ ಹಾಕಿದ್ದ ರವಿಯ ದೊಡ್ಡ ಫೋಟೋಗೆ ಅವರು ಹೂವೇರಿಸದ ದಿನವಿರಲಿಲ್ಲ. ರಘು ಅದನ್ನು ನೋಡಿ ಕಣ್ಣೀರು ಮಿಡಿಯುತ್ತಿದ್ದನು.

ವಾರಕ್ಕೊಮ್ಮೆ ನಂದಿನಿಯು ಮನೆಗೆ ತಪ್ಪದೇ ಬಂದು ಶುಭ ಮಗುವನ್ನು ವಿಚಾರಿಸಿಕೊಂಡು ಹೋಗುತ್ತಿದ್ದನು. ಒಂದೆರಡು ತಿಂಗಳು ಕಳೆಯುವುದರಲ್ಲಿ ಶುಭ ಕೊಂಚ ಸುಧಾರಿಸಿಕೊಂಡಿದ್ದಳು. ಹೆಚ್ಚು ಮಾತಿಲ್ಲದಿದ್ದರೂ ಕಣ್ಣೀರಿರಲಿಲ್ಲ. ನಂದಿನಿಯ ಆರೈಕೆಯಲ್ಲಿ ಮಗು ಶಿಲ್ಪ ಗುಂಡಗಾಗುತ್ತಿತ್ತು. ಒಮ್ಮೆ ಶಿವರಾಮಯ್ಯನವರನ್ನೂ ಕರೆದುತರುತ್ತಿದ್ದನು. ಬೆಳೆಯುತ್ತಿದ್ದ ಮೊಮ್ಮಗಳನ್ನು ಎತ್ತಿಕೊಂಡು ಮುದ್ದಾಡಿ ಮನಸ್ಸಿಲ್ಲದ ಮನಸ್ಸಿನಿಂದ ಮಗುವನ್ನು ಶುಭಳ ಕೈಗಿಡುತ್ತಿದ್ದರು. ರಘು, ಶಿವರಾಮಯ್ಯನವರಿಬ್ಬರಿಗೂ ಶುಭ ಹಿಂತಿರುಗಿ

ತನ್ನ ಮನೆಗೇ ಬರಲೆಂದು ಆಸೆ. ಆದರೆ ಬಾಯಿ ಬಿಟ್ಟು ಆ ಮಾತು ಹೇಳಲಾರದಾಗಿದ್ದರು.

ಶಿಲ್ಪನಿಗೆ ನಾಲ್ಕು ತಿಂಗಳು ತುಂಬಿದ ಮೇಲೆ ಒಮ್ಮೆ ರಘು ಬಂದಾಗ ಮನೆಯಲ್ಲಿ ಶುಭ ಕಾಣದಿದ್ದು ಕಂಡು ಅಚ್ಚರಿಗೊಂಡನು.

"ಎಲ್ಲಿ ನಂದೂ, ಶುಭ ಕಾಣಿಸೋಲ್ಲ ?"

ನಂದನಿ ಮಗುವಿಗೆ ಫೆರೆಕ್ಸ್ ತಿನ್ನಿಸುತ್ತಾ ಹೇಳಿದಳು–

"ಅವಳು ಫ್ರೆಂಡ್ ಮನೆಗೆ ಹೋದಳು. ನೆನ್ನೆಯಿಂದ ಇವರನ್ನು ಬಲವಂತ ಮಾಡುತ್ತಿದ್ದಾಳೆ. ಭಾಸ್ಕರ, ನಂಗೆ ಎಲ್ಲಾದ್ರೂ ಕೆಲ್ಸ ಕೊಡಿಸೂ....ಅಂತ. ಅವಳಿಗೆ ಮನೆಯಲ್ಲಿ ಕುಳಿತು ಬೇಸರ–ಇವರೂ ಆಗಲಿ ನೋಡೋಣ ಎಂದರು"

ಎಂದಾಗ ರಘು ಹೌಹಾರಿದ.

"ಇದೇನು ನಂದೂ, ನಾವೆಲ್ಲಾ ಸತ್ತುಹೋಗಿದ್ದೇವಾ ಅವರ ಪಾಲಿಗೆ ? ರವಿಯನ್ನು ಮರೆಯಲೆಂದು ಇಲ್ಲಿ ಕಳಿಸಿದರೆ ಇಲ್ಲೇ ಇರಲು ಮನಸ್ಸು ಮಾಡಿರುವಂತಿದೆಯಲ್ಲಾ !"

"ರಘೂ, ನೋಡೂ, ನಾವೇನೂ ಮಾಡಲಾರೆವು. ನಾವಾಗೇ ನೀನು ಹೋಗೂಂತ ಹೇಳೋಕ್ಕಾಗೋಲ್ಲ–'ನಿಮಗೆ ಭಾರ ಆದೆನೇ ನಾನೂ ಎಂದರೆ ಏನುತ್ತರ ಕೊಡಲಿ ? 'ಇಲ್ಲೇ ಇರು' ಎಂದರೆ ನಿನಗೆ ಕೋಪ ಬರುತ್ತೆ. ಸ್ವಲ್ಪ ತಾಳ್ಮೆಯಿಂದಿರಬೇಕು, ನೋಡೋಣ. ದೇವರು ಅವಳಿಗೆ ಹೇಗೆ ಬುದ್ಧಿ ಕೊಡುತ್ತಾನೆಂದು !"

ನಂದಿನಿ ಮೇಲುಸಿರಿಟ್ಟಳು.

"ಮಗುವಿನ ಗತಿ, ನಂದೂ ಅವರು ಕೆಲಸಕ್ಕೆ ಹೋದರೆ ?"

ನಂದಿನಿ ನೋವಿನ ನಗೆ ನಕ್ಕಳು.

"ಅವಳಿಗೆ ಮಗುವಿನ ವ್ಯಾಮೋಹ ಇರುವುದು ಅಷ್ಟರಲ್ಲೇ ಇದೆ. ಮಗೂ ನನ್ನನ್ನೇ ಹಚ್ಚಿಕೊಂಡಿದೆ. ನಿದ್ದೆ ಬಂದಾಗ ಮಾತ್ರ ಅದಕ್ಕೆ ಅಮ್ಮ ಬೇಕೂ !"

ರಘು ನಿರುತ್ತರನಾದನು. ಮನೆಗೆ ಹಿಂತಿರುಗಿದಾಗ ಎಂದಿನಂತೆ ಮೊಮ್ಮಗಳ, ಸೊಸೆಯ ವಿಷಯ ಕೇಳುತ್ತಿದ್ದ ಶಿವರಾಮಯ್ಯನವರು ಕುಂದಿದ ರಘುವಿನ ಮುಖ ನೋಡಿ ಕೇಳಿದರು.

"ಮಗೂ, ಶುಭ ಆರೋಗ್ಯ ತಾನೇ ? ಯಾಕೆ ಯೋಚನೆ ಮಾಡ್ತಾ ಇದ್ದೀ ?" ರಘು ಅನುಮಾನಿಸುತ್ತಾ ಹೇಳಿದ.

"ಶುಭ ಕೆಲಸಕ್ಕೆ ಸೇರಬೇಕೆಂದಿದಾರಂತೆ-ಅವರಿಗೆ ಮನೆಯಲ್ಲಿ ಬೇಸರ ವಂತೆ."

ಶಿವರಾಮಯ್ಯನವರು ಹತ್ತಿರದಲ್ಲಿದ್ದ ಕುರ್ಚಿಯಲ್ಲಿ ಕುಸಿದರು.

"ರವಿ ಹೋದ ಮೇಲೆ ಶುಭ ದೂರವಾಗೋದ್ಲಪ್ಪಾ-ನಾವು ಹುಚ್ಚು ಆಸೆ ಇಟ್ಕೊಳ್ಳೋದೂ ತಪ್ಪು. ನೀನಾದ್ರೂ ಯಾವ್ದಾದ್ರೂ ಹುಡುಗಿನ ಕೈ ಒಡಿದು ಈ ಮನೆ ಉಳಿಸ್ತೀಂತ ಅಂದ್ಕೊಂಡಿದ್ದೆ. ನೀನೋ ಹರ ಇಲ್ಲ, ಶಿವ ಇಲ್ಲ."

ರಘು ಅವರಿಗುತ್ತರಿಸದೇ ರೂಮಿನೊಳಗೆ ಹೋಗಿ ಬಾಗಿಲು ಹಾಕಿ ಕೊಂಡಿದ್ದನು.

ರವಿ ಶುಭನನ್ನು ನನ್ನ ಕೈಗೆ ಒಪ್ಪಿಸಿದ--ಆದರೆ ಅವಳು ನನ್ನ ಕೈಗೆ ಸಿಗುವವಳೇ ?

ತಲೆಗೂದಲಲ್ಲಿ ಕೈಯಾಡಿಸಿಕೊಂಡನು. ರವಿಯ ಸಾವಿನ ನಂತರ ತನ್ನ ಕೆಲಸಕ್ಕೆ ರಾಜೀನಾಮೆಯಿತ್ತು ಅವನ ಮಾತನ್ನುಳಿಸಿಕೊಳ್ಳುವುದಕ್ಕಾಗಿ ಇಲ್ಲಿ ಬೇರೂರಾಗಿತ್ತು. ಆದರೆ ಈಗ....ಬೆಟ್ಟಕ್ಕೆ ಕವಿದ ಮಂಜು ಬಿಸಿಲೇರು ತ್ತಲೇ ಕರಗಿಹೋಗುವಂತೆ ಸ್ವಾಭಿಮಾನದ ರುಚಿಯುಂಡ ಶುಭ ಕೊಂಚ ಆರೋಗ್ಯ ಸುಧಾರಿಸುತ್ತಲೂ ತನ್ನಿಂದ ದೂರ ಸರಿಯುತ್ತಿದ್ದಾಳೆ ! ರಘುವಿಗೆ ಊಟ ತಿಂಡಿ, ನಿದ್ರೆ ಬೇಡವಾಯಿತು. ತಾನೊಂದು ಮಾತು ಹೇಳಿದರೆ ಅವಳು ಕೇಳಬಹುದು. ತನ್ನ ಮಾತಿನಂತೆ ಕರಿಮಣಿ, ತಾಳಿ ತೆಗೆದಿರಲಿಲ್ಲ. ಕಂಡೂ ಕಾಣದಂತೆ ಸಣ್ಣದಾಗಿ ಕುಂಕುಮವಿಡುತ್ತಿದ್ದಳು. ಈಗ ತಾನು ಅವಳು ಕೆಲಸಕ್ಕೆ ಸೇರಕೂಡದೆಂದರೆ ಅವಳು ಕೇಳಿದರೂ ಕೇಳಬಹುದು. ಆದರೆ ಇಲ್ಲಿ ಅವಳಿಗೆ ಅವಳ ಬೇಸರ ನೀಗಿಸಲು ಮಾಡುವುದಾದರೂ ಏನು ? ರಘು ಯೋಚಿಸಿ ಯೋಚಿಸಿ ಹಣ್ಣಾದನು. ಬೇಕೆಂತಲೇ ಹದಿನೈದು ದಿನ ಗಳಾದರೂ ಶುಭನನ್ನು ನೋಡಲು ಹೋಗಲಿಲ್ಲ. ಅವಳು ತಾನು ಬರದಿರು ವುದು ಕಂಡು ತಾನು ಬೇಸರಪಟ್ಟುಕೊಂಡು ಬಂದಿಲ್ಲವೆಂದು, ತನಗೆ ಅವಳು

ಕೆಲಸಕ್ಕೆ ಸೇರುವುದು ಇಷ್ಟವಿಲ್ಲವೆಂದು ತಿಳಿದುಕೊಳ್ಳಬಹುದು--ಆದರೆ ಅದು ಅವನ ಕಲ್ಪನೆಯಾಗಿತ್ತು.

ಹದಿನೈದು ದಿನಗಳು ಕಳೆದ ಮೇಲೆ ಸಂಜಯ ಸ್ನೇಹಿತನೊಬ್ಬನ ಸ್ಕೂಟರ್ ಮೇಲೆ ಮನೆಗೆ ಬಂದಿಳಿದಿದ್ದ.

"ಶುಭ ಆಂಟೀ ಕಳಿಸಿದ್ರು, ನೀವ್ಯಾಕೆ ಬರ್ಲೇ ಇಲ್ಲಾಂತಾ....ನಿಮ್ಗೆ, ತಾತಂಗೆ ಮೈ ಸರ್ಯಾಗಿವ್ಯೋ ಇಲ್ವೋ ನೋಡಿಕೊಂಡು ಬಾ....ಅಂತ."

ಸಂಜಯನ ಮಾತು ಕೇಳಿ ರಘು ಅವಾಕ್ಕಾದ. ಅವಳ ಬಗ್ಗೆ ತಾನು ಯೋಚಿಸುತ್ತಿದ್ದರೆ ಅವಳು ಹೀಗೆ ಹೇಳಬಹುದೇ ? ತನ್ನ ಮೇಲಷ್ಟು ಪ್ರೀತಿ ಯಿದ್ದರೆ ಅಕ್ಕರೆಯಿದ್ದರೆ ತಾನೇ ಬಂದು ಹೋಗಬಾರದಿತ್ತೇ ?

"ಶುಭಾನೇ ಬರ್ಬೋದಿತ್ತಲ್ಲಾ ! ಅವರ್ನ ಕರ್ಕೊಂಡು ಬರ್ಬೇಕಾಗಿತ್ತು ನೀನು."

ರಘು ಹೇಳಿದಾಗ ಸಂಜಯ ಹಣೆ ಚಚ್ಚಿಕೊಂಡನು.

"ಎಂತ ಗುಗ್ಗು ಕಣಯ್ಯಾ ನೀನು--ಅವಳು ಬರೋಹಾಗಿದ್ರೆ ನಾನು ಯಾಕೆ ಬರ್ತಾ ಇದ್ದೆ ? ಅವಳು ಕಾಲೇಜಿಗೆ ಹೋಗಿದ್ಲು !"

"ಅಂದ್ರೆ !"

ರಘು ಅಚ್ಚರಿಗೊಂಡ.

"ಮೊನ್ನೆಯಿಂದ ಕೆಲ್ಸಕ್ಕೆ ಹೋಗ್ತಾ ಇಲ್ವಾ ? ನಮ್ಮಪ್ಪನ ಫ್ರೆಂಡ್ ಕಾಲೇಜಿನಲ್ಲಿ ಟೆಂಪರರಿಯಾಗಿ ಕೆಲ್ಸ ಕೊಟ್ಟಿದ್ದಾರೆ--ಬಾಟನಿ ಲೆಕ್ಚರರ್-ಆಗಿ.... ಅವಳ ಕೆಲ್ಸ ಪರ್ಮನೆಂಟ್ ಮಾಡ್ಸೋಕೆ ಟ್ರೈ ಮಾಡ್ತಿನೀಂತ ಹೇಳಿದ್ದಾರೆ."

ರಘು ನಿಂತಲ್ಲೇ ಕುಸಿದನು. ತಾನೆಣಿಸಿದುದೊಂದು, ಆದುದೊಂದು.

ಸಂಜಯ ತೋಟದಲ್ಲಿ ಅಲ್ಲಿ ಇಲ್ಲಿ ಸುತ್ತಿದ, ಎಳನೀರು ಕುಡಿದ--ಹಸಿಯ ಹುರುಳೀ ಕಾಯಿಯನ್ನು ಗಿಡದಿಂದಲೇ ಕಿತ್ತು ತಿಂದನು. ರಘುವಿ ಗಾದ ಬೇಸರ ತಿಳಿಯಲಸಮರ್ಥನಾದ ಅವನು ತನ್ನ ಪಾಡಿಗೆ ತಾನು ನಿರರ್ಗಳ ವಾಗಿ ಹರಟುತ್ತಿದ್ದ.

"ಶಿಲ್ಪ ಹೇಗಿದ್ದಾಳೆ ?"

ರಘು ಕೇಳಿದಾಗ ಮೊಟಕಾಗಿ ಹೇಳಿದನು.

"ಶಿಲ್ಪಂಗೇನಾಗಿದೆ, ಚೆನ್ನಾಗಿದ್ದಾಳೆ. ಮನೆ ತುಂಬಾ ಬೋರಲುಬಿದ್ದು

ತಿವಳಾಡುತ್ತಾ, ಎಲ್ಲೆಂದರಲ್ಲಿ ಕೆರೆ ಹರಿಸ್ತಾಳೆ. ಅಮ್ಮಂಗಂತೂ ಒರೆಸಿ ಅವಳ್ನ ಕ್ಲೀನ್ ಮಾಡೀ ಮಾಡೀ ಸಾಕಾಗುತ್ತೆ. ಮೊನ್ನೆ ನನ್ನ ಕೆಮಿಸ್ಟ್ರಿ ನೋಟ್ಸ್ ಮೇಲೆ ಪ್ರವಾಹ ಹರಿಸಿ ನೋಟ್ಸೆಲ್ಲಾ ಸ್ಪಾಯಿಲ್ ಮಾಡಿಬಿಟ್ಟು."

ರಘು ಸಂಜಯನ ಮುಖ ನೋಡಿದ. ಶುಭ ಇವನ ಮಾತು ಕೇಳಿದರೆ.... ಇವನೇನೋ ತಮಾಷೆಗೆ ಹೇಳಿರಬಹುದು. ಅವಳು ಅಪಾರ್ಥ ಕಲ್ಪಿಸಿ ಕೊಂಡರೆ? ಹೀಗೆ ಇವನು ಮಾತನಾಡಿದರೆ ಶುಭ ಭಾಸ್ಕರನ ಮನೆಯಲ್ಲೂ ಹೆಚ್ಚು ದಿನ ಇರಲಾರಳು.

ರಘು ಮೂರನೆಯ ದಿನ ಸಂಜೆ ನಂದಿನಿಯ ಮನೆಗೆ ಬಂದಾಗ ನಂದಿನಿ ಶಿಲ್ಪಳನ್ನು ಸೊಂಟದಲ್ಲಿ ಎತ್ತಿಕೊಂಡು ರೋಡಿನಲ್ಲಿ ಹೋಗುತ್ತಿದ್ದ ಬಸ್ಸು, ಕಾರು, ಆಟೋ ತೋರಿಸುತ್ತಿದ್ದಳು. ರಘು ಕಾರಿನಿಂದ ಇಳಿದು ಬಂದಾಗ ಅವನತ್ತ ಮಗು ಬಾಗಿತು.

"ನೋಡೋ, ಏನೇನು ಕಲ್ತಿದ್ದಾಳೇಂತ....ಯಾರಾದ್ರೂ ಚಪ್ಪಾಳೆ ಹಾಕ್ಕೊಂಡ್ರೇ ಸಾಕು, ಅವರ ಜೊತೆ ಹೊರಟುಹೋಗ್ತಾಳೆ. ತಿರುಗಾಡ ಬೇಕೂಂದ್ರೆ ಪ್ರಾಣ ಇವಳಿಗೆ--ನೀನು ಕಾರಿನಿಂದ ಇಳಿದು ಬಂದಿ, ಕಾರಿನಲ್ಲಿ ಕೂಸಿದೆ--ಬಗ್ಗೋದು ನೋಡೂ."

ನಂದಿನಿ ಮಗುವಿನ ಕೆನ್ನೆಗೆ ಮುತ್ತಿಟ್ಟಳು. ತನ್ನತ್ತ ಬಗ್ಗಿದ್ದ ಮಗು ವನ್ನು ಕೈಗೆತ್ತಿಕೊಂಡನು. ಮಗು ಹಾಕಿಕೊಂಡಿದ್ದ ಫ್ರಾಕು ಅಲ್ಲಲ್ಲಿ ಕೊಳೆ ಯಾಗಿತ್ತು. ತುಟಿಯ ಅಂಚಿನಲ್ಲಿ ಕರಿಯಾಗಿ ಏನೋ ಮೆತ್ತಿಕೊಂಡಿತ್ತು. ಮಗುವಿನ ಕೈಯೆಲ್ಲಾ ಅಂಟು, ರಘು ಅದನ್ನೆಲ್ಲಾ ಗಮನಿಸಿದುದನ್ನು ಕಂಡ ನಂದಿನಿ ಮಗುವಿನತ್ತ ಕೈ ಚಾಚಿದಳು.

"ಅವಳ ಮುಖ, ಕೈಕಾಲು ತೊಳೆದು ಬಟ್ಟೆ ಬದಲಾಯಿಸಬೇಕು. ನಂಗೆ ಇಷ್ಟೊತ್ತಿನವರೆಗೂ ಬಿಡುವೇ ಆಗಲಿಲ್ಲ ನೋಡು. ಅವಳಿಗೆ ಸ್ನಾನಮಾಡಿಸಿ ಬಟ್ಟೆ ಹಾಕಿ ಅವರಮ್ಮ ಹೋದಳು. ನಾನು ಅಡಿಗೆ, ತಿಂಡಿ. ಇದಕ್ಕೆ ಹೊತ್ತು ಹೊತ್ತಿಗೆ ಹಾಲು, ನಿದ್ದೆ ಈ ಕೆಲಸಗಳಲ್ಲೇ ಕಾಲ ಕಳೆದೆ. ಅವರಮ್ಮ ಬಂದರೆ ಇದೇನು ಅತ್ತಿಗೆ ಮಗೂನ ಹೀಗೆ ನೋಡ್ಕೋತಾಳೆ ಅನ್ನೋ ಬೇಕೂ...."

ನಂದಿನಿ ಕರೆದಾಗ ಶಿಲ್ಪ ಅವಳತ್ತ ಹೋಗದೇ ರಘುವಿನ ಶರಟಿನ ಕೈತೋಳು ಹಿಡಿದುಕೊಂಡು ಮುಖ ತಿರುಗಿಸಿಕೊಂಡಿತು.

"ಅದಕ್ಕೆ ನಿನ್ನ ಹತ್ರ ಬರೋಕೆ ಇಷ್ಟವಿಲ್ಲ. ಬಾಲೋ ಚಿನ್ನ....ನಾನೇ ಡ್ರೆಸ್ ಮಾಡ್ತೀನಿ ...ಎಲ್ಲಾ ತಂದ್ಕೊಡು, ಬಾ ನಂದಿನಿ-ನೀನೊಬ್ಬಳೇ ಎಷ್ಟು ಮಾಡ್ತೀ ?"

ರಘು ಮಗುವನ್ನೆತ್ತಿಕೊಂಡು ಒಳಗೆ ನಡೆದನು. ನಂದಿನಿ ಮಗುವಿನ ಮುಖ, ಕೈ ಕಾಲು ತೊಳೆಯಲು ಬಿಸಿ ನೀರನ್ನೂ ಟವಲನ್ನೂ ತಂದಳು.

"ನೀನು ಎತ್ಕೊಂಡಿರು, ನಾನು ಬೇಗ ಒರೆಸಿಬಿಡ್ತೀನಿ."

ಕೈ ಕಾಲು ಒರೆಸಿ, ಪೌಡರು ಹಾಕಿ ಇಸ್ತ್ರಿಮಾಡಿದ್ದ ಹಳದಿಯ ಫ್ರಾಕೊಂದನ್ನು ಹಾಕಿದಳು. ರಘುವಿನ ತೊಡೆಯ ಮೇಲೇ ಕುಳಿತು ಎಲ್ಲಾ ಅಲಂಕಾರಗಳನ್ನೂ ಮಾಡಿಸಿಕೊಂಡಿತು.

"ನಂದೂ, ಶುಭ ಎಲ್ಲಿ ?"

ರಘು ತಡೆ ಹಿಡಿದಿದ್ದ ಪ್ರಶ್ನೆ ಕೇಳಿದನು.

"ಕಾಲೇಜಿಗೆ ಹೋಗಿದ್ದಾಳೆ–ಇನ್ನೇನು ಬರೋ ಹೊತ್ತು."

ನಂದಿನಿ ಮಗುವಿನ ಕಾಲಿಗೆ ಕಾಲುಚೀಲ ಹಾಕುತ್ತಾ ಹೇಳಿದಳು. "ಅಂತೂ ಶುಭ ಕೆಲಸಕ್ಕೆ ಸೇರಿಬಿಟ್ಟಳು !"

ರಘು ಅಸಮಾಧಾನದಿಂದ ಹೇಳಿದಾಗ ನಂದಿನಿ ಮಗುವಿನ ಕಳಚಿದ ಬಟ್ಟೆಗಳನ್ನು ಕೈಗೆತ್ತಿಕೊಂಡಳು.

"ನೀನು ನೋಡು-ಬರ್ತಾಳಲ್ಲ ! ಆ ನಗು, ಉತ್ಸಾಹ ಮೊದಲಿನ ಶುಭ ನವೇ ಮತ್ತೆ ಬರಲಿ ಎನ್ನುತ್ತೀಯಾ. ಈಗ ಎರಡು ಮೂರು ದಿನಗಳಿಂದ ಎಷ್ಟು ಗೆಲುವಾಗಿದ್ದಾಳೆ ಗೊತ್ತಾ ?"

ರಘು ಶಿಲ್ಪನನ್ನು ಎತ್ತಿಕೊಂಡು ಗೇಟಿನ ಬಳಿ ಕರೆದುಕೊಂಡು ಬಂದನು. ಮುದ್ದಾಗಿ ಗುಂಡಗಿದ್ದ ಈ ಮಗುವನ್ನು ರವಿ ಎಷ್ಟು ಮೆರೆಸುತ್ತಿದ್ದನೋ. ಬೀದಿಯಲ್ಲಿನ ಕಾರು, ಗಾಡಿ, ನೋಡಿ ಸಂತೋಷಪಡಬೇಕೇ ?

ದೂರದಲ್ಲಿ ಎಳೆ ಹಳದಿಯ ಸೀರೆಯುಟ್ಟು ಬರುತ್ತಿದ್ದ ಶುಭಳನ್ನು ನೋಡಿದಾಗ ರಘು ತಾನೇ ತನ್ನ ಕಣ್ಣುಗಳನ್ನು ನಂಬದಾದ. ಕೃಶವಾಗಿ ದ್ದರಿಂದ ಕೊಂಚ ಎತ್ತರವಾಗಿ ಕಾಣುತ್ತಿದ್ದಳು. ಭುಜವನ್ನು ಹಾದು

ಎದೆಯ ಮೇಲೆ ಬಿದ್ದಿದ್ದ ನೀಳಜಡೆ ಅವಳ ನಡಿಗೆಗೆ ತೂಗಾಡುತ್ತಿತ್ತು. ಮುಖದಲ್ಲಿ ಉಲ್ಲಾಸದ ನಸುಗೆಂಪು ಕಾಣುತ್ತಿತ್ತು. ಅವಳು ಹತ್ತಿರ ಅವನೆದುರು ಬಂದಾಗ ಕಿರುನಗೆಯೊಂದು ಮಿಂಚಿತ್ತು. ರಘುವಿಗೆ ಆ ನಗು ಹಳೆಯ ಸಿಹಿ ನೆನಪೊಂದರ ವೈಭವ !

"ಇಷ್ಟು ದಿನ ಬರ್ಲೇ ಇಲ್ಲ ! ತುಂಬಾ ಬಿಜಿಯೇನೋ !"

ಶುಭ ಬಾಯಿ ತುಂಬಾ ಕೇಳಿದಾಗ ರಘುವಿಗೆ ತಕ್ಷಣ ಉತ್ತರಿಸಲಾಗಲಿಲ್ಲ. ಬೆಳಗಿನಿಂದ ಕಾಣದ ತಾಯಿಯನ್ನು ಕಂಡು ಶಿಲ್ಪ ಶುಭನತ್ತ ಕೈ ಚಾಚಿತು. ಕೈಯಲ್ಲಿ ಪರ್ಸ್, ಪುಸ್ತಕಗಳಿದ್ದರಿಂದ ಶುಭನಿಗೆ ಅದನ್ನು ಸರಿಯಾಗಿ ಎತ್ತಿಕೊಳ್ಳಲಾಗಲಿಲ್ಲ. ಒಂದೇ ಕೈಯಲ್ಲಿ ಮಗುವನ್ನು ಎತ್ತಿಕೊಂಡಾಗ ಕೈಲಿದ್ದ ಪುಸ್ತಕ, ಪರ್ಸ್ ಕೆಳಗೆ ಬಿದ್ದವು. ರಘು ಬಗ್ಗಿ ಅವುಗಳನ್ನು ಎತ್ತಿಕೊಂಡನು.

"ನನ್ನ ಚಿನ್ನ, ನಂಗೋಸ್ಕರ ಕಾದಿತ್ತಾ ?"

ಶುಭ ಶಿಲ್ಪನನ್ನು ಮುತ್ತಿಟ್ಟಾಗ . ರಘುವಿನ ಮೈಯಲ್ಲಿ ಏನೋ ಹೊಸ ಭಾವವುಕ್ಕಿತು. ಯಾವುದೋ ಕಡಿದುಹೋಗಿದ್ದ ಬಾಂಧವ್ಯ ಮತ್ತೆ ಚಿಗುರಿದಂತೆ ಆಯಿತು.

"ಒಳಗೆ ಬನ್ನಿ."

ಶುಭ ಮಗುವನ್ನೆತ್ತಿಕೊಂಡು ಒಳಗೆ ನಡೆದಳು. ಅವಳ ನಡಿಗೆಯಲ್ಲಿ ಏನೋ ಹುರುಪು ಕಂಡಿತು. ರಘು ಮಂತ್ರಮುಗ್ಧನಾಗಿ ಅವಳನ್ನು ಹಿಂಬಾಲಿಸಿದನು. ಕೈಲಿದ್ದ ಪರ್ಸ್, ಪುಸ್ತಕಗಳನ್ನು ಟೇಬಲ್ಲಿನ ಮೇಲಿಟ್ಟು ಕುಳಿತ. ಶುಭ ಅವನೆದುರು ಶಿಲ್ಪನನ್ನು ಎದೆಗೊತ್ತಿಕೊಂಡು ಕುಳಿತಳು. ಒಳಗೆ ನಂದಿನಿ ಕೂಗಿದಳು.

"ಶುಭಾ, ಏನು ಕುಡೀತಿಯಮ್ಮಾ, ಹಾಲೋ ಬೌರ್ನವೀಟಾನೋ ?"

"ಅತ್ತಿಗೆ, ಈಗ್ಯಾಕೆ ಬೇರೆ ಮಾಡ್ತೀ. ಕಾಫಿ ಇರುತ್ತಲ್ಲಾ ಯಾವಾಗ್ಲೂ ಅವೇ ಕೊಟ್ಬಿಡೂ !"

ಶುಭ ಕುಳಿತಲ್ಲಿಂದಲೇ ಕೂಗಿದಳು.

"ನೋಡಿ, ನಾನು ಕಾಫಿ ಕುಡಿಯೋದು ಕಲಿತ್ಬಿಟ್ಟೆ, ಇಲ್ದಿದ್ರೆ ಮಧ್ಯಾಹ್ನ

ನಂಗೆ ತುಂಬಾ ತೊಂದರೆ ಆಗುತ್ತೆ. ಟೂ ಅವರ್ಸ್ ಕೂಗಿದರೆ ಗಂಟಲು ಒಣಗಿಹೋಗಿರುತ್ತೆ !"

ಮತ್ತೆ ರಘುವನ್ನು ನೋಡಿ ನಕ್ಕಳು.

'ಶುಭಾ....ಶುಭಾ, ರವಿಯನ್ನು ನೀನು ಮರೆಯಬಲ್ಲೆಯಾ ? ಇಷ್ಟು ಬೇಗ ಮರೆಯಬಲ್ಲೆಯಾ ?' ರಘು ಮನಸ್ಸಿನಲ್ಲೇ ತಳಮಳಿಸಿದ. ಮೇಲೆ ನಕ್ಕು ಹೇಳಿದ.

"ಗುಡ್, ಲೈಫ್‌ನಲ್ಲಿ ಬೇಕಾದಷ್ಟು ಅಡ್ಜೆಸ್ಟ್ ಮಾಡ್ಕೋಬೇಕಾಗುತ್ತೆ. ಅಂತೂ, ಕೆಲಸಕ್ಕೆ ಸೇರಿಬಿಟ್ರಿ....ಕಂಗ್ರಾಟ್ಸ್ !"

ಅವನ ಮುಖದಲ್ಲಿ ಬಿಂಬಿಸಿದ ಅಸಮಾಧಾನದ ಛಾಯೆಯನ್ನು ಗಮನಿಸಿದ ಶುಭ ಉತ್ತರಿಸಿದಳು.

"ಯಾಕೆ, ನಾನು ಸಂತೋಷವಾಗಿರುವುದು ನಿಮಗಿಷ್ಟವಿಲ್ಲವೇ ?"

ರಘು ಎದ್ದು ನಿಂತನು.

"ನಾನು ಹಾಗೆ ಹೇಳಲಿಲ್ಲ."

ಕಾಫಿ ಹಿಡಿದು ಬಂದ ನಂದಿನಿ ನಿಂತ ರಘುವನ್ನು ಕಂಡಳು.

"ಕೂತ್ಕೊ, ಆಗ್ಲೇ ಹೊರಟುಬಿಟ್ಟೆಯಾ ?"

"ಸ್ವಲ್ಪ ಕೆಲ್ಸ ಇದೆ ನಂದಿನಿ. ಮಾರ್ಕೆಟ್‌ಗೆ ಹೋಗ್ಬೇಕೂ...."

ಶುಭನತ್ತ ನೋಡಿದ.

"ಶಿಲ್ಪನನ್ನ ಕಾರಿನಲ್ಲಿ ಒಂದು ರೌಂಡ್ ಕರೆದುಕೊಂಡು ಹೋಗಬಹುದೇ ?"

ಶುಭ ಕುಡಿದ ಕಾಫಿಯ ಲೋಟವನ್ನು ಕೆಳಗಿಡುತ್ತಾ ಹೇಳಿದಳು—

"ಧಾರಾಳವಾಗಿ. ಆದರೆ ಅವಳನ್ನೆತ್ತಿಕೊಂಡು ನೀವು ಡ್ರೈವ್ ಮಾಡೋಕೆ ಆಗೋಲ್ಲ, ಅಷ್ಟೆ."

"ಅವಳನ್ನ ಎತ್ತಿಕೊಂಡು ಕೂತ್ಕೊಳ್ಳೋಕೆ ಬೇರೆ ಯಾರೂ ಇಲ್ವಲ್ಲ ! ಒಂದೇ ಕೈಯಲ್ಲಿ ಡ್ರೈವ್ ಮಾಡೋದೂ....!"

"ಸಧ್ಯ ಮಗೂನೆತ್ಕೊಂಡು ಆ ಕೆಲಸ ಮಾಡೀಯಾ ನೀನು....!"

ನಂದಿನಿ ರಘುವನ್ನು ಗದರಿಕೊಂಡಳು.

"ನೀವ್ಯಾರಾದ್ರೂ ಬರ್‍ತಾರ್‍ದಾ ಮಗೂನೆತ್ಕೊಂಡು ಕೂತ್ಕೊಳ್ಳೋಕೆ ?"

ರಘು ಕೇಳಿದಾಗ ನಂದಿನಿ ನಕ್ಕಳು.

"ನಂಗೆ ಒಂದು ಹೊರೆ ಕೆಲ್ಸ ಬಿದ್ದಿದೆ, ಬರೋ ಹಾಗಿದ್ರೆ ಶುಭನನ್ನು ಕೇಳು....ಹೋಗ್ತೀಯಾ ? ಶುಭಾ ?"

ಶುಭ ಕೊಂಚ ಅನುಮಾನಿಸಿದಳು.

"ಪಾಪ, ಬೀದಿ ಕಾರು, ಬಸ್ಸು ನೋಡಿ ಕುಣ್ಯತ್ತೆ. ಒಂದು ರೌಂಡ್ ಹೋಗಿ ಬರಬಾರದೇ ?"

ನಂದಿನಿ ನಾದಿನಿಯನ್ನು ಒತ್ತಾಯ ಮಾಡಿದಾಗ ಶುಭ ಮಗುವನ್ನೆತ್ತಿ ಕೊಂಡು ಎದ್ದು ನಿಂತಳು. ಕಾರಿನ ಬಾಗಿಲು ತೆಗೆದು ಶುಭ, ಶಿಲ್ಪ ಒಳಗೆ ಕುಳಿತಿರುವುದನ್ನು ಕಂಡು ರಘುವಿಗೆ ಅಮಿತಾನಂದ. ಕಾರನ್ನು ಸ್ಟಾರ್ಟ್ ಮಾಡಿ ಹೀಗೇ ತಮ್ಮ ಮನೆಗೆ ಕರೆದೊಯ್ದು ಬಿಟ್ಟರೆ ?

"ಬೇಗ ಬಂದ್ಬಿಡೋಣ ರಘು. ಮಗೂಗೆ ಆರೂವರೆಗೆ ಫೆರೆಕ್ಸ್ ಕೊಡ ಬೇಕೂ !"

ಶುಭ ಎಚ್ಚರಿಸಿದಾಗ ತನ್ನ ಭಾವನೆಯ ಓಟಕ್ಕೆ ತಾನೇ ನಕ್ಕನು.

"ಆಗ್ಲಿ. ಸ್ಮಾಲ್ ರೌಂಡ್ ಅಷ್ಟೆ ?"

ರಘು ಕಾರು ಸ್ಟಾರ್ಟ್ ಮಾಡಿದನು

"ಶುಭಾ–ನಾನೊಂದು ಮಾತು ಹೇಳಿದರೆ ನೀವು ಬೇಸರಪಡುವುದಿಲ್ಲ ತಾನೇ ?"

ರಘು ಕೇಳಿದನು.

"ಇಲ್ಲ. ಮಾತು ಕೇಳಿ ಬೇಸರಪಡುವ ದಿನಗಳು ಮುಗಿದುಹೋದವು ನನಗೆ."

ಶುಭ ಮಗುವಿನ ಮುಂಗುರುಳು ತಿದ್ದಿದಳು. ಕಾರು ಹೊರಟಾಗ ಮಗು ಕೇಕೆ ಹಾಕಿ ನಕ್ಕಿತು.

"ಶುಭಾ, ನಿಮ್ಮ ಮನೆಗೆ ನೀವು ಬರುವುದಿಲ್ಲವೇ ? ನಿಮ್ಮವರನ್ನೆಲ್ಲಾ ದೂರ ಸರಿಸುತ್ತಿದ್ದೀರಾ ?"

ರಘು ಕೇಳಿದ.

"ನನ್ನ ಮನೆ ಯಾವುದು ? ನನ್ನವರು ಯಾರು ?"

ಶುಭ ಸರಿಯುತ್ತಿದ್ದ ರಸ್ತೆಯತ್ತ ನೋಡಿದಳು.

"ಶುಭಾ !" ರಘುವಿನ ಗಂಟಲು ಗಡುಸಾಗಿತ್ತು. "ರವಿ ನಿಮ್ಮನ್ನು ಚೆನ್ನಾಗಿ ಅರಿತಿದ್ದನು. ಆದಕ್ಕೇ ಹೇಳಿದ್ದ ಅವನು ನೋಡೂ ರಘೂ, ಶುಭನ ಕೈಗೆ ಎಲ್ಲಾ ಒಪ್ಪಿಸಿಬಿಟ್ಟರೆ ನನ್ನ ಮನೆ ಉಳಿಸುವವರ್‍ಯಾರು ? ಅವಳು ಖಂಡಿತ ಇಲ್ಲಿರಲು ಒಪ್ಪುವುದಿಲ್ಲಾಂತ, ಈಗ ನೀವೇ ಹೇಳ್ತಾ ಇದ್ದೀರಿ. ನನ್ನ ಮನೆ ಯಾವುದು ? ನನ್ನವರು ಯಾರೂಂತ....ಯಾಕೆ ನಾವೆಲ್ಲಾ ಸತ್ತುಹೋಗಿದ್ದೇವಾ ? ಎಲ್ಲಾ ನಿಮ್ಮದೇ ಶುಭಾ–ನಿಮ್ಮ ಮನೆಗೆ–ನಿಮ್ಮ ವರಲ್ಲಿಗೆ ನೀವು ಬರಲೇಬೇಕು--!"

"ನಾನು ಯಾವುದನ್ನೂ ನನ್ನದೆಂದುಕೊಳ್ಳುವುದಿಲ್ಲ. ಅದು ಬಹಳ ಬೇಗ ನನ್ನಿಂದ ದೂರ ಹೋಗಿಬಿಡುತ್ತೆ !"

ಶುಭಳಿಗೆ ರಸ್ತೆ ಮಂಜಾಗಿ ಕಂಡಿತು. ಅವಳ ಕಣ್ಣು ತೇವವಾದು ದನ್ನು ಕಂಡು ರಘು ತನ್ನನ್ನು ತಾನೇ ನಿಂದಿಸಿಕೊಂಡನು.

"ಸಾರಿ....ನಿಮಗೆ ಬೇಸರ ಮಾಡಲು ಹೇಳಲಿಲ್ಲ. ನೀವು ಸಂತೋಷ ವಾಗಿರಬೇಕು--ಸುಖವಾಗಿರಬೇಕು--ಅದೇ ನನ್ನ ಆಸೆ.-"

ಶುಭ ಮುಂಗೈಯಿಂದ ಕಣ್ಣೊರಸಿಕೊಂಡಳು.

"ನಿಮಗೆ ಹೇಗೆ ಬೇಕಾದರೂ ಎಲ್ಲಿ ಬೇಕಾದರೂ ಇರಿ. ಆದರೆ ನಮ್ಮ ಸಂಬಂಧ ಮಾತ್ರ ಕಡಿದುಹಾಕಲು ಪ್ರಯತ್ನಿಸಬೇಡಿ !"

ರಘು ಹೇಳಿ ತುಟಿ ಕಚ್ಚಿಕೊಂಡನು.

"ನಾನು ಕಡಿದುಕೊಂಡಿಲ್ಲವಲ್ಲ ! ನಮ್ಮ ಬಾಂಧವ್ಯದ ಕುಡಿ ಇಲ್ಲೇ ಕೂತಿದೆಯಲ್ಲ !"

ಮಗುವಿನ ತಲೆ ತಡವಿದಳು.

"ಹಾಗೆ ಹೇಳಿದ ಮೇಲೆ ಮಗುವನ್ನು ನಮ್ಮ ಮನೆಗೆ ಕರೆದುಕೊಂಡು ಬರಬಾರದೇ ? ಭಾನುವಾರ ನಿಮಗೆ ರಜವಿರುತ್ತದೆಯಲ್ಲಾ. ಕಾರು ಕಳಿಸು ತ್ತೇನೆ. ನೀವೂ, ಶಿಲ್ಪ ಬರಬೇಕು. ಆಗ ನನಗೆ ಸಮಾಧಾನ !" ರಘು ಶುಭನ ಕೈಮೇಲೆ ಕೈಹಾಕಿದ.

"ನಾನು ಏನನ್ನು ಮರೆಯೋಕೆ ಪ್ರಯತ್ನಪಡ್ತಿದ್ದೀನೋ ಅದನ್ನ ನೀವು ಮತ್ತೆ ಜ್ಞಾಪಿಸುತ್ತಿದ್ದೀರಿ !"

ಶುಭ ಉತ್ಕಂಠಿತಳಾಗಿ ನುಡಿದಳು. ರಘು ಕೊಂಚ ಹೊತ್ತು ಸುಮ್ಮ ನಿದ್ದು ಹೇಳಿದ.

"ಯಾವುದನ್ನು ಮರೆಯಬೇಕೆಂದಿರುವಿರೋ ಅದರಿಂದ ದೂರ ಸರಿದಷ್ಟೂ ನಿಮಗೆ ಕಷ್ಟ--ಎದುರಿಸಿ ನಿಂತರೆ ವಾಸ್ತವಿಕತೆಯ ಅರಿವಾಗಿ ಎಲ್ಲ ಮಂಜಿನಂತೆ ಕರಗಿಹೋಗುತ್ತೆ....ಅದು ನನ್ನ ಸ್ವಂತ ಅನುಭವ--ಹಿಂದಿನದನ್ನು ಮರೆಯ ಬೇಕೆಂದು ಎರಡು ವರ್ಷ ನಿಮ್ಮೆಲ್ಲರ ಮುಖ ಮರೆಸಿಕೊಂಡು ರಾಂಚಿಯಲ್ಲೇ ಉಳಿದೆ. ಆದರೆ ಇಲ್ಲಿಗೆ ಬಂದಾಗ ನನ್ನ ಮನಸ್ಸು ಕದಡಿಹೋಯಿತು— ಇದೆಲ್ಲಾ ಬಿಟ್ಟು ನಾನು ಹುದುಗಿದ್ದೆನಲ್ಲಾ ಅಂತ !"

ಶುಭ ಉತ್ತರಿಸಲಿಲ್ಲ.

"ನೋಡೀ, ಈ ಭಾನುವಾರ ಬಂದು ನೋಡಿ. ನಿಮಗೆ ಹಿಂಸೆ ಯಾದರೆ ಮತ್ತೆ ಬರಬೇಡಿ !"

ಶುಭನ ಮನದಲ್ಲಿ ಆಗಲೇ ನೆನಪುಗಳು ರಾಶಿರಾಶಿಯಾಗಿ ಸ್ಫುಟ ಗೊಳ್ಳುತ್ತಿದ್ದವು.

"ಮನೆಗೆ ಹಿಂತಿರುಗೋಣವೇ....?...ಶಿಲ್ಪ ಕಾರಿನ ಸೀಟಿನ ಮೇಲೆ ಗಂಗಾ ಪ್ರವಾಹ ಹರಿಸಿದ್ದಾಳೆ."

ಶುಭ ಹೇಳಿದಾಗ ರಘು ಕಾರನ್ನು ಮನೆಯತ್ತ ತಿರುಗಿಸಿದನು.

ಕಾರಿನಿಂದ ಮಗುವನ್ನೆತ್ತಿಕೊಂಡು ಇಳಿದಾಗ ರಘು ಬಗ್ಗಿ, ತೂಕಡಿಸಿದ ಮಗುವಿನ ಕೆನ್ನೆಗೆ ಮುತ್ತಿಟ್ಟು,

"ಶಿಲ್ಪ, ಅಂಕಲ್ ಲವ್ಸ್ ಯೂ ವೆರಿಮಚ್...."

ಬಾಗಿಲನ್ನು ಮುಚ್ಚಿಕೊಳ್ಳುತ್ತಾ ಶುಭನಿಗೆ ಕೇಳಿಸುವಂತೆ ಹೇಳಿದ.

"ಬಾನುವಾರ ಬೆಳಗ್ಗೆ ಕಾರು ಕಳಿಸುತ್ತೇನೆ."

ಅವರಿಗಾಗಿ ಗೇಟಿನ ಬಳಿ ಕಾದಿದ್ದ ನಂದಿನಿ ಮರೆಯಾದ ಕಾರನ್ನು ಕಂಡು ಶುಭನನ್ನು ಕೇಳಿದಳು.

"ಅದ್ಯಾಕೆ ರಘು ಒಳಗೆ ಬರಲಿಲ್ಲ ?"

"ಗೊತ್ತಿಲ್ಲ."

ಶುಭ ಮೊಟಕಾಗಿ ಉತ್ತರಿಸಿ ಒಳನಡೆದಳು.

ಕಾರನ್ನು ಮನೆಯ ಪೋರ್ಟಿಕೋನಲ್ಲಿ ನಿಲ್ಲಿಸಿದ ರಘು ಸಣ್ಣಯ್ಯನನ್ನು ಕರೆದನು.

"ಸಣ್ಣಯ್ಯಾ, ಮಗು ಸೀಟಿನ ಮೇಲೆ ಒದ್ದೆ ಮಾಡಿವೆ, ಒರೆಸು."

ಸಣ್ಣಯ್ಯನ ಮುಖದಲ್ಲಿ ಮಂದಹಾಸ ಮಿನುಗಿತು.

"ಯಾರು ಸ್ವಾಮೀ....ನಮ್ಮ ಪುಟ್ಟಮ್ಮೋರಾ !"

ಹೌದೆನ್ನುವಂತೆ ರಘು ತಲೆಯಲ್ಲಾಡಿಸಿದ. ಎಂದಿನಂತೆ ಸೊಸೆ, ಮೊಮ್ಮಗಳನ್ನು ವಿಚಾರಿಸಲು ಬಂದ ಶಿವರಾಮಯ್ಯನವರ ಕಿವಿಗೆ "ಪುಟ್ಟಮ್ಮ" ಬಿತ್ತು.

"ಯಾರಪ್ಪಾ ಅದೂ ಪುಟ್ಟಮ್ಮಾ ?"

"ನಿಮ್ಮ ಮೊಮ್ಮಗಳು ಅಪ್ಪಾ... ಭಾನುವಾರ ಅವಳೂ ಶುಭಾ ಬರ್‍ತಾರೆ. ಹೇಳಿದ್ದೀನಿ !"

ರಘು ಹೇಳಿದಾಗ ಶಿವರಾಮಯ್ಯನವರ ಮುಖ ಅರಳಿತು.

"ಸಂತೋಷಾಪ್ಪಾ....ಅವರಿಬ್ಬರೂ ಈ ಮನೆ ಬೆಳಕು !"

ಅಂದು ರಾತ್ರಿ ರಘುವಿಗೆ ಬೇಗ ನಿದ್ರೆ ಹತ್ತಲಿಲ್ಲ. ಕಣ್ಣುಮುಚ್ಚಿದರೆ, ತಿಳಿ ಹಳದಿಯ ಸೀರೆಯುಟ್ಟು ರಸ್ತೆಯಲ್ಲಿ ನೆರಿಗೆ ಚಿಮ್ಮಿಸಿಕೊಂಡು ನೀಳ ಜಡೆಯನ್ನು ತೂಗಾಡಿಸಿಕೊಂಡು ಬರುತ್ತಿದ್ದ ಆ ನಗುಮುಖದ ಚೆಲುವೆ ಕಣ್ಮುಂದೆ ಬಂದು ನಿಲ್ಲುತ್ತಿದ್ದಳು.

ಭಾನುವಾರ ಕಾರನ್ನು ಸಣ್ಣಯ್ಯ ತೆಗೆದುಕೊಂಡು ಹೋದನು. ಬೇಗ ಬೇಗ ತನ್ನ ಕೆಲಸಗಳನ್ನು ಮುಗಿಸಿ ರಘು ಬಾಗಿಲಲ್ಲೇ ಕಾರಿನ ಆಗಮನಕ್ಕಾಗಿ ಕಾದು ನಿಂತನು. ಶಿವರಾಮಯ್ಯನವರೂ ಮುಂಬಾಗಿಲಿಗೆ ಬಂದು ನಿಂತು ನೋಡಿ ಮತ್ತೆ ಒಳಗೆ ಹೋಗುತ್ತಿದ್ದರು. ಕಾರು ಪೋರ್ಟಿಕೋದಲ್ಲಿ ಬಂದು ನಿಂತಾಗ ರಘು ಕಾರಿನತ್ತ ಧಾವಿಸಿದ. ಕಾರಿನ ಬಾಗಿಲು ತೆರೆದು ಶುಭನ ಕೈಯಿಂದ ಮಗುವನ್ನೆತ್ತಿಕೊಂಡನು. ಶುಭ ಇಳಿದು ನಿಂತು ಮನೆ ಯತ್ತ ನೋಡಿದಳು. ಅದೇ ಮನೆ—ಅದರೊಳಗೆ ತಾನು ಅನುಭವಿಸಿದ ಸುಖವೆಷ್ಟು ! ವ್ಯಥೆಯೆಷ್ಟು ? ಈ ತೋಟದಲ್ಲಿ ಎಷ್ಟು ದಿನ ತಾನೂ ರಘು ಇಬ್ಬರೇ ಹಕ್ಕಿಗಳಂತಿರಲಿಲ್ಲ ?-ನೆನಪುಗಳ ಜಾಲದಲ್ಲಿ ಶುಭ ತತ್ತರಿಸಿದಳು. ಅವಳ ಕಣ್ಣುಗಳು ತುಂಬಿ ಬಂತು. ಅದನ್ನು ಗಮನಿಸಿದ ರಘು ಅವಳ

ಹತ್ತಿರ ಬಂದು ಅವಳ ಭುಜದ ಸುತ್ತ ಕೈ ಹಾಕಿ ತನಗೊರಗಿಸಿಕೊಂಡು ಮನೆಯೊಳಗೆ ಕರೆದೊಯ್ದನು. ಸೊಸೆಯನ್ನು ಕಂಡು ಶಿವರಾಮಯ್ಯನವರ ಮುಖವರಳಿತು. ಸುಕ್ಕು ಕೆನ್ನೆಗಳ ಮೇಲೆ ಕಂಬನಿಯಿಳಿಯಿತು. ಸೊಸೆಯ ಮೈ ತಡವಿದರು.

"ಅಳಬಾರದು ತಾಯಿ. ಚಿಕ್ಕ ಪುಟ್ಟ ವಯಸ್ಸಿನವರು ನೀವು ಹೀಗೆ ಕೊರಗಿದರೆ ಮುದಿ ಕೊರಡಾದ ನಾವೇನು ಮಾಡಬೇಕು ! ದುಃಖವನ್ನು ಮರೆಯಬೇಕು. ಸುಖವನ್ನು ನೆನೆಯಬೇಕೂ-ತಾಯಿ ..."

ರಘುವಿನ ಕೈಯಿಂದ ಕೆಳಗಿಳಿದಿದ್ದ ಶಿಲ್ಪ ಬೋರಲಾಗಿ ಮುಂದೆ ಸರಿಯುತ್ತಾ ಶುಭಳ ಕಾಲಿನತ್ತ ಬಂದಾಗ, ಶುಭ ಬಗ್ಗಿ ಅವಳನ್ನೆತ್ತಿಕೊಂಡು ಶಿವರಾಮಯ್ಯನವರ ಕೈಗಿತ್ತಳು. ಶಿಲ್ಪ ಬರುವ ಸುದ್ದಿ ತಿಳಿದಿದ್ದ ಬಾಬು ಟವಲಿಗೆ ಕೈ ಒರೆಸುತ್ತಾ ಬಂದನು.

"ನಮ್ಮ ಬಂಗಾರಿ ಬಂತೂ ಬಾರೇ....ಇಲ್ಲಿ....ಬಾರೇ ಬಂಗಾರಿ....!"

ಶಿವರಾಮಯ್ಯನವರು ಕೈಯಿಂದ ಮಗುವನ್ನೆತ್ತಿಕೊಂಡು ಭುಜದ ಮೇಲೆ ಕೂಡಿಸಿಕೊಂಡು ಕುಣಿದಾಗ ಶಿಲ್ಪ ನಕ್ಕಿತು. ಬಾಬುವಿನ ಕುಣಿತ ಕಂಡು ಎಲ್ಲರೂ ನಕ್ಕರು. ಸಣ್ಣಯ್ಯ ಕಾರಿನಲ್ಲಿದ್ದ ಮಗುವಿನ ಸಾಮಾನಿನ ಬುಟ್ಟಿ ಒಳಗೆ ತಂದಿಟ್ಟನು.

"ಶುಭಾ, ಮಗೂಗೆ ಹಾಲು ಬೇಕಾದರೆ ಹಸುವಿನ ಹಾಲಿದೆ. ಬಾಬು ಬಾಟಲು ಸ್ಟರ್‌ಲೈಸ್ ಮಾಡಿಕೊಡ್ತಾನೆ !"

ರಘು ಹೇಳಿದಾಗ ಶುಭ ಹೇಳದಳು—

"ಬೇಡಾ--ಎರಡು ಬಾಟಲು ತಂದಿದ್ದೇನೆ. ಸಾಯಂಕಾಲದ ಫೀಡಿನ ಹೊತ್ತಿಗೆ ಮನೆಗೆ ಹೋದರೆ ಸಾಕು !"

ಆ ಮಾತು ಕೇಳಿ ರಘುವಿನ ಮುಖ ಚಿಕ್ಕದಾಯಿತು.

"ಶಿಲ್ಪ, ನೀವೂ, ಇಬ್ಬರೂ ಬನ್ನಿ....ನಾನು ಮಾಡಿರೋ ಮಿರಕಲ್ಸ್ ನೋಡಿ ಬನ್ನಿ...."

ರಘು ಕರೆದಾಗ ಶುಭ ತಲೆಯಲ್ಲಾಡಿಸಿದಳು.

"ಶಿಲ್ಪಂಗೆ ಸುತ್ತುವುದು ಬಹಳ ಇಷ್ಟ, ಕರೆದುಕೊಂಡು ಹೋಗಿ...."

ಹಾಗಾದರೆ ನಿಮಗೆ ಬೋರ್ ಆಗುತ್ತೆ....ತಾಳಿ, ನಿಮಗೊಂದು ಕೆಲಸ. ಸ್ಟೋರ್ ರೂಮಿನಲ್ಲಿ ಸಾಮಾನೆಲ್ಲಾ ಮುಗಿದುಹೋಗಿವೆ. ಏನೇನು ಬೇಕು, ಏನೇನೂ ಬೇಡಾ ನೋಡಿ ಒಂದು ಲಿಸ್ಟ್ ಬರೆದಿಡುತ್ತೀರಾ ?"

ರಘು ಅವಳಿಗೆ ಗೋಡೆಗೆ ತಗಲಿಹಾಕಿದ ಬೀಗದ ಕೈ ಗೊಂಚಲೊಂದನ್ನು ಕೊಟ್ಟನು.

"ನೀವು ಹೋದ ಮೇಲೆ ಆ ಕೆಲಸ ಕೂಡ ನನ್ನ ಪಾಲಿಗೆ ಬಿದ್ದಿದೆ."

ಶುಭ ಅನುಮಾನಿಸಿದಾಗ ರಘು ಅವಳ ಕೈಹಿಡಿದು ಅವಳ ಕೈಲಿತ್ತು ಶಿಲ್ಪನನ್ನು ಎತ್ತಿಕೊಂಡು ಹೊರಗೆ ಹೊರಟನು. ಶಿವರಾಮಯ್ಯನವರು ರಘು ವನ್ನು ಎಚ್ಚರಿಸಿದರು.

"ತುಂಬಾ ಬಿಸಿಲಲ್ಲಿ ಸುತ್ತಿಸಬೇಡ್ವೋ ಮಗೂನ್ನಾ.........ಬೇಗ ಕರ್ಕೊಂಡ್ಬಾ."

ಅವನತ್ತ ಹೋಗುತ್ತಲೇ ನಿಟ್ಟುಸಿರಿಟ್ಟರು.

"ನೋಡೂ ತಾಯಿ, ಇವನು ಹೀಗೆ ಒಬ್ಬೊಂಟಿಗನಾಗಿ ಇರುವುದನ್ನು ನಾನು ನೋಡಲಾರೆ.. ನೀನು ಬಂದು ನಿಂತು ಮನೆ ನಡೆಸಿಕೊಡು ತಾಯಿ. ಇಲ್ಲದಿದ್ದರೆ ಎಂದಾದರೊಂದು ದಿನ ಅವನು ದೇಶಾಂತರ ಓಡಿಹೋಗ್ತಾನೆ!"

ಬಾಬು ಶುಭನ ಕಣ್ಣು ಮತ್ತೆ ತುಂಬಿದುದನ್ನು ಕಂಡು ಹೇಳಿದ.

"ಬನ್ನೀಮ್ಮಾ-ಸ್ಟೋರ್ ರೂಮಿನ ಗತಿ ನೋಡಿ ಬನ್ನಿ !"

ಶುಭ ಬಾಬುವನ್ನು ಹಿಂಬಾಲಿಸಿದಳು.

ರಘು ಮಗುವನ್ನೆತ್ತಿಕೊಂಡು ತೋಟದತ್ತ ಬಂದಾಗ ಹೊಲಗಳಲ್ಲಿದ್ದ ಆಳುಗಳೆಲ್ಲ ಅವನತ್ತ ಧಾವಿಸಿದರು.

"ಎಂತಾ ಚೆಂದಗಾಗೈತೆ....?"

"ಬೋ ಚೆಲುವೆ ಆಗ್ತಾಳೆ ನಮ್ಮವ್ವ."

"ಅದರ ಕಣ್ಣು ನೋಡವ್ವಾ ಎಂಗೆ ನಕ್ಸತ್ರದಂಗೆ ಒಳೀತೈತೆ !"

"ಕೈ ನೋಡು, ಒಳ್ಳೆ ಚಿಗುರಿದ್ದಂಗೈತೆ."

ಕೆಲವರ ನುಡಿಯಲ್ಲಿ ಮೆಚ್ಚಿಗೆ, ಕೆಲವರ ನೋಟದಲ್ಲಿ ಮೆಚ್ಚಿಗೆ. ಕೋಳಿ ಗಳನ್ನು, ಕೋಳಿಮರಿಗಳನ್ನು ಕಂಡು ಶಿಲ್ಪ ಕೇಕೆ ಹಾಕಿ ನಕ್ಕಾಗ ರಘು ಅವಳನ್ನು ಎದೆಗೊತ್ತಿಕೊಂಡು ಮುತ್ತಿನ ಮಳೆಗರೆದನು.

"ನನ್ನ ಸ್ವೀಟೀ, ನನ್ನ ಮುದ್ದು, ನನ್ನ ಚಿನ್ನ..."

ತೋಟದಲ್ಲೆಲ್ಲಾ ಸುತ್ತಿಸಿಕೊಂಡು ರಘು ಬಂದಾಗ ಶಿಲ್ಪ ಅವನ ತೋಳುಗಳಲ್ಲಿ ಬೆಚ್ಚಗೆ ಮಲಗಿತ್ತು. ಶುಭ ಉಗ್ರಾಣದ ಕೆಲಸವಿನ್ನೂ ಮುಗಿಸಿರಲಿಲ್ಲ ಮಗುವನ್ನು ಎಲ್ಲಿ ಮಲಗಿಸಲೂ ತೋರದೆ ಕೊಂಚ ಹೊತ್ತು ಯೋಚಿಸಿ ರಘು ತನ್ನ ರೂಮಿಗೆ ಬಂದು ತನ್ನ ಹಾಸಿಗೆಯ ಮೇಲೆ ಮಲಗಿಸಿ ತನ್ನ ಹೊದಿಕೆಯನ್ನು ಹೊದಿಸಿ ಮಗುವನ್ನೇ ದೃಷ್ಟಿಸಿದ. ಆಗತಾನೇ ಅರಳಿದ ಪುಟ್ಟ ಹೂವಿನಂತಿದ್ದ ಅದರ ಮುಖ ನೋಡಿ ಹಿಗ್ಗಿದನು. ಮಗುವೊಂದನ್ನೇ ಮಲಗಿಸಿ ಹೋದರೆ ಎದ್ದು ಮಂಚದಿಂದ ಬಿದ್ದೀತೆಂದು ಹೆದರಿ ಮಂಚದ ಪಕ್ಕಲಿಗೆ ಕುರ್ಚಿಯೊಂದನ್ನೆಳೆದುಕೊಂಡು ಕುಳಿತನು. ಶಿವರಾಮಯ್ಯನವರು ರಘು ಮಗುವಿನ ಮುಂದೆ ಕುಳಿತಿರುವುದನ್ನು ಕಂಡು ಮನಸ್ಸಿನಲ್ಲೆ ನಕ್ಕರು.

ಅಂದು ಶುಭನಿಗೆ ಪ್ರಿಯವಾದ ಸೌತೇಕಾಯಿ ಮೊಸರು ಬಜ್ಜಿ, ಗಸಗಸೆ ಪಾಯಸ, ಬಟಾಣಿ ಚಿತ್ರಾನ್ನ ಮಾಡಿದ್ದ ಬಾಬು. ಒಂದು ಪಕ್ಕದಲ್ಲಿ ಮಾವ ಮತ್ತೊಂದು ಪಕ್ಕದಲ್ಲಿ ಮೈದುನ ಇಬ್ಬರ ಉಪಚಾರ ಶುಭನಿಗೆ. ಅವರ ಪ್ರೀತಿ, ವಾತ್ಸಲ್ಯ, ಔದಾರ್ಯಕ್ಕೆ ಶುಭ ಮೂಕಳಾಗಿದ್ದಳು. ಆದರೆ ರವಿಯ ನೆನಪು ಅವಳನ್ನು ಕಾಡದಿರಲಿಲ್ಲ.

ಊಟವಾದ ಮೇಲೆ ಮಗುವಿಗೆ ಬಾಟಲಲ್ಲಿನ ಹಾಲು ಕುಡಿಸುತ್ತಾ ಶುಭ ಕುಳಿತಿದ್ದಾಗ ಅವಳ ತೊಡೆಯ ಮೇಲೆ ಮಲಗಿ ಕೈಕಾಲು ಬಡಿಯುತ್ತಾ ಹಾಲು ಕುಡಿಯುತ್ತಿದ್ದ ಶಿಲ್ಪನನ್ನು ನೋಡಿ ಹಿಗ್ಗುತ್ತಾ ಶಿವರಾಮಯ್ಯನವರು ಹೇಳಿದರು.

"ಅಮ್ಮಾ ತಾಯಿ, ನೀನು ಕೆಲಸಕ್ಕೆ ಸೇರಿರುವುದು ತಿಳಿಯಿತು—ನಿನಗೂ ಏನಾದರೂ ಹವ್ಯಾಸವಿರಬೇಕು, ಸಂತೋಷ. ಆದರೆ ಭಾಸ್ಕರನ ಮನೆಯಲ್ಲಿ ಇನ್ನೆಷ್ಟು ದಿನ ಇರ್ತೀಯಾ ತಾಯಿ ? ಈ ಮನೆ ನೀನು ಸೇರಿದ ಮನೆ. ಇಲ್ಲಿಗೆ ಬರಬಾರದೇ ? ಬೇಕಾದರೆ ಪ್ರತಿದಿನ ರಘೂನೋ, ಸಣ್ಣಯ್ಯನೋ ಕಾರಿನಲ್ಲಿ ನಿನ್ನ ಕರ್‍ಕೊಂಡ್ಹೋಗಿ ಕಾಲೇಜಿಗೆ ಬಿಡ್ತಾರೆ—ಬರ್‍ತಾ ಕರ್‍ಕೊಂಡು ಬರ್‍ತಾರೆ. ಮನೇ ಹೆಂಗಸರಿಲ್ಲದೇ 'ಬಿಕೋ' ಅನ್ನತ್ತೆ !"

ತಾನಿದ್ದರೆ ಶುಭ ಉತ್ತರ ಹೇಳುವುದು ಕಷ್ಟವಾಗಬಹುದೆಂದು ಅರಿತ ರಘು ಹೊರಗೆ ಎದ್ದು ಹೋದನು.

"ರಘುವಿಗೆ ಮದುವೆಯ ಯೋಚನೆ ಇಲ್ಲವೇ ?"

ಶುಭ ಉತ್ತರವಾಗಿ ಕೇಳಿದಾಗ ಶಿವರಾಮಯ್ಯನವರು ಕ್ಷೀಣವಾಗಿ ನಕ್ಕರು.

"ನನಗೇನು ಗೊತ್ತು ತಾಯಿ ? ಇದ್ದರೆ ಅವನು ನನಗೆ ಹೇಳುತ್ತಾನೆಯೋ ? ರವಿ ಇದ್ದಿದ್ದರೆ ಆ ವಿಷಯ ಅವನಿಗೇ ಒಪ್ಪಿಸುತ್ತಿದ್ದೆ. ಈಗ ನೀನು ಆ ಹೊಣೆ ತೆಗೆದುಕೊಂಡರೆ ವಾಸಿ."

ಶುಭನಿಗೆ ಉತ್ತರ ಹೇಳಲಾಗಲಿಲ್ಲ ಅವನು ತನ್ನ ಮಾತು ಕೇಳುತ್ತಾನೆಯೋ ?

"ನಿಮ್ಮ ಸುಖ ಸಂತೋಷ ನನಗೆ ಮುಖ್ಯ"

ಎಂದೇನೋ ಹೇಳಿದ್ದ. ಆದರೆ ತಾನು ...ಅವನನ್ನು ...ಮದುವೆಯಾಗೆಂದು ಹೇಳುವುದು ತರವೇ ? ರವಿ ತನಗೆ ಹೇಳಿದ್ದ ಮಾತು ರಘುವಿಗೆ ತಿಳಿಯದು !

"ಒಂದು ಮಾತು ನೀನು ಹೇಳಿ ನೋಡಮ್ಮಾ !"

ಶಿವರಾಮಯ್ಯನವರು ಹೇಳಿದರು. ಹಾಲು ಕುಡಿಯುತ್ತಲೇ ಮಲಗಿ ನಿದ್ರಿಸುತ್ತಿದ್ದ ಮಗುವನ್ನು ಹಾಸಿಗೆಯ ಮೇಲೆ ಮಲಗಿಸಲು ಶುಭ ಎತ್ತಿಕೊಂಡು ನಿಂತಾಗ ಅವರು ಹೇಳಿದರು.

"ಇಲ್ಕೊಡು ತಾಯಿ, ನನ್ನ ರೂಮಿನಲ್ಲಿ ಮಲಗಿಸ್ತೀನಿ. ನೀನು ಹೋಗಿ ರಘೂಗೆ ನಾಲ್ಕು ಮಾತು ಹೇಳು. ಮಗೂ ಹತ್ರ ನಾನಿರ್ತೀನಿ."

ಶುಭ ಮಲಗಿದ್ದ ಮಗುವನ್ನು ಶಿವರಾಮಯ್ಯನವರ ಕೈಗಿತ್ತಳು.

ಶುಭ ರಘುವನ್ನರಸಿಕೊಂಡು ಬಂದಾಗ ರಘು ತೋಟದಲ್ಲಿದ್ದ ಕುರ್ಚಿಯಲ್ಲಿ ಪೈಪ್ ಚೇದಿ ಕುಳಿತಿದ್ದನು. ಹಿಂದಿನಿಂದ ಶುಭ ಬಂದುದು ಗಮನಿಸಲಿಲ್ಲ. ಅವಳು ಬಂದು ಅವನ ಎದುರಿಗಿದ್ದ ಕುರ್ಚಿಯಲ್ಲಿ ಕುಳಿತಳು. ಅವಳ ವಿಷಯವಾಗೇ ಚಿಂತಿಸುತ್ತಿದ್ದ ರಘು ಅವಳೇ ಎದುರಿಗೆ ಬಂದು ಕುಳಿತಾಗ ನನು ನಕ್ಕನು.

"ಹಾಗೆ ನಗಬೇಡಿ ರಘೂ, ನಾನು ತಡೆಯಲಾರೆ"

ಎಂದು ಹೇಳುವ ಮನಸ್ಸಾಯಿತು ಶುಭನಿಗೆ. ಆದರೆ ಆದನ್ನು ನಾಲಿಗೆ ಕಚ್ಚಿ ತಡೆದಳು.

"ರಘೂ, ಏನು ಬಹಳ ಯೋಚಿಸುತ್ತಾ ಇದ್ದೀರಿ ? ನನ್ನ ಯೋಚನೆಯಾದರೆ ಬಿಡಿ. ಅದರ ವಿಷಯ ನಿಮಗೆ ಬೇಡಾ....ನಾನು ನೋಡಿಕೋತೀನಿ."

ರಘು ಅವಳನ್ನೇ ನೋಡುತ್ತಾ ಉತ್ತರಿಸಿದ. ತನ್ನ ಮನಸ್ಸಿನ ಜಾಡು ಅವಳಿಗೆ ತಿಳಿದುದು ಹೇಗೆ ?

"ನಿಮಗೆ ಹೇಗೆ ಗೊತ್ತು ನಾನು ನಿಮ್ಮ ವಿಷಯ ಯೋಚಿಸುತ್ತಿದ್ದೇಂತಾ ?"

ಅದಕ್ಕುತ್ತರವಾಗಿ ಶುಭ ಹೇಳಿದಳು.

"ಲಿಟಲ್ ಬರ್ಡ್ ಟೋಲ್ಡ್ ಮೀ"

"ಅದೇ ಲಿಟಲ್ ಬರ್ಡ್ ನನಗೆ ಹೇಳಿತು-ಶುಭ ನಿನ್ನ ವಿಷಯ ಯೋಚಿಸುವುದೇ ಇಲ್ಲಾಂತ."

ರಘು ಅವಳ ಮುಖವನ್ನೇ ನೋಡುತ್ತಾ ಹೇಳಿದ. ಶುಭ ತಲೆಯುಲ್ಲಾಡಿಸಿದಳು.

"ನಿಮ್ಮ ಲಿಟಲ್ ಬರ್ಡ್ ಬಹಳ ದೊಡ್ಡ ಸುಳ್ಳುಗಾರ. ನಾನು ನಿಮ್ಮ ವಿಚಾರವಾಗಿ ಯೋಚಿಸಿಯೇ ಇಲ್ಲಿಗೆ ಬಂದುದು. ನಿಮ್ಮನ್ನು ಒಂದು ಮಾತು ಕೇಳಬೇಕೆಂದು ಬಂದೆ."

"ಒಂದಲ್ಲದಿದ್ದರೆ ಸಾವಿರ ಕೇಳಿ. ಪ್ಲೆಝರ್ ವಿಲ್ ಬಿ ಮೈನ್."

ರಘು ಕೈಕಟ್ಟಿ ಕುಳಿತನು.

"ರಘು, ನೀವೇಕೆ ಮದುವೆಯಾಗಬಾರದು ?"

ಶುಭ ನೆಲ ನೋಡುತ್ತಾ ಕೇಳಿದಳು. ರಘುವಿನ ಕಣ್ಣುಗಳು ಕಿರಿದಾದವು, ಹುಬ್ಬುಗಳು ಗಂಟಿಕ್ಕಿದವು. ಅವಳ ಕಣ್ಣುಗಳನ್ನು ಸೆರೆಹಿಡಿದು ಕೇಳಿದ.

"ಯಾರನ್ನ ?"

ಅವನ ನೋಟಕ್ಕೆ ಶುಭ ತತ್ತರಿಸಿದಳು.

"ಯಾರಾದರೂ ಹುಡುಗಿಯನ್ನ-ನಾನು ಹುಡುಕಿ ಕೊಡುತ್ತೇನೆ."

ರಘು ನಕ್ಕುಬಿಟ್ಟನು.

"ಒಬ್ಬ ಹುಡುಗಿಯನ್ನು ಪ್ರೀತಿಸಿ ಮತ್ತೊಬ್ಬಳನ್ನು ಮದುವೆಯಾಗುವುದು ನನಗೆ ಇಷ್ಟವಿಲ್ಲ !"

"ರಘೂ !" ಶುಭ ಬೆಚ್ಚಿ ಹೇಳಿದಳು : "ಆ ಮಾತು ಮಾತ್ರ ಮತ್ತೆ ಹೇಳಬೇಡಿ....ಆದಕ್ಕಾಗಿ ನಾನು ಬಹಳ ನೊಂದಿದ್ದೇನೆ. ಅದರ ಫಲಿತಾಂಶ ಅನುಭವಿಸುತ್ತಿದ್ದೇನೆ ..."

ಶುಭಳ ಕಣ್ಣುಗಳಲ್ಲಿ ನೀರು ತುಂಬಿ ಬಂತು. ಅವಳ ಕಣ್ಣಲ್ಲಿನ ನೀರು ಕಂಡು ರಘು ಮೆತ್ತಗಾದ.

"ಶುಭ, ನಾನು ಬೇರೆ ಹೆಣ್ಣೊಂದನ್ನು ಮದುವೆಯಾಗಿ ಈ ಮನೆಗೆ ಕರೆದುಕೊಂಡು ಬಂದರೆ ನೀವು ಸಹಿಸುತ್ತೀರಾ ?"

ರಘು ಪಿಸುದನಿಯಲ್ಲಿ ಕೇಳಿದ. ಶುಭ ಕಣ್ಣೊರಸಿಕೊಂಡಳು.

"ಪ್ರಯತ್ನಿಸುತ್ತೇನೆ-ಅಲ್ಲದೇ ನಾನೇನು ಇಲ್ಲಿರುವುದಿಲ್ಲವಲ್ಲ. ನನಗೆ, ಶಿಲ್ಪಂಗೆ ಒಂದು ಸಣ್ಣ ಮನೆಯಾದರೆ ಸಾಕು ...!"

ಅವಳ ಉತ್ತರ ಕೇಳಿ ರಘು ನಕ್ಕನು.

"ನೀವು ಪ್ರಯತ್ನಿಸಬೇಡಿ-ನನಗೆ ಯಾವ ಹೆಣ್ಣೂ ಸರಿಹೋಗುವುದಿಲ್ಲ. ಯಾರೂ ನನ್ನ ಒಲವನ್ನು ಗೆಲ್ಲಲಾರಳು-ಆದ್ದರಿಂದ ನನ್ನ ಮದುವೆಯ ಯೋಚನೆ ನೀವು ತಲೆಗೆ ಹಚ್ಚಿಕೊಳ್ಳಬೇಡಿ."

ಶುಭನ ಕಿವಿಯಲ್ಲಿ ರವಿಯ ಮಾತುಗಳು ಪ್ರತಿಧ್ವನಿಸಿದವು.

'ಶುಭಾ, ರಘು ಬಹಳ ನೊಂದಿದ್ದಾನೆ. ನಿನ್ನನ್ನು ಕಂಡರೆ ಪ್ರಾಣ ಬಿಡುತ್ತಾನೆ. ನಿನಗಾಗಿ ಅವನು ಕೊಡುವ ಪ್ರೀತಿಯನ್ನು ನಿರಾಕರಿಸಬೇಡ. ನೀವಿಬ್ಬರೂ ಒಟ್ಟಿಗೆ ನಗುನಗುತ್ತಿರಬೇಕೆಂದೇ ನನ್ನ ಆಸೆ.'

ರವಿ ಅಂದು ತನ್ನ ತೊಡೆಯ ಮೇಲೆ ಮಲಗಿ ನಿದ್ರಿಸುವುದಕ್ಕೆ ಮುಂಚೆ ಹೇಳಿರಲಿಲ್ಲವೇ ?

'ನನಗೆ ಗೊತ್ತು ಶುಭ. ಅವನು ನಿನ್ನನ್ನು ತುಂಬಾ ಪ್ರೀತಿಸುತ್ತಾನೆಂದು. ನನಗೇನಾದರೂ ಆದರೆ ನೀನು ಅವನ ಕೈ ಹಿಡಿಯಬೇಕು-ನಾನೂ, ಅವನೂ ಬೇರೆಯವರಲ್ಲ ಶುಭಾ.'

ತಾನೆಷ್ಟು ಅತ್ತಿರಲಿಲ್ಲ ಆ ಮಾತು ಕೇಳಿ. ರವಿ ಹೀಗೆ ಹೇಳಬಹುದಿತ್ತೇ ? ರವಿಗೆ ತಮ್ಮಿಬ್ಬರ ನಡುವಿನ ಒಲವು, ಸೆಳೆತ ಗೊತ್ತಿತ್ತೇ ? ಅದು ತಿಳಿದೂ ತನ್ನೊಡನೆ ಬಾಳುವೆ ನಡೆಸಿದ ರವಿಗೆ ಹೇಗಿ ಬೇಕು ಬದುಕು ? ರಘುವಿಗೆ ತಾನು ಹೇಗೆ ಹೇಳುವುದು ?

'ನನಗೆ ಗೊತ್ತಾಗಿದ್ದು ಮದುವೆಯಾದ ದಿನ ರಾತ್ರಿ--"ನಿಮ್ಮಂತಹದೇ ಒಂದು ಜೀವಂತ ಶಿಲಾಬಾಲಿಕೆ ಕೊಡಿ ಸಾಕು" ಎಂದಾಗ ನನಗರ್ಥವಾಯಿತು ಶುಭ. ಆದರೆ ಅಷ್ಟೊತ್ತಿಗೆ ಕಾಲ ಮಿಂಚಿತ್ತು. ನಿನ್ನಿಂದಲೇ ಅವನು ಈ ಮನೆಗೆ ಬರದೇ ದೂರ ಇದ್ದುದ್ದು, ನೀನೇ ಅತ್ತಿದ್ದೆ.'

'ನಾನು ಬದುಕಿರುವವರೆಗೆ, ಅವರಿಲ್ಲಿ ಬರುತ್ತಾರೆ ಎಂದು ಜ್ಞಾಪಕ ವಿದೆಯೇ ?'

ಶುಭಳ ಕಣ್ಣಿನಲ್ಲಿ ಮತ್ತೆ ಕಂಬನಿಯುಕ್ಕಿದಾಗ ರಘು ಅವಳ ಕೈ ಹಿಡಿದು ಹೇಳಿದ.

"ಸಾರಿ ಶುಭ. ತುಂಬ ಸಾರಿ. ದಯವಿಟ್ಟು ಕಣ್ಣೊರೆಸಿಕೊಳ್ಳಿ. ನೀವತ್ತರೆ ನನಗೆ ಬಹಳ ಬೇಸರವಾಗುತ್ತದೆ."

ಶುಭ ಅವನ ಕೈಯನ್ನು ಸರಿಸಿ ಎದ್ದು ಒಳಗೋಡಿದಳು.

ಅನಂತರ ಶುಭ, ರಘು ಆ ದಿನವೆಲ್ಲಾ ಮಾತಾಡಲೇ ಇಲ್ಲ. ರಘು ತೋಟದ ಕೆಲಸದಲ್ಲೇ ನಿರತನಾಗಿದ್ದನು. ಸಂಜೆಯಾಗುತ್ತಲೇ ರಘು ಸಣ್ಣ ಯ್ಯನನ್ನು ಕರೆದು ಕಾರಿನ ಡಿಕ್ಕಿಯಲ್ಲಿ ನಂದಿನಿಗಾಗಿ ತರಕಾರಿ ಹಣ್ಣು ಹೂವು ತುಂಬಿದ. ಆಗಲೇ ಮಗುವನ್ನೆತ್ತಿಕೊಂಡು ತಯಾರಾಗಿ ನಿಂತಿದ್ದ ಶುಭನತ್ತ ನೋಡಿ ಹೇಳಿದ.

"ಸಣ್ಣಯ್ಯ, ಅಮ್ಮಾವರನ್ನು ಹುಷಾರಾಗಿ ಕರ್ಕೊಂಡ್ಹೋಗಿ ಬಿಟ್ಟುಬಿಟ್ಟು ಬಾ."

ಅವನಿಗೆ ಏನೋ ಹೇಳಲು ಬಾಯಿ ತೆರೆದ ಶುಭ, ಅವನು ಬೆನ್ನು ತಿರುಗಿಸಿ ನಿಂತಿದ್ದು ನೋಡಿ ತುಟಿ ಕಚ್ಚಿ ಸುಮ್ಮನಾದಳು.

ಅಂದು ರಾತ್ರಿ ಊಟಕ್ಕೆ ಕುಳಿತಾಗ ಶಿವರಾಮಯ್ಯನವರು ವಿಪರೀತ ಮೌನಿಯಾಗಿದ್ದ ರಘುವನ್ನು ನೋಡಿ ಶುಭನ ಬುದ್ಧಿವಾದದ ಮಾತು ಅವನಿಗೆ ತಟ್ಟಿದೆಯೆಂದು ಮನಸ್ಸಿನಲ್ಲೇ ನಕ್ಕರು.

"ಏನಯ್ಯಾ, ಬಹಳ ಯೋಚನೆ ಮಾಡ್ತಾ ಇದ್ದೀಯಾ? ಶುಭ ಹೇಳಿದ್ದು ಸ್ವಲ್ಪ ಯೋಚನೆ ಮಾಡು.'

ರಘು ಉತ್ತರಿಸುವ ಬದಲು ಅರ್ಧ ಊಟದಲ್ಲೇ ಕೈ ತೊಳೆದು ಎದ್ದು ಹೋದಾಗ "ವಿಚಿತ್ರ ಹುಡುಗ" ಎಂದು ಸುಮ್ಮನಾದರು.

ಒಂದು ವಾರ ಕಳೆದರೂ ರಘು ಶಿಲ್ಪ, ಶುಭನನ್ನು ನೋಡಲು ನಂದಿನಿಯ ಮನೆಯತ್ತ ಸುಳಿಯಲಿಲ್ಲ. ಅಂದು ಮಂಗಳವಾರ-ಸಂಜೆ ಮುಗಿದುಹೋಗಿದ್ದ ರಾಸಾಯನಿಕ ಗೊಬ್ಬರ ತರಲು ಮಾರ್ಕೆಟ್ಟಿಗೆ ಬಂದಾಗ ರಘುವಿನ ಮನಸ್ಸು ನಂದಿನಿಯ ಮನೆಯತ್ತ ಎಳೆಯಿತು. ಶಿಲ್ಪನಿಗೆ ಅದೊಂದು ದಿನ ಮಾತ್ರ ಕಾರಿನಲ್ಲಿ ಸುತ್ತಿಸಿದ್ದಾಯ್ತು. ಅವೆಷ್ಟು ಸಂತಸಪಟ್ಟಿತ್ತು ! ಈಗ ಮನೆ ಯಲ್ಲಿದ್ದರೆ ಕರೆದುಕೊಂಡು ಹೋಗಬಹುದು ಎಂದುಕೊಂಡನು. ತನ್ನ ವ್ಯಾಪಾರವನ್ನು ಮುಗಿಸಿ ಕಾರನ್ನು ನಂದಿನಿಯ ಮನೆಯತ್ತ ತಿರುಗಿಸಿದನು.

ಸಂಜೆ ದೀಪ ಹೊತ್ತಿಸುವ ಹೊತ್ತಾದರೂ ಮನೆಯ ಮುಂದಿನ ಬಾಗಿಲು ಸಹ ತೆಗೆಯದಿದ್ದುದು ಕಂಡು ರಘು ವಿಸ್ಮಿತನಾದನು. ಕರೆಗಂಟೆ ನಾಲ್ಕೈದು ಬಾರಿ ಒತ್ತಿದರೂ ಯಾರೂ ಬಂದು ಬಾಗಿಲು ತೆರೆಯಲಿಲ್ಲ. ಮಗುವಿನ ಸದ್ದೂ ಕೇಳಲಿಲ್ಲ. ಮತ್ತೊಮ್ಮೆ ಕರೆಗಂಟೆಯನ್ನು ಒತ್ತಿ ಹಿಡಿದ. ಬಾಗಿಲಿನ ಪರದೆ ಸರಿಸಿಕೊಂಡು ಬಾಗಿಲು ತೆರೆಯಲು ಬಂದವಳು ಶುಭ. ತಲೆಯೆಲ್ಲ ಕೆದರಿತ್ತು. ಮುಖ ಸಪ್ಪೆಯಾಗಿತ್ತು. ಕಣ್ಣುಗಳು ಬಾಡಿದ್ದವು, ಉಟ್ಟಿದ್ದ ಸೀರೆ ಮುದುರಿತ್ತು.

"ಯಾಕೆ ? ಮನೆಯಲ್ಲಿ ಯಾರೂ ಇಲ್ಲವೇ ?"

ರಘು ಕೇಳಿದಾಗ ಶುಭ ಕ್ಷೀಣವಾಗಿ ನಕ್ಕಳು. ಬಾಗಿಲು ತೆರೆದು ಕೇಳಿದಳು.

"ಯಾಕೆ, ನಾನು ಇಲ್ಲವೇ ?"

"ಹಾಗಲ್ಲ....ನಂದಿನಿ, ನಿಮ್ಮೊಬ್ಬಳನ್ನೇ ಬಿಟ್ಟು ಹೋದಳೇ ಎಂತ ಕೇಳಿದೆ." ರಘು ಒಳಗಡಿಯಿಟ್ಟನು.

"ಯಾಕೆ, ನನ್ನೊಬ್ಬಳನ್ನು ಬಿಟ್ಟು ಹೋಗಕೂಡದೇ ಶುಭ ತಲೆಯ ಕೂದಲನ್ನು ಸರಿ ಮಾಡಿಕೊಂಡಳು.

"ಶಿಲ್ಪ ಎಲ್ಲಿ ಕಾಣೋಲ್ಲ ?" ರಘು ಮಾತು ಬದಲಿಸಿದನು.

"ಅತ್ತಿಗೆ ಹೊರಗೆ ಕರೆದುಕೊಂಡು ಹೋಗಿದ್ದಾರೆ" ಮೊಟಕಾಗಿ ಶುಭ ಉತ್ತರಿಸಿದಾಗ ರಘು ಸುಮ್ಮನಾದನು.

ಕೊಂಚ ಹೊತ್ತು ಮೌನ. ಶುಭನಿಗೇನೋ ಆಗಿರಬೇಕು. ಇಲ್ಲದಿದ್ದರೆ

ಹೀಗಿರಲು ಕಾರಣ ! ಹೀಗೆ ಮೊಟಕಾಗಿ ಉತ್ತರಿಸಲು ಕಾರಣ. ತಾನಂದು ಹಾಗೆ ವರ್ತಿಸಿದುದಕ್ಕೆ ಅವಳಿಗೆ ಬೇಸರವೇ ? ಮುನಿಸೇ ?

"ಏನಾದ್ರೂ ಕೊಡಲಾ ?" ಶುಭ ಕೇಳಿದಾಗ ರಘು ತಲೆಯ ಕೂದಲಲ್ಲಿ ಬೆರಳಾಡಿಸಿಕೊಂಡನು.

"ಹೂಂ... ನನಗೆ ಕಾರಣ ಕೊಡಿ... ಯಾಕೆ ನೀವು ಹೀಗಿದ್ದೀರಿ ?"

"ನಾನು ಇರುವುದೇ ಹಾಗೇ !" ಶುಭ ಉಗುರು ಕಚ್ಚಿದಳು.

"ಯಾಕೆ ಮೈಗೆ ಸರಿಯಾಗಿಲ್ಲದೇ ?" ರಘು ಅವಳ ಬಾಡಿದ ಮುಖ ನೋಡುತ್ತಾ ಕೇಳಿದ.

"ತಲೆ ನೋವು ಅಷ್ಟೆ."

"ಏನಾದರೂ ಮೆಡಿಸನ್ ತೊಗೊಂಡ್ರಾ ?" ರಘು ಕಳಕಳಿಯಿಂದ ಕೇಳಿದ.

"ಮೆಡಿಸನ್ ತೊಗೊಂಡ್ರೆ ಹೋಗಲ್ಲ ನನ್ನ ತಲೆ ನೋವು ! ಇರಿ. ಸ್ವಲ್ಪ ಕಾಫಿ ತರ್ತೀನಿ...." ಶುಭ ಅಡಿಗೆ ಮನೆಯತ್ತ ನಡೆದಳು.

ರಘು ಗಲ್ಲಕ್ಕೆ ಕೈ ಕೊಟ್ಟು ಯೋಚಿಸಿದ. ಶುಭ ಮನಸ್ಸಿಗೇನೋ ಹಚ್ಚಿಕೊಂಡಿದ್ದಾಳೆ. ಏನಿರಬಹುದು ? ಇವಳೇಕೆ ಹೀಗೆ ಬೇಸರಪಟ್ಟುಕೊಂಡು ಒದ್ದಾಡುತ್ತಾಳೆ-ತನಗೂ ಬೇಸರಪಡಿಸುತ್ತಾಳೆ-ಇವಳಿಗೇನು ಕಡಿಮೆಯಾಗಿದೆ ?

ಕಾಫಿ ಹಿಡಿದು ಬಂದಾಗ ರಘು ಕೇಳಿದ.

"ನೀವೂ ಕಾಫಿ ತೊಗೊಳ್ಳಿ....ನೀವು ತೆಗೆದುಕೊಳ್ಳುವ ಹಾಗಿದ್ದರೆ ನಾನು ತೊಗೋತೀನಿ. ಇಲ್ಲದಿದ್ದರೆ ಬೇಡಾ....!"

"ಇಲ್ಲ, ನಾನು ತುಂಬಾ ಕಾಫಿ ಕುಡಿಯೋಕೆ ಶುರು ಮಾಡಿಬಿಟ್ಟಿದ್ದೀನಿ- ಬೇಡಾ....ನೀವು ಕುಡೀರಿ, ನಾನು ಒಂದೇ ಲೋಟ ಬೆರೆಸಿದ್ದು !" ಶುಭ ಕೈಯ್ಯನ್ನು ತನ್ನ ಸೆರಗಿಗೆ ಒರೆಸಿಕೊಂಡಳು.

"ಇನ್ನೊಂದು ಖಾಲಿ ಲೋಟ ತೊಗೊಂಡ್ಬನ್ನಿ. ಇದರಲ್ಲಿ ಅರ್ಧ ಬಗ್ಗಿ ಸುತ್ತೇನೆ. ನಂಗೂ ಜಾಸ್ತಿ." ರಘು ಹೇಳಿದಾಗ ಶುಭ ಅನುಮಾನಿಸಿದಳು.

"ಹಾಗಾದರೆ ನಂಗೆ ಬೇಡ." ರಘು ಕಾಫಿಯನ್ನು ಟೇಬಲ್ಲಿನ ಮೇಲಿಟ್ಟನು.

"ನೀವು ತುಂಬಾ ಹಟ ಮಾಡ್ತೀರಿ" ಶುಭ ತಲೆ ತಗ್ಗಿಸಿ ಹೇಳಿ ಒಳಗೆ ಹೋಗಿ ಖಾಲಿ ಲೋಟವೊಂದನ್ನು ತಂದಳು.

ರಘು ಅದಕ್ಕೆ ಅರ್ಧ ಬಗ್ಗಿಸಿದ. ಅವಳು ಅದನ್ನು ಬಾಯಿಗಿಟ್ಟು ಕೊಂಡ ಮೇಲೆ ತಾನೂ ಕುಡಿದ. ತುಟಿಯನ್ನು ಕರವಸ್ತ್ರದಿಂದ ಒರೆಸಿ ಕೊಳ್ಳುತ್ತಾ ರಘು ಹೇಳಿದ.

"ಈಗ ನನ್ನ ಕಾಫಿ ಷೇರ್ ಮಾಡಿದಿರಿ, ನಿಮ್ಮ ತಲೆನೋವನ್ನೂ ಷೇರ್ ಮಾಡಿಕೊಳ್ಳಬೇಕು. ಯಾಕೆ ತಲೆ ನೋವು ? ಯಾರಾದರೂ ಏನಾದರೂ ಅಂದರಾ ? ಇಲ್ಲದ್ದು ಸಲ್ಲದನ್ನು ತಲೆಗೆ ಹಚ್ಚಿಕೊಂಡಿದ್ದೀರಾ ?"

ಶುಭ ಉತ್ತರಿಸಲಿಲ್ಲ. ತುಟಿ ಕಚ್ಚಿ ಬಂದ ಅಳು ತಡೆಯುತ್ತಿದ್ದಳು. ಆದರೆ ಕಣ್ಣಿನಿಂದ ಉದುರಿದ ಕಂಬನಿಯನ್ನು ಅವಳು ತಡೆಯಲಾಗಲಿಲ್ಲ. ಅವಳ ಕಣ್ಣೀರು ಕಂಡು ರಘು ಅಧೀರನಾದ.

"ಯಾಕೆ, ಶುಭ...? ಏನಾಯ್ತು ? ಅಳೋದು ಯಾಕೆ ?" ರಘು ಕೇಳಿದಾಗ ಶುಭ ಮುಖ ಮುಚ್ಚಿಕೊಂಡಳು.

ಇವಳು ಇಷ್ಟು ನೊಂದಿರುವುದಕ್ಕೆ ಕಾರಣ...ತಾನೇ ? ಇಷ್ಟು ದಿನ ತಾನು ಬರದೇ ಇದ್ದು ಈಗ ಬಂದುದಕ್ಕಾಗಿ ಉದ್ರೇಕಗೊಂಡು ಅಳುತ್ತಿರ ಬಹುದೇ ? ರಘು ಎದ್ದು ಶುಭಳ ಹತ್ತಿರ ಬಂದು ಮುಖ ಮುಚ್ಚಿದ್ದ ಅವಳ ಕೈಗಳನ್ನು ಬಿಡಿಸಿದ.

"ಶುಭಾ....ನೀವು ಕಣ್ಣೀರು ಹಾಕಿದರೆ ನಾನು ತಡೆಯಲಾರೆ. ನೀವು ಅತ್ತರೆ ನನಗೆ ಎದೆಯಲ್ಲಿ ಹುಚ್ಚು ಸಂಕಟವಾಗುತ್ತೆ."

ಅವಳ ಸುತ್ತ ಕೈ ಬಳಸಿ ತನ್ನೆದೆಗೆ ಒರಗಿಸಿಕೊಂಡನು. ಶುಭ ಅವನ ಎದೆಯ ಮೇಲೆ ಬಿಕ್ಕಿದಳು.

"ರಘೂ, ನನಗೊಂದು ಪುಟ್ಟ ಮನೆಯೊಂದು ನೋಡಿಕೊಡುತ್ತೀರಾ ? ನಾನು....ಇಲ್ಲಿರಲಾರೆ."

ರಘು ಅಚ್ಚರಿಗೊಂಡನು. ತನ್ನೆದೆಗೆ ಒರಗಿದ್ದ ಅವಳ ಮುಖವನ್ನು ಎತ್ತಿ ಹಿಡಿದು ಅವಳ ತೇವವಾದ ಮುಖವನ್ನೇ ನೋಡುತ್ತಾ ಕೇಳಿದ.

"ಯಾಕೆ ಪುಟ್ಟ ಮನೆ ? ಅಷ್ಟು ದೊಡ್ಡ ಮನೆಯಿರಬೇಕಾದರೆ ! ಅಲ್ಲಿಗೇ ಬರಬಹುದಲ್ಲಾ !"

ಶುಭ ತಲೆಯಲ್ಲಾಡಿಸಿದಳು.

"ನನಗೆ, ಶಿಲ್ಪ ಇಲ್ಲದಿದ್ದರೆ ಎಂದೋ ಒಬ್ಬಳೇ ಎಲ್ಲಿಗಾದರೂ ಓಡಿ ಹೋಗಿಬಿಡುತ್ತಿದ್ದೆ. ಆ ಮಗುವಿಗಾಗಿ ತಡೆದಿದ್ದೇನೆ....!"

"ಶುಭಾ !"

ರಘು ಅವಳನ್ನು ತನ್ನೆದೆಗಪ್ಪಿಕೊಂಡನು. "ಶುಭಾ, ನೀವು ಈ ಮಾತಾಡ ಬಾರದು. ನಾನುಸತ್ತು ಹೋದ ಮೇಲೆ ಬೇಕಾದರೆ ಆ ಮಾತಾಡುವಿರಂತೆ....! ನನ್ನನ್ನು ಬಿಟ್ಟು ನೀವು ಓಡಿಹೋಗಿ, ನೋಡೋಣ....!" ಅವಳ ನೆತ್ತಿಯ ಮೇಲೆ ಮುಖವಿಟ್ಟು ನಿಟ್ಟುಸಿರಿಟ್ಟನು. "ಸ್ವಲ್ಪ ಸಮಾಧಾನ ಮಾಡಿಕೊಳ್ಳಿ !"

ಶುಭ ಅವನೆದೆಯಲ್ಲೇ ಮುಖ ಹುದುಗಿ ಹೇಳಿದಳು.

"ರಘೂ, ನಾನು ಸಂತೋಷವಾಗಿರಬೇಕೂ, ಸುಖವಾಗಿರಬೇಕೂಂತ ನಿಮಗೆ ಇಷ್ಟವಿದ್ದರೆ ನನ್ನನ್ನು ಏನೂ ಕೇಳಬೇಡಿ—ನನಗೊಂದು ಪುಟ್ಟ ಮನೆ ಕಾಲೇಜಿಗೆ ಹತ್ತಿರವಿರುವದಾಗಿದ್ದರೆ ಸಾಕು-ಹುಡುಕಿಕೊಡಿ."

ರಘು ಶುಭನ ಮುಖವನ್ನು ಒಂದು ಕೈಯ್ಯಲ್ಲಿ ಎತ್ತಿ ಹಿಡಿದು ತನ್ನ ಕರವಸ್ತ್ರವನ್ನು ತೆಗೆದು ಅವಳ ತೇವವಾದ ಕೆನ್ನೆಯನ್ನು ಒರೆಸಿದನು.

"ಆಗಲಿ, ಶುಭ-ಆಗಲಿ. ಆದಷ್ಟು ಬೇಗ ಹುಡುಕಿ ಕೊಡುತ್ತೇನೆ. ಅಲ್ಲಿಯವರೆಗೆ ತಾಳ್ಮೆಯಿಂದಿರಿ....!"

ಹೊರಗೆ ಗೇಟಿನ ಸದ್ದು ಕೇಳಿ ರಘು ದೂರ ಸರಿದ. ಶುಭ ಒಳಗೆ ತನ್ನ ರೂಮಿಗೆ ಹೋದಳು. ರಘು ಬಾಗಿಲು ತೆರೆಯಲು ಹೋದ. ಬಂದವಳು ನಂದಿನಿ, ಒಂದು ಕೈಯಲ್ಲಿ ಭಾರವಾದ ಪ್ಲಾಸ್ಟಿಕ್ ಚೀಲ ಮತ್ತೊಂದು ಕೈಯ್ಯಲ್ಲಿ ಶಿಲ್ಪ—ಶಿಲ್ಪಳ ಕೈಯ್ಯಲ್ಲಿ ಒಂದು ಬೊಂಬೆ.

"ಯಾವಾಗ್ಬಂದೀ ರಘೂ...ಉಸ್ಸಪ್ಪಾ !" ನಂದಿನಿ ಚೀಲವನ್ನು ಕೆಳ ಗಿಟ್ಟಳು. "ಇವಳನ್ನ ಎತ್ತಿಕೊಂಡು ಸುತ್ತುವುದು ಕಷ್ಟಾಪ್ಪಾ—ಎಷ್ಟು ಭಾರ ಇದ್ದಾಳೆ ನೋಡೂ !" ಶಿಲ್ಪನನ್ನು ರಘುವಿನ ಕೈಗಿತ್ತಳು.

ಶಿಲ್ಪ ರಘುವನ್ನು ಗುರುತಿಸಿ ಅವನ ಮುಖ ನೋಡಿ ನಕ್ಕಿತು. "ಹೂಂ ಇದ್ದಾಳೆ. ಜೋರಾಗಿದ್ದಾಳೆ" ರಘು ಶಿಲ್ಪನ ಕೆನ್ನೆಗೆ ಮುತ್ತಿಟ್ಟ.

ನಂದಿನಿ ಕುರ್ಚಿಯ ಮೇಲೆ ಕುಸಿದಳು.

"ಶುಭ ಎಲ್ಲಿ ? ನಿನ್ನ ಜೊತೆ ಮಾತಾಡಲಿಲ್ಲವೇ ?"

ರಘು ಆವಳಿಗುತ್ತರ ಕೊಡಲಿಲ್ಲ. ಶಿಲ್ಪಳನ್ನು ಮುದ್ದುಮಾಡುವುದರಲ್ಲಿ ತಲ್ಲೀನನಾಗಿದ್ದನು.

"ಆವಳೊಂದು ತರಹ ಆಗ್ಹೋಗಿದ್ದಾಳೆ ರಘು. ಒಂದು ಮಾತಾಡಿದರೆ ತಪ್ಪು-ಒಂದು ಮಾತಾಡಿದರೆ ಕಷ್ಟ-ಬೆಳಗಿನಿಂದ ಒಂದು ತರಹ ಇದ್ದಾಳೆ !" ನಂದಿನಿ ಹೇಳಿದಳು. "ಅವಳ ರೂಮು ಬಿಟ್ಟೇ ಬಂದಿಲ್ಲ."

ರಘು ಶಿಲ್ಪನನ್ನು ತೊಡೆಯ ಮೇಲೆ ಕೂಡಿಸಿಕೊಂಡು ತನ್ನ ವಾಚಿ ನೊಡನೆ ಆಡುತ್ತಿದ್ದ ಆವಳ ಕೈಗೆ ವಾಚು ತೆಗೆದು ಕೊಟ್ಟನು.

"ಯಾಕೆ ನಂದಿನಿ ? ಅವಳ ಕಂಡೀರ್ಷ ಈಗ ಹಾಗೇ-ಆಮೇಲೆ ಸರಿ ಹೋಗ್ತಾಳೆ."

"ನೋಡಪ್ಪಾ, ನಾನು ಒಬ್ಬಳೇ ಎಷ್ಟು ಮಾಡಲಿ ಹೇಳು ? ಸಂಜಯ ಇವರ ಕೆಲಸಗಳು ಇರುತ್ತವೆ. ಮಗುವಿಗೆ ಸ್ನಾನ, ಹಾಲು, ನಿದ್ದೆ, ಬಟ್ಟೆ ಬದಲಿಸುವುದು ನಾನೇ ಮಾಡಬೇಕೆ ?-ಅಮ್ಮ ಅಂದಮೇಲೆ ಮಗೂನ್ನ ತೊಡೆಯ ಮೇಲೆ ಮಲಗಿಸಿಕೊಂಡು ಹಾಲು ಕೊಡಲೂ ಬೇಸರವೇ ? ಬೆಳಿಗ್ಗೆ ಸೋಫಾದ ಮೇಲೆ ಮಗೂನ್ನ ಮಲಗಿಸಿ ಅದರ ಕೈಲಿ ಫೀಡಿಂಗ್ ಬಾಟಲು ಕೊಟ್ಟು ತನ್ನ ಕೆಲಸಕ್ಕೆ ಹೊರಟುಹೋದ್ಲು. ಅದಕ್ಕೇನು ಮನಸ್ಸು ತಿರುಗಿತೋ ಬಾಟ್ಲು ಎಸೆದುಬಿಡ್ತು. ಸೋಫಾದಿಂದ ಉರುಳಿ ಕೆಳಗೆ ಬಿದ್ದು ಬಿಡ್ತು. ಆದು ಅತ್ತದ್ದು, ಬಾಟಲಿನ ಸದ್ದು ಕೇಳಿ ನಾನು ಓಡಿಬಂದೆ. ನನಗೆ ಕೋಪ ಬಂತು 'ಏನು ಶುಭ, ಮಗೂನ್ನ ಸ್ವಲ್ಪ ನೋಡಿಕೋಬಾರ್ದೇ ?' ಎಂದೆ, ಅಷ್ಟೆ. ಅವಳು ಕಣ್ಣಲ್ಲಿ ನೀರು ಹಾಕಿಕೊಂಡಳು. 'ನಾನು ಎಲ್ಲರಿಗೂ ಭಾರ....' ಎಂದು. ಮಗೂನ್ನ ಎತ್ತಿಕೊಂಡು ರೂಮಿನೊಳಗೆ ಹೋದೋಳು....ಊಟದ ಹೊತ್ತಿಗೂ ಹೊರಗೆ ಬರಲಿಲ್ಲ. ಕಾಲೇಜಿಗೂ ಹೋಗಲಿಲ್ಲ. ಅದಕ್ಕೆ ಸರಿಯಾಗಿ ಸಂಜಯ ಬೇರೆ, ಮೊನ್ನೆ ಶಿಲ್ಪನ ಮೇಲೆ ಹಾರಾಡಿದ. ನೆಲದ ಮೇಲೆ ಅವನ ಪುಸ್ತಕ ಬಿದ್ದಿತ್ತು. ಅದಕ್ಕೇನು ಗೊತ್ತು ? ಆ ಪುಸ್ತಕ ಹರಿದು ಪೇಜುಗಳನ್ನೆಲ್ಲ ಬಾಯಿಗಿಟ್ಟುಕೊಂಡು ಎಂಜಲು ಮಾಡಿ ಹಾಳು ಮಾಡಿಬಿಡ್ತು. 'ಅಮ್ಮಾ, ಏನಮ್ಮಾ, ಈ ಶಿಲ್ಪ-ನನ್ನ ಪುಸ್ತಕ ಎಲ್ಲಾ ಹಾಳು ಮಾಡಿಬಿಡ್ತು. ಯಾರೂ ಅದನ್ನ ನೋಡ್ಕೊಳ್ಳೋಲ್ವಲ್ಲಾ !'

ಅಂದ್ಬಿಟ್ಟ–ಆಗಲೂ ಶುಭ ಕೂಗಾಡಿದಳು. 'ಹೌದೋ....ನನ್ನ ಮಗಳು ನಿನ್ನ ಪುಸ್ತಕ ಹಾಳು ಮಾಡಿದ್ಲು–ಜೇರಿ ತಂದ್ಕೊಡ್ತೀನಿ....ನೀನು ಅವಳಷ್ಟು ಇರ್ಬೇಕಾದ್ರೆ ನನ್ನ ಪುಸ್ತಕ–ಸಾಮಾನು ಎಷ್ಟು ಹಾಳು ಮಾಡಿದ್ದೀ ಗೊತ್ತಾ ? ಆಗ ನಿಂಗ್ಯಾರು ಇದ್ರು ನೋಡ್ಕೊಳ್ಳೋಕೆ !'....ಅಂತ. ಆ ರಾಜಮ್ಮ ಶುಭಂಗೆ, ಮಗೂಗೆ ನೀರ್ಹಾಕೋಕೆ ಬರ್ತಾರಲ್ಲ, ಅವರ ಬಾಯಿನೂ ದೊಡ್ಡದು. ಶುಭ ಸ್ನಾನಮಾಡಿ ತುಳಸಿ ಪೂಜೆ ಮಾಡ್ತಾ ಇದ್ದಿದ್ದು ಕಂಡು, ಮಗೂಗೆ ಸಾಂಬ್ರಾಣಿ ಹಾಕ್ತಾ ಹೇಳಿದ್ರು 'ಏನ್ರೀ ನಂದಮ್ಮ ಏನೋ, ನಾಲ್ಕು ದಿನ ಸರಿ, ಈಗ್ಲೂ, ಕರೀಮಣಿ ತೆಗೆಯದೇ, ಕುಂಕುಮ ಹಚ್ಚಿಕೊಂಡು, ತುಳಸೀಪೂಜೆ ಮಾಡ್ತಾರಲ್ಲ. ದೊಡ್ಡೋರು ನೀವು ಒಂದು ಮಾತು ಹೇಳ್ಬಾರ್ದೇ ?' ಅಂದ್ರು. ಅವಳಿಗೆ ಕೇಳಿಸಿರಬೇಕು. ಅವಳು ಅದಕ್ಕೇ ಕೂಗಾಡಿದಳು. 'ಅತ್ತಿಗೆ.. ಆ ರಾಜಮ್ಮನ್ನ ಓಡಿಸಿ....ನಂಗೆ ಅವ್ರು ನೀರು ಹಾಕೋದೂ ಬೇಡಾ ಏನೂ ಬೇಡಾ, ಅಂದಳು."

ರಘು ಮಗುವನ್ನೆತ್ತಿಕೊಂಡು ಹೊರಗೆ ಹೋದನು. ನಿಜ. ಇದು ಶುಭನಿಗೆ ಬಹಳ ಬೇಸರವನ್ನುಂಟುಮಾಡಿರಬೇಕು. ಯಾರ ಹಂಗೂ ಇಲ್ಲವೇ ಹಾಯಾಗಿ ತನ್ನ ದೊಡ್ಡ ಬಂಗಲೆಯಲ್ಲಿರದೇ ಇಲ್ಲಿ ಸೇರಿ ನಾಲ್ಕು ಜನರ ಮಾತೇಕೆ ಕೇಳಬೇಕು ? ಅವಳೇಕೆ ಇಲ್ಲಿರಲು ಹಠ ಮಾಡಬೇಕು ? ಈಗ ಈ ಒಡಕು ಹುಟ್ಟಿರುವಾಗಲೇ ಶುಭನನ್ನು ಮನೆಗೆ ಕರೆದುಕೊಂಡು ಹೋಗಿ ಬಿಡಬೇಕು. ಅಲ್ಲಿದ್ದರೆ ಅವಳಿಗೇ ಅರಿವಾಗುವುದು, ತಾನು ಯಾವ ಮನೆಯಲ್ಲಿದ್ದರೆ ಸರಿಯೆಂದು !

ನಂದಿನಿ ಕೈಯ್ಯಲ್ಲಿ ಫೀಡಿಂಗ್ ಬಾಟಲ್ ಹಿಡಿದು ಬಂದಳು.

"ಇಲ್ಲಿ ಕೊಡು ಶಿಲ್ಪನ್ನ—ಪಾಪ ಅದಕ್ಕೆ ಹಸಿವಿರಬೇಕು !"

ರಘು ಅವಳ ಕೈಗೆ ಮಗುವನ್ನು ಕೊಡುತ್ತಾ ಹೇಳಿದ.

"ನಂದೂ, ನಾನು ನಾಳೆ ನಾಡಿದ್ದರಲ್ಲಿ ಶುಭ, ಶಿಲ್ಪನನ್ನು ನಮ್ಮ ಮನೆಗೆ ಕರೆದುಕೊಂಡು ಹೋಗುತ್ತೀನಿ. ನೀನೆಷ್ಟು ಶುಭನನ್ನು ಪ್ರೀತಿಸುತ್ತಿ ನನಗೆ ಗೊತ್ತು. ಆದರೆ ಅವಳು ಹೊರಡುವಾಗ ನೀನು ಅತ್ತು ಕರೆದು ಮಾಡದೆ ಸುಮ್ಮನಿದ್ದು ಕಳಿಸಿದರೆ ನನ್ನ ಕಾರ್ಯ ಸುಗಮವಾಗುತ್ತೆ !"

"ರಘೂ....ನನ್ನ ಈ ಚಿನ್ನನ್ನ ಹೇಗೆ ಕಳಿಸಲಿ ?" ಮುಗುವನ್ನು ಮುತ್ತಿ
[illegible] ಹೇಗೆ ಕಳಿಸಲಿ ? ಮನೆಯೆಲ್ಲಾ ಹಾಳು ಸುರಿಯುತ್ತೆ !"

"ನಂದೂ-ಅವಳೆಲ್ಲಿರಬೇಕೋ ಅಲ್ಲಿರಬೇಕು-ನೀನು ಹೇಗೆ ಅವರಿಬ್ಬರನ್ನು ಬಿಟ್ಟಿರಲಾರೆಯೋ, ನಾನೂ ಹಾಗೇ ಬಿಟ್ಟಿರಲಾರೆ !"

ನಂದಿನಿ ತಕ್ಷಣ ಉತ್ತರಿಸಲಿಲ್ಲ.

"ನಾನಿನ್ನು ಹೊರಡ್ತೀನಿ ನಂದೂ, ಶುಭಂಗೆ ಹೇಳಿಬಿಡು" ಎಂದು ರಘು ಹೊರಟಾಗ ನಂದಿನಿ ಮಗುವಿನ ತಲೆ ಸವರಿದ ಅವನ ಕೈಯ್ಯನ್ನು ಹಿಡಿದು ಕೇಳಿದಳು.

"ರಘೂ, ನೀನು ಶುಭನನ್ನು ಬಹಳ ಪ್ರೀತಿಸುತ್ತೀಯಲ್ಲವೇ ? ನನಗೆ ನೀನು ಬೇರೆಯಲ್ಲ ; ರವಿ ಬೇರೆಯಲ್ಲ. ನೀನ್ಯಾಕೆ ಅವಳನ್ನು ಮದುವೆಯಾಗ ಬಾರದು ? ಆಗ ಅವಳಿಗೂ ಆಸರೆ ಸಿಕ್ಕುತ್ತೆ. ನಿನಗೂ ಅವಳು ಸಿಕ್ಕಿದಹಾಗಾ ಗುತ್ತೆ...."

ರಘು ಬೆಚ್ಚಿದ. ಅವನ ಮುಖಕ್ಕೆ ರಕ್ತ ಚಿಮ್ಮಿತು. ನಂದಿನಿ ಹಿಡಿದ ಅವನ ಕೈ ಸಣ್ಣಗೆ ಬೆವೆತಿತು.

"ನಂದೂ ! ರಘು" ಉದ್ಗರಿಸಿದ.

ನಂದಿನಿ ಅವನ ಕೈ ಸವರಿದಳು.

"ನನಗೆ ಗೊತ್ತು ರಘು, ಎಲ್ಲಾ ಗೊತ್ತು. ಆದರೆ ನಾನೇನೂ ಮಾಡಲಾರ ದಾಗಿದ್ದೆ ರಘೂ ! ಈಗಲಾದರೂ ನನ್ನ ಶುಭನನ್ನು ನೀನು ಉದ್ಧರಿಸು. ಅವಳೂ ಬಹಳ ನೊಂದಿದ್ದಾಳೆ !"

ನಂದಿನಿ ಮಗುವನ್ನೆತ್ತಿಕೊಂಡು ಒಳಗೆ ಹೊರಟುಹೋದಳು. ರಘು ಗೇಟಿನ ಬಳಿ ಕೊಂಚ ಹೊತ್ತು ಹಾಗೇ ನಿಂತಿದ್ದನು. ನಂದಿನಿಗೆ ತಿಳಿದಿತ್ತೇ ! ಬಲವಂತದಿಂದ ಅಲ್ಲಿಂದ ಕಾಲ್ತೆಗೆದು ಕಾರಿನತ್ತ ನಡೆದನು.

ಮಗ ಊಟಮಾಡದೇ ಮಲಗಿದುದು ಕಂಡು ಶಿವರಾಮಯ್ಯನವರು ಕಳವಳಗೊಂಡರು. ರವಿಯನ್ನು ಕಳೆದುಕೊಂಡ ಮೇಲೆ ರಘು ಕೊಂಚ ಮುಖ ಸಣ್ಣದು ಮಾಡಿಕೊಂಡರೂ ಅವರು ತಳಮಳಗೊಳ್ಳುತ್ತಿದ್ದರು. ಹಾಸಿಗೆಯ ಮೇಲುರುಳಿ ತಲೆಯ ಹಿಂದೆ ಕೈಯಿಟ್ಟು ಸೂರನ್ನೇ ನೋಡುತ್ತಿದ್ದ ಮಗನನ್ನು ಕೇಳಿದರು.

"ಯಾಕಪ್ಪಾ ರಘು, ಮೈ ಚೆನ್ನಾಗಿಲ್ಲವೇ ? ಊಟ ಮಾಡಲೇ ಇಲ್ಲಾಂತ ಬಾಬು ಹೇಳಿದ."

ರಘು ತಂದೆಯ ವಾತ್ಸಲ್ಯ ಕಂಡು ಮರುಗಿದ.

"ಇಲ್ಲಪ್ಪಾ, ನನಗೇನೂ ಆಗಿಲ್ಲ. ತಿಂದು ಹೆಚ್ಚಾಯಿತು. ನಂದಿನಿ ತುಂಬಾ ತಿನ್ನಿಸಿಬಿಟ್ಟಳು. ಅದಕ್ಕೆ ಮಾಡಲಿಲ್ಲ !"

ಶಿವರಾಮಯ್ಯನವರು ನಿರಾಳವಾಗಿ ಉಸಿರಾಡಿದರು.

ಅವರತ್ತ ಹೋದ ಮೇಲೆ ರಘು ಯೋಚಿಸುತ್ತಾ ಮಲಗಿದ. ರವಿ ಹೋಗಿ ಇನ್ನೂ ಒಂದು ವರ್ಷವೂ ಆಗಿಲ್ಲ. ತಾನು ಶುಭನನ್ನು ಆ ರೀತಿ ನೋಡಬಹುದೇ ? ಅವಳು ತನ್ನನ್ನೊರಗಿ ಅತ್ತಾಗ ತನಗೆ ಯಾವ ವಿಧವಾದ ಕೀಳು ಭಾವನೆಯೂ ಇರಲಿಲ್ಲ. ನಂದಿನಿ ಹೇಳಿದ ಹಾಗೆ ತಾನು ಶುಭನನ್ನು ಮದುವೆಯಾದರೆ ? ಶುಭ ಇದಕ್ಕೆ ಒಪ್ಪುವಳೇ ? ರವಿಯ ಸ್ಥಾನದಲ್ಲಿ ತನ್ನನ್ನು ಇರಿಸಬಲ್ಲಳೇ ? ಅವಳನ್ನು ಕೇಳುವುದಾದಗೂ ಹೇಗೆ-? ರಘು ಯೋಚಿಸಿ ಹಣ್ಣಾದನು.

ಎರಡು ದಿನಗಳ ನಂತರ ಶುಭನನ್ನು ಕರೆತರಲು ರಘು ಯಾರಿಗೂ ಮನೆಯಲ್ಲಿ ಹೇಳದೆ ಹೊರಟನು. ಒಂದು ವೇಳೆ ಅವಳೊಪ್ಪದಿದ್ದರೆ !

ಅವನು ನಂದಿನಿಯ ಮನೆಯ ಮುಂದೆ ಕಾರು ನಿಲ್ಲಿಸಿದಾಗ ನಂದಿನಿ ಗೇಟಿನ ಬಳಿ ನಿಂತಿದ್ದಳು. ಅವನು ಇಳಿದು ಬರುತ್ತಲೇ ನಂದಿನಿ ತಲೆ ತಗ್ಗಿಸಿದಾಗ ರಘುವಿಗೆ ಏನೋ ಆಗಬಾರದ್ದು ಆಗಿದೆಯೆಂದು ಹೊಳೆಯಿತು. ಆದರೆ ಅದನ್ನು ತೋರಗೊಡವೇ ನಂದಿನಿಯನ್ನು ಕೇಳಿದನು.

"ಏನು, ಇಷ್ಟು ಬಿಡುವಾಗಿ ನಿಂತಿದ್ದೀ ?"

"ಇನ್ನು ಮೇಲೆ ನಂಗೆ ಬಿಡುವೇ ?" ನಂದಿನಿ ಮೊಟಕಾಗಿ ಉತ್ತರಿಸಿದಾಗ ಅವಳು ರಘುವಿನತ್ತ ನೋಡಲಿಲ್ಲ "ರಘೂ, ನೀನು ಶುಭನನ್ನು ಕರೆದುಕೊಂಡು ಹೋಗಲು ಬಂದಿದ್ದೀ. ಆದರೆ ಅವಳು ಇಲ್ಲಿಲ್ಲ. ನೆನ್ನೆ ಮಧ್ಯಾಹ್ನಾನೇ ಅವಳ ಫ್ರೆಂಡ್ ಒಬ್ಬಳ ಮನೆ ಪೋರ್ಷನ್ ಖಾಲಿಯಿದೆಯೇಂತೆ. ತನ್ನ, ತನ್ನ ಮಗುವಿನ ಸಾಮಾನೆಲ್ಲಾ ಪ್ಯಾಕ್ ಮಾಡಿಕೊಂಡು ಹೊರಟು ಹೋದಳು."

"ನಂದಿನಿ ! ಇದೇನು ನೀನು ಹೇಳ್ತಾ ಇರೋದೂ !" ರಘು ಅವಳನ್ನು ಹಿಡಿದಲುಗಿಸಿದನು. ನಂದಿನಿಯ ಕಣ್ಣೀರು ತುಳುಕಿ ಕೆಳಗುರುಳಿತು.

ರಘುವಿಗೆ ಸಿಡಿಲೆರಗಿದಂತಾಯಿತು. ರವಿ ತನ್ನನ್ನೂ ಶುಭಳನ್ನೂ ನೋಡಿ

ಕೊಳ್ಳುವ ಹೊಣೆ ಹೊರೆಸಿದ ನಂದಿನಿ ಅವಳನ್ನು ಕೈ ಹಿಡಿದು ಉದ್ಧರಿಸು ಎಂದು ಕೇಳಿಕೊಂಡಳು-ಆದರೆ ಶುಭ ತನ್ನನ್ನು ಹೀಗೇಕೆ ಆಡಿಸುತ್ತಾಳೆ!

"ನಂದಿನಿ, ಆ ಮನೆ ಎಲ್ಲಿದೆ ?"

"ನನಗೆ ಗೊತ್ತಿಲ್ಲ ರಘು-ಅವಳು ನನಗೆ ಏನೂ ಹೇಳಲಿಲ್ಲ. ಇವರಿಗೆ ಮಾತ್ರ 'ಭಾಸ್ಕರ, ನಿಮಗೆಲ್ಲಾ ಹೊರೆಯಾಗಿ ತುಂಬಾ ತೊಂದರೆ ಕೊಟ್ಟೆ, ಕ್ಷಮಿಸು' ಎಂದು ಹೇಳಿ ಹೊರಟುಹೋದಳು. ಸಂಜಯನಿಗೆ ಹೇಳಿದ್ದೇನೆ. ಹೇಗಾದರೂ ಮಾಡಿ ಆ ಮನೆ ಪತ್ತೆ ಹಚ್ಚೋಂತ!" ನಂದಿನಿ ಸೆರಗಿನಿಂದ ಕಣ್ಣೊರಸಿಕೊಂಡಳು.

ರಘು ಕಾರಿನತ್ತ ಧಾವಿಸಿದನು. ಶುಭನ ಮನೆ ತಾನು ಪತ್ತೆ ಮಾಡಬೇಕು. ಅವಳನ್ನು ದರದರನೇ ಎಳೆದುಕೊಂಡು ಬಂದರೂ ಸರಿ, ಅವಳನ್ನು ಮನೆಗೆ ಕರೆದೊಯ್ಯಬೇಕು. ನಂದಿನಿ, ಭಾಸ್ಕರ, ಇಬ್ಬರನ್ನೂ ಎಷ್ಟು ಬೇಸರ ಪಡಿಸಿದ್ದಾಳೆ. ಅವಳಿಗಾಗಿ ತಮ್ಮ ಜೀವವನ್ನು ಮುಡಿಪಾಗಿಟ್ಟವರು ಅವರು. ಅವಳಿಗೆಲ್ಲೋ ಬುದ್ಧಿ ಭ್ರಮಣೆಯಾಗಿರಬೇಕು! ತನ್ನ ಮುಂದೆ ತನ್ನಳಲನ್ನು ಹೇಳಿಕೊಂಡು ಕಣ್ಣೀರಿಟ್ಟವಳು ತನಗೆ ತಿಳಿಸದೇ ಹೋಗಬಹುದೇ ? ಕಾರನ್ನು ಕಾಲೇಜಿನತ್ತ ತಿರುಗಿಸಿದನು.

ಪಾಠ ಮಾಡುತ್ತಿದ್ದ ಶುಭನಿಗೆ ಕಾಲೇಜಿನ ಆಳು ಮರಿಯಪ್ಪ ಪ್ರಿನ್ಸಿಪಾಲರು ಕರೆಯುತ್ತಿದ್ದಾರೆಂದು ಹೇಳಿದಾಗ ಆಶ್ಚರ್ಯವಾಯಿತು. ತನ್ನೊಡನೆ ಪ್ರಿನ್ಸಿಪಾಲರು ಏನು ವೈಯಕ್ತಿಕವಾಗಿ ಮಾತನಾಡುವುದಿದೆ ?

ಅವಳು ಪ್ರಿನ್ಸಿಪಾಲರ ಕೊಠಡಿಗೆ ಬಂದಾಗ ಪ್ರಿನ್ಸಿಪಾಲರ ಮುಂದೆ ರಘು ಕುಳಿತಿರುವುದು ಕಾಣಿಸಿತು. ಅವನು ಏನಾದರೂ ತನ್ನ ಮೇಲೆ ದೂರಿತ್ತಿದ್ದಾನೆಯೇ ? ತಾನು ಬೇರೆ ಮನೆ ಮಾಡಿದುದರಿಂದ ಕೋಪಗೊಂಡು ತನ್ನ ಕೆಲಸಕ್ಕೆ ಸಂಚಕಾರ ತರುವ ಹವಣಿಕೆಯಲ್ಲಿರಬಹುದೇ ? ಬಲ ಪಾರ್ಶ್ವ ಮಾತ್ರ ಕಾಣುತ್ತಿದ್ದ ರಘುವಿನ ಮುಖ ನೋಡಿದಳು. ಗಂಭೀರವಾಗಿದ್ದ ಅವನ ಮುಖ ಭಾವದಿಂದ ಅವಳಿಗೇನೂ ಅರ್ಥವಾಗಲಿಲ್ಲ. ಅವಳ ನೆರಳು ಬಾಗಿಲಲ್ಲಿ ಬಿದ್ದುದು ಕಂಡು ಪ್ರಿನ್ಸಿಪಾಲರು ಗಂಟಲು ಸರಿಮಾಡಿಕೊಂಡು ಹೇಳಿದರು.

"ಕಮ್ ಇನ್, ಮಿಸೆಸ್ ಶುಭಾ....ನೋಡಿ, ನಿಮ್ಮನ್ನು ಹುಡುಕಿಕೊಂಡು ಇವರು ಬಂದಿದ್ದಾರೆ !"

ಶುಭ ಒಳಗೆ ಮೆಲ್ಲನಡಿಯಿಟ್ಟಳು. ರಘು ಅವಳತ್ತ ತಿರುಗಿ ನೋಡಿದನು. ಅವನ ಕಣ್ಣುಗಳು ಕಿಡಿಕಾರುತ್ತಿದ್ದವು. ತುಟಿಗಳು ಬಿಗಿದುಕೊಂಡಿದ್ದವು.

"ಥ್ಯಾಂಕ್ಯೂ, ಸಾರ್" ರಘು ಎದ್ದು ನಿಂತನು. "ಅವರನ್ನ ಕರೆದುಕೊಂಡು ಹೋಗ್ತೀನಿ ಸಾರ್....ತುಂಬಾ ಅರ್ಜೆಂಟ್ ಕೆಲಸ ಇದೆ." ಪ್ರಿನ್ಸಿಪಾಲರೂ ಎದ್ದು ನಿಂತು ಅವನ ಕೈ ಕುಲುಕಿದರು. "ವೈ ಆಲ್ ಮೀನ್ಸ್, ಕರೆದುಕೊಂಡು ಹೋಗಿ."

"ಸಾರ್, ಟೂ ಅವರ್ಸ್ ಬಾಟನಿ ಇದೆ ಸಾರ್ !"

ಶುಭ ಅನುಮಾನಿಸಿದಾಗ ಪ್ರಿನ್ಸಿಪಾಲರು ನಕ್ಕರು.

"ಗ್ಲಾಡ್, ಯೂ ಟೇಕ್ ಸೋ ಮುಚ್ ಇಂಟರೆಸ್ಟ್ ಇನ್ ಯುವರ್ ವರ್ಕ್....ಆದ್ರೆ ನಿಮ್ಮ ಬ್ರದರ್-ಇನ್ ಲಾ ಅರ್ಜೆಂಟಾಗಿ ಕರ್‍ಕೊಂಡು ಹೋಗೋಕೆ ಬಂದಿದ್ದಾರೆ-ಗೋ ಅಹೆಡ್, ನಾನೇನಾದ್ರೂ ಅಡ್ಜೆಸ್ಟ್ ಮಾಡಿಕೊಳ್ತೀನಿ."

ರಘುವನ್ನು ಹಿಂಬಾಲಿಸಿ ಬಂದ ಶುಭನಿಗೆ ಕೋಪವುಕ್ಕಿ ಬಂತು.

"ನನ್ನ ವರ್ಕಿಂಗ್ ಟೈಂನಲ್ಲಿ ಡಿಸ್ಟರ್ಬ್ ಮಾಡೋ ಅಷ್ಟು ಅರ್ಜೆಂಟ್ ಕೆಲಸ ಏನಿತ್ತು ನಿಮಗೆ ?"

ಶುಭ ಸಿಡಿದು ಕೇಳಿದಾಗ ರಘು ಮಾತಾಡದೇ ಕಾರಿನ ಮುಂದಿನ ಬಾಗಿಲು ತೆರೆದ. ಶುಭ ಒಳಗೆ ಕುಳಿತುಕೊಳ್ಳಲು ಹಿಂಜರಿದಾಗ ಹಲ್ಲು ಕಚ್ಚಿ ಹೇಳಿದ.

"ಡೋಂಟ್ ಮೇಕ್ ಎ ಸೀನ್ ಹಿಯರ್ !" ಶುಭ ಕಾರಿನಲ್ಲಿ ಕುಳಿತಾಗ ಬಾಗಿಲು ಭದ್ರಪಡಿಸಿ ಹೇಳಿದ "ನಿಮ್ಮ ಮನೆಯೆಲ್ಲಿ....? ದಾರಿ ತೋರಿಸಿ !"

ಶುಭನಿಗೆ ಅವನ ಆ ಕೋಪ ಹೊಸದು.

"ಅಲ್ಲಿಗೆ ಹೋಗುವ ಅವಶ್ಯಕತೆಯಿಲ್ಲ. ಅಲ್ಲಿ ನೀವೇನು ಮಾಡಬೇಕು ?"

ಶುಭ ಹೇಳಿದಾಗ ರಘು ಕಾರು ಸ್ಟಾರ್ಟ್ ಮಾಡಿದನು. "ಡೂ ಆಸ್ ಐ

ಸೇ, ಅದರ್‌ವೈಸ್ ಯೂ ವಿಲ್ ಹಾವ್ ಟು ವಿಾಟ್ ದಿ ಕಾನ್ಸೀಕ್ವೆನ್ಸಸ್ !" ಎಂದು ಗುಡುಗಿದಾಗ ಶುಭ ಕೊಂಚ ಮೆತ್ತಗಾದಳು.

"ಸ್ಟ್ರೈಟ್ ಆಗಿ ಹೋಗಿ ಸೆಕೆಂಡ್ ಟರ್ನಿಂಗ್‌ನಲ್ಲಿ ಲೆಫ್ಟ್‌ಗೆ ತಿರುಗಿಸಿ."

ಶುಭ ಭಯ, ಕೋಪಗಳ ಸಮ್ಮಿಲನದಿಂದ ಏರಿಳಿಯುತ್ತಿದ್ದ ಎದೆ ಹಿಡಿದು ಹೇಳಿದಳು.

ದೊಡ್ಡ ಕಾಪೌಂಡಿದ್ದ ಪುಟ್ಟ ಮನೆಯ ಮುಂದೆ ಕಾರು ನಿಲ್ಲಿಸಿದಾಗ ಶುಭ ಕಾರಿನ ಬಾಗಿಲು ತೆರೆದು ಆ ಮನೆಯತ್ತ ಸರಸರನೆ ನಡೆದಳು. ರಘು ಕಾರಿನ ಬಾಗಿಲು ಮುಚ್ಚಿ ಅವಳನ್ನು ಹಿಂಬಾಲಿಸಿದನು.

ಶುಭ ಬಾಗಿಲು ತಟ್ಟುತ್ತಲೇ ಮಧ್ಯ ವಯಸ್ಸಿನ ಹೆಂಗಸೊಬ್ಬರು ಬಾಗಿಲು ತೆರೆದರು.

"ಇದೇನು, ಇಷ್ಟು ಬೇಗ ಬಂದುಬಿಟ್ಟಿರಿ ? ಕಾಲೇಜು ಮುಗಿದು ಹೋಯ್ತಾ ? ಶಿಲ್ಪ ಈಗತಾನೇ ಹಾಲು ಕುಡಿದು ಮಲಗಿದಳು." ಅವಳ ಹಿಂದೆ ನಿಂತಿದ್ದ ರಘುವನ್ನು ಗಮನಿಸಿ ಕೇಳಿದರು. "ಈತ ಯಾರು, ನಿಮ್ಮ ಜೊತೆ ಕೆಲ್ಸ ಮಾಡ್ತಾ ಇದ್ದಾರಾ ?"

ಶುಭ ಅವರಿಗೆ ಉತ್ತರಿಸದೇ ಒಳಗೆ ನಡೆದಳು. ರಘು ಅವಳನ್ನು ಹಿಂಬಾಲಿಸಿದ.

"ಜಯಮ್ಮ, ಮಾಲತಿ ಎಲ್ಲಿ ?"

ಶುಭ ಕೇಳಿದಳು.

"ಮಾರ್ಕೆಟ್ಟಿಗೆ ಹೋಗಿದ್ದಾರೆ !" ಜಯಮ್ಮ ಹೇಳಿದರು.

ಕೊಂಚ ಹೊತ್ತು ಅಲ್ಲೇ ನಿಂತಿದ್ದು ಒಳಗೆ ಹೋದರು. ಹಾಲಿನಲ್ಲಿದ್ದ ಕುರ್ಚಿಯೊಂದನ್ನು ತೋರಿಸಿದಳು ಶುಭ.

"ಕೂತ್ಕೊಳ್ಳಿ ರಘು !"

ರಘು ಕುಳಿತು ಜೇಬಿಗೆ ಕೈ ಹಾಕಿದಾಗ ಶುಭ ಹೇಳಿದಳು.

"ಮನೆಯಲ್ಲಿ ಸ್ಮೋಕ್ ಮಾಡಬೇಡಿ."

"ಇದು ನಿಮ್ಮ ಹೊಸ ಮನೇನಾ ?" ರಘು ಮನೆಯ ಸುತ್ತಾ ಕಣ್ಣಾಡಿಸಿದನು.

ಶುಭ ಅವನೆದುರಿನ ಕುರ್ಚಿಯಲ್ಲಿ ಕುಳಿತಳು.

"ಹೌದು. ಇದು ನನ್ನ ಫ್ರೆಂಡ್ ಮಾಲತಿಯ ಮನೆ. ಇಲ್ಲಿ ಅವಳು, ಅವಳ ತಮ್ಮ ಇಬ್ಬರೇ ಇರೋದೂ. ಜಯಮ್ಮ ಅವಳ ಮನೆಯ ಅಡಿಗೆಯವರು !"

ರಘು ಕ್ಷೀಣವಾಗಿ ನಕ್ಕನು.

"ಬಾಡಿಗೆಯೆಷ್ಟು ?"

"ಅದಿನ್ನೂ ಮಾತಾಡಿಲ್ಲ....ಅವಳೂ ಒಬ್ಬಳೇ ಬೇಸರ ಎಂದಳು-ನಾನೂ ಒಬ್ಬಳೇ....ಸರಿಹೋಗುತ್ತೆ !"

ಶುಭ ಉತ್ತರಿಸಿದಾಗ ರಘು ಎದ್ದು ನಿಂತನು.

"ಶಿಲ್ಪನನ್ನು ತೋರಿಸುತ್ತೀರಾ ?"

"ಯಾಕೆ ಮಲಗಿದ್ದಾಳಲ್ಲ !" ಶುಭ ಎದ್ದು ನಿಂತಳು.

"ಅವಳು ನನ್ನ ವಾರ್ಡ್-ನನ್ನ ಜವಬ್ದಾರಿ. ನಾನು ಅವಳನ್ನು ಕರೆದುಕೊಂಡು ಹೋಗ್ತೀನಿ !"

ರಘು ಖಂಡಿತವಾಗಿ ಹೇಳಿದಾಗ ಶುಭ ಹೌಹಾರಿದಳು. ಎಷ್ಟು ಉದ್ಧಟತನ ಇವರದು !

"ನಿಮ್ಮ ವಾರ್ಡಿರಬಹುದು. ಆದರೆ ನನ್ನ ಮಗಳು !"

ಶುಭ ಕೆಂಡವಾದಳು.

"ಇರಬಹುದು. ನಿಮಗೆ ಯಾರ ಹಂಗೂ ಬೇಡವಲ್ಲ; ಮಗುವಿನದೂ ಯಾಕೆ ? ಶಿಲ್ಪನನ್ನು ಕರೆದುಕೊಂಡು ಹೊರಟುಹೋದರೆ ನಿಮ್ಮ ಪಾಡಿಗೆ ನೀವಿರಬಹುದು. ನಿಮಗ್ಯಾಕೆ ವೃಥಾ ತೊಂದರೆ !"

ರಘು ವಂಗ್ಯವಾಗಿ ಹೇಳಿದಾಗ ಶುಭ ಮತ್ತೂ ಸಿಡಿದೆದ್ದಳು.

"ನನ್ನ ಸ್ವಂತ ವಿಷಯದಲ್ಲಿ ತಲೆ ಹಾಕಲು ನಿಮಗೆ ಅಧಿಕಾರವಿಲ್ಲ ! ನೀವ್ಯಾರು ಇದಕ್ಕೆಲ್ಲಾ ಅಡ್ಡಿ ಮಾಡಲು ?"

"ನಾನ್ಯಾರೆಂದು ನಿಮಗೆ ಹೇಳಬೇಕಾಗಿಲ್ಲ. ರವಿಯ ಕಡೆಯ ಸಂಬಂಧ ಕಡಿದುಕೊಳ್ಳಲು ಇಷ್ಟಪಡುವುದಾದರೆ ಬಾಯಿ ಬಿಟ್ಟು ಹೇಳಿಬಿಡಬಹುದಲ್ಲ !"

ರಘು ಗಂಭೀರವಾಗೇ ಉತ್ತರಿಸಿದ.

"ಓಹೋ, ಹಾಗೋ ! ರವಿಯ ಸಂಬಂಧದ ಸಲುವಾಗಿ ನೀವೆಲ್ಲಾ

ನನಗೆ ಹಿಂಸೆ ಮಾಡ್ತೀರಾ ? ರವಿ ಕಣ್ಮುಚ್ಚಿದ ದಿನವೇ ಆ ಅನುಬಂಧ ಕಡಿದು ಹೋಯಿತು. ನನಗೆ ಯಾವ ಬಂಧನವೂ ಬೇಡಾ....!"

ಶುಭ ಕೆಂಪಗಾದಳು. ಅವಳ ಕೈ ಅವಳ ಕೊರಳಲ್ಲಿನ್ನೂ ಉಳಿದಿದ್ದ ಕರಿಮಣಿಯ ಸರದ ಮೇಲೆ ಹೋಯಿತು.

"ಈ ಬಂಧನವೂ ಬೇಡ !"

ಶುಭ ಅದನ್ನು ಕಿತ್ತಿದಾಗ ರಘು ಬೆಚ್ಚಿದ. ಕರಿಮಣಿಯ ಸರ ಕಡಿದು ಕೆಳಗೆ ಬಿತ್ತು.

"ಶುಭಾ !"

ರಘು ಚೀರಿದನು. ಶುಭ ಮುಖ ಮುಚ್ಚಿ ಅಳತೊಡಗಿದಳು.

"ನನಗ್ಯಾಕೆ ಸಾವು ಬರೋಲ್ಲ. ಸಾಯೋಕೂ ಬಿಡೋಲ್ಲ–ಬದ್ಕೋಕೂ ಬಿಡೋಲ್ಲ !"

ರಘು ಬಗ್ಗಿ ಕಡಿದುಬಿದ್ದಿದ್ದ ಕರಿಮಣಿಯನ್ನು ಕೈಗೆ ತೆಗೆದು ಕೊಂಡನು. ಅದನ್ನು ತನ್ನ ಜೇಬಿನೊಳಗಿಟ್ಟುಕೊಂಡನು.

"ನಮ್ಮ ಸಂಬಂಧ ಕಡಿದುಹಾಕಿಬಿಟ್ಟಿರಲ್ಲ. ಸರಿ, ನಾನಿನ್ನು ಬರ್ತೀನಿ. ಆದರೆ ಶಿಲ್ಪ ನನ್ನವಳೆಂಬುದನ್ನು ಮರೆಯಬೇಡಿ !"

ರಘು ಹೊರಟಾಗ ಶುಭ ಕಣ್ಣೀರಿನಲ್ಲಿ ತೊಯ್ದ ಮುಖವೆತ್ತಿ ನೋಡಿದಳು ! ರಘೂ ರಘೂ, ಹೊರಟೇ ಹೋದರೆ ! ಬಾಗಿಲಿಗೆ ಬೆನ್ನು ಮಾಡಿ ಹೋಗುತ್ತಿದ್ದ ರಘುವನ್ನು ನೋಡಿದಳು. "ನಾನೇನು ಮಾಡಿಬಿಟ್ಟೆ, ನಾನೇನು ಮಾಡಿಬಿಟ್ಟೆ !" ಅವಳೆದೆ ಢವಢವನೆ ಹೊಡೆದುಕೊಂಡಿತು. ತಾನೇನು ಮಾಡುತ್ತಿರುವೆನೆಂಬ ಪರಿಜ್ಞಾನವಿರಲಿಲ್ಲ. ಎದ್ದು ಅವನ ಹಿಂದೆ ಓಡಿದಳು.

"ರಘೂ ! ರಘೂ !"

ಅವಳ ಧ್ವನಿಯಲ್ಲಿದ್ದ ಆರ್ತತೆಯನ್ನು ಗಮನಿಸಿದ ರಘು ಸರಕ್ಕನೇ ಹಿಂತಿರುಗಿ ನೋಡಿದಾಗ ಶುಭ ಓಡಿ ಬಂದು ಅವನನ್ನು ಎರಡು ಕೈಗಳಿಂದಲೂ ಅಪ್ಪಿ ಹಿಡಿದುಬಿಟ್ಟಳು.

"ರಘೂ....ನನ್ನನ್ನು ಬಿಟ್ಟು ಹೋಗಬೇಡಿ !"

ಅವಳು ಅವನೆದೆಗೆ ಒರಗಿ ಬಿಕ್ಕಿದಾಗ ರಘು ಅಧೀರನಾದನು. ಅವಳ

ತಲೆಯ ಮೇಲೆ ಅವನು ಕೈಯಿಟ್ಟು ಸಮಾಧಾನಮಾಡಲೆತ್ನಿಸಿದಾಗ ಅವನಿ ಗರಿವಿಲ್ಲದೆಯೆ ಅವನ ಕೈಗಳು ಅವಳನ್ನು ಅಪ್ಪಿ ಹಿಡಿದವು.

"ಶುಭಾ–ಶುಭಾ....ನಾನು ನಿಮ್ಮನ್ನು ಬಿಟ್ಟು ಹೋಗುವುದಿಲ್ಲ !"

ರಘು ಅವಳ ಮುಖವೆತ್ತಿ ಹಿಡಿದನು. "ನೋ ಶುಭ, ನಾನು ನೀವಿಲ್ಲದೇ ಬದುಕುವ ಹಾಗಿದ್ದೇನೆಯೇ ?"

ಹೊರಗಡೆ ಬಾಗಿಲ ಬಳಿ ಸದ್ದು ಕೇಳಿ ರಘು ಶುಭನನ್ನು ಹಿಂದೆ ಸರಿಸಿದನು. ಬಾಗಿಲ ಬಳಿ ನಿಂತಿದ್ದವಳನ್ನು ನೋಡುತ್ತಲೇ ಶುಭ ಅವಳತ್ತ ಧಾವಿಸಿದಳು.

"ಮಾಲತಿ....ಮಾಲತಿ, ನಾನು ಇಲ್ಲಿರುವುದಿಲ್ಲ--ಇವರ ಜೊತೆ ಹೋಗು ತ್ತೇನೆ !"

ಶುಭನ ವಯಸ್ಸಿನವಳಿರಬಹುದು. ಕೊಂಚ ಸ್ಥೂಲವಾದ ಶರೀರ—ಗಂಭೀರವಾದ ಮುಖ--ರಘು ಅವಳಿಗೆ ಕೈ ಮುಗಿದನು.

"ನಾನು ರಘುನಂದನ್ ಅಂತ–ಶುಭಾ ಬ್ರದರ್-ಇನ್–ಲಾ !"

ತನ್ನ ಭುಜದ ಮೇಲೆ ತಲೆಯಿಟ್ಟು ಅಳುತ್ತಿದ್ದ ಶುಭನ ಬೆನ್ನು ಸವರುತ್ತಾ ಮಾಲತಿ ಹೇಳಿದಳು "ನಾನು ಮಾಲತಿ....ಶುಭ, ನಾನೂ ಕ್ಲಾಸ್ ಮೇಟ್ಸ್ ಆಗಿದ್ವಿ. ಶ್ !-ಶುಭ ನಿಲ್ಲಿಸು ಅಳು. ನಿನಗೆಲ್ಲಿ ಬೇಕೋ ಅಲ್ಲಿರು ! ಅವಕ್ಯಾಕೆ ಅಳು...!"

ರಘು ನಯವಾಗಿ ಕೆಮ್ಮಿದ.

"ಶುಭಾ, ಬಟ್ಟೆ ಬರೆಯೆಲ್ಲ ಜೋಡಿಸಿಕೊಳ್ಳುವುದಿಲ್ಲವೇ ? ಬೇಗ ರೆಡಿ ಯಾಗಬೇಕು—ನನಗೆ ಕೆಲಸ ಇದೆ !"

ಮಾಲತಿ ಅವನ ಗುಟ್ಟನ್ನು ಅರಿತಳು.

"ಹೌದು, ಶುಭ ಬೇಗ ಬಟ್ಟೆ ಜೋಡಿಸಿಕೋ....ಹೋಗು--ಜಯಮ್ಮ ಎಲ್ಲಿ ? ಶಿಲ್ಪಾಕ ಬಟ್ಟೆ ಜೋಡಿಸಲಿ !"

ಶುಭ ಕಣ್ಣೊರಸಿಕೊಂಡು ಒಳಗೆ ಹೋದಾಗ ಮಾಲತಿ ರಘುವಿನತ್ತ ತಿರುಗಿದಳು.

"ಕೂತ್ಕೊಳ್ಳಿ, ನಿಂತೇ ಇದ್ದಿರಲ್ಲಾ !"

ರಘು ಕುಳಿತು ನಿಟ್ಟುಸಿರಿಟ್ಟಾಗ ಮಾಲತಿ ಅವನನ್ನು ಕೇಳಿದಳು.

"ಏನಾದ್ರೂ ಕೂಲಾಗಿ ಕುಡಿಯುಲು ಮಾಡಿ ಕೊಡ್ತೀನಿ. ತುಂಬಾ ಸುಸ್ತಾಗಿರಬೇಕು !"

"ಬೇಡಾ--ಪ್ಲೀಸ್....ಶುಭ, ನಿಮಗೆ ವೃಥಾ ತೊಂದರೆ ಕೊಟ್ಟಿದ್ದರೆ ದಯವಿಟ್ಟು ಕ್ಷಮಿಸಿ."

ರಘು ಮೆಲ್ಲನುಸುರಿದನು. ಶುಭನ ಉದ್ರೇಕದಿಂದ ಅವನಿನ್ನೂ ಚೇತರಿಸಿ ಕೊಂಡಿರಲಿಲ್ಲ.

"ನೋಡಿ, ನೀವು ಹಾಗೆ ಹೇಳಬಾರದು. ಶುಭ ನಾನು ಅಕ್ಕತಂಗಿಯು ಹಾಗೆ. ನಿನ್ನೆ ಅವಳು ಬಂದಾಗ ತುಂಬಾ ಉದ್ವೇಗಗೊಂಡಿದ್ದಳು-ರಾತ್ರಿಯೆಲ್ಲಾ ಕಣ್ಣೀರು ಹಾಕಿದಳು. ನಿದ್ದೆಯಲ್ಲೆಲ್ಲಾ ಏನೇನೋ ಕನವರಿಕೆ--ನಂಗೆ ಭಯ ವಾಗಿತ್ತು. ಅವಳತ್ತಿಗೆಗೆ ತಿಳಿಸಿಬಿಡೋಣವೆಂದಿದ್ದೆ. ಬೆಳಿಗ್ಗೆ ನಾರ್ಮಲ್ ಆಗಿ ಕಾಲೇಜಿಗೆ ಹೊರಟಾಗ ನನಗೆ ನೆಮ್ಮದಿಯಾಯಿತು. ನೀವು ಇವೊತ್ತು ಬರದಿದ್ದರೆ ಖಂಡಿತ ನಾನು ಶುಭನ ಅಣ್ಣನ ಮನೆಗೆ ಹೋಗಿ ಹೇಳುತ್ತಿದ್ದೆ--ಅವಳಿಗೆ ಮನಸ್ಸೇ ಸರಿಯಿಲ್ಲ. ಯೂ ಬೆಟರ್ ಕನ್‌ಸಲ್ಟ್ ಎ ಡಾಕ್ಟರ್. ಯಾಕೆಂದರೆ ಶುಭ ಹೀಗೆ ಆಡಿದ್ದು ನಾನು ನೋಡೇ ಇರಲಿಲ್ಲ !"

ಮಾಲತಿ ಹೇಳಿದಾಗ ರಘುವಿಗೂ ಆ ಮಾತು ನಿಜವೆನಿಸಿತು.

"ಸಧ್ಯ, ಅವಳನ್ನು ಮನೆಗೆ ಕರೆದುಕೊಂಡು ಹೋಗಿಬಿಟ್ಟರೆ ಸಾಕು. ಆಮೇಲೆ ಐ ವಿಲ್ ಡೂ ದಿ ನೀಡ್‌ಫುಲ್ !...ನಿಮ್ಮ ಮನೆ ಅಡಿಗೆಯವರು ನೋಡಿ ಏನೆಂದುಕೊಂಡರೋ !"

ಮಾಲತಿ ಅವನ ಮಾತಿಗೆ ನಕ್ಕುಬಿಟ್ಟಳು. ಅವಳು ನಕ್ಕಾಗ ರಘು ಅವಳನ್ನು ಧೀರ್ಘವಾಗಿ ನೋಡಿದನು. ಕೊಂಚ ಕೋಲಾದ ಮುಖವಾದರೂ ತಿದ್ದಿದ ಕಣ್ಣು, ಮೂಗು, ಬಾಯಿ-ದೊಡ್ಡದಾದ ಹಣೆ. ನೀಳವಾದ ಮೂಗು ಅವಳ ಮುಖಕ್ಕೆ ಗಂಭೀರತೆಯನ್ನು ಕೊಟ್ಟಿತ್ತು. ನಕ್ಕಾಗ ಆ ಗಂಭೀರತೆ ಇದ್ದಕ್ಕಿದ್ದ ಹಾಗೆ ಮಾಯವಾಗಿ ಬಿಸಿಲಲ್ಲಿ ಮಲಗಿದ್ದ ಕೊಳದ ನೀರನ್ನು ಇದ್ದಕ್ಕಿದ್ದಹಾಗೆ ಕಲ್ಲೆಸೆದು ಕದಕಿದಾಗ ಅಲೆಅಲೆಯಾಗಿ ನೀರು ಕದಡಿಹೋಗುವಂತೆ ಅವಳ ಮುಖದ ಮೇಲೆ ನಗು ನಿಧಾನವಾಗಿ ಅಲೆ ಅಲೆಯಾಗಿ ಹರಡಿ ಕಣ್ಣುಗಳಲ್ಲಿ ಮಿಂಚುತ್ತಿತ್ತು. ಮುಖದ ಸುತ್ತ

ನಯವಾಗಿ ಆವರಿಸಿದ್ದ ಕೂದಲು ಅವಳ ಮುಖಕ್ಕೆ ಶೋಭೆ ನೀಡಿತ್ತು. ರಘು ಅವಳನ್ನೇ ನೋಡಿದಾಗ ಅವಳು ಕೊಂಚ ಗಂಭೀರಳಾದಳು.

"ನಮ್ಮ ಜಯಮ್ಮನೇ ! ಅವಳು ಏನೂ ಅಂದ್ಕೊಳೋಲ್ಲ. ನನ್ನನ್ನ ನಿಮ್ಮ ಶಿಲ್ಪನ ವಯಸ್ಸಿನಿಂದ ಸಾಕಿ ಬೆಳೆಸಿದವಳು."

ರಘು ಮೌನವಾಗಿ ಕುಳಿತಿರುವುದು ಕಂಡು ಮಾಲತಿ ಹೇಳಿದಳು.

"ನೀವು ಏನೂ ಸಲ್ಲದ ಯೋಚನೆ ಮಾಡಬೇಡಿ. ಐ ಕ್ಯಾನ್ ಅಂಡರ್ ಸ್ಟ್ಯಾಂಡ್ ಶುಭ, ನಾನು ಶುಭನ ಹಾಗೆ-ಐ ಲಾಸ್ಟ್ ಮೈ ಹಸ್ಬೆಂಡ್ ಸಿಕ್ಸ್ ಯಿಯರ್ಸ್ ಬ್ಯಾಕ್....ಆಗ ನಾನೂ ಹೀಗೆ ಆಡಿದ್ದೆ. ವೀ ವರ್ ಮ್ಯಾರೀಡ್ ಫಾರ್ ಓನ್ಲೀ ಓನ್ ಯಿಯರ್ ! ಶುಭನಿಗೆ ಶಿಲ್ಪಳಾದರೂ ಇದ್ದಾಳೆ. ನಂಗೆ ಯಾರೂ ಇಲ್ಲ, ಎಕ್ಸೆಪ್ಟ್--ಪ್ಲೆಂಟಿ ಆಫ್ ಮನಿ, ಅಂಡ್ ಪ್ರಾಪರ್ಟೀ. ಹಿ ಡಿಡ್ ನಾಟ್ ಲೀವ್ ಎನಿಥಿಂಗ್ ಎಲ್ಸ್ ಫಾರ್ ಮೀ....ನಾನು ಅವರ ನೆನಪಿನಲ್ಲೇ ಆರು ವರ್ಷ ಕಳೆದಾಯ್ತು. ನನ್ನ ತಮ್ಮನನ್ನು ಅದಕ್ಕೇ ಇಲ್ಲೇ ಇಟ್ಕೊಂಡಿದ್ದೇನೆ-ಅನಗೆ ತಂದೆ, ತಾಯಿ, ಅತ್ತೆ ಮಾವ-ನಿಮ್ಮಂತ--ಬ್ರದರ್ --ಇನ್‌ಲಾ ಯಾರೂ ಇಲ್ಲ....!"

ಮಾಲತಿಯ ಗಂಟಲು ಗದ್ಗದವಾಯಿತು.

"ಐ ಆಮ್ ಸಾರಿ !" ರಘು ಮೆಲ್ಲನುಸುರಿದನು : "ರಿಯಲಿ ವೆರಿ ಸಾರಿ. ನಿಮಗೆ ಮದುವೆ ಆಗಿಲ್ಲ ಅಂದ್ಕೊಂಡಿದ್ದೆ !"

ಶುಭ ಅಷ್ಟರಲ್ಲಿ ಬಂದು ಅವರಿಬ್ಬರೆದುರು ನಿಂತಿದ್ದರಿಂದ ರಘು ಎದ್ದು ನಿಂತನು.

"ಎಲ್ಲಾ ಪ್ಯಾಕ್ ಆಯ್ತಾ ?"

"ಆಯ್ತು, ರೂಮಿನಲ್ಲಿ ಶಿಲ್ಪ ಮಲಗಿದ್ದಾಳೆ ಎತ್ತಿಕೊಂಡು ಬಂದರೆ ಆಯ್ತು."

ಶುಭ ಶಾಂತಳಾಗಿ ಹೇಳಿದಾಗ ರಘು ಅಚ್ಚರಿಗೊಂಡನು.

"ಮಾಧೂ ಕೈಲಿ ಸಾಮಾನು ಇಡಿಸ್ತೀನಿ—ಶಿಲ್ಪನ್ನ ನಾನು ಎತ್ತಿಕೊಂಡು ಬರ್ತೀನಿ....ನಡಿ ಶುಭ !"

ಮಾಲತಿ ಹೇಳಿದಾಗ ಶುಭ ರಘುವಿಗೆ ಮುಂಚೆ ಕಾರಿನಲ್ಲಿ ಹೋಗಿ ಕುಳಿತಳು. ಹಿಂದಿನ ಮನೆಯ ಹುಡುಗ ಮಾಧು ಸಾಮಾನುಗಳನ್ನಿರಿಸಿದ್ದ.

ಮಾಲತಿ ಶಿಲ್ಪನನ್ನೆತ್ತಿಕೊಂಡು ಬಂದು ಶುಭನ ಕೈಗಿತ್ತಳು. ರಘು ಅವಳಿಗೆ ಕೈಮುಗಿದು ಹೇಳಿದ.

"ಗ್ಲಾಡ್ ಟು ಹ್ಯಾವ್ ಮೆಟ್ ಯೂ....ನಮ್ಮ ಮನೆಗೊಂದು ಸಲ ಖಂಡಿತ ಬರಬೇಕು."

"ಶೂರ್‌ಲೀ....ನಮ್ಮ ಶುಭನನ್ನು ಹುಷಾರಾಗಿ ನೋಡ್ಕೊಳ್ಳಿ !"

ಮಾಲತಿ ಕೈ ಮುಗಿದಳು.

ಮನೆ ಸೇರುವವರೆಗೆ ರಘು, ಶುಭ ಮಾತಾಡಲಿಲ್ಲ. ತೊಡೆಯ ಮೇಲೆ ಮಲಗಿಸಿಕೊಂಡಿದ್ದ ಶಿಲ್ಪನನ್ನೇ ನೋಡುತ್ತಾ ಮೌನವಾಗಿ ಕಣ್ಣೀರು ಹಾಕುತ್ತಿದ್ದಳು ಶುಭ. ರಘುವಿನ ಮನಸ್ಸಿನ ತುಂಬಾ ಮಾಲತಿ, ಅವಳು ಹೇಳಿದ ಮಾತೇ ತುಂಬಿತ್ತು.

ಪೋರ್ಟಿಕೋ ಮುಂದೆ ಕಾರು ನಿಂತಾಗ, ರಘು ಇಳಿದು ಶುಭನ ಕಡೆಯ ಬಾಗಿಲು ತೆಗೆದಾದರೂ ಶುಭ ಕುಳಿತ ಜಾಗದಿಂದ ಕದಲಲಿಲ್ಲ. ರಘು ಅವಳ ತೊಡೆಯ ಮೇಲಿದ್ದ ಶಿಲ್ಪನನ್ನು ಎತ್ತಿಕೊಂಡು ಶುಭನನ್ನು ಎಚ್ಚರಿಸಿದನು.

"ಮನೆ ಬಂತು ಶುಭ...."

ಶುಭ ತಕ್ಷಣ ಕಣ್ಣೊರಸಿಕೊಂಡು ಇಳಿದಳು.

ಬಂದವರು ಯಾರೆಂದು ನೋಡಲು ಬಂದ ಬಾಬು ಶುಭನನ್ನು ಕಂಡು ಅಚ್ಚರಿಗೊಂಡನು.

"ಬಾಬೂ, ಈ ಮಗೂನ್ನ ಎತ್ಕೊಂಡು ಹೋಗಿ ನನ್ನ ರೂಮಿನಲ್ಲಿ ಮಲಗಿಸು...."

ರಘು ಬಾಬುವಿನ ಕೈಗೆ ಮಗುವನ್ನಿತ್ತನು. ಶುಭನ ಕೈ ಹಿಡಿದು ಹೇಳಿದನು.

"ಶುಭಾ, ಅಪ್ಪನ ಮುಂದೆ ನೀವು ಕಣ್ಣೀರು ಹಾಕಬೇಡಿ. ಅವರು ನಾನು ನಿಮಗೆ ಹಿಂಸೆ ಮಾಡಿ ಕರೆತಂದಿದ್ದೇನೆ ಎಂದುಕೊಂಡಾರು."

ಮಗುವನ್ನು ಮಲಗಿಸಲು ಒಳಗೆ ಬಂದ ಬಾಬುವಿನಿಂದ ಶುಭ ಬಂದಿರುವುದನ್ನರಿತ ಶಿವರಾಮಯ್ಯನವರು ಹೊರಬಾಗಿಲಿಗೆ ಬಂದರು. ಶುಭನ ಕೈ ಹಿಡಿದು ನಿಂತಿದ್ದ ರಘುವನ್ನು ನೋಡಿ ಹಾಕಿದ್ದ ತಮ್ಮ ಕನ್ನಡಕ ಸರಿ

ಮಾಡಿಕೊಂಡರು. ಅವರ ಮಬ್ಬುಕವಿದ ಮನಸ್ಸಿನಲ್ಲಿ ಒಂದು ಕ್ಷಣ ಆಸೆಯ ಹೊಂಗಿರಣ ಮೂಡಿತು. ಅದನ್ನು ತೋರ್ಪಡಿಸದೇ ಮುಗುಳ್ನಕ್ಕರು.

"ಬಾಮ್ಮಾ ತಾಯಿ, ಬಾ....ಯಾಕೆ ಮೈ ಸರಿಯಿಲ್ಲವೇನು ?"

ಉತ್ತರ ಕೊಟ್ಟವನು ರಘು.

"ಇಲ್ಲಪ್ಪಾ, ಅವರಿಗೆ ಮೈ ಸರಿಯಾಗಿಲ್ಲ...ಅದಕ್ಕೇ ಇಲ್ಲಿಗೆ ಕರೆದು ಕೊಂಡು ಬಂದುಬಿಟ್ಟೆ."

"ಒಳ್ಳೆಯ ಕೆಲಸ ಮಾಡಿದೆ. ಇಲ್ಲಿ ಹಾಯಾಗಿ ನಾಲ್ಕು ದಿನ ಸುಧಾರಿಸಿ ಕೊಳ್ಳಲಿ... "

ಶಿವರಾಮಯ್ಯನವರು ಶುಭನತ್ತ ವಾತ್ಸಲ್ಯದ ದೃಷ್ಟಿ ಹರಿಸಿದರು.

ಒಳಗೆ ಬಂದು ಸೋಫಾದ ಮೇಲೆ ಕುಳಿತಿದ್ದ ಶುಭನ ಕತ್ತಿನಲ್ಲಿದ್ದ ಕರಿ ಮಣಿ ಕಾಣದಿದ್ದಾಗ ಮೂಡಿಬಂದ ಪ್ರಶ್ನೆಯನ್ನು ಶಿವರಾಮಯ್ಯನವರು ಗಂಟಲಲ್ಲೇ ಅಡಗಿಸಿದರು. ಬಾಬುವಿಗೆ ಹೇಳಿ ರಘು ಬಿಸಿ ಬಿಸಿಯಾಗಿ ಕಾಫಿ ಮಾಡಿಸಿ ಅವಳಿಗೆ ತಂದಿತ್ತನು.

"ಇದನ್ನ ಕುಡೀರಿ, ಸ್ವಲ್ಪ ಹಾಯಾಗಿರುತ್ತೆ. ನಾನು, ಬಾಬು ಶಿಲ್ಪನ್ನ ನೋಡ್ಕೋತೀವಿ, ನೀವು ಅವಳ ವಿಚಾರ ಯೋಚಿಸಬೇಡಿ."

ಶುಭ ತುಟಿ ಪಿಟಕ್ಕೆನ್ನದೆ ಕುಡಿದಳು. ಅವಳ ವಿಪರೀತ ಮೌನ ರಘುವಿಗೇಕೋ ಸರಿತೋರಲಿಲ್ಲ. ಆಗಿನ ಉದ್ರೇಕ–ಈಗಿನ ಮೌನ, ಡಾಕ್ಟರಿಗೆ ತೋರಿಸಬೇಕು. ಮಾಲತಿ ಹೇಳಿದುದು ನಿಜ. ಶುಭನ ಮನಸ್ಥಿತಿ ಸರಿಯಿಲ್ಲ. ಅವಳನ್ನು ಡಾಕ್ಟರ ಹತ್ತಿರ ಕರೆದುಕೊಂಡು ಹೋದರೆ ಬರುವಳೋ ಇಲ್ಲವೊ ! ತಾನೇ ಡಾಕ್ಟರ್ ಮಾಥ್ಯೂಸ್ ಬಳಿ ಹೋಗಿ ತಿಳಿಸಬೇಕು. ಒಬ್ಬಳೇ ಇಲ್ಲಿದ್ದರೆ ಮತ್ತೆ ಅವಳಿಗೆ ಬೇಸರವುಂಟಾಗಬಹುದು. ತಂದೆಗೆ ಈ ವಿಷಯ ತಿಳಿಯದಿರುವುದು ಮೇಲು. ಫೋನು ಮಾಡಿದರೆ ಶುಭ, ತಂದೆ ಇಬ್ಬರಿಗೂ ತಿಳಿಯುತ್ತದೆ–ತನಗೆ ಬೆಂಬಲಿಗ ಬಾಬುವೊಬ್ಬನೇ ! ಶುಭನಿಗೆ ಕತೆ ಪುಸ್ತಕಗಳೆಂದರೆ ಹುಚ್ಚು !

ರಘು ನಿರ್ಧಾರಕ್ಕೆ ಬಂದು ಮಹಡಿಯ ಮೇಲೆ ಹೋಗಿ ಅವಳು ಕತೆ ಪುಸ್ತಕಗಳನ್ನು ಇಟ್ಟಿದ್ದ ಬೀರುವಿನ ಬಾಗಿಲು ತೆರೆದ ಒಂದೊಂದು ಪುಸ್ತಕ ತೆಗೆದಾಗಲೂ ಅದರ ಒಳಪುಟದಲ್ಲಿ ಶುಭನ ' ಹೆಸರು, "ಶುಭಾ--ರವಿನಂದನ್"

ಅವುಗಳನ್ನು ಬೀರುವಿನಲ್ಲಿಟ್ಟು ಬಾಗಿಲು ಮುಚ್ಚಿ ಬೀಗ ಹಾಕಿದನು. ತಾನು ಹಿಂತಿರುಗಿ ಬರುವವರೆಗೆ ಶುಭ ಏನು ಮಾಡಬೇಕು! ರೂಮಿನ ಮೂಲೆಯಲ್ಲಿದ್ದ ಹೂವಿನ ಕುಂಡ ಕಣ್ಣಿಗೆ ಬಿತ್ತು. ಅದರ ಮೇಲೆ ಧೂಳು ಮುಚ್ಚಿತ್ತು. ಹೂವಿಲ್ಲದೇ ಕುಂಡ ಬರಿದಾಗಿತ್ತು. ತಕ್ಷಣ ರಘುವಿಗೆ ಹೊಸ ಯೋಚನೆ ಹೊಳೆಯಿತು. ಮಹಡಿಯಿಳಿದು ಬಂದನು. ಶಿಲೆಯಲ್ಲಿ ಕಡೆದ ವಿಗ್ರಹದಂತೆ ಕುಳಿತಿದ್ದ ಶುಭನ ಎದುರಿಗೆ ಬಂದು ನಿಂತನು.

"ಶುಭಾ–ನೋಡಿ, ಮಧ್ಯಾಹ್ನ ನನ್ನ ನಾಲ್ಕೈದು ಜನ ಫ್ರೆಂಡ್ಸ್ ಬರ್ತಾರೆ....ದಯವಿಟ್ಟು ಮನೇನ ಸ್ವಲ್ಪ ಸರಿಯಾಗಿ ಡೆಕೊರೇಟ್ ಮಾಡ್ತೀರಾ? ನಂಗೆ ಏನೂ ಬರದು. ನೀವೇ ಏನಾದ್ರೂ ತಿಂಡಿಗಳನ್ನ ಸಜೆಸ್ಟ್ ಮಾಡಿ ಬಾಬು ಕೈಲಿ ಮಾಡಿಸ್ತೀರಾ?"

ಶುಭ ಕ್ಷೀಣವಾಗಿ ನಕ್ಕಳು.

"ನಂಗೆ ಎಲ್ಲಾ ಮರೆತುಹೋಗಿದೆ."

"ಪರ್ವಾಗಿಲ್ಲ ಜ್ಞಾಪಕ ಇರೋಷ್ಟೆ ಸಾಕು--ನೋಡಿ, ಫ್ಲವರ್ ವೇಸಸ್‌ನಲ್ಲಿ ಹೂವಿಟ್ಟು ಎಷ್ಟು ದಿನ ಆಯ್ತೋ! ಪ್ಲೀಸ್, ನನಗೋಸ್ಕರ ಕೊಂಚ ತೊಂದರೆ ತೊಗೊಂಡು ಇಷ್ಟು ಕೆಲಸ ಮಾಡ್ಕೊಡ್ತೀರಾ? ನಾನು ಈಗ ಹೋಗಿ ಅವರಿಗೆ ಬೇಕಾದ, ಸಿಗರೇಟು, ಡ್ರಿಂಕ್ಸ್ ತಂದ್ಬಿಡ್ತೀನಿ...."

ಶುಭ ಆಗಲೆಂದು ತಲೆಯಲ್ಲಾಡಿಸಿದಳು. ರಘು ಬಾಬುವನ್ನು ಮರೆಗೆ ಕರೆದು ಹೇಳಿದನು,

"ನೋಡು ಬಾಬು, ಅಮ್ಮಾವ್ರಿಗೆ ಮೈಗೆ ಸರಿಯಿಲ್ಲ. ಅವರು ಹೇಳಿದ ಹಾಗೆ ಮಾಡು....ನಾನು ಡಾಕ್ಟರ್ ಹತ್ತಿರ ಹೋಗಿಬರುತ್ತೇನೆ."

ಬಾಬು ಮೌನವಾಗಿ ತಲೆಯಲ್ಲಾಡಿಸಿದನು.

ಡಾಕ್ಟರ್ ಮಾಥ್ಯೂಸ್ ರಘು ಹೇಳಿದುದನ್ನೆಲ್ಲಾ ಕೇಳಿ ನಿಟ್ಟುಸಿರಿಟ್ಟರು.

"ಪೂರ್ ಗರ್ಲ್, ಒಂದು ತರಹ ಡಿಪ್ರೆಷನ್ ಇರುತ್ತೆ, ಇಲ್ಲಾ ಹೈಪರ್ ಟೆನ್‌ಷನ್ ಡೆವಲಪ್ ಆಗುತ್ತೆ. ಆದಷ್ಟು ಅವರನ್ನು ಯಾವುದಾದರೂ ಕೆಲಸದಲ್ಲಿ ಮಗ್ನರಾಗಿರೋ ಹಾಗೆ ಮಾಡ್ಬೇಕೂ....ಟೀಚಿಂಗ್‌ಗೆ ಹೋಗಲಿ ಬಿಡಿ–ಮನೆಯಲ್ಲಿರೋಷ್ಟು ಹೊತ್ತು ಅವರಿಗೆ ಏನಾದರೂ ಕೆಲಸ ಹಚ್ಚಿಸಿ ರಾತ್ರಿಯ ಹೊತ್ತಿಗೆ ಮಲಗುವ ಮುನ್ನ ನಾನು ಅವರಿಗೆ ಟ್ರಾನ್‌ಕ್ವಿಲೈಸರ್ಸ್ ಬರೆದು

ಕೊಡ್ತೀನಿ. ಕೊಡಿ, ಸಾಕು ಐ ಡೋಂಟ್ ಥಿಂಕ್ ಎನಿತಿಂಗ್ ಈಸ್ ದಟ್ ಸೀರಿಯಸ್--ಈಗ ನೀವು ಹೋದ ತಕ್ಷಣ ಈ ಟ್ಯಾಬ್ಲೆಟ್ ಕೂಡಿ....ಚೆನ್ನಾಗಿ ನಿದ್ದೆ ಮಾಡ್ತಾರೆ. ದೆನ್ ಷಿ ವಿಲ್ ಬಿ ಆಲ್‌ರೈಟ್....ರಾತ್ರಿ ಒಂದು ಕೊಡಿ. ನಾಳೆಯಿಂದ ದಿನಾ ಬೆಳಿಗ್ಗೆ ಒಂದು, ರಾತ್ರಿ ಒಂದು ಕೊಡಿ ನಿದ್ದೆ ಮಾಡಿದಷ್ಟು ಮಾಡಲಿ. ಒಂದು ವೀಕ್ ಸಾಕು ...ನಾಳೆ ನಾಡಿದ್ದರಲ್ಲಿ ಬಿಡುವಾದಾಗ ನಾನು ಬಂದು ನೋಡ್ತೀನಿ "

ಅವನ ಕೈಗೆ ಟ್ಯಾಬ್ಲೆಟ್ಟುಗಳನ್ನು ಕೊಟ್ಟರು. ರಘು ಎದ್ದು ನಿಂತು ಕೈ ಮುಗಿದನು.

"ತುಂಬಾ ಥ್ಯಾಂಕ್ಸ್ ಡಾಕ್ಟರ್. ನೀವು ಬಿಜಿಯಾಗಿದ್ದಿರಿ, ತೊಂದರೆ ಕೊಟ್ಟೆ."

"ನಾಟ್ ಅಟ್‌ಆಲ್ ...ಯೂ ಆರ್ ವೆಲ್‌ಕಮ್ ಎನಿ ಟೈಂ ..."

ಡಾಕ್ಟರೂ ಕೈ ಮುಗಿದರು

ರಘು ಮನೆಗೆ ಬಂದಾಗ ಅಚ್ಚರಿಗೊಂಡನು. ಬೀರುಗಳಲ್ಲಿ ಸೇರಿಸಿದ ಬಣ್ಣ ಬಣ್ಣದ ಹೂವಿನ ಪರದೆಗಳು ಬಾಗಿಲಿಗೆ ಬಂದಿದ್ದವು....ಒಳಗೆ ಕಾಲಿಡುತ್ತಲೇ ಡ್ರಾಯಿಂಗ್ ರೂಮಿನಲ್ಲಿನ ಹೂವಿನ ಕುಂಡಗಳಲ್ಲಿ ಹೂವುಗಳು ನಗುತ್ತಿದ್ದವು. ಟೇಬಲ್ಲಿನ ಮೇಲೆ ಆಶ್‌ಟ್ರೇಗಳು ಬಂದಿದ್ದವು. ಮಿರಮಿರನೆ ಮಿರಗುತ್ತಿದ್ದ ಗಾಜಿನ ಲೋಟಗಳು ಟೇಬಲ್ಲಿನ ಮೇಲಿದ್ದವು. ಶುಭ ಎಲ್ಲೂ ಕಾಣಲಿಲ್ಲ. ಶಿಲ್ಪ ಶಿವರಾಮಯ್ಯನವರ ತೊಡೆಯ ಮೇಲೆ ಕುಳಿತು ಅವರ ಕನ್ನಡಕದ ಪೆಟ್ಟಿಗೆಯೊಂದಿಗೆ ಆಡುತಿತ್ತು.

ರಘುವನ್ನು ನೋಡಿ ಶಿಲ್ಪ ಶಿವರಾಮಯ್ಯನವರ ತೊಡೆಯಿಂದ ಇಳಿದು ಅವನತ್ತ ಬರಲು ಹವಣಿಸಿದಾಗ ಅವರು ನಕ್ಕರು.

"ನೋಡಿದ್ಯಾ, ತಾತನಿಗಿಂತ ಚಿಕ್ಕಪ್ಪಾನೇ ಹೆಚ್ಚು ಇವಳಿಗೆ "

ರಘು ಶಿಲ್ಪನನ್ನೆತ್ತಿ ಮುತ್ತಿಟ್ಟನು.

"ಹೌದು, ಇದು ನನ್ನ ಚಿನ್ನ ಮರಿ ; ಅದಕ್ಕೇ ನನ್ನ ಕಂಡರೆ ಮುದ್ದು."

ಮತ್ತೆ ಶಿಲ್ಪನನ್ನು ಶಿವರಾಮಯ್ಯನವರ ಕೈಗಿತ್ತು ಕೇಳಿದನು.

"ಶುಭಾ ಎಲ್ಲಿ ?"

"ಅಡಿಗೆ ಮನೇಲಿದ್ದಾಳೆ, ನೋಡು. ತಾನೇ ಏನೋ ತಿಂಡಿ ಮಾಡ್ತಾ ಇದ್ದಾಳೆ."

ರಘು ತನ್ನ ಕಣ್ಣುಗಳನ್ನು ತಾನೇ ನಂಬದಾದ. ಸೆರಗನ್ನು ಸೊಂಟಕ್ಕೆ ಕಟ್ಟಿ, ಸೀರೆಯ ನೆರಿಗೆಯನ್ನು ಎತ್ತಿ ಕಟ್ಟಿ ಸ್ಟೌವಿನ ಮುಂದೆ ನಿಂತು ಪಕೋಡ ಕರಿಯುತ್ತಿದ್ದಳು. ಶಾಖದಿಂದ ಮುಖ ಕೆಂಪಗಾಗಿತ್ತು. ಮೂಗಿನ ತುದಿಯಲ್ಲಿ ಸಣ್ಣ ಬೆವರು ಹನಿಗಳಿದ್ದವು. ಹಣೆಯ ಮೇಲಿನ ಬೆವರಿಗೆ ನಾಲ್ಕೈದು ದಾರಿ ತಪ್ಪಿದ ಮುಂಗುರುಳು ಅಂಟಿಕೊಂಡಿದ್ದವು. ಕಣ್ಣುಗಳಲ್ಲಿ ಉತ್ಸಾಹ ಚಿಮ್ಮಿ ಉಕ್ಕಿ ಹರಿದು ಕೆನ್ನೆಗೂ ಇಳಿದಿತ್ತು. ಅರೆ ಬಿರಿದ ತುಟಿಗಳಲ್ಲಿ ಕಿರುನಗು ಮೂಡಿತ್ತು. ಅವಳ ಪಕ್ಕದಲ್ಲಿ ಬಾಬುವಿಲ್ಲದಿದ್ದರೆ ರಘು ಖಂಡಿತವಾಗಿಯೂ ಹುಚ್ಚನಾಗುತ್ತಿದ್ದನು—ಇವಳು ಶುಭಾನೇ ? ಅವಳ ಆ ಮುಖ ಬಹಳ ಹಿಂದಿನ ನವಿನೆನಪು ಅವನಿಗೆ. ಅವಳನ್ನು ಅಲ್ಲೇ ಅಪ್ಪಿ ಮುದ್ದಾಡುವ ಮನಸ್ಸಾಯಿತು. ಉದ್ವೇಗದಿಂದ ಏರಿಳಿಯುತ್ತಿದ್ದ ಬಯಕೆ ತುಂಬಿದ್ದ ತನ್ನೆದೆಯನ್ನು ಅದುಮಿ ಹಿಡಿದು ಕೇಳಿದ.

"ಶುಭಾ, ಎಲ್ಲಾ ರೆಡಿ ತಾನೇ ?"

ಶುಭ ಅವನತ್ತ ಕಣ್ಣೆತ್ತಿ ನೋಡಿದಳು. ಅವಳ ಮುಖದಲ್ಲಿ ಮಂದ ಹಾಸ ಮೂಡಿತು.

"ಒನ್ ಮಿನಿಟ್ ರವಿ" ಆದರೆ ತಕ್ಷಣ ಅವಳ ಮುಖ ಕಳೆಗುಂದಿತು : "ಓಹ್....ನಾನು ಒಂದು ಗಳಿಗೆ ನಿಮ್ಮನ್ನ ರವಿ ಅಂದ್ಕೊಂಡುಬಿಟ್ಟೆ."

"ಇಟ್ ಈಸ್ ಆಲ್ ರೈಟ್....ಹಾಗೇ ಅಂದ್ಕೊಳ್ಳಿ."

ರಘು ತಟಕ್ಕನೇ ಹೇಳಿದಾಗ,

"ಬಾಬೂ....ನೀನು ಮಿಕ್ಕಿದ್ದು ಕರಿದು ಮುಗಿಸಿಬಿಡು."

ಶುಭ ಅಲ್ಲಿಂದ ಹೊರಗೆ ಶಿಲ್ಪನತ್ತ ನಡೆದಳು. ರಘು ನೀಳವಾಗಿ ಉಸಿರೆಳೆದುಕೊಂಡನು. ಕರಿಯುತ್ತಿದ್ದ ಬಾಬು ತನ್ನಷ್ಟಿಗೆ ತಾನೇ ಹೇಳಿಕೊಂಡನು.

'ರವಿಯಪ್ಪೋರ ಫ್ರೆಂಡ್ಸ್ ಬಂದಾಗ ಯಾವಾಗ್ಲೂ ಚಿಕ್ಕಮ್ಮಾವ್ರೇ ತಿಂಡಿ ಮಾಡ್ತಾ ಇದ್ದುದ್ದು.'

ರಘು ತನ್ನ ಕರ್ತವ್ಯದ ಕರೆಯತ್ತ ಓಗೊಟ್ಟನು—

"ಬಾಬೂ, ಅಮ್ಮಾವರದು ಊಟ ಆಯ್ತಾ ?"

"ಹೂಂ....ನಿಮ್ಮ ತಂದೆಯವರು ಬಲವಂತ ಮಾಡಿದ್ದರಿಂದ ಮಾಡಿದರು."

"ಹಾಗಾದರೆ ಒಂದು ಲೋಟ ನೀರು ಕೊಡು."

ರಘು ಬಾಬುವಿನ ಕೈಯಿಂದ ಒಂದು ಲೋಟ ನೀರು ತೆಗೆದುಕೊಂಡು ಬಂದಾಗ ಶಿಲ್ಪನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಶುಭ ಶೂನ್ಯದತ್ತ ದೃಷ್ಟಿ ಹರಿಸಿದ್ದಳು.

"ಶುಭಾ... ನಿಮಗೆ ಆಯಾಸ ಜಾಸ್ತಿ ಅಂತೆ- ಈ ಟ್ಯಾಬ್ಲೆಟ್ ಡಾಕ್ಟರ್ ಕೊಟ್ಟಿದ್ದಾರೆ, ತಗೊಳ್ಳಿ."

ರಘು ಅವಳ ಮುಂದೆ ಅಂಗೈಯ್ಯಲ್ಲಿದ್ದ ಟ್ಯಾಬ್ಲೆಟ್ ಹಿಡಿದಾಗ ಶುಭ ತಲೆಯಲ್ಲಾಡಿಸಿದಳು.

"ಬೇಡಾ, ರಘು. ನನಗೆ ಯಾವ ಮೆಡಿಸನ್ನೂ ಬೇಡಾ....ಲೆಟ್ ಮಿ ಬಿ ಅಲೋನ್."

ರಘು ಶಿಲ್ಪನನ್ನು ಮುತ್ತಿಟ್ಟು ಹೇಳಿದನು.

"ನೀವು ತೆಗೆದುಕೊಳ್ಳದಿದ್ದರೆ ಶಿಲ್ಪನಾಣೆ !"

ಶುಭ ಕ್ಷೀಣವಾಗಿ ನಕ್ಕಳು.

"ನಿಮಗೆ ನನ್ನ ವೀಕ್ ಪಾಯಿಂಟ್ಸ್ ಚೆನ್ನಾಗಿ ಗೊತ್ತು. ಅದಕ್ಕೇ ಹೀಗೆ ಆಡಿಸುತ್ತೀರ....ಕೊಡಿ."

ಅವನ ಕೈಲಿದ್ದ ಟ್ಯಾಬ್ಲೆಟ್ಟನ್ನು ನುಂಗಿ ನೀರು ಕುಡಿದಳು.

"ನಿಮ್ಮ ರೂಮಿಗೆ ಹೋಗಿ ಕೊಂಚ ಮಲಗಿ....ನಾನು ನನ್ನ ಸ್ನೇಹಿತರು ಬರುತ್ತಲೇ ಎಬ್ಬಿಸುತ್ತೇನೆ."

ಶುಭ ಮನೆಯ ಸುತ್ತ ಕಣ್ಣಾಡಿಸಿದಳು.

"ನನಗೆ ಮಲಗಲು ಹೆದರಿಕೆ ರಘೂ....ನಾನೊಬ್ಬಳೇ ಈ ಮನೆಯಲ್ಲಿ ಮಲಗಲಾರೆ....!"

ಅವಳ ಕಣ್ಣುಗಳು ಭಯದಿಂದಲೋ ಹಳೆಯ ನೆನಪಿನಿಂದಲೋ ಅಗಲ ವಾದವು. ರಘು ಅವಳೆದುರು ನಿಂತು ತನ್ನ ಭುಜ, ಎದೆ ತಟ್ಟಿಕೊಂಡನು.

"ಇಲ್ಲಿ ನೋಡಿ, ನಾನಿದ್ದೇನೆ. ಹೆದರಿಕೆಯೇಕೆ ನಿಮಗೆ ?"

"ಆ ರೂಮಿನಲ್ಲಿ ನಾನು ಒಬ್ಬಳೇ ಮಲಗುವುದಿಲ್ಲ !"

ಶುಭ ಖಂಡಿತವಾಗಿ ಹೇಳಿದಾಗ ರಘು ಅವನನ್ನು ಒತ್ತಾಯಪಡಿಸಲು ಅಸಮರ್ಥನಾದನು.

"ಹಾಗಾದರೆ ಬನ್ನಿ, ನನ್ನ ರೂಮಿನಲ್ಲಿ ಮಲಗಿ, ಬಾಬುವನ್ನು ನಿಮ್ಮ ರೂಮಿನ ಬಾಗಿಲ ಬಳಿ ಮಲಗಲು ಹೇಳುತ್ತೇನೆ."

ಮಗ-ಸೊಸೆಯರ ಮಾತು ಕೇಳುತ್ತಿದ್ದ ಶಿವರಾಮಯ್ಯನವರು—

"ನಡಿ ತಾಯಿ, ಮಲಗು. ನಾನು ನಿನ್ನ ಜೊತೆಗಿರುತ್ತೇನೆ"

ಎಂದಾಗ ರಘುವಿಗೆ ಕರುಳು ಹಿಂಡಿದಂತಾಯಿತು.

"ಏಳಿ, ಬನ್ನಿ. ಅಪ್ಪ ಇರುತ್ತಾರಂತೆ."

ಶುಭನಿಗೆ ಹೇಳಿದಾಗ ಶುಭನಿಗೆ ಏನೂ ಉತ್ತರ ಹೇಳಲಾಗಲಿಲ್ಲ. ಎದ್ದು ನಿಂತು ಶಿಲ್ಪನನ್ನು ಎತ್ತಿಕೊಂಡಾಗ ಅವಳಿಗೆ ತಲೆ ತಿರುಗಿದಂತಾಯ್ತು. ಅದನ್ನು ಗಮನಿಸಿದ ರಘು ಹೇಳಿದ.

"ಇಲ್ಲಿ ಕೊಡಿ, ಶಿಲ್ಪನನ್ನು ನಾನೆತ್ತಿಕೊಂಡು ಬರುತ್ತೇನೆ."

ಅವಳ ಕೈಯಿಂದ ಶಿಲ್ಪನನ್ನೆತ್ತಿಕೊಂಡನು. ಸೊಸೆ ಎದ್ದುದು ಕಂಡು ಶಿವರಾಮಯ್ಯನವರೂ ಎದ್ದರು. ಅದನ್ನು ಗಮನಿಸಿದ ಶುಭ,

"ಬೇಡಾ....ನಾನೊಬ್ಬಳೇ ಮಲಗುತ್ತೇನೆ ; ಪರವಾಗಿಲ್ಲ...."

ಅವಳ ಕಣ್ಣುಗಳು ತೇಲಾಡುತ್ತಿದ್ದವು.

"ರಘೂ, ನಂಗೇನೋ ಒಂದು ತರಹ ಆಗ್ತಾ ಇದೆ. ಆ ಮೆಡಿಸನ್ ನಂಗೆ ಸರಿಹೋಗೋಲ್ಲಾಂತ ಕಾಣ್ಸುತ್ತೆ."

ಶುಭಳ ಕಣ್ಣುಗಳು ಅರ್ಧ ಮುಚ್ಚಿದವು. ರಘು ಮಗುವನ್ನು ಶಿವರಾಮಯ್ಯನವರ ಕೈಗಿತ್ತು ಕೆಳಗೆ ಬೀಳುವುದರಲ್ಲಿದ್ದ ಶುಭನನ್ನು ಹಿಡಿದು ಕೊಂಡಾಗ ಅವನಿಗೇ ಒರಗಿ ಕಣ್ಮುಚ್ಚಿಕೊಂಡಳು. ರಘು ಅವಳನ್ನು ಅನಾ ಮತ್ತು ಎತ್ತಿಕೊಂಡು ತನ್ನ ರೂಮಿಗೆ ಕರೆದೊಯ್ದು ಹಾಸಿಗೆಯ ಮೇಲೆ ಮಲಗಿಸಿದನು. ಅವಳ ಕತ್ತಿನವರೆಗೆ ಹೊದಿಕೆ ಹೊದಿಸಿ ಕೆದರಿದ್ದ ಮುಂಗುರುಳು ಹಿಂದೆ ಸರಿಸಿ ಹೇಳಿದನು. "ಶುಭ, ನೀನು ಹೆದರಬೇಡ, ನಾನಿದ್ದೇನೆ."

ಶುಭಳಿಗೆ ಅವನ ಮಾತು ಕೇಳಿಸಲಿಲ್ಲ. ಅವಳು ಗಾಢ ನಿದ್ರೆಯಂಚಿ ನಲ್ಲಿದ್ದಳು. ಮಗುವನ್ನೆತ್ತಿಕೊಂಡು ಬಂದು ಅಲ್ಲೇ ನಿಂತಿದ್ದ ಶಿವರಾಮಯ್ಯ

ನವರು ನಯವಾಗಿ ಕೆಮ್ಮಿದರು. ರಘು ಅವರತ್ತ ನೋಡಿದಾಗ ಅವನ ಕಣ್ಣುಗಳು ಗೊಂದಲಗೊಂಡವು.

"ನೀವು ಶಿಲ್ಪನನ್ನು ಇಲ್ಲಿ ಕೊಡೀಪ್ಪಾ, ಅವಳು ಗುಜ್ಜಾನೆಮರಿಯಾಗಿದ್ದಾಳೆ. ಶುಭಸಿಗೆ ಡಾಕ್ಟರು ನಿದ್ದೆಗೆ ಔಷಧಿ ಕೊಟ್ಟಿದ್ದಾರೆ. ಅವರು ಸದ್ಯಕ್ಕೆ ಏಳುವುದಿಲ್ಲ !"

"ಯಾಕೆ ರಘು....ಏನಾಗಿದೆಯಂತೆ ?"

ಶಿವರಾಮಯ್ಯನವರು ಪ್ರಶ್ನಾರ್ಥಕವಾಗಿ ನೋಡಿ ಮಗುವನ್ನು ಅವನ ಕೈಗಿತ್ತರು.

"ಅವಳಿಗೆ ಮೆಂಟಲ್ ಅಪ್‌ಸೆಟ್ ಆಗಿದೆಯಂತೆ. ಒಂದು ವಾರ ಕಂಪ್ಲೀಟ್ ರೆಸ್ಟ್ ಕೊಡಿ ಅಂದಿದ್ದಾರೆ. ಅವರೂ ಬಂದು ನೋಡುತ್ತಾರಂತೆ. ಮಲಗಿ ಮಲಗಿ ಮರೆಯಲಿ ಅಪ್ಪಾ !"

ರಘು ಹೇಳಿದಾಗ ಅವರು ಅವನ ತಲೆ ಸವರಿದರು.

"ರವಿಯ ನೆನಪು ನನಗೆ-ಈ ಮುದುಕನಿಗೆ ಮುಪ್ಪು ತರಲಾರದು-ಬದುಕು ಹಾಳು ಮಾಡಲಾರದು—ಆದರೆ ರಘೂ ಅವಳಿನ್ನೂ ಚಿಕ್ಕೋಳು—ಅವಳು ಕೊರಗಿದರೆ ನನಗೆ ಹೊಟ್ಟೆಯಲ್ಲಿ ಬೆಂಕಿ ಹಾಕಿದ ಹಾಗಾಗುತ್ತೆ. ಅವಳನ್ನು ತಿನ್ನುತ್ತಾ ಇರುವ ನೆನಪು ಹೋಗುವ ಹಾಗೆ ಮಾಡಿ ಅವಳ ಬದುಕಿಗೊಂದು ದಾರಿಯಾಗಪ್ಪಾ ! ನೀನೇ ಅವಳಿಗೆ ಸರಿಯಾದವನು ನೋಡೂ !"

ರಘುವಿನ ಮೈಯಲ್ಲಿ ವಿದ್ಯುತ್ಸಂಚಾರವಾಯಿತು. ತಂದೆ ತನ್ನನ್ನು ಪರಿಹಾಸ್ಯಮಾಡುತ್ತಿಲ್ಲ ತಾನೆ! ಅವರತ್ತ ನೋಡಿದಾಗ ಅವರ ಮುಖ ಗಂಭೀರವಾಗಿತ್ತು.

ಮಧ್ಯಾಹ್ನ ಎಂದಿನಂತೆ ಮಲಗುವ ಮುನ್ನ ಶಿವರಾಮಯ್ಯನವರು ರಘುವನ್ನರಸಿಕೊಂಡು ಬಂದರು. ಸೋಫಾದ ಮೇಲೆ ಮಲಗಿ ಶಿಲ್ಪನನ್ನು ತನ್ನೆದೆಯ ಮೇಲೆ ಕುಳ್ಳಿರಿಸಿಕೊಂಡು ಅವಳೊಂದಿಗೆ ಆಡುತ್ತಾ ಮಲಗಿದ್ದ ಅವನನ್ನು ಕಂಡು ಸುಕ್ಕುಗಟ್ಟಿದ್ದ ತಮ್ಮ ಕೆನ್ನೆಗಳ ಮೇಲೆ ಕೈಯಾಡಿಸಿಕೊಂಡರು. ಅವರು ಬಂದುದನ್ನು ಕಂಡು ರಘು ಎದ್ದು ಕುಳಿತ.

"ಚಿನ್ನ ಮರಿ, ಕೆಳಗಿಳಿಯಮ್ಮಾ, ಮೂರು ಹೊತ್ತೂ ನಿನ್ನ ಜೊತೆ ಆಟ ಇದೆ. ಆಯ್ತಾ."

ಶಿಲ್ಪನನ್ನು ನೆಲದ ಮೇಲಿದ್ದ ಕಾರ್ಪೆಟ್ಟಿನ ಮೇಲಿಳಿಸಿ ಅವಳ ಮುಂದೆ ಆಟದ ಸಾಮಾನುಗಳನ್ನು ಸುರಿದನು.

"ಏನಪ್ಪಾ ? ಏನಾದರೂ ಮಾತಾಡುವುದಕ್ಕಿತ್ತೇ ?"

ತಂದೆಯ ಮುಂದೆ ಕುಳಿತನು.

"ಹೂಂ....ನೀನು ಬೇಸರಪಟ್ಟುಕೊಳ್ಳದಿದ್ದರೆ ಒಂದು ಮಾತು ಹೇಳ್ತೀನಿ" ಶಿವರಾಮಯ್ಯನವರು ಮೊಮ್ಮಗಳ ಆಟ ನೋಡುತ್ತಾ ಹೇಳಿದರು.

"ಹೇಳಪ್ಪಾ, ಅದಕ್ಕೇನು. ಅದ್ಯಾಕೆ, ನಾನೇನು ಬೇರೆಯವನೇ ?"

"ನೋಡಪ್ಪಾ, ಬೆಂಗಳೂರಿನಲ್ಲಿ ಎಲ್ಲಾದ್ರೂ ಒಂದು ಚೆನ್ನಾಗಿರೋ ಮನೆ ನೋಡು....ಖರೀದಿಗೆ....ನಂಗೆ ಇಲ್ಲಿ ಹೊತ್ತು ಹೋಗೋಲ್ಲ. ಅಲ್ಲಿ ಯಾರಾದ್ರೂ ನನ್ನ ಹಳೇ ಸ್ನೇಹಿತರು ಸಿಕ್ತಾರೆ !"

ಶಿಲ್ಪನ ಕೈಗೊಂದು ಬೊಂಬೆಯನ್ನಿತ್ತರು. ರಘುವಿನ ಹುಬ್ಬುಗಳು ಗಂಟ್ಟಿಕ್ಕಿದವು.

"ಅಲ್ಲಿ ನೀವೊಬ್ಬರೇ ಏನ್ಮಾಡ್ತೀರಿ ? ನಿಮ್ಮ ಜೊತೆಗೆ ?"

"ನನ್ನ ಸೊಸೆ ಇದ್ದಾಳಲ್ಲಾ ! ನಂದಿನಿ. ಭಾಸ್ಕರಾನೂ ಇರ್ತಾರೆ— ಹೇಗೋ ಹಾಗೂ ಹೀಗೂ ಆಗುತ್ತೆ !"

ರಘು ಹಣೆಯ ಮೇಲೆ ಕೈಯಾಡಿಸಿಕೊಂಡನು. ತಂದೆಗೆ ಒಂಟಿತನಕ್ಕಿಂತ ಬಲವಾದ ಕಾರಣವಿರಬೇಕು.

"ಯಾಕಪ್ಪಾ, ಈ ಮನೆ ಏನಾಗಿದೆ ? ಇದನ್ನ ಏನು ಮಾಡೋಣ ?"

"ನೋಡು, ನಂಗೆ ಇಲ್ಲಿದ್ದರೆ ಅವಳ ನೆನಪು, ರವಿಯ ನೆನಪು ಬರುತ್ತೆ ಪಾಪ. ಆ ಮಗೂ, ಶುಭನ್ನ ನೋಡು ಎಷ್ಟು ಕೊರಗುತ್ತಾಳೆ. ನಾನು ಅಲ್ಲಿ ಮನೆ ಮಾಡಿದರೆ ಅವಳಿಗೊಂದು ಆಸರೆಯಾಗುತ್ತೆ. ನಾನೂ ಅವಳೂ ಅಲ್ಲಿರ್ತೀವಿ, ನೀನು ಇಲ್ಲಿ ನೋಡ್ಕೋ....ಅಲ್ಲಿಗೆ ಬರ್ತಾ ಹೋಗ್ತಾ ಇದ್ರೆ ಆಯ್ತು. ನಾಳೆ ಈ ಮುದ್ದು ಮರಿ ದೊಡ್ಡೋಳಾದ್ರೆ ಸ್ಕೂಲಿಗೆ ಹೋಗೋದು ಬೇಡ್ವೆ ? ನಾಲ್ಕು ಮಕ್ಕಳ ಜೊತೆ ಸೇರೊದು ಬೇಡ್ವೆ ?"

ರಘು ನಿರುತ್ತರನಾದನು. ತಂದೆಯ ಮಾತು ಸತ್ಯ. ಅಲ್ಲಿ ಮನೆ ಮಾಡಿದರೆ ಶುಭ ಕೆಲಸಕ್ಕೆ ಹೋಗುವುದಕ್ಕೂ ಸುಲಭ-ಶಿಲ್ಪ ಎರಡು ಮೂರು ವರ್ಷಗಳಲ್ಲಿ ಸ್ಕೂಲಿಗೆ ಹೋಗಬೇಕು ! ತಂದೆ ಶುಭಸಿಗಾಗಿ ಹೇಳುತ್ತಿದ್ದಾರೆ !

"ಯಾಕಪ್ಪಾ, ನಾನು ಹೇಳಿದ ಮಾತು ನಿನಗೆ ಸರಿಬರಲಿಲ್ಲವೇ ?" ಮಗನ ಮೌನ ಕಂಡು ಕೇಳಿದರು.

"ಹಾಗೇನಿಲ್ಲ, ನೀವು ಹೇಳಿದ್ದನ್ನೇ ಯೋಚಿಸ್ತಾ ಇದ್ದೆ. ಆಗಲಿ–ಶುಭನ ಕಾಲೇಜಿಗೆ ಹತ್ತಿರವಾಗಿಯೇ ಒಂದು ಮನೆ ನೋಡಿದರಾಯಿತು." ರಘು ಶಿಲ್ಪನನ್ನು ಮತ್ತೆ ಎತ್ತಿಕೊಂಡು, "ಎಲ್ಲಕ್ಕಿಂತ ಈ ರಾಜಕುಮಾರಿಗೆ ಫ್ರೆಂಡ್ಸ್ ಬೇಕಲ್ಲಾ ! ಸ್ಕೂಲು ಬೇಕಲ್ಲಾ ?" ಕೆನ್ನೆಗೆ ಮುತ್ತಿಟ್ಟನು.

"ನೋಡಪ್ಪಾ, ಅದಕ್ಕೆ ಹಾಲು ಗೀಲು ಕುಡಿಸ್ಬೇಕೇನೋ....ಅವರಮ್ಮ ಮಲಗಿರಲಿ. ಬಾಬೂಗೆ ಹೇಳು, ಬಿಸಿಕೊಡಲಿ. ಕುಡಿಸಿ ಕೊಂಚ ಮಲಗಿಸು!"

ಶಿವರಾಮಯ್ಯನವರು ಎದ್ದು ತಮ್ಮ ರೂಮಿಗೆ ನಡೆದರು.

ಂ ಂ ಂ ಂ

"ಸಾರ್, ಪುಟ್ಟಮ್ಮೋರು ಬರ್‍ತಾರಾ ? ಏನು ಮಾಡ್ಬೇಕೂ ಅವರಿಗೆ ?"

ಬಾಬುವಿನ ದನಿ ರಘುವಿಗೆ ಕೇಳಿಸಲಿಲ್ಲ. ತಂದೆಯ ಮಾತಿನಂತೆ ಭಾಸ್ಕರ, ನಂದಿನಿಗೆ ಹೇಳಿ ದೊಡ್ಡ ಆವರಣವಿದ್ದ ಮನೆಯನ್ನು ಕೊಂಡಾಗಿತ್ತು. ಶುಭನ ಮನಸ್ಥಿತಿಯ ವಿಷಯ ನಂದಿನಿಗೆ ತಿಳಿಸಿ ಅವಳನ್ನು ಶುಭ ಕೊಂಚ ಸುಧಾರಿಸಿಕೊಳ್ಳುವವರೆಗೆ ಮನೆಯಲ್ಲಿರಿಸಿಕೊಂಡು ಅನಂತರ ಹೊಸ ಮನೆಯಲ್ಲಿ ಹೊಸ ಸಂಸಾರಕ್ಕೆ ಅಣಿಮಾಡಲು ಕೇಳಿಕೊಂಡಾಗಿತ್ತು. ಒಂದು ವಾರ ಚೇತರಿಸಿಕೊಂಡ ಮೇಲೆ ಶುಭ ಸ್ವಲ್ಪ ಬದಲಾಯಿಸಿದ್ದಳು. ಮಾತಿಗೆ ಮುಂಚೆ ಬರುತ್ತಿದ್ದ ಅಳು ನಿಂತಿತ್ತು. ತನ್ನ ಮಾವನವರೂ ತಾನೂ ಬೇರೆ ಮನೆಗೆ ಹೋಗುವ ಸಂಗತಿ ಕೇಳಿ ಅವಳಿಗೆ ಹೊಸ ಬೆಳಕು ಕಂಡಾಗಿತ್ತು. ಆದರೆ ತಂದೆ, ಶುಭ, ಶಿಲ್ಪ ಹೊರಟಾಗ ವ್ಯಥೆಪಟ್ಟವನು ತಾನೊಬ್ಬನೇ !

ಯಾರ ವ್ಯಥೆಯ ಹಂಗೂ ಇಲ್ಲದೆ ಕಾಲ ಓಡಿತ್ತು. ಶುಭ ಕೆಲಸಕ್ಕೆ ಹೋಗುತ್ತಿದ್ದಳು. ಮನೆಯಲ್ಲಿ ಅವಳಿಗೆ ಸಹಾಯಕಳಾಗಿ ಸಣ್ಣಯ್ಯನ ಮಗಳು ದೇವಿಯನ್ನು ನೇಮಿಸಲಾಗಿತ್ತು. ಅವಳು ಮಾವನ ಸೇವೆ, ಮಗಳ ಸೇವೆ, ಹೊರಗಿನ ಕೆಲಸ ಇವುಗಳಲ್ಲಿ ತನ್ಮಯಳಾಗಿರುತ್ತಿದ್ದರಿಂದ ಕೊಂಚ ಕೊಂಚವಾಗಿ ರವಿಯ ನೆನಪು ಅಳಿಯುತಿತ್ತು.

ಪ್ರತಿ ವಾರ ರಘು ಹೋಗಿಬರುತ್ತಿದ್ದನು. ಬೇಕೆಂದರೆ ಫೋನು ಮಾಡಿ

ಶುಭ ಅವನನ್ನು ಕರೆಯುತ್ತಿದ್ದಳು. ಹಬ್ಬ ಹರಿದಿನಗಳಲ್ಲಿ ರಘು ಅಲ್ಲಿಗೇ ಹೋಗುತ್ತಿದ್ದನು. ಮಗಚಿಕೊಂಡು ಮುಂದೆ ಹೋಗುತ್ತಿದ್ದ ಶಿಲ್ಪ ಈಗ ಮನೆತುಂಬಾ ಪುಟ್ಟ ಪುಟ್ಟ ಹೆಜ್ಜೆಯಿಟ್ಟು ನಡೆಯುತ್ತಿದ್ದಳು. ಬಾಯಿ ತುಂಬಾ ಮುದ್ದು ಮಾತು. ಶಿವರಾಮಯ್ಯನವರಿಗಂತೂ ಮೊಮ್ಮಗಳಿದ್ದರೆ ಸಾಕು. ಶಿಲ್ಪನಿಗೆ ರಘುವನ್ನು ಕಂಡರೆ ಪ್ರಾಣ. ಅವನ ಮುಖ ನೋಡಿ ದರೆ ಸಾಕು, ಯಾರ ಬಳಿಗೂ ಹೋಗುತ್ತಿರಲಿಲ್ಲ.

ಈಚೀಚೆಗೆ ನರ್ಸರಿಗೆ ಹೋಗತೊಡಗಿದ್ದಳು. ನೀಲಿಯ ಫ್ರಾಕ್, ಬಿಳಿಯ ಬ್ಲೌಸ್ ಹಾಕಿ ಭುಜಕ್ಕೊಂದು ಅವಳಿಗಿಂತ ದೊಡ್ಡದಾದ ಬ್ಯಾಗು ತಗಲಿಸಿಕೊಂಡು, ಕರಿಯ ಶೂಸು, ಕರಿಯ ಕಾಲು ಚೀಲ ಹಾಕಿಕೊಂಡು ಆಯಾ ಜೊತೆ ಹೊರಟರೆ ಅವಳು ಕಣ್ಮರೆಯಾಗುವವರೆಗೂ ಶುಭ, ಶಿವರಾಮಯ್ಯ ನವರು ನೋಡುತ್ತಿದ್ದರು.

ಅವಳನ್ನು ಸ್ಕೂಲಿಗೆ ಸೇರಿಸಲು ಹೋದಾಗ ಶುಭ ರಘು ಇಬ್ಬರೂ ಹೋಗಬೇಕಾಯಿತು. ಶುಭ ಕರೆದುಕೊಂಡು ಹೋಟಾಗ ಶಿಲ್ಪ ಹಟಮಾಡಿ ದಳು.

"ಅಮ್ಮಾ, ನೀನೊಬ್ಳೇ ಬೇಲಾ. ಅಂಕಲ್ ಬಲ್ಬೇಕೂ-ನಂಜೊತೆ. ಇಲ್ದಿದ್ದೆ ನಾನು ಬರೋಲ್ಲ."

ಅವಳ ಹಟಕ್ಕೆ ಶುಭ, ರಘು ಇಬ್ಬರೂ ಮಣಿದರು. ಅವಳ ಹೆಸರು, ವಯಸ್ಸು ಕೊಟ್ಟು ಅಡ್ಮಿಟ್ ಮಾಡುವಾಗ ಅಪ್ಲಿಕೇಷನ್ ಫಾರಂನಲ್ಲಿ ಖಾಲಿ ಜಾಗ ಭರ್ತಿ ಮಾಡುವಾಗ ಪೇರೆಂಟ್ ಆರ್ ಗಾರ್ಡಿಯನ್ ಎನ್ನುವ ಕಡೆ ರಘು ಹಾಗೇ ಬಿಟ್ಟಾಗ ಶುಭ ನೋವಿನಿಂದ ಮುಖ ಚಿಕ್ಕದು ಮಾಡಿ ಕೊಂಡಳು

"ಯಾಕೆ ರಘು, ಹಾಗೇ ಬಿಟ್ಟಿರಿ ? ಎಲ್ಲಾ ನೀವೇ ಅಲ್ಲವೇ ಅವಳಿಗೆ ? ಬರೆಯಬಾರದೇ ?"

"ತಾಯಿಯಾಗಿ ನೀವಿದ್ದೀರಿ. ನಿಮ್ಮ ಹೆಸರು ಬರೆಯುತ್ತೇನೆ. ನಾ ನೆಷ್ಟಿದ್ದರೂ ಅಂಕಲ್ ತಾನೇ ಅವಳಿಗೆ !" ರಘು ಹೇಳಿದ.

"ರಘೂ !" ಶುಭ ಅವನತ್ತ ಆರ್ತಳಾಗಿ ನೋಡಿದಳು: "ಪ್ಲೀಸ್, ನನ್ನ ಮಗಳು ನಿಮಗೆ ಮಗಳಲ್ಲವೇ ?"

ಅವಳ ಮುಖ ಬಾಡಿದಾಗ ರಘು 'ಗಾರ್ಡಿಯನ್' ಎಂಬುದನ್ನು ಹೊಡೆದುಹಾಕಿ--'ಪೇರೆಂಟ್' ಮುಂದೆ ತನ್ನ ಹೆಸರು ಬರೆದಿದ್ದನು.

ನಂದಿನಿ ಹೇಳಿದ ಹಾಗೆ ಶುಭನನ್ನು ಕೈ ಹಿಡಿದು ತಾನು ಅವಳ ಬಾಳ ಬೆಳಕಾಗಬಹುದಾಗಿತ್ತು. ಆದರೆ ಶುಭ ರವಿಯನ್ನು ಮರೆಯುವವರೆಗೆ ಅವಳನ್ನು ತಾನು ಕೇಳುವುದಾದರೂ ಹೇಗೆ ? ಅಂದು ಕಿತ್ತೆಸೆದ ಕರಿಮಣಿ ಯಿನ್ನೂ ತನ್ನ ಬಳಿಯೇ ಇದೆ. ಅದನ್ನು ಅವಳಿಗೆ ಕೊಡುವ ರೀತಿ ಹೇಗೆ ? ಆ ವಿಷಯ ಪ್ರಸ್ತಾಪಿಸಲು ನಾಲ್ಕೈದು ಬಾರಿ ಪ್ರಯತ್ನಿಸಿ ವಿಫಲನಾಗಿದ್ದನು.

ಸಂಜಯನ ಮುಂಜಿಯ ದಿನ ಅಪಾರ ಆಸಕ್ತಿಯಿಂದ ಅಲಂಕರಿಸಿ ಕೊಂಡಿದ್ದ ಶುಭ, ಮುಖದಲ್ಲಿದ್ದ ಗಾಭೀರ್ಯ ಬಿಟ್ಟರೆ–ಬಲು ಚೆಲುವೆ–ಬದುಕಿನ ಬಿರುಗಾಳಿಗೆ, ಮಳೆಗೆ, ಸಿಕ್ಕಿ ಪರಿಪಕ್ವವಾದ ಪೂರ್ಣ ಫಲ–ಅಚ್ಚ ನೀಲಿಯ ಜರಿಯ ಸೀರೆ, ಎತ್ತಿಕಟ್ಟಿದ್ದ ತುರುಬು, ಕಂಡೂ ಕಾಣದಂತಿದ್ದ ಹಣೆಯ ಕುಂಕುಮ, ಕೈಗೆರಡು ಚಿನ್ನದ ಬಳೆ–ಕತ್ತಿನಲ್ಲಿದ್ದ ಒಂದೆಳೆ ಚಿನ್ನದ ಸರ–ಕಿವಿಯಲ್ಲಿನ ವಜ್ರದೋಲೆ--ನಿಷ್ಕಲ್ಮಶವಾದ ಗಂಭೀರ ಮುಖದಲ್ಲಿ ಸೌಮ್ಯ ವಾದ ಹಲ್ಲುಗಳು, ಅರೆ ಬಿರಿದ ತುಟಿಗಳು, ಅದೇ ನುಣ್ಗಲ್ಲ, ಹೊಳಪುಗೆನ್ನೆ.... ಅವಳನ್ನು ಕಾರಿನಲ್ಲಿ ಮುಂಜಿಯ ಮನೆಗೆ ಕರೆದೊಯ್ಯಲು ಬಂದ ರಘು ಅವಳನ್ನು ಮತ್ತನಾಗಿ ನೋಡಿದನು.

"ಯೂ ಲುಕ್ ವಂಡರ್‌ಫುಲ್ ಟುಡೇ !"

"ಅಂದರೆ ಮುಂಚೆ ಚೆನ್ನಾಗಿರಲಿಲ್ಲವೆಂದೇ ?" ಶುಭ ಕಣ್ಣು ಮಿಟುಕಿಸಿ ನಕ್ಕಳು. ರಘು ಕಣ್ತುಂಬಾ ಅವಳನ್ನು ನೋಡಿದ.

"ಫಾರ್ ಮಿ, ಯೂ ಆರ್ ಆಲ್‌ವೇಸ್ ವಂಡರ್‌ಫುಲ್ ! ಇಲ್ಲೇ ಹೀಗೇ ಪ್ರಪೋಸ್ ಮಾಡಿಬಿಡ್ತಾ ಇದ್ದೆ !"

ಶುಭ ಅದಕ್ಕುತ್ತರವಾಗಿ ನಕ್ಕುಬಿಟ್ಟಿದ್ದಳು.

"ಡೋಂಟ್ ಟ್ರೈ ಟು ಅಫ್ಲರ್ಟ್ ವಿತ್ ಮೀ !" ಎಂದು ಕಾರಿನಲ್ಲಿ ತಾನೇ ಹೋಗಿ ಕುಳಿತುಕೊಂಡಿದ್ದಳು. "ಬನ್ನಿ ರಘು, ಜೋಕ್ ಮಾಡೋಕೆ ಹೊತ್ತಿಲ್ಲ-ಅತ್ತಿಗೆ ಸುಮ್ನೇ ಬಿಡೋಲ್ಲ !"

'ನಾನು ಜೋಕ್ ಮಾಡ್ತಾ ಇಲ್ಲ ; ನಿಜವಾಗಿಯೂ ಹೇಳ್ತಾ ಇದ್ದೀನಿ !' ಎಂದು ಹೇಳುವ ತವಕ ರಘುವಿಗೆ.

ಆದರೆ ಅವಳು ಶಿಲ್ಪನ ಕೂದಲಿಗೆ ಕಟ್ಟಿದ್ದ ರಿಬ್ಬನ್ನು ಸರಿಮಾಡುತ್ತಿದ್ದಳು.

"ಎಷ್ಟು ಸಲ ನಿಂಗೆ ರಿಬ್ಬನ್ ಕಟ್ಟೋದೂ ?"

ಆ ಮಾತು ಅಲ್ಲಿಗೇ ನಿಂತಿತ್ತು.

ಶಿಲ್ಪನ ಹುಟ್ಟಿದಬ್ಬದಂದು ಶುಭ ಅವಳ ಜೊತೆಯ ಮಕ್ಕಳನ್ನೆಲ್ಲಾ ಕರೆದಿದ್ದಳು. ಆ ಮಕ್ಕಳ ಮಧ್ಯೆ ಶಿಲ್ಪನನ್ನು ಎತ್ತಿಕೊಂಡು ಮಾತಾಡುತ್ತಾ ಕುಳಿತಿದ್ದ ರಘುವನ್ನು ನೋಡಿ ಶುಭ ನಕ್ಕಿದ್ದಳು.

"ನಿನ್ಗೆ ಮದ್ವೆಯಾಗಿದ್ರೆ ಇಂತಹದೊಂದು ನಿಮ್ಗೂ ಇರ್‍ತಾ ಇತ್ತು. ಅದೆಷ್ಟು ಪ್ರಾಣಾ ನಿನ್ಗೆ ಮಕ್ಕಳನ್ನು ಕಂಡರೆ !"

ರಘುವೂ ಶಿಲ್ಪನನ್ನು ಮುದ್ದಿಟ್ಟು ನಕ್ಕಿದ್ದ.

"ಹೂಂ, ಮದುವೆಯಾಗಿದ್ರೆ ತಾನೇ, ನಾನು ಮದ್ವೆಯಾಗೋ ಹುಡ್ಗಿ ನನ್ನ ಒಪ್ಕೊಳ್ಳಿಲ್ಲ. ಒಪ್ಕೊಂಡಿದ್ದಿದ್ರೆ ಇಂತಹ ಆರು ಮಕ್ಕಳು ಇರೋದೂ !"

"ಹಳೇ ಸಮಾಚಾರ ಬೇಡಾ....ಹೊಸದು ಹೇಳಿ !"

ಶುಭ ಹೇಳಿದಾಗ,

"ನನಗೇನೋ ಹಳೆಯದನ್ನೇ ಹೊಸದಾಗಿ ಮಾಡಿಕೊಳ್ಳುವ ಆಸೆ !"

ಎಂದನು. ಶುಭ ಅವನಿಗುತ್ತರ ಕೊಡುವ ಗೊಡವೆಗೇ ಹೋಗದೇ ಸುಮ್ಮನಾಗಿದ್ದಳು.

ಶನಿವಾರ, ಭಾನುವಾರ ಶಿಲ್ಪನ ಸ್ಕೂಲಿಗೆ ರಜವಿರುತ್ತಿದ್ದರಿಂದ ರಘು ಒಮ್ಮೊಮ್ಮೆ ಅವಳನ್ನು ಎಸ್ಟೇಟಿಗೆ ಕರೆದು ತರುತ್ತಿದ್ದುದುಂಟು. ಆಗ ಶಿಲ್ಪನಿಗೆ ಬಲು ಸಂತಸ. ತೋಟದ ತುಂಬಾ ಕುಣಿದು, ಕುಪ್ಪಳಿಸಿ, ಓಡಾಡುತ್ತಿದ್ದಳು. ಅವಳ ಬೆಂಗಾವಲಾಗಿ ಬಾಬು ಅವಳ ಜೊತೆಗೂ ಕುಣಿಯುತ್ತಿದ್ದನು, ಓಡುತ್ತಿದ್ದನು. ಬೆಳಿಗ್ಗೆ ಬಂದು ಸಂಜೆಯವರೆಗೂ ಆಡಿ, ಸೋತು ಸೊರಗಿದ ಮೇಲೆ ಅವಳನ್ನು ಮನೆಗೆ ವಾಪಸ್ಸು ಕರೆದುಕೊಂಡು ಹೋಗಿ ಬಿಡುತ್ತಿದ್ದನು.

ಒಮ್ಮೆ ಹಾಗೆ ಬಿಡಲು ಹೋದಾಗ ಶಿಲ್ಪ ರಘುವನ್ನು ಬಿಗಿಯಾಗಿ ಅಪ್ಪಿಬಿಟ್ಟಳು. "ನಾನೂ ಬರ್‍ತೀನಿ ಅಂಕಲ್....ನಾನು ನಿಂಜೊತೇನೆ ಇರ್‍ತೀನಿ !"

"ನಾಳೆ ಪುನಃ ಹೋಗುವಿಯಂತೆ !" ಶುಭ ಅವಳನ್ನು ಎತ್ತಿಕೊಂಡು ಸಮಾಧಾನಪಡಿಸಲೆತ್ನಿಸಿ ವಿಫಲಳಾದಳು.

"ನೀನು ಅಲ್ಲೇ ಬಂದುಬಿಲಮ್ಮಾ-ನಾನು ಅಂಕಲ್ ಜೊತೆಗೇ ಇಲ್ತೀನಿ, ನೀನೂ ಅಲ್ಲೇ ಇಲು ! ನಂಗೆ ಅಂಕಲ್ ಕಂಡಲೆ ತುಂಬಾ ಇಸ್ತ !" ರಘು ಶುಭನತ್ತ ನೋಡಿದನು. ಅವರಿಬ್ಬರ ಕಣ್ಣು ಒಂದಾಗಿತ್ತು.

"ಹೌದು ಶುಭ....ನಂಗೂ ಬೇಜಾರು. ಒಬ್ಬನೇ, ನಾನೂ-ಬಾಬು ! ನೀವೇಕೆ ಬರಬಾರದು ? ಶನಿವಾರ, ಭಾನುವಾರ ಬಂದರೆ ನಿಮಗೂ ಒಂದು ಔಟಿಂಗ್ ?"

ರಘು ಆಸೆಯ ದನಿಯಲ್ಲಿ ಹೇಳಿದ್ದ.

"ಬೇಡಾ ರಘು, ನನಗೆ ಆ ನೆನಪು ಮರುಕಳಿಸೋದು ಬೇಡಾ....ನನಗೆ ಯಾರೂ ಬಲವಂತ ಮಾಡಬೇಡಿ-ನನ್ನ ಹಟಮಾರಿಯೆಂದಗೂ ಪರವಾಗಿಲ್ಲ ....ಅಲ್ಲಿ ಮಾನಸಿಕವಾಗಿ, ದೈಹಿಕವಾಗಿ ಬಹಳ ನೊಂದಿದ್ದೇನೆ ! ಆ ಜಾಗ ನನಗೆ ಯಾವ ಸುಖವನ್ನೂ ಕೊಡಲಿಲ್ಲ !"

ಶುಭಳ ಕಣ್ಣುಗಳು ತುಂಬಿ ಬಂದಿದ್ದವು. ರಘು ಮಾತು ಮುಂದು ವರಿಸಲಾರವೇ ಸುಮ್ಮನಾಗಿದ್ದನು. ಶಿಲ್ಪ ಮಲಗುವವರೆಗೂ ಅವಳ ಜೊತೆ ಯಿದ್ದು ಅನಂತರ ಮನೆಗೆ ಹೋಗಿದ್ದನು.

ಶಿವರಾಮಯ್ಯನವರು ಈಚೀಚೆಗೆ ಅಧ್ಯಾತ್ಮದ ಕಡೆಗೆ ಗಮನ ಹೊರಳಿಸಿದ್ದರು. ಬೆಳಿಗ್ಗೆ ಸ್ನಾನಮಾಡಿ ಪೂಜೆಮಾಡಿ ಹೊರಟರೆ, ಊಟದ ಹೊತ್ತಿಗೆ ಬರುತ್ತಿದ್ದರು. ಮೊಮ್ಮಗಳೊಡನೆ ಆಡಿ ಮಧ್ಯಾಹ್ನ ವಿಶ್ರಮಿಸಿ ಸಂಜೆ ಪುರಾಣ, ಪುಣ್ಯಕಥೆಯಿರುವೆಡೆಗೆ ಹೋಗುತ್ತಿದ್ದರು. ಸಣ್ಣ ಪುಟ್ಟ ತೀರ್ಥ ಸ್ಥಳಗಳಿಗೆ ಹೋಗಿ ಬರುತ್ತಿದ್ದರು. ಅವರಿಗೆ ಮಗ, ಸೊಸೆಯರತ್ತ ಗಮನವಿರಲಿಲ್ಲ. ಬೇಕಾಗಿಯೇ ಅವರಿಬ್ಬರನ್ನೇ ಬಿಡುತ್ತಿದ್ದರು. ಅವರಿಗೊಂದು ದೂರದ ಆಸೆ.

ಯೋಚನೆಯಲ್ಲಿ ಮುಳುಗಿದ್ದ ರಘುವನ್ನು ಮತ್ತೆ ಬಾಬು ಎಚ್ಚರಿಸಿದ.

"ಸಾರ್, ಪುಟ್ಟಮ್ಮೋರಿಗೆ ಕೇಸರಿಭಾತೆಂದರೆ ಇಷ್ಟ. ಮಾಡಿಕೊಡಲೇ ? ತೆಗೆದುಕೊಂಡು ಹೋಗ್ತೀರಾ ?"

"ಏನೆಂದೆ ?" ರಘು ಎಚ್ಚೆತ್ತನು. ಬಾಬು ಮತ್ತೆ ಅದೇ ಪ್ರಶ್ನೆ ಕೇಳಿದಾಗ—"ಬೇಡಾ ಬಾಬೂ....ಇಲ್ಲಿಗೆ ಬಂದಾಗ ಅವಳನ್ನೇ ಕೇಳಿ ಮಾಡಿಕೊಡು."

ರಘು ಎದ್ದು ಮೈಮುರಿದು ನಿಂತನು ತಂದೆ ಒಂದು ವಾರದಿಂದ ಇಲ್ಲೇ ಇದ್ದರು. ಕೆಲವು ಲೆಕ್ಕಪತ್ರಗಳನ್ನು ತಾನೊಬ್ಬನೇ ಮಾಡುವುದು ಕಷ್ಟವಾದಾಗ ತಾನೇ ಕರೆದುಕೊಂಡು ಬಂದಿದ್ದನು. ಸಂಜೆ ಅವರು ಬರುವರೋ ಇಲ್ಲವೋ !

ಲೆಕ್ಕಪತ್ರಗಳನ್ನು ನೋಡುತ್ತಿದ್ದ ಶಿವರಾಮ್ಯನವರು ಮಗ ಎದುರಿಗೆ ಬಂದು ನಿಂತಾಗ ತಲೆಯೆತ್ತಿ ನೋಡಿದರು.

"ಏನಪ್ಪಾ ರಘೂ ?"

"ಸಂಜೆ ನನ್ಜೊತೆ ಬರ್ತೀರಾ ? ಏನೋ ಪಾರ್ಟಿಯಂತೆ ಶುಭ ಹೇಳಿದ್ದಾರೆ ?" ರಘು ಕೇಳಿದಾಗ ಶಿವರಾಮಯ್ಯನವರು ನಕ್ಕರು.

"ಇಲ್ಲಪ್ಪಾ-ಇವೆಲ್ಲಾ ಮುಗಿಸಿಬಿಟ್ಟೇ ನಾನು ಬರೋದೂ. ಪಾಪ, ನೀನೊಬ್ಬನೇ ಏನ್ಮಾಡ್ತೀ ? ನೀನೇ ಹೋಗಿ ಬಾ, ಹಾಯಾಗಿ ಕಾಲ ಕಳೆದು ಬಾ."

ರಘು ಸಂಜೆ ಹೊರಟಾಗ ತೋಟದಲ್ಲಿ ಬಿಟ್ಟಿದ್ದ ಹೂಗಳ ದೊಡ್ಡ ಗೊಂಚಲೊಂದನ್ನು ಕಾರಿನ ಹಿಂದಿನ ಸೀಟಿನ ಮೇಲಿಟ್ಟನು.

ಮನೆಯ ಮುಂದೆ ಕಾರು ನಿಂತಾಗ ಆಡುತ್ತಿದ್ದ ಶಿಲ್ಪ ರಘುವನ್ನು ನೋಡಿ ಓಡಿ ಬಂದಳು."

"ಅಂಕಲ್....ಅಂಕಲ್...ನನ್ನ ಕರ್ಕೊಂಡು ಹೋಗೋಕೆ ಬಂದ್ಯಾ ?

ರಘು ಅವಳ ಕೆನ್ನೆಗೆ ಮುತ್ತಿಟ್ಟು,

"ಹೂಂ...ನಿನ್ನ ಕರ್ಕೊಂಡು ಹೋಗೋಕೇ....ಬಂದಿರೋದು. ಯಾರು ಬಂದಿದ್ದಾರೆ ?"

"ಯಾರೋ ಆಂಟೀ ಬಂದಿದ್ದಾಳೆ !"

ರಘು ಬಂದುದನ್ನು ಕಿಟಕಿಯಿಂದ ನೋಡಿದ ಶುಭ ಹೊರಗೆ ಬಂದಳು.

"ಬನ್ನಿ....ನೀವು ಬರ್ತೀರೋ ಇಲ್ವೋ ಅಂತ ನಂಗೆ ಅನುಮಾನ ಇತ್ತು !"

"ಅದ್ಯಾಕೆ ? ನಾನು ಯಾವಾಗ್ಲಾದ್ರೂ ಮಾತಿಗೆ ತಪ್ಪಿ ನಡೆದಿದ್ದೇನಾ ?"

ರಘೂ ಅವಳತ್ತ ನೋಡಿದ. ಬಿಳಿಯ ಅಂಚು ಸೆರಗಿಲ್ಲದ ಸೀರೆಯಲ್ಲಿದ್ದ ನಿರಾಭರಣ ಸುಂದರಿ !

"ಹಾಗಲ್ಲಾ....ನನ್ನ ಫ್ರೆಂಡ್ಸ್‌ಗೆ ಪಾರ್ಟಿಯೆಂದರೆ....ನಿಮಗೆ ಆಕ್ವರ್ಡ್ ಆಗ್ಬೋದೂ ಅಲ್ವಾ, ಅದಕ್ಕೇ ! ಬನ್ನಿ—ನಿಮಗೇ ವೈಟ್ ಮಾಡ್ತಾ ಇದ್ವಿ !"

ಶುಭ ರಘುವನ್ನು ಒಳಗೆ ಕರೆದೊಯ್ದಳು.

"ಹಲೋ ! ಜ್ಞಾಪಕ ಇವೆ ತಾನೇ ?"

ಪರಿಚಿತ ಧ್ವನಿ ಕೇಳಿ ಆತ್ತ ತಿರುಗಿದನು. ಮಾಲತಿ ! ಹೌದು. ಅಂದು ಶುಭ ತನ್ನ ಕರಿಮಣಿ ಕಿತ್ತೆಸೆದ ದಿನ ಕಂಡಿದ್ದ ಮಾಲತಿ.

"ಹಲೋ ! ಜ್ಞಾಪಕ ಇಲ್ದೇ ಏನು ! ನಿಮ್ಮನ್ನ ಮರೆಯೋಕೆ ಆಗುತ್ಯೇ ?" ರಘು ಮುಗುಳ್ನಕ್ಕನು.

"ಕೂತ್ಕೊಳ್ಳಿ ರಘು, ಮಾತಾಡ್ತಾ ಇರಿ. ಬಂದೆ. ಕಾಫಿ, ತಿಂಡಿ ಇಲ್ಲಿಗೆ ತಂದ್ಬಿಡ್ತೀನಿ !" ಶುಭ ಒಳಗೆ ನಡೆದಳು.

"ನಂಗೊಂದು ಬಿಕ್ಕತ್ತು ಕೊಲಮ್ಮಾ !"

ಶಿಲ್ಪ ಅವಳ ಹಿಂದೆ ಹೊರಟಳು. ರಘು, ಕುರ್ಚಿಯ ಮೇಲೆ ಕುಳಿತನು.

"ನಿಮ್ಮನ್ನು ಪುನಃ ನಾನು ನೋಡಲೇ ಇಲ್ಲ !"

ರಘುವೇ ಮಾತು ಪ್ರಾರಂಭಿಸಿದನು. ಮಾಲತಿ ತಲೆ ತಗ್ಗಿಸಿದಳು. "ನಾನು ಊರು ಬಿಟ್ಟು ಆಗಲೇ ಎರಡು ವರ್ಷ ಆಯಿತು. ಜಮೀನಿರುವ ಹಳ್ಳಿಯಲ್ಲಿದ್ದೇನೆ. ಮೊನ್ನೆ ಊರಿಗೆ ಬಂದೆ ಅಷ್ಟೆ. ನನ್ನ ತಮ್ಮ ಇಲ್ಲೇ ಇದ್ದಾನೆ. ಹಾಗೇ ಶುಭನನ್ನು ನೋಡಿ ಹೋಗಲು ಬಂದೆ !"

ರಘು ಅವಳತ್ತ ನೋಡಿದ. ಅದೇ ಸೌಮ್ಯ, ಶಾಂತಿಯುತವಾದ ಮುಖ. ಗಾಂಭೀರ್ಯವೇ ಮೂರ್ತಿವೆತ್ತಿದ ಸೌಮ್ಯ ಚೆಲವು–ಅವಳನ್ನು ನೋಡಿದಾಗ ಅವನಿಗೆ ತಂಗಾಳಿಯಲ್ಲಿ ಬೆಂದ ದೇಹವನ್ನೊಡ್ಡಿದಂತಾಯಿತು.

"ಅದೇನು ಹಳ್ಳಿಗೆ ಹೋಗಿಬಿಟ್ಟಿರಿ ?"

ಅವಳು ಅದಕ್ಕುತ್ತರವಾಗಿ ಮುಗುಳ್ನಕ್ಕಳು, ಹೂವರಳಿದಂತಹ ನಗು.

"ಹೌದು, ನಮ್ಮಂತಹವರಿಗೇನು ಕೆಲಸ ಇಲ್ಲಿ. ಇರುವ ಆಸ್ತಿಯನ್ನು ರೂಢಿಸಿಕೊಂಡರೆ ನಾಳೆ ನನ್ನ ತಮ್ಮ–ತಮ್ಮನಿಗೆ ಮದುವೆಯಾಗಿ ಮಕ್ಕಳಾದರೆ ಅವುಗಳಿಗಾಗುತ್ತೆ !"

ಹಾಗಾದರೆ ಇವಳದೂ ಒಂಟಿ ಬಾಳು.

"ನಿಮಗೆ ಹಳ್ಳಿಯಲ್ಲಿ ಹೊತ್ತು ಹೋಗುವುದೇ ?"

ರಘು ಅವಳ ಸೆರಗಿನೊಂದಿಗಾಡುತ್ತಿದ್ದ ನೀಳವಾದ ಬೆರಳುಗಳನ್ನು ನೋಡಿದ.

"ಹೋಗದೇ ಏನು ? ಆ ಪ್ರಕೃತಿ ಸೌಂದರ್ಯ, ಆ ಗಿಡ, ಮರ, ಹೊಲ, ಅವುಗಳ ಕೆಲಸವೆಂದರೆ ನನಗೆ ಬೇಸರವೇ ಆಗುವುದಿಲ್ಲ. ಆಳುಗಳೊಡನೆ ನಾನೂ ಕೆಲಸ ಮಾಡುತ್ತೇನೆ. ನನಗೆ ಹೊತ್ತು ಹೋಗುವುದೇ ಗೊತ್ತಾಗುವುದಿಲ್ಲ !"

ಕಾಫಿ ತಿಂಡಿ ತಂದ ಶುಭನತ್ತ ತಿರುಗಿ ರಘು ನಗೆಯಾಡಿದ.

"ಕೇಳಿದ್ರಾ ಶುಭ, ನಿಮ್ಮ ಫ್ರೆಂಡ್‌ಗೆ ಹೊಲ, ಗದ್ದೆ ತೋಟಾಂದ್ರೆ ಹೊತ್ತು ಹೋಗೋದೇ ಗೊತ್ತಾಗುವುದಿಲ್ಲವಂತೆ !"

"ಒಬ್ಬೊಬ್ಬರ ಸ್ವಭಾವ ಅದೂ ರಘೂ, ಕೆಂಪು ಗುಲಾಬಿಗೆ ಬಿಳಿ ಬಣ್ಣ ಹಚ್ಚಿ ಬೆಳ್ಳಗೆ ಮಾಡೋಕಾಗುತ್ತಾ ?" ಶುಭ ಅವನಿಗೆ ತಿಂಡಿಯ ತಟ್ಟೆ ಯಿತ್ತಳು. "ನಿಮಗೆ ಬಿಳಿ ಗುಲಾಬಿ ಬೇಕಾದ್ರೆ ಬಿಳಿ ಆರಿಸ್ಕೋಬೇಕು, ಕೆಂಪು ಬೇಕಾದ್ರೆ ಕೆಂಪು ಆರಿಸ್ಕೋಬೇಕು. ಅಷ್ಟಿಟ್ಟು ಕೆಂಪು ಬಿಳಿಯಾಗು, ಬಿಳಿ ಕೆಂಪಾಗು ಅಂದ್ರೇ !"

ರಘು ನಕ್ಕನು. ಶುಭನ ಕೈಯಿಂದ ತಿಂಡಿಯ ತಟ್ಟೆಯನ್ನು ತೆಗೆದು ಕೊಳ್ಳುತ್ತಿದ್ದ ಮಾಲತಿ ಇಬ್ಬರತ್ತ ಪ್ರಶ್ನಾರ್ಥಕವಾಗಿ ನೋಡಿದಳು.

"ಶುಭಾ, ನಿಮ್ಮದೆಲ್ಲಿ ತಿಂಡಿ ? ನೀವೂ ಇಲ್ಲಿ ತೊಗೊಂಡ್ಬನ್ನಿ !"

ರಘು ಹೇಳಿದ-- "ಇಲ್ಲಿ ನೋಡಿ, ನಮ್ಮ ಶುಭನಿಗೆ ತೋಟ ಹೊಲ ಗಿಲ ಇಷ್ಟ ಇಲ್ಲ. ಎಸ್ಟೇಟಿನ ಕಡೆ ತಲೆಯೇ ಹಾಕೋಲ್ಲ. ನಾನೂ ಹೇಳಿ ಹೇಳಿ ಸಾಕಾದೆ, ಅದಕ್ಕೆ ಹಾಗಂತಾರೆ."

ಶುಭ ಒಳಗಿನಿಂದ ತಿಂಡಿಯ ತಟ್ಟೆ ಹಿಡಿದು ಬಂದಳು. ಅವಳ ಹಿಂದೆಯೇ ಶಿಲ್ಪ ಬಿಸ್ಕತ್ತು ಹಿಡಿದು ಬಂದಳು.

"ಜಾಣಮರಿ, ದೇವಿ ಜೊತೆ ಆಡ್ತಾ ಇರು. ಹೋಗಮ್ಮಾ"

ಶಿಲ್ಪಳನ್ನು ಹೊರಗೆ ಕಳಿಸಿದಳು.

"ಅದೆಲ್ಲಾ ಮಾತು ಬೇಡಾ--ರಘು. ನೀವು--ನನಗೊಂದು ದಾರಿ ಮಾಡಿ ಕೊಟ್ಟು ಉಪಕಾರ ಮಾಡಿದ್ರಿ--ನನ್ನ ಫ್ರೆಂಡ್ ಮಾಲತಿಗೂ ಒಂದು ದಾರಿ ಮಾಡಿಕೊಡೀಂತ-ನಾನ್ಹೇಳಿದ್ದು !"

"ಇನ್ನೊಬ್ಬ ಅಂತೀ ಬಂದ್ಲು !"

ಶಿಲ್ಪ ಹೊರಗಿನಿಂದಲೇ ಕೂಗಿದಳು.

"ಯಾರಪ್ಪಾ ಅದೂ ಶಿವರಾತ್ರೀಲಿ ಕರಡಿ ಬಿಟ್ಟಹಾಗೇ !" ಶುಭ ಕಿಟಕಿಯಿಂದ ನೋಡಿದಳು-"ಅಯ್ಯೋ ಸುಜಾತಾ....ನನ್ನ ಕಲೀಗ್ ಬಂದ್ಲು. ಅವಳೊಂದು ಚ್ಯಾಟರ್ ಬಾಕ್ಸ್. ಇನ್ನು ನಾವು ಮಾತಾಡಿದ ಹಾಗೇ ಇದೆ !"

"ಹಲೋ ಶುಭ....! ಒಳ್ಗೆ ಬರ್‍ಬೋದಾ. ಸಾರಿ, ಯಾರೋ ಗೆಸ್ಟ್ಸ ಇದ್ದಹಾಗಿದೆ....!" ಒಳಗೆ ಬಂದಳು ಸುಜಾತ.

ರಘು ಟೇಬಲ್ಲಿನ ಮೇಲಿದ್ದ ಪೇಪರ್ ತೆಗೆದು ಗಾಳಿ ಹಾಕಿಕೊಂಡನು. ಅವನೂ ಮಾಲತಿ ಮುಖ ಮುಖ ನೋಡಿ ಮುಗುಳ್ನಕ್ಕರು.

"ರಘೂ, ಮೀಟ್ ಮೈ ಕಲೀಗ್ ಮಿಸ್ ಸುಜಾತಾ ಬಲದೇವ್" ಶುಭ ಅವನಿಗೆ ಪರಿಚಯ ಮಾಡಿಕೊಟ್ಟಳು.

"ಇವರು ರಘುನಂದನ್—!" ರಘು ಎದ್ದು ನಿಂತು ಕೈಮುಗಿದನು.

"ಮೀಟ್ ಮೈ ಫ್ರೆಂಡ್—ದಿಸ್ ಈಸ್ ಮಾಲತಿ !" ಮಾಲತೀ ಕೈ ಮುಗಿದಳು.

ಸುಜಾತ ಇಬ್ಬರಿಗೂ ಕೈ ಮುಗಿದ ಶಾಸ್ತ್ರಮಾಡಿ ಶುಭನತ್ತ ತಿರುಗಿದಳು.

ರಘು ಸಮಯ ಸಾಧಿಸಿ ಎದ್ದು ನಿಂತನು.

"ಪಾಪ, ಶಿಲ್ಪ ಒಬ್ಬಳೇ ಹೊರ್‍ಗೆ ಆಡ್ತಾ ಇದ್ದಾಳೆ. ನೋಡ್ಕೊಂಡು ಬರ್‍ತೀನಿ."

ಶಿಲ್ಪ ಚೆಂಡಿಟ್ಟುಕೊಂಡು ಆಡುತ್ತಿದ್ದಳು. ರಘುವನ್ನು ಕಂಡ ಕೂಡಲೇ

"ಬಾ ಅಂಕಲ್--ಬಾಲು ಆಲೋನ....ನೀನಲ್ಲಿ ನಿಂತ್ಕೊ-ನಾನು ಬಾಲು ಆಕ್ತೀನಿ."

"ಹಾಕು ಮರಿ, ಆಡೋಣ. ನೀ ಸೋತರೆ ನಂಗೇನು ಕೊಡ್ತೀ ?"

"ನಾನು ಸೋತಲೆ ಮೂಲು ಬಿಕ್ಕತ್ತು ಕೊಲ್ತೀನಿ."

ಶಿಲ್ಪ ಹೇಳಿದಾಗ ಕಿಟಕಿಯ ಬಳಿಯೇ ನಿಂತು ಮಾತಾಡುತ್ತಿದ್ದ ಶುಭಾಗೆ ಕೇಳಿಸಿತು. ಕಿಟಕಿಯಿಂದಲೇ ರಘುವಿನತ್ತ ನೋಡಿ ನಕ್ಕಳು.

"ನಾನು ಸೋತರೆ ನಿಂಗೇನು ಕೊಡಬೇಕು ?" ರಘು ಶಿಲ್ಪನನ್ನು ಕೇಳಿದ.

"ನೀನು ಸೋತಲೆ ಇಲ್ಲೇ ಇಲ್ಬೇಕೂ."

"ವೆರಿಗುಡ್....ಹಾಕು ಈಗ ಬಾಲು "

ರಘು ಶಿಲ್ಪ ಆಡುತ್ತಿದ್ದುದನ್ನು ಶುಭನ ಜೊತೆಗೆ ಮಾಲತಿಯೂ ನೋಡುತ್ತಿದ್ದಳು.

ಸ್ವಲ್ಪ ಹೊತ್ತಿನ ನಂತರ ಮಾಲತಿ ಹೊರಗೆ ಬಂದಳು. ರಘು ಅವಳ ಕಡೆ ನೋಡಿ ನಕ್ಕನು.

"ಯಾಕೆ, ಹೊರಗೆ ಬಂದಿರಿ ?"

"ನೀವ್ಯಾಕೆ ಬಂದಿರಿ ಅದಕ್ಕೆ !" ಮಾಲತಿ ನಕ್ಕಳು.

"ತುಂಬಾ ಬೋರ್ ಹೊಡೀತು."

"ಬನ್ನಿ, ನೀವು ಶಿಲ್ಪನ ಜೊತೆ ಆಡಿ ಬನ್ನಿ...ಶಿಲ್ಪಾ ಆಂಟೀನ್ನೂ ಸೇರಿಸ್ಕೊಳ್ಳೋಣ ಆಟಕ್ಕೆ ?" ರಘು ಕೇಳಿದ.

"ಆಗ್ಲಿ. ಅವ್ರು ಆತದಲ್ಲಿ ಸೋತ್ರೇ ಏನು ಕೊತ್ತಾರೇ ?"

ಶಿಲ್ಪ ಮುದ್ದು ಮುದ್ದಾಗಿ ಕೇಳಿದಾಗ ಮಾಲತಿ ಅವಳನ್ನು ಎತ್ತಿ ಮುತ್ತಿಟ್ಟಳು.

"ಸೋತರೆ ಇದನ್ನೇ ಕೊಡೋದು ನಿಂಗೆ."

ರಘು ಅವಳನ್ನೇ ನೋಡುತ್ತಿದ್ದನು. ಇವಳು ಸ್ನೇಹಮಯಿ, ವಾತ್ಸಲ್ಯಮಯಿ ಎನಿಸಿತು.

"ಅಂಕಲ್‌ಗೂ ಕೊಡ್ತೀಯ ?" ಶಿಲ್ಪ ಕೇಳಿದಾಗ ಮಾಲತಿ ಅವಳನ್ನು ಕೆರಳಿಸಿದಳು. ಅವಳ ಮುಖ ಅರಕ್ತವಾಗಿತ್ತು.

"ನಾನು ಆಟಕ್ಕೆ ಬರೋಲ್ಲ. ನೀವಿಬ್ರು ಆಡಿ, ನೋಡ್ತೀನಿ." ಕಲ್ಲಿನ ಮೆಟ್ಟಿಲಿನ ಮೇಲೆ ಕುಳಿತಳು.

ಅವಳ ಕಸಿವಿಸಿ ಕಂಡು ರಘು ಮನದಲ್ಲೇ ನಕ್ಕನು. ಅವಳು ಗಲ್ಲಕ್ಕೆ ಕೈಕೊಟ್ಟು ಅವರಿಬ್ಬರ ಆಟವನ್ನು ನೋಡುತ್ತಿದ್ದಳು. ಸ್ವಲ್ಪ ಹೊತ್ತು ಆಡಿ ರಘು ಅವಳ ಪಕ್ಕದಲ್ಲಿ ಬಂದು ಕುಳಿತನು.

"ಇಫ್ ಯೂ ಡೋಂಟ್ ಮೈಂಡ್"

"ಮಾಲತಿ ಕೊಂಚ ಸರಿದು ಕುಳಿತಳು.

"ಪರ್ವಾಗಿಲ್ಲ, ಕೂತ್ಕೊಳ್ಳಿ."

"ನಾವು ಒಳಗೆ ಹೋಗಿ ಆ ಸುಜಾತನ್ನ ಕಳಿಸಬೇಕೂಂತ ಕಾಣ್ಸತ್ತೆ" ರಘು ಹೇಳಿದಾಗ ಮಾಲತಿ ನಕ್ಕಳು.

"ಹಾಕೇ ಕಾಣ್ಸತ್ತೆ. ಇನ್ನೊಂದು ಐದು ನಿಮಿಷ ನೋಡೋಣ..."

ಕೊಂಚ ಹೊತ್ತು ಇಬ್ಬರೂ ಮೌನ.

"ನಿಮ್ಮ ಆಸರೆಯಲ್ಲಿರುವ ಶುಭ ತುಂಬಾ ಲಕ್ಕೀ." ಮಾಲತಿ ಮೆಲ್ಲ ನುಸುರಿದಳು.

"ಡೂ ಯೂ ಥಿಂಕ್ ಸೋ ?" ರಘು ಕೇಳಿದ. ಅವನ ಮುಖದಲ್ಲಿ ಅರ್ಥಗರ್ಭಿತವಾದ ನಗುವಿತ್ತು.

"ಹೌದು. ಅವಳನ್ನ ನೋಡಿದಾಗ. ನಾನು ಖಂಡಿತ ಶುಭ ಹುಚ್ಚಿ ಯಾಗಿಬಿಡ್ತಾಳೆ ಅಂದ್ಕೊಂಡಿದ್ದೆ ಗಂಡ ಹೋದ ಮೇಲೆ, ಮನೆತಪ್ಪಿದ ಹೆಣ್ಣಿಗೆ ಯಾರು ಸೌಹಾರ್ದತೆಯಿಂದ, ಪ್ರೀತಿಯಿಂದ ನೋಡ್ಕೋತಾರೆ ? ನೀವು ಅವಳನ್ನ ಎಷ್ಟು ಪ್ರೀತಿಯಿಂದ ಕಾಪಾಡಿಕೊಂಡು ಬಂದಿದ್ದೀರಾ ! ನಿಮ್ಮಷ್ಟು ಒಳ್ಳೆಯವರು ಅಪರೂಪ !"

"ಹೌದು—ಅಲ್ಲಿ ಸೌಹಾರ್ದತೆಯ ಪ್ರಶ್ನೆಯಿಲ್ಲ—ನನಗೆ ಶುಭನನ್ನು ಕಂಡರೆ ಮೊದಲಿನಿಂದಲೂ ಬಹಳ ಪ್ರೀತಿ. ಅವರು ನನ್ನ ಪ್ರೈಸ್‌ಲೆಸ್ ಪೊಸೆಶನ್....ಅದಕ್ಕೇ ಹೀಗೆ ಕಾಪಾಡಿಕೊಂಡು ಬಂದಿದ್ದೀನಿ. ಅಲ್ಲಿ ಒಳ್ಳೆ ತನಕ್ಕಿಂತ ಸೆಲ್ಫಿಶ್‌ನೆಸ್ ಅನ್ನಬಹುದು !" ರಘು ಹೇಳಿದಾಗ ಮಾಲತಿ ಅವನತ್ತ ನೋಡಿದಳು.

ಅವಳ ಕಣ್ಣುಗಳು ರಘುವಿನ ಮುಖದಲ್ಲಿ ಯಾವುದೋ ಗುಟ್ಟನ್ನರಿ ಯಲು ತವಕಿಸಿದವು.

"ಸೆಲ್ಫಿಶ್‌ನೆಸ್ ನಿಮಗೆ ಇಲ್ಲವೇ ಇಲ್ಲ. ನಾನದನ್ನು ನಂಬು ವುದಿಲ್ಲ !"

ರಘು ನಿಟ್ಟುಸಿರು ಬಿಟ್ಟು ಎದ್ದು ನಿಂತನು "ಲೈಫ್ ಈಸ್ ವೆರಿ ಸ್ಟ್ರೇಂಜ್ ಮಾಲತೀ ! ಇಟ್ ಈಸ್ ಡಿಸ್ಟಿನೀ ದಟ್ ಶೇಪ್ಸ್ ಅವರ್ ಎಂಡ್ಸ್"

ಮಾಲತಿ ಸರಕ್ಕನೇ ಒಳಗೆದ್ದು ಹೋದಳು ರಘು ಅಚ್ಚರಿಯಿಂದ ಅವಳತ್ತ ನೋಡಿದನು. ತಾನೇನಾದರೂ ಅವಳಿಗೆ ನೋವಾಗುವ ಹಾಗೆ ಅಂದೆನೇ ? ಒಬ್ಬಳೇ ಆಡುತ್ತಿದ್ದ ಶಿಲ್ಪ ಅವನ ಕೈ ಹಿಡಿದು ಜಗ್ಗಿಸಿದಳು.

"ನಂಗೆ ಬೇಡಾಲು. ಕಾಲಲ್ಲಿ ಲೌಂಡ್ ಕಲ್ಕೊಂಡು ಹೋಗು." ರಘು ಎಚ್ಚೆತ್ತನು. "ಹೋಗು ಸ್ವೀಟ್-ಅಮ್ಮನ್ನ ಕೇಳ್ಕೊಂಡು ಬಾ, ಕರ್ಕೊಂಡು ಹೋಗ್ತೀನಿ."

ಒಳಗೆ ಹೋದ ಶಿಲ್ಪನ ಜೊತೆ ಶುಭ, ಮಾಲತಿ ಕೂಡ ಬಂದರು.

"ರಘೂ, ಶಿಲ್ಪಂಗೂ ರೌಂಡ್ ಆದ ಹಾಗಾಗುತ್ತೆ. ಮಾಲತೀನ್ನೂ ಬಿಟ್ಟ ಹಾಗಾಗುತ್ತೆ. ದಯವಿಟ್ಟು ಮಾಲತೀನ ಡ್ರಾಪ್ ಮಾಡ್ತೀರಾ?"

"ಶೂರ್....ಬನ್ನೀ!" ರಘು ಹೇಳಿದ. "ಸಧ್ಯ ನಾನು ಬಿಟ್ಟು ಬರೋದ್ರಲ್ಲಿ ಆ ಚಾಟರ್ ಬಾಕ್ಸ್‌ನ ಹೊರಗೆ ಹಾಕಿರಿ."

ಶುಭ ಮಾಲತಿ ಇಬ್ಬರೂ ನಕ್ಕರು.

ಕಾರಿನ ಬಾಗಿಲು ತೆರೆದು ಮಾಲತಿ ಒಳಗೆ ಕುಳಿತಾದ ಮೇಲೆ ರಘು ಸ್ಟೀರಿಂಗ್ ಹಿಡಿದು ಕುಳಿತನು. ಅವನ ತೊಡೆಯೇರಿದ ಶಿಲ್ಪನನ್ನು ಮಾಲತಿ ಎತ್ತಿ ತನ್ನ ತೊಡೆಯ ಮೇಲೆ ಕೂಡಿಸಿಕೊಂಡಳು.

"ಹಾಗೆ ಕೂತ್ರೆ ಅಂಕಲ್‌ಗೆ ಡ್ರೈವ್ ಮಾಡೋಕೆ ತೊಂದ್ರೆ ಆಗುತ್ತೆ ಚಿನ್ನಾ."

"ಮಾಲತಿ, ಪುನಃ ನಾನೇ ಬಂದು ನೋಡ್ತೀನಿ ನಿನ್ನ" ಶುಭ ಕೈ ಬೀಸಿದಳು.

ಕಾರು ಹೊರಟಾಗ ಅವಳ ಕಣ್ಣುಗಳು ತುಂಬಿ ಬಂದುದನ್ನು ರಘು ಗಮನಿಸಿದ.

"ನಮ್ಮ ಮನೆ ಜ್ಞಾಪಕ ಇದೆಯಾ?" ಮಾಲತಿ ಕೇಳಿದಾಗ ರಘು ಉತ್ತರಿಸಲಿಲ್ಲ. ಅವನ ಮನಸ್ಸೆಲ್ಲಾ ಕಣ್ಣು ತುಂಬಿ ನಿಂತಿದ್ದ ಶುಭನಿಂದ ತುಂಬಿತ್ತು.

ಮಾಲತಿಯನ್ನು ಮನೆಯ ಬಳಿ ಇಳಿಸಿದಾಗ ಮಾಲತಿ ಹೇಳಿದಳು.

"ಒಳಗೆ ಬನ್ನಿ. ಕೊಂಚ ಏನಾದ್ರೂ ತೆಗೆದುಕೊಂಡು ಹೋಗಿ."

"ಇಲ್ಲ, ಹೊತ್ತಾಯ್ತು. ಇನ್ನೊಂದು ದಿನ ಬರ್ತೀನಿ" ರಘು ಕೈ ಮುಗಿದ.

ಶಿಲ್ಪನಿಗೆ ಬಿಸ್ಕತ್ತು, ಚಾಕಲೇಟು ಕೊಡಿಸಿ ಮನೆಗೆ ಹಿಂತಿರುಗಿದಾಗ ಶುಭ ಗೇಟಿನ ಬಳಿ ನಿಂತು ಕಾಯುತ್ತಿದ್ದಳು. ರಘು ಶಿಲ್ಪನನ್ನು ಇಳಿಸಿದ

ಕೂಡಲೇ ಓಡಿ ಶುಭನ ಮುಂದೆ ಕೈಲಿದ್ದ ಚಾಕಲೇಟು, ಬಿಸ್ಕತ್ತು ತೋರಿಸಿದಳು.

"ಎತ್ಕೊಂದು ನೋದ್ವ್ಯಾ ?"

"ಬೇಡಾ, ಅಷ್ಟು ತಿನ್ಬ್ಯಾರದ್ದು-ಒಳ್ಳೇದಲ್ಲ. ಬೀರು ಒಳ್ಗೆ ಇಡು ಹೋಗು"

ಶುಭ ಹೇಳಿದಾಗ ಶಿಲ್ಪ ಒಂದು ಚಾಕಲೇಟು ಬಾಯಿಗೆ ಹಾಕಿಕೊಂಡು ಒಳಗೆ ಓಡಿದಳು.

ರಘು ಕಾರಿನ ಬಾಗಿಲುಗಳನ್ನು ಮುಚ್ಚಿ ಬಂದನು.

"ನಿಮ್ಮ ಫ್ರೆಂಡ್ ಹೊರಟುಹೋದ್ರಾ ? ಇದೇನು ಹೀಗೆ ಕಾಯ್ತಾ ಇದ್ದೀರಿ ? ಮಗಳ್ನ ಎಲ್ಲಾದ್ರೂ ಎತ್ಕೊಂಡು ಹೊರಟುಹೋದೆ ಅಂದ್ಕೊಂಡ್ರಾ?"

"ಇಲ್ಲಪ್ಪಾ. ತುಂಬಾ ಹೊತ್ತಾಯ್ತಲ್ಲಾ, ಯಾಕೇ ಅಂತ ಯೋಚಿಸ್ತಾ ನಿಂತಿದ್ದೆ. ಮಾಲತಿ ಮನೆಯೊಳಗೆಹೋಗಿದ್ರಾ ?"

ಶುಭ ಅವನು ಒಳಗೆ ಬರಲು ದಾರಿ ಮಾಡಿಕೊಟ್ಟಳು.

"ಇಲ್ವಲ್ಲಾ, ನಿಮ್ಮ ಮಗಳ ವ್ಯಾಪಾರ ಜೋರಾಗಿತ್ತು. ಅದಕ್ಕೆ ಕೊಂಚ ತಡವಾಯ್ತು !" ರಘು ಅವಳ ಬಳಿಯೇ ನಿಂತನು.

"ನಿಮಗೆ ಮಾಲತಿ ತುಂಬಾ ಮೆಚ್ಚಿಕೆಯಾದಳೂಂತ ಕಾಣ್ಸತ್ತೆ !"

ಶುಭ ಹೇಳಿದಾಗ ರಘು ಅವಳತ್ತ ನೋಡಿದ. ಮಬ್ಬುಗತ್ತಲಲ್ಲಿ ಮುಖ ಅಷ್ಟು ಸರಿಯಾಗಿ ಕಾಣಲಿಲ್ಲ.

"ಷೀ ಈಸ್ ನೈಸ್ ! ವೆರಿ ನೈಸ್ ಪರ್ಸನ್ ಟು ನೋ."

"ರಘೂ, ನಾನೊಂದು ಮಾತು ಕೇಳ್ತೀನಿ, ನಡೆಸಿಕೊಡ್ತೀರಾ ?" ಶುಭಳ ಧನಿಯಲ್ಲಿ ದೈನ್ಯವಿತ್ತು.

"ಕೇಳಿ. ಆಗೋದಾದ್ರೆ ನಡೆಸಿಕೊಡ್ತೀನಿ !" ರಘು ಪ್ಯಾಂಟಿನ ಜೇಬಿಗೆ ಕೈ ತೂರಿಸಿದನು.

"ನೀವು ಮಾಲತಿಯನ್ನು ಯಾಕೆ ಮದುವೆಯಾಗಬಾರದು ? ನೀವಿಬ್ಬರೂ ಕಾರಿನಲ್ಲಿ ಕುಳಿತಿದ್ದು ನೋಡಿ 'ಎಷ್ಟು ಚೆನ್ನಾಗಿದೆ ಜೋಡಿ !' ಎಂದುಕೊಂಡೆ."

ರಘು ಜೇಬಿನಿಂದ ಕೈ ತೆಗೆದನು. ಅವನ ಕೈಗಳು ಶುಭನ ಭುಜವನ್ನು ಹಿಡಿದವು. ಅವಳ ಕಣ್ಣಲ್ಲಿ ಕಣ್ಣಿಟ್ಟು ಕೇಳಿದ.

"ನಿಜವಾಗಿಯೂ ನಿಮಗೆ ನಮ್ಮಿಬ್ಬರನ್ನೂ ನೋಡಿ ಸಂತೋಷ ವಾಯಿತೇ?"

"ಹೂಂ" ಶುಭ ತಲೆ ತಗ್ಗಿಸಿದಳು.

"ಸರಿ ಹಾಗಾದರೆ ನಾನು ಅವರನ್ನು ಮದುವೆಯಾಗ್ತೀನಿ-ಎಸ್ಟೇಟಿಗೆ ಕರೆದುಕೊಂಡು ಹೋಗಿರಿಸಿಕೊಳ್ತೀನಿ. ಹೇಗಿದ್ದರೂ ಅವರಿಗೆ ಆ ಕೆಲಸವೆಲ್ಲಾ ಇಷ್ಟ. ಇಬ್ಬರೂ ಕಾರಿನಲ್ಲಿ ಊರೆಲ್ಲಾ ತಿರುಗಾಡುತ್ತೇವೆ ಶಿಲ್ಪನಂತಹವು ಒಂದೆರಡಾಗಲಿ. ನಮ್ಮ ಪಾಡಿಗೆ ನಾವು ಹಾಯಾಗಿರುತ್ತೇವೆ!" ರಘು ಪಿಸು ದನಿಯಲ್ಲಿ ಹೇಳಿದ.

"ಆಗ ನೀವೇನು ಮಾಡ್ತೀರಿ ?"

ಶುಭ ತಕ್ಷಣ ಉತ್ತರಿಸಲಿಲ್ಲ.

"ಹೀಗೇ....ಹೀಗೆ ಇರ್ತೀನಿ !" ಶುಭ ಮೆಲ್ಲನುಸುರಿದಳು.

"ಸುಳ್ಳು !"

ರಘುವಿನ ಕೈಗಳು ಅವಳ ಭುಜದ ಮೇಲೆ ಕಬ್ಬಿಣದಂತೆ ಭಾರವಾಯಿತು. "ಹಾಗಾದರೆ ಕಾರು ಹೊರಟಾಗ ನಿಮ್ಮ ಕಣ್ಣಿನಲ್ಲಿದ್ದ ನೀರಿನ ಅರ್ಥ ?"

ಶುಭ ಮಾತಾಡಲಿಲ್ಲ.

"ನಾನೂ ಒಂದು ಮಾತು ಕೇಳ್ತೀನಿ, ನಡೆಸಿಕೊಡ್ತೀರಾ ?"

ಶುಭ ಮೌನವಾಗಿದ್ದಳು.

"ನೀವೂ ಇನ್ನೊಂದು ಮದುವೆ ಯಾಕೆ ಆಗ್ಬಾರ್ದು ?"

"ರಘೂ !"

ಶುಭ ಅವನ ಕೈಗಳನ್ನು ದೂರ ತಳ್ಳಿದಳು. ಆದರೆ ರಘು ಅವಳ ಎರಡೂ ಕೈಗಳನ್ನು ಹಿಡಿದುಕೊಂಡನು.

"ನಿಮ್ಮ ಫ್ರೆಂಡ್ ವಿಧವೆ. ಅವಳಿಗೆ ನನ್ನ ರೆಕಮೆಂಡ್ ಮಾಡಿದಿರಿ. ನೀವ್ಯಾಕೆ ಪುನಃ ಮದುವೆಯಾಗಬಾರ್ದೂಂತ ?"

ರಘುವಿನ ದನಿ ಅಲಗಿನಂತೆ ಹರಿತವಾಗಿತ್ತು.

"ನಾನು ಮದುವೆಯ ಎಲ್ಲಾ ಸುಖ ಅನುಭವಿಸಿಯಾಯ್ತು ರಘೂ, ನನಗೆ ಇನ್ನೇನೂ ಬೇಕಾಗಿಲ್ಲ !" ಶುಭ ತುಟಿ ಕಚ್ಚಿಕೊಂಡಳು.

"ಒಳಗೆ ಬನ್ನಿ, ಇಲ್ಲೇಕೆ ಮಾತು !"

ಒಳಗೆ ಹೋದ ಶುಭನನ್ನು ರಘು ಹಿಂಬಾಲಿಸಿದನು.

"ಒಬ್ಬನನ್ನು ಪ್ರೀತಿಸಿ ಮತ್ತೊಬ್ಬನನ್ನು ಮದುವೆಯಾಗುವುದು ಆತ್ಮ ವಂಚನೆ ಶುಭ....ಫಾರ್ ಮಿ....ಮ್ಯಾರೇಜ್ ವಿತ್‌ಔಟ್ ಲವ್ ಈಸ್ ಲೀಗ್ ಲೈಸ್ಡ್ ಪ್ರಾಸ್ಟಿಟ್ಯೂಷನ್ !"

ರಘುವಿನ ಮಾತು ಶುಭನಿಗೆ ಕೊಡಲಿ ಪೆಟ್ಟನಂತಿತ್ತು. ಶುಭ ತನ್ನನ್ನು ಹಿಂಬಾಲಿಸಿ ಬಂದ ರಘುವಿನಡೆಗೆ ತಿರುಗಿ ನೋಡಿದಳು.

"ರಘೂ ! ನೀವು ಹೀಗೆ ಮಾತಾಡಬಾರದು–ನನಗೆ ನಿಮ್ಮ ಮೇಲಿರುವ ಪ್ರೀತಿ ವಿಶ್ವಾಸ ಕಡಿಮೆಯಾದೀತು !"

ರಘು ಸೋಫಾದ ಮೇಲೆ ಕುಳಿತು ಎದುರಿಗೆ ನಿಂತಿದ್ದ ಶುಭನ ಕೈ ಹಿಡಿದೆಳೆದು ತನ್ನ ಪಕ್ಕದಲ್ಲಿ ಕೂಡಿಸಿಕೊಂಡನು.

"ನೀವು ಮಾಲತಿಯನ್ನು ಇಂದು ಸಂಜೆ ಕರೆಯಲು ಕಾರಣವೇನು ? ನನಗೆ ಸತ್ಯ ಬೇಕು."

ಶುಭ ತಲೆ ತಗ್ಗಿಸಿದಳು.

"ನೀವು ಮಾಲತಿಯನ್ನು ನೋಡಲೆಂದು. ಮಾಲತಿಯನ್ನು ನೀವು ಒಪ್ಪ ಬಹುದೆಂದು. ನಿಮ್ಮಿಬ್ಬರ ಮದುವೆಯಾದರೆ ನಿಮ್ಮ ಒಂಟಿಬಾಳು ಸರಿಹೋಗ ಬಹುದೆಂದು ?"

ರಘುವಿನ ಹಿಡಿತದಲ್ಲಿದ್ದ ಕೈಯನ್ನು ಬಿಡಿಸಿಕೊಳ್ಳಲೆತ್ನಿಸಿದಳು. ರಘು ಜೋರಾಗಿ ನಕ್ಕುಬಿಟ್ಟನು.

"ಶುಭಾ....ಒಂದು ಸಲ ಆತ್ಮವಂಚನೆ ಮಾಡಿಕೊಂಡು ನೊಂದಿದ್ದೀರಿ. ಮತ್ತೊಮ್ಮೆ ಆತ್ಮವಂಚನೆ ಮಾಡಿಕೊಳ್ಳಬೇಡಿ–ನನಗೆ ಗೊತ್ತು–ನನ್ನ ಜೊತೆ ಮತ್ತೊಬ್ಬ ಹೆಣ್ಣು ಒಂದು ಬಾಳ್ವೆ ನಡೆಸಿದರೆ ನೀವು ತಡೆಯಲಾರಿರಿ–ಸಹಿಸ ಲಾರಿರಿ ! ಮಾಲತಿಯ ಬದಲು ನೀವೇಕೆ ನನ್ನನ್ನು ಮದುವೆಯಾಗಬಾರದು !"

ರಘುವಿನ ದನಿ ಭಾರವಾಗಿತ್ತು. ಶುಭ ಕೈ ಕೊಸರಿಕೊಂಡು ದೂರ ಸರಿದಳು.

"ನೀವೆಂದೂ ರವಿಯನ್ನು ಮನಸಾರೆ ಪ್ರೀತಿಸಿರಲಿಲ್ಲ !"

"ಐ ಡಿಡ್ ಲವ್ ರವಿ ಇನ್ ಎ ವೇ. ಅವರ ಜೊತೆ ಹಂಚಿಕೊಂಡಿದ್ದನ್ನು ನಾನು ನಿಮಗೆ ಕೊಡಲಾರೆ !"

ಶುಭ ಕೈಯಿಂದ ಮುಖ ಮುಚ್ಚಿಕೊಂಡಳು. ರಘು ಸಿಗರೇಟೊಂದನ್ನು ಹಚ್ಚಿಕೊಂಡು ಅದರ ಹೊಗೆ ನೋಡಿದ.

"ಎಲ್ಲವನ್ನೂ ಹಂಚಿಕೊಂಡಿದ್ದೀರಿ ಶುಭಾ. ಶಿಲ್ಪನನ್ನು ಕೊಟ್ಟಿದ್ದೀರಾ-ನಿಮ್ಮ ಕಷ್ಟ, ಸುಖವನ್ನು ಹಂಚಿಕೊಂಡಿಲ್ಲವೇ? ಎಷ್ಟೇಟು ಆಸ್ತಿ ಹಂಚಿಕೊಂಡಿಲ್ಲವೇ? ನೀವು ಕಿತ್ತಿಸೆದ ಕರಿಮಣಿಯ ಸರ, ತಾಳಿ ಕೂಡ ನನ್ನ ಬಳಿಯೇ ಇವೆ!"

ಶುಭ ಬಿಕ್ಕಿ ಬಿಕ್ಕಿ ಅತ್ತಳು. ರಘು ಒಂದೆರಡು ಬಾರಿ ಸಿಗರೇಟು ಸೇದಿ ಆಷ್‌ಟ್ರೇಯೊಳಗಿಟ್ಟನು. ಮುಖ ಮುಚ್ಚಿ ಅಳುತ್ತಿದ್ದ ಶುಭನನ್ನು ತನ್ನೆದೆಗೆ ಒರಗಿಸಿಕೊಂಡನು.

"ಶುಭಾ, ಅಳಬೇಡಿ. ನಾನು ನಿಮಗೆ ಯಾವ ಕೇಡನ್ನೂ ಬಯಸುವುದಿಲ್ಲ. ನಂದಿನಿ ಅಂದೇ ಹೇಳಿದಳು 'ರವಿ ಬೇರೆ ಅಲ್ಲ, ನೀನು ಬೇರೆ ಅಲ್ಲ ರಘೂ.... ನಮ್ಮ ಶುಭನ ಕೈಹಿಡಿದು ಅವಳ ಬಾಳು ಬೆಳಗು' ಅಂತ–ಅಪ್ಪಾ ಹೇಳಿದರು" "ರಘೂ,ನೀನೇ ಅವಳಿಗೆ ಸರಿ ನೋಡ್ಕೂ,ಅವಳ ಬಾಳಿಗೊಂದು ದಾರಿಯಾಗೂಂತ. ರವಿ ಸಾಯುವ ಮುನ್ನ ನನ್ನ ಕೈಹಿಡಿದು ಹೇಳಿದ್ದ 'ರಘೂ, ಶುಭನನ್ನು ನಿನ್ನ ಕೈಗೆ ಒಪ್ಪಿಸಿದ್ದೇನೆ–ಅವಳನ್ನು ನೋಡಿಕೊಳ್ಳುವ ಹೊಣೆ ನಿನ್ನದೂ' ಎಂದು. ಆದರೆ ನೀವೊಬ್ಬರೇ ನನ್ನನ್ನು ದೂರ ಸರಿಸಿದವರು. ನಿಮಗೋಸ್ಕರ ನಾನು ಈ ಕಡೆ ಬರದೇ ಮರೆಯಾಗಿದ್ದೆ....ಬಂದ ಮೇಲೂ ನಿಮ್ಮಲ್ಲಿ ತಪ್ಪಾಗಿ ನಡೆದುಕೊಂಡಿಲ್ಲವೆಂದು ನಾನು ಭಾವಿಸಿದ್ದೇನೆ. ಇಲ್ಲಿ ನೋಡಿ," ಅವಳ ಕಣ್ಣೀರಿನಿಂದ ತೊಯ್ದ ಮುಖವನ್ನು ಎತ್ತಿ ಹಿಡಿದ.

"ನನ್ನ ಬದುಕೆಲ್ಲಾ ನಿಮಗೆ, ಶಿಲ್ಪನಿಗೆ ಮುಡಿಪು. ಶುಭಾ....ನಾನು ಈ ಜನ್ಮದಲ್ಲಿ ಯಾವ ಬೇರೆ ಹೆಣ್ಣಿಗೂ ಜಾಗ ಕೊಡುವುದಿಲ್ಲ!"

ಶುಭಳ ಕೆನ್ನೆಯ ಮೇಲೆ ಮತ್ತೆ ಕಣ್ಣೀರಿನ ಹೊಸ ಬುಗ್ಗೆಯುಕ್ಕಿತು. ರಘು ಅವಳ ಕಣ್ಣೀರು ಒರೆಸಿದನು.

"ನೀವು ಕಣ್ಣೀರು ಹಾಕುವುದು ನಾನು ನೋಡಲಾರೆ. ನೀವು ಇವೊತ್ತು ಸಂಜೆ ನಾನು, ಮಾಲತಿ, ಶಿಲ್ಪ ಕಾರಿನಲ್ಲಿ ಹೋದಾಗ ಕಣ್ಣೀರು ಹಾಕಿದ್ದೇಕೆ? ಅದನ್ನು ಕಂಡು ತಡೆಯಲಾರದೇ ಈ ಮಾತೆಲ್ಲಾ ಆಡಬೇಕಾಯಿತು ಶುಭ. ನನ್ನನ್ನು ಕ್ಷಮಿಸಿ!"

ರಘು ಅವಳನ್ನು ದೂರ ಸರಿಸಿ ಎದ್ದು ನಿಂತನು.

"ರಘೂ !"

ಶುಭ ಎದ್ದು ನಿಂತು ಅವನ ಕತ್ತಿನ ಸುತ್ತ ಕೈ ಹಾಕಿ ಮತ್ತೆ ಅವನೆದೆಗೆ ಒರಗಿದಳು.

"ರಘೂ, ನೀವು ಹಾಗೆ ಅವಳ ಜೊತೆ ಹೊರಟುಹೋದರೆ ನಾನೇನು ಮಾಡಲಿ....ಅದಕ್ಕೇ ನನಗೆ ಅಳು ಬಂತು !"

ರಘು ತನ್ನದೆಯ ಮೇಲಿದ್ದ ಅವಳ ತಲೆಯ ಮೇಲೆ ಮುಖವಿಟ್ಟನು.

"ಐ ಲವ್ ಯೂ ಸೋ ಮಚ್ ಶುಭ-ನಾನು ಯಾರ ಜೊತೆಯೂ ಹೊರಟುಹೋಗುವುದಿಲ್ಲ !"

"ಮೊದಲಿನಂತೆ-ಮದುವೆಗೆ ಮುಂಚಿನಂತೆ ನೀವು ನನ್ನನ್ನು ಪ್ರೀತಿಸಲು ಸಾಧ್ಯವೇ ರಘೂ ?" ಶುಭ ಅವನೆದೆಯಲ್ಲಿ ಉಸುರಿದಳು.

ರಘು ಅವಳ ಮುಖವೆತ್ತಿ ಹಿಡಿದು ಕಣ್ಣಲ್ಲಿ ಕಣ್ಣಿಟ್ಟು ಹೇಳಿದ,

"ನನಗೆ, ನಿಮ್ಮ ಮೇಲಿನ ಪ್ರೀತಿ ಒಲವು ಒಂದಿನಿತೂ ಕಡಿಮೆಯಾಗಿಲ್ಲ ಶುಭ....ವೈ ಡೋಂಟ್ ಯು ಟ್ರೈ ಅಂಡ್ ಸೀ ?"

ಅವಳ ಅದುರುತ್ತಿದ್ದ ತುಟಿಗೆ ತನ್ನ ತುಟಿ ಸೇರಿಸಿದನು. ಶುಭ ಅವನ ಅಪ್ಪುಗೆಯಲ್ಲಿ ಕರಗಿಹೋದಳು. ಕೊಂಚ ಹೊತ್ತಾದ ಮೇಲೆ ರಘು ಅವಳನ್ನು ಕೇಳಿದನು.

"ಆರ್ ಯೂ ಕನ್‌ವಿನ್ಸ್‌ಡ್ ?"

ಶುಭ ಕಣ್ಣೊರಸಿಕೊಂಡು ನಕ್ಕಳು.

"ಇಲ್ಲ."

"ಹಾಗಾದರೆ ನಾನು ಲೈಫ್ ಪೂರ್ತಿ ನಿನ್ನನ್ನು ಕನ್‌ವಿನ್ಸ್ ಮಾಡೋದ್ರಲ್ಲೇ ಕಳೆಯಬೇಕಾಗುತ್ತೇನೋ !"

ರಘು ಅವಳನ್ನು ಮತ್ತೆ ಅಪ್ಪಿದಾಗ ಶಿಲ್ಪ ಒಳಗಿನಿಂದ ಓಡಿ ಬಂದಳು. ರಘು ಶುಭ ದೂರ ಸರಿದರು.

"ಅಂಕಲ್....ನಾನು ಬಲ್ಮೀನಿ ನಿನ್ಜೊತೆ. ನೀನು ಒಂತೋಗ್ಬೇಲಾ.... ನಂಗೆ ನೀನು ಬೇಕು !"

ರಘು ಶಿಲ್ಪನನ್ನೆತ್ತಿಕೊಂಡು ಮುತ್ತಿಟ್ಟನು.

"ಆಗ್ಲಿ ಚಿನ್ನ. ನನ್ನ ಜೊತೇನೇ ಬರ್ತ್ವಂತಿ. ನೋಡೂ, ನಿಮ್ಮಮ್ಮ ನಿನ್ನಷ್ಟು ಆನೆಸ್ಟ್ ಅಲ್ಲ !"

ಶುಭನತ್ತ ನೋಡಿ ಕಣ್ಣು ಮಿಟುಕಿಸಿದನು.

"ನಾನು ಎಲ್ಲಿ ಹೋದ್ರೂ ಬರ್ತೀಯಾ ?"

"ಓ....ಬರ್ತೀನಿ !" ಶಿಲ್ಪ ಅವನ ಕತ್ತು ತಬ್ಬಿಕೊಂಡಳು.

ರಘು ಅವಳ ತಲೆ ಸವರಿ ಶುಭನತ್ತ ನೋಡಿ ಪ್ರಶ್ನಾರ್ಥಕವಾಗಿ ಹುಬ್ಬು ಹಾರಿಸಿದನು. ಶುಭ ನಕ್ಕು ಶಿಲ್ಪನನ್ನು ಅವನ ಕೈಯಿಂದ ಕೆಳಗಿಳಿಸಿದಳು.

"ಇಳಿ ಚಿನ್ನಮರಿ....ಅಂಕಲ್ ಮನೆಗೆ ಹೋಗದಿದ್ದರೆ ತಾತ ಬೈಯ್ತಾರೆ. ತಾತಂಗೆ ಹೇಳಿ ಆಮೇಲೆ ನಿನ್ನ ಕರ್ಕೊಂಡು ಹೋಗ್ತಾರೆ !"

ರಘೂ ನಕ್ಕ ಶುಭನ ಕೈ ಹಿಡಿದು ಹೇಳಿದನು.

"ಗುಡ್ ನೈಟ್... ನಾಳೆ ಬರ್ತೀನಿ ಚಿನ್ನ" ಶಿಲ್ಪನಿಗೆ ಮುತ್ತಿಟ್ಟು, ಶುಭನ ತುಟಿಯತ್ತ ನೋಡಿ ನಕ್ಕನು.

ಕಾರಿನಲ್ಲಿ ಕುಳಿತಾಗ ಹಿಂದಿನ ಸೀಟಿನ ಮೇಲೆ ಮರೆತು ಇಟ್ಟಿದ್ದ ಹೂಗೊಂಚಲು ಕಾಣಿಸಿತು. ಅದನ್ನೆತ್ತಿ ಗೇಟಿನ ಬಳಿ ಶಿಲ್ಪನನ್ನೆತ್ತಿಕೊಂಡು ನಿಂತಿದ್ದ ಶುಭನ ಕಡೆಗೆ ಎಸೆದನು. ಶುಭ ಅದನ್ನು ಹಿಡಿದು ತುಟಿಗಿಟ್ಟು ಕೊಂಡು ನಕ್ಕಳು. ಅವಳ ನಗುವಿನಲ್ಲಿ ರಘುವಿನ ಭವಿಷ್ಯದ ಆಶ್ವಾಸನೆ ಮೂಡಿತ್ತು.

# ನಮ್ಮ ಪ್ರಕಟನೆಗಳು

| | | |
|---|---|---|
| ಸ್ವಪ್ನದ ಹೊಳೆ | ಡಾ|| ಶಿವರಾಮ ಕಾರಂತ | 10—00 |
| ಸ್ಮೃತಿಪಟಲದಿಂದ | " | 20—00 |
| ಅದೇ ಊರು; ಅದೇ ಮರ | " | 10—00 |
| ಕನ್ನಡಿಯಲ್ಲಿ ಕಂಡಾತ | " | 9—00 |
| ಮೈಮನಗಳ ಸುಳಿಯಲ್ಲಿ | " | 8—00 |
| ಸರಸಮ್ಮನ ಸಮಾಧಿ | " | 4—00 |
| ಒಂಟಿ ದನಿ | " | 10—00 |
| ಅಪೂರ್ವ ಪಶ್ಚಿಮ | " | 10—00 |
| ಕರುಳಿನ ಕರೆ | " | 8—00 |
| ಚೋಮನ ದುಡಿ | " | 3—00 |
| ಗರ್ಭಗುಡಿ (ನಾಟಕ) | " | 4—00 |
| ನನ್ನ ಭಯಾಗ್ರಫಿ | ಬೀಚಿ | 30—00 |
| ಸಕ್ಕರೆ ಮೂಟೆ | " | 6—00 |
| ಮನೆತನದ ಗೌರವ | " | 6—00 |
| ಮೋಡಮ್ಮನ ಗಂಡ | " | 5—00 |
| ನರಪ್ರಾಣಿ | " | 4—00 |
| ಸತ್ತವನು ಎದ್ದು ಬಂದಾಗ | " | 3—00 |
| ಸತೀ ಸೂಳೆ | " | 6—00 |
| ಅಮ್ಮನವರ ಇಚ್ಛಾ | " | 6—00 |
| ಹೊಸ ರಾಗ | ಉಷಾ ನವರತ್ನರಾಮ್ | 5—00 |
| ಆಸರೆ | " | 6—00 |
| ಹ್ಯಾಪಿ ಬರ್ತ್‌ಡೇ | " | 6—00 |
| ಬಂಧನ | " | 6—00 |
| ಒಲವಿನ ಬದುಕು | " | 5—00 |
| ಹೊಂಬಿಸಿಲು | " | 6—00 |
| [illegible] | " | 6—00 |

| | | |
|---|---|---|
| ಆಶ್ವಾಸನ | ಉಷಾ ನವರತ್ನರಾಮ್ | 6—00 |
| ಸವತಿ ಕಸ್ತೂರಿ | ಎಂ. ಸಿ. ಪದ್ಮಾ | 6—00 |
| ಪರಿಣಯ | " | 6—00 |
| ಪ್ರೇಮಮಯಿ | " | 8—00 |
| ಮಂಗಳಯಾತ್ರೆ | " | 6—00 |
| ಸುಪ್ರಭಾತ | " | 6—00 |
| ಮಂಜು ಕರಗಿತು | " | 6—00 |
| ಶಶಿಕಿರಣ | " | 6—00 |
| ಮನ ಬೆಳಗಿತು | " | 6—00 |
| ಪ್ರೇಮ ವಸಂತ | " | 6—00 |
| ನಾನು ಲೇಖಕಿ ಅಲ್ಲ | ಅಶ್ವಿನಿ | 4—00 |
| ವಿಜೇತ | " | 6—00 |
| ಮೃಗತೃಷ್ಣಾ | " | 8—00 |
| ಬೆಸುಗೆ | " | 8—00 |
| ಕಪ್ಪುಕೊಳ | " | 6—00 |
| ಮರಳಿ ಜೀವನ | ಪುಷ್ಪಾ ಎನ್. ರಾವ್ | 6—00 |
| ವರಪುತ್ರಿ | " | 6—00 |
| ಮಮತಾ ಮಂದಿರ | " | 6—00 |
| ಪರಿವರ್ತಿನಿ | " | 6—00 |
| ಬಂಗಾರದ ಸರಪಣಿ | " | 6—00 |
| ಕಲಾದರ್ಶಿ | ಎಂ. ಕೆ. ಇಂದಿರಾ | 6—00 |
| ಬ್ರಹ್ಮಚಾರಿ | " | 5—00 |
| ತಪೋವನದಲ್ಲಿ | " | 6—00 |
| ಮನ ತುಂಬಿದ ಮಡದಿ | " | 4—00 |
| ಅನುರಾಗಿಣಿ | ವಿಶಾಲಾಕ್ಷಿ ದಕ್ಷಿಣಾಮೂರ್ತಿ | 6—00 |
| ವಸುಮತಿ | " | 6—00 |
| ದುಂಬಿ ಮುಟ್ಟದ ಹೂ | ಹೆಚ್. ಜಿ. ರಾಧಾದೇವಿ | 6—00 |

| | | |
|---|---|---|
| ಚಂದನ ಕಸ್ತೂರಿ | ಹೆಚ್. ಜಿ. ರಾಧಾದೇವಿ | 6—00 |
| ಶುಭ ವಸಂತ | " | 6—00 |
| ಸುವರ್ಣ ಸೇತುವೆ | " | 5—00 |
| ಬೆಳಕಿನೆಡೆಗೆ | ಭಾರತೀಸುತ | 10—00 |
| ಬೆಂಕಿಯ ಮಳೆ | " | 8—00 |
| ಎಡಕಲ್ಲು ಗುಡ್ಡದ ಮೇಲೆ | " | 5—00 |
| ಬಯಲುದಾರಿ | " | 10—00 |
| ಮನೋನಂದನ | ಡಾ॥ ಎಂ. ಶಿವರಾಮ್ | 12—00 |
| ಹರಿದ ಉಯಿಲು | " | 8—00 |
| ಕಾರ್ತೀಕ ಸೋಮವಾರ | " | 5—00 |
| ರೂಪದರ್ಶಿ | ಕೆ. ವಿ. ಅಯ್ಯರ್ | 10—00 |
| ಕೈಲಾಸಂರವರ ಸ್ಮರಣೆ | " | 4—00 |
| ಬದುಕು-ಬೆಳದಿಂಗಳು | ಕೃಷ್ಣಮೂರ್ತಿ ಪುರಾಣಿಕ | 6—00 |
| ಏಕದಾರಿ | " | 6—00 |
| ಸಂಶಯದ ಸುಳಿ | ಮ. ನ. ಮೂರ್ತಿ | 5—00 |
| ಕ್ಷಮೆ ಇರಲಿ ಪ್ರಭುವೆ | ಸೂರ್ಯನಾರಾಯಣ ಚಡಗ | 8—00 |
| ಹೆಣ್ಣು-ಹೊನ್ನು-ಮಣ್ಣು | " | 8—00 |
| ದೇವರ ಹೆಂಡತಿ | " | 6—00 |
| ಗಾಂಪಾಯಣ | ದಾಶರಥಿ ದೀಕ್ಷಿತ್ | 4—00 |
| ಇಂದ್ರಿ-ಸುಂದ್ರಿ | " | 3—00 |
| ಅನುರಾಗ ಸುಧಾ | " | 4—00 |
| ಗೃಹಿಣಿ | ಶ್ರೀನಿವಾಸರಾವ್ ಕೊರಟಿ | 7—00 |
| ಧರ್ಮದೀಕ್ಷೆ | " | 6—00 |
| ಹೊಸ ಹಾದಿಯಲ್ಲಿ | ಎ. ಪಂಕಜ | 5—00 |
| ರಾಗ ಸುಧಾ | " | 4—00 |
| ಅನುರಾಗ ಬಂಧನ | " | 4—00 |

| | | |
|---|---|---|
| ಹಿಮದ ಬೊಂಬೆ | ಈಚನೂರು ಜಯಲಕ್ಷ್ಮಿ | 8—00 |
| ನೋಡದ ಮನೆ | ” | 8—00 |
| | ವಸಂತಾದೇವಿ ಅ. ನ. ಕೃ. | 4—00 |
| ಎಲ್ಲಾ ಅವನ ಹೆಸರಿನಲ್ಲಿ (೧) | ತ. ರಾ. ಸು. | 4—00 |
| ಎಲ್ಲಾ ಅವನ ಹೆಸರಿನಲ್ಲಿ (೨) | ” | 3—00 |
| ಜೇನು-ನಂಜು | ಹೆಚ್. ಎಸ್. ಗೋಪಾಲರಾಯ | 6—00 |
| ಕಣ್ಮಣಿ | ಶಾರದೆ | 8—00 |
| ಹೂವು-ಕಾವು | ಬಿ. ಪುಟ್ಟಸ್ವಾಮಯ್ಯ | 8—00 |
| ಶೋಭನಾ | ಗೀತಾ ಕುಲಕರ್ಣಿ | 6—00 |
| ಅಮೃತ ಕಲಶ | ನಿರುಪಮಾ | 4—00 |
| ವಜ್ರದುಂಗುರ | ನಾ. ರಾಜಣ್ಣ | 8—00 |
| ಸಾಕಿದ ಅಳಿಯ | ಅ. ನ. ಕೃ. (ಕೊನೆ ಕಾದಂಬರಿ) | 5—00 |
| ಚಿನ್ನದ ಹೂವು | ಪ್ರೇಮಲತಾ ಸುಂದರೇಶನ್ | 5—00 |
| ಹೆಣ್ಣಿನ ಹಂಬಲ | ನಾಡಿಗೇರ ಕೃಷ್ಣರಾಯ | 4—00 |
| ಮಧುರಜಾಲ | ಉಷಾದೇವಿ | 4—00 |
| ವಧೂವರರ ಜ್ಯೋತಿಷ್ಯ | ಎನ್. ಕೆ. ಜೋಗಳೇಕರ್ | 4—00 |
| ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ | ಪ್ರೊ॥ ಎಸ್. ಅನಂತನಾರಾಯಣ | 20—00 |

## ಬರಲಿರುವ ಪುಸ್ತಕಗಳು

| | |
|---|---|
| ಮರಳಿ ಮಣ್ಣಿಗೆ | ಡಾ॥ ಶಿವರಾಮ ಕಾರಂತ |
| ಮರಳಿ ತುಂಬಿದ ಮಡಿಲು | ಹೆಚ್. ಜಿ. ರಾಧಾದೇವಿ |
| ನಾಂದಿ | ಈಚನೂರು ಜಯಲಕ್ಷ್ಮಿ |
| ಹುತ್ತದ ಸುತ್ತ | ಅಶ್ವಿನಿ |
| ಕಾಮಣ್ಣ | ಬೀಚಿ |
| ಸಮುದ್ಯತಾ | ಕೆ. ವಿ. ಅಯ್ಯರ್ |
| ಮುಕುರ | ಪುಷ್ಪಾ ಎನ್. ರಾವ್ |
| ಮಿಸ್. ನಳಿನಿ | ನಾಡಿಗೇರ ಕೃಷ್ಣರಾಯ |
| ಚಿತ್ರಾವತಿ | ಸೂರ್ಯನಾರಾಯಣ ಚಡಗ |
| ಸ್ವೀಕಾರ | ಲಲಿತಾಂಬ ಚಂದ್ರಶೇಖರ್ |
| ಮಹರ್ಷಿ ವಾತ್ಸಾಯನ ಕೃತ ಕಾಮಸೂತ್ರ | ಮ. ಶ್ರೀಧರಮೂರ್ತಿ |

❋

ವಿತರಣೆಗಾರರು :

**ಗೀತಾ ಏಜನ್ಸೀಸ್**

ಸಗಟು ಪುಸ್ತಕ ವ್ಯಾಪಾರಿಗಳು

(ದೂರವಾಣಿ : 24226)

ಬಳೇಪೇಟೆ ಚೌಕ, ಬೆಂಗಳೂರು 560053